ಪ್ರಬುದ್ಧ ಕರ್ಣಾಟಕ

ಸಂಪುಟ ೪೫—ಸಂಚಿಕೆ ೧

೧೭೬

ಶೋಭಕೃತು ಸಂವತ್ಸರ

ಆಷಾಢ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೩

ವಿಷಯಸೂಚಿಕೆ

ಪ್ರಬುದ್ಧ ಕರ್ಣಾಟಕ

ಶೋಭಕೃತು ಸಂವತ್ಸರ ೧೭೬ ಆಷಾಢ ಸಂಚಿಕೆ

ವೈಶಾಖ ಶುಕ್ಲ ಪೂರ್ಣಿಮಾ

ವೈಶಾಖ ಶುಕ್ಲ ಪೂರ್ಣಿಮಾ ರಾತ್ರಿ ಹಬ್ಬಿದೆ ಸುತ್ತ,
ಕರಗಿಹೋಗಿದೆ ಕತ್ತಲೆಯ ಹುತ್ತ.
ಹೆಡೆ ಮುದುರಿ ಬಿದ್ದಿದೆ ಕೆಳಗೆ ಸಾಷ್ಟಾಂಗವಿನ್ಯಾಸದಲಿ
ಮಿನುಗು ದೀಪದ ಮೆಯ್ಯ ನಗರ ವಿಸ್ತಾರ
ಆಕಾಶಾದ್ಯಂತ ಹರಿದಿದೆ ಬೆಳುದಿಂಗಳಿನ ಪ್ರಭಾಪೂರ !

ಮೌನ ಧ್ಯಾನಸ್ಥವಾಗಿವೆ, ಈ ವಸಂತ ಸುಮಭಾರ
ಗಂಧೋನ್ಮತ್ತ ತರುಸಂಕುಲ.
ದಿಕ್ಕು ದಿಕ್ಕುಗಳಲ್ಲಿ ಕೈ ಮುಗಿದು ನಿಂತಿವೆ ಮೋಡ
ತೋಡಿಕೊಳ್ಳುವ ಹಾಗೆ ಹೃದಯ ಭಾರ.
ಕಾರುಣ್ಯ ಲಹರಿಯೊಳದ್ದಿ ಕಣ್ತೆರೆದ ನಕ್ಷತ್ರಗಳ ತುಟಿಯಲ್ಲಿ
ಮಿನುಗುತಿದೆ ನಿಶ್ಶಬ್ದ ಮಂತ್ರೋಚ್ಚಾರ :
' ಬುದ್ಧಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ '.

ಓ ಸ್ವಾಮಿ,.ನೀ ಬರುವ ಮೊದಲು ಅಸಂಖ್ಯಾತ ವೈಶಾಖ ಶುಕ್ಲ
ಪೂರ್ಣಿಮಾರಜನಿಗೆಚ್ಚರವಿರದ ನಿದ್ರೆ.
ನೀ ಬಂದ ಮೇಲೆ ವರುಷ ವರುಷವೂ ಈ ವೈಶಾಖ ಶುಕ್ಲ ಪೂರ್ಣಿಮೆಗೆ
ನಿನ್ನ ಧ್ಯಾನದ ಮುದ್ರೆ !

—ಜಿ. ಎಸ್. ಶಿವರುದ್ರಪ್ಪ

ಚಂದ್ರಹಾಸ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಅಂತ್ಯರಂಗಂ

ದೃಶ್ಯ ೧

[ಕುಂತಳನಗರ. ದುಷ್ಟಬುದ್ಧಿ ತನ್ನ ಹಜಾರದಲ್ಲಿ ಕುಳಿತು ಏನೊ ಪತ್ರ ನೋಡುತ್ತಿರುತ್ತಾನೆ. ದಂಡನಾಯಕನು ಎದುರುಗಡೆ ತುಸು ದೂರದಲ್ಲಿ ಕುಳಿತಿದ್ದಾನೆ. ಸೇವಕನು ದೂರದಲ್ಲಿ ಕೈಕಟ್ಟಿಕೊಂಡು ನಿಂತಿರುತ್ತಾನೆ.]

ದಂಡನಾಯಕ : ಜೀಯ, ಅವನ ಅಪರಾಧವೇನಿಲ್ಲ.
ನಾನೆ ವಿಚಾರಿಸಿದೆ. ಗುಣವಂತ, ವಿನಯಶೀಲ,
ಕುಲೀನ ವಂಶಜ. ಅನೇಕ ಶಾಸ್ತ್ರಪಾರಂಗತ....

ದುಷ್ಟಬುದ್ಧಿ : (ಜುಗುಪ್ಸೆಯಿಂದ ತಲೆಯೆತ್ತಿ, ದಂಡನಾಯಕನನ್ನು ದುರದುರನೆ ನೋಡಿ)
ಇಲ್ಲ, ಅವನು ಸಾಯಲೆ ಬೇಕು, ನನ್ನಾಜ್ಞೆ.
[ಮತ್ತೆ ತಲೆ ತಗ್ಗಿಸಿ ಪತ್ರ ಓದುತ್ತಾನೆ. ದಂಡನಾಯಕ ಚಿಂತಿಸುತ್ತಾನೆ.]

ದಂಡನಾಯಕ : ಜೀಯ ಅಪರಾಧವಿಲ್ಲದೆಯೆ ಮರಣದಂಡನೆಯೆ ?
ನಾವಾ ನಿರಪರಾಧಿಯಂ ಕೊಲಿಸೆ....

ದುಷ್ಟಬುದ್ಧಿ : (ತಟಕ್ಕನೆ ತಲೆಯೆತ್ತಿ ಸಿಡುಕಿನಿಂದ)
ನನ್ನಾಜ್ಞೆಯಂ ನಡಸು. ವಾದಮಂ ಮಾಣ್ !

ದಂಡನಾಯಕ : ಅವನ ಕೊಂದರೆ ದಂಗೆಯೇಳುವರು ಜನ.

ದುಷ್ಟಬುದ್ಧಿ : (ದರ್ಪಧ್ವನಿಯಿಂದ)
ನಮ್ಮ ಪಟುಭಟರ ಕೂರಸಿಗಳಿಗೆ ಕಿಲುಬು ಹಿಡಿದಿಲ್ಲ !
ಜನರ ರುಂಡಗಳೇನು ವಜ್ರವಲ್ಲ !
[ಪುನಃ ತಲೆತಗ್ಗಿಸಿ ಓದತೊಡಗುತ್ತಾನೆ.]

ದಂಡನಾಯಕ : ಹಿಂದವನು ತಮಗೆ ಮಿತ್ರನಾಗಿದ್ದನಲ್ತೆ ?

ದುಷ್ಟಬುದ್ಧಿ : (ಪತ್ರದಿಂದ ತಲೆಯೆತ್ತದೆ)
ಈಗಲ್ಲವಷ್ಟೆ ?

ದಂಡನಾಯಕ : ಅನ್ಯಾಯವಾಗುವುದು, ಜೀಯ.

ದುಷ್ಟಬುದ್ಧಿ : (ತಟಕ್ಕನೆ ತಲೆ ಎತ್ತಿ ಗರ್ಜಿಸುತ್ತಾನೆ)
ಏಕಿಂತು ಪೀಡಿಸುತ್ತಿಹೆ ! ಹೊರಡಾಚೆ !
(ದಂಡನಾಯಕ ನೆಲದಕಡೆ ನೋಡತೊಡಗುತ್ತಾನೆ. ದುಷ್ಟಬುದ್ಧಿ ತಲೆಬಾಗಿ ಪತ್ರದ ಕಡೆ ತಿರುಗಿ, ಒಂದು ಚಣ ತಡೆದು, ಮತ್ತೆ ತಲೆಯೆತ್ತಿ)
ಏಕೆ ಕುಳಿತಿಹೆ ಇನ್ನೂ ? ಹೊರಡು :
ಬೇಗ ಮಾಡೆನ್ನಾಜ್ಞೆಯಂ ! (ದಂಡನಾಯಕ ಏಳುತ್ತಾನೆ)
ಕತ್ತಲಾಗುವ ಮುನ್ನ ಅವನ ತಲೆ ತಿರೆಗುರುಳಲಿ !
[ದಂಡನಾಯಕ ಬಾಗಿ ಕೈಮುಗಿದು ಹೊರಗೆ ಹೋಗುತ್ತಾನೆ. ದುಷ್ಟಬುದ್ಧಿ ತಲೆಯಲ್ಲಾಡಿಸಿ ಸೇವಕನಿಗೆ ಸನ್ನೆಮಾಡುತ್ತಾನೆ]

ಸೇವಕ : ಜೀಯ, ಏನಪ್ಪಣೆ ?

ದುಷ್ಟಬುದ್ಧಿ : ಚಂದನಾವತಿಯ ದೂತರನು ಒಳಗೆ ಬರಹೇಳು.
[ಸೇವಕ ಹೋಗುತ್ತಾನೆ.]
ಏನಿದೆತ್ತಣ ಕೌತುಕದ ಸುದ್ದಿ ?
ಕುಳಿಂದಂಗೆ ಸೂನು ಜನಿಸಿರ್ದಪನೆ ?
ಬಂಜೆಯಾಗಿಹಳವನ ಮಾನಿನಿ !
ಅತಿ ವಿಚಿತ್ರಮಿದು. ಇರಲಿ ;
ಎಲ್ಲವನು ವಿಶದವಾಗರಿಯುವೆನು.
[ಸೇವಕನನ್ನು ಮುಂದುಮಾಡಿಕೊಂಡು ಇಬ್ಬರು ಚಂದನಾವತಿಯ ದೂತರು ಬರುತ್ತಾರೆ. ರುದ್ರಾಕ್ಷಿ, ತುಲಸೀ ಮೊದಲಾದ ಮಾಲೆಗಳನ್ನು ಧರಿಸಿರುತ್ತಾರೆ. ಕೈಮುಗಿದು, ದುಷ್ಟಬುದ್ಧಿ ಪೀಠದ ಕಡೆ ಕೈತೋರಿಸಲು ಕುಳಿತುಕೊಳ್ಳುತ್ತಾರೆ.]
(ಸ್ವಗತ) ಏನಿದೀ ವೇಷ ? ಅವಧೂತರಂತಿಹರು !
ಚಂದನಾವತಿಯೆಲ್ಲ ಸಂನ್ಯಾಸಸ್ವೀಕಾರಮಾಡಿಹುದೊ ಏನೊ?
(ನಗೆಯ ತಡೆಹಿಡಿದು) ದೂತರಿರ, ತಂದ ಕಪ್ಪಕಾಣಿಕೆಗಳನು
ರಾಜ್ಯದ ಬೊಕ್ಕಸಕೆ ಸುರಿದಾಯ್ತೆ ?

ಒಂದನೆಯ ದೂತ : ರಾಣಿಗೆ ಪುರೋಹಿತಗೆ ಸಲ್ಲಿಸುವ ಹಣ ಹೊರತು
ಇನ್ನುಳಿದುದೆಲ್ಲವಂ ಸಲ್ಲಿಸಿದೆವು.

ದುಷ್ಟಬುದ್ಧಿ : ರಾಣಿಗೆ ಪುರೋಹಿತಗೆ ಸಲ್ಲಿಸುವ ಸಿದ್ಧಾಯವಂ
ನಮಗೇ ಸಲ್ಲಿಸುವ ಕಟ್ಟಳೆಯ ಮಾಡಿಹೆವು;
ತಿಳಿಯಿತೆ ?

ಎರಡನೆಯ ದೂತ : ಅಪ್ಪಣೆ.

ದುಷ್ಟಬುದ್ಧಿ : ನಿಮ್ಮರಸುಕುವರಂಗೆ ಚಂದ್ರಹಾಸಂಗೆ
ಈಗೆನಿತು ವಯಸ್ಸು ?

ಒಂದನೆಯ ದೂತ : ಪದಿನೆಂಟು.

ದುಷ್ಟಬುದ್ಧಿ : ಕುಳಿಂದಂಗೆ ಮಕ್ಕಳಿರಲಿಲ್ಲವಲ್ಲ !
ಈ ಸುದ್ದಿ ದಿಟವೆ ?

ಎರಡನೆಯ ದೂತ : ಜೀಯ, ಪುಸಿಯಲ್ಲ.
ದೊರೆ ಬೇಂಟೆಯಾಡುತಲಿರಲ್ ಕಾನನದ ಮಧ್ಯದೊಳ್
ಅನಾಥನಾಗಿಹ ಶಿಶುನಿಧಾನಮಿರೆ
ಕಂಡೆತ್ತಿಕೊಂಡು ಬಂದು
ಆತ್ಮಜ ವಿಧಾನದಿಂದೋವಿದನ್.

ದುಷ್ಟಬುದ್ಧಿ : (ವಿಸ್ಮಯದಿಂದ) ಏನು ?
ಕಾನನಾಂತರದೊಳವನು ದೊರಕಿದನೆ ?

ಒಂದನೆಯ ದೂತ : ಹೌದು, ಜೀಯ.

ದುಷ್ಟಬುದ್ಧಿ : ಬಹು ಪರಾಕ್ರಮಿಯೆ ?

ಎರಡನೆಯ ದೂತ : ಬರಿ ಪರಾಕ್ರಮವಲ್ತು ; ಭಗವದ್‌ಬಲಂ !
ನಮ್ಮಿಳೆಗೆ ಆತನೈತಂದಂದಿನಿಂ
ಮಂಗಳದ ಮಳೆಹೊಯ್ದ ತೆರನಾಯ್ತು.
ಸಸ್ಯ ಮೃಗ ಪಕ್ಷಿಗಳ್ ಸಂತಸದಿ ಪೆರ್ಚಿರ್ದುವು ;
ಇರ್ಮಡಿಸಿ ಮೂರ್ಮಡಿಸಿ ನೂರ್ಮಡಿಸಿದುದು ಪೈರುಪಚ್ಚೆ ;
ಬರಗಾಲವಡಗಿದುದು ; ಕಾರ್ಮುಗಿಲು ಕರ್ಮಮಂ
ಕಾಲಕಾಲಕೆ ತಪ್ಪದೆಸಗಿದುದು ಕರ್ತವ್ಯಮಂ ;
ಜನಹೃದಯದೊಳ್ ಭಕ್ತಿಯಿಂ ಭವಿಸಿದುದು
ನವಚೇತನಂ. ಸಂತಸದಿ ಕಂಗೊಳಿಸುತಿದೆ ಠಿರೆ.
ರೋಗರುಜೆಗಳ ಬಾಧೆಯಡಗಿಹುದು. ಮಿತ್ತುವಿನ
ಸುಳಿವಿಲ್ಲ. ಕಳ್ಳಕಾಕರ ಭೀತಿ ಕಟ್ಟುಕತೆಯಾಯ್ತು . . .

ದುಷ್ಟಬುದ್ಧಿ : ಸಾಕು, ಬಿಡು ; ಗೊತ್ತಾಯ್ತು. (ಸೇವಕನ ಕಡೆ ತಿರುಗಿ)
ಹೊತ್ತಾಯ್ತು. ಭೋಜನಕೆ ಕರೆದೊಯ್ ಇವರನ್.

ಒಂದನೆಯ ದೂತ : ಜೀಯ, ಮನ್ನಿಸಿರಿ. ಇಂದು ಏಕಾದಶಿ !
ಇಂದು ಉಣಿಸೆಮಗೆ ಒಲ್ಲದು.
(ದುಷ್ಟಬುದ್ಧಿ ದುರದುರನೆ ನೋಡುತ್ತಾನೆ)
ನಾವೆಲ್ಲ ವೈಷ್ಣವರ್ !

ದುಷ್ಟಬುದ್ಧಿ : (ತಿರಸ್ಕಾರದಿಂದಲೂ ಪರಿಹಾಸ್ಯದಿಂದಲೂ)
ಹಾಗಾದರೆ ಹೊರಡಿ. (ದೂತರು ಕೈಮುಗಿದು ಹೊರಡಲು ಉದ್ಯುಕ್ತರಾಗುತ್ತಾರೆ)

ನಿಮ್ಮರಸಗೀ ಪತ್ರಮಂ ಕೊಟ್ಟು
ನನ್ನ ಕೃಪೆಯಂ ತಿಳುಹಿ. (ದೂತರು ತೆಗೆದುಕೊಂಡು ಹೊರಡುತ್ತಾರೆ)
ಏನಹಂಕಾರ ! ಈ ಕಿಂಕರಮಾತ್ರರದು ?
ನಾವೀವ ಭೋಜನವನುಣಲೊಲ್ಲರಂತೆ !
ಸೇವಕರೆ ಇನಿತು ಸೊರ್ಕಿದಮೇಲೆ
ಅರಸನೆಂತಿರಬೇಕು ? (ಆಲೋಚಿಸುತ್ತಾನೆ)
ಪಾಳಡವಿಯೊಳ್ ಪಸುಳೆಯಂ ಕೊಂದುಬಹುದೆಂದು
ಬೆಸಸಿದೊಡೆ ಚಂಡಾಲರಂದುಳಿಹಿ ಬಂದರೇ ?
ಕಾಲ್ಬೆರಳನೊಂದಂ ಕತ್ತರಿಸಿ ತಂದರೇ ?
ಅವರನ್ ವಿಚಾರಿಸಿಯೆ ದಿಟವನರಿವೆನ್.
ಈ ಚಂದ್ರಹಾಸನಾ ಬಾಲನಾಗಿರಬಹುದೆ ?
ಗಾಲವನ ಮಾತು ಸುಳ್ಳಲ್ಲವೆಂದಾಯ್ತು.
ಎಂತಾದರೂ ಅವನನ್ ಸಂಹರಿಸದಿರೆ ಸುಖವಿಲ್ಲ.
ನಾನೆ ಚಂದನಪುರಕೆ ಪೋಗಿ ಕಾಣ್ಬೆನ್.
ನನ್ನಾಜ್ಞೆಯಂ ಮೀರಿ ದತ್ತುಮಗನಂ ಎಂತು
ಪಡೆದಂ ಕುಳಿಂದಕಂ ? .... ಯಾರಲ್ಲಿ ? .... ಹೋಗು,
ಮದನ ಕುಮಾರನಂ ಬರಹೇಳು.
(ಸೇವಕ ಹೋಗುತ್ತಾನೆ.)
ಮದನನಿಗೆ ಮದುವೆಯಪ್ಪಾ ಪೊಳ್ತು ಬಳಿಯಾಯ್ತು.
ಬೇಗನೆಯೆ ಅರಸುಕುವರಿಯನವಗೆ ತಂದುಕೊಳೆ,
ಪುತ್ರಸಂತಾನವಿಲ್ಲದೀ ನೃಪನ ರಾಜ್ಯಂ
ಪೆರರ ಕೆಯ್ಯೊಳ್ ಬೀಳದೆಮಗುಳಿಯುವುದು....
ಇರಲಿ, ಮೊದಲೀ ವಿಘ್ನಮಂ ಪರಿಹರಿಸಿ
ಮುಂತೆ ಮುಂದಣ ಬಟ್ಟೆಯಂ ತರಿಸಲ್ಬೆನ್.
[ಮದನ ಪ್ರವೇಶಿಸುತ್ತಾನೆ.]

ಮದನ : ಅಪ್ಪಯ್ಯ, ಏಕೆನ್ನ ಬರಹೇಳಿದುದು ?

ದುಷ್ಟಬುದ್ಧಿ : ಕುಳಿತುಕೊ, ಹೇಳುವೆನು. [ಮದನ ಕೂರುತ್ತಾನೆ]

ಮದನ : ನಿಮ್ಮ ಮೊಗದೊಳಗೇನೊ ಚಿಂತೆ, ಅಪ್ಪಯ್ಯ ?

ದುಷ್ಟಬುದ್ಧಿ : ಏನಿಲ್ಲ. ರಾಜಕಾರ್ಯಕ್ಕಾಗಿ ಚಂದನಾವತಿಗೆ
ನಾನೀಗಳೆಯೆ ಹೊರಡುವೆನು.
ನಾನಿಲ್ಲಿಗೈತರುವವರೆಗೆ ನೀನೆ
ರಾಜ್ಯದಾಡಳಿತವಂ ನೋಡಿಕೊಂಡಿರಬೇಕು.

ಮದನ : ಅಪ್ಪಣೆ. ಅಂತಪ್ಪ ರಾಜಕಾರ್ಯವದೇನು ?

ದುಷ್ಟಬುದ್ಧಿ : ಕುಳಿಂದಕನ ರಾಜ್ಯಭಾರವಂ ನೋಡಿ ಬರುವೆ.

ಮದನ : (ಅತ್ತನೋಡಿ) ತಂಗಿ ಬಂದಿಹಳು.
[ಅಲಂಕಾರಭೂಷಿತೆಯಾಗಿ ಲಜ್ಜೆಯಿಂದ ಹಜ್ಜೆಯಿಡುತ್ತಾ ವಿಷಯೆ ಬರುತ್ತಾಳೆ.]

ದುಷ್ಟಬುದ್ಧಿ : ಬಾರಕ್ಕ. ಏನಿಷ್ಟು ಲಜ್ಜೆ ? ಬಾ ಮುಂದೆ.
(ಮುಂದಕ್ಕೆ ಬರುತ್ತಾಳೆ. ತಂದೆ ಮಗಳ ಯೌವಲಾವಣ್ಯವನ್ನೂ ಶೃಂಗಾರಮಯ ಸೌಂದರ್ಯವನ್ನೂ ಗಮನಿಸಿ, ಪ್ರಶಂಸನೀಯ ವಾತ್ಸಲ್ಯಾನುಭವದಿಂದ)
ನೀ ಬಂದುದೇಕೆಂದೀಗ ಗೊತ್ತಾಯ್ತು !

ವಿಷಯೆ : (ತಂದೆಯ ಗಮನವನ್ನು ಬೇರೆಯ ವಿಷಯದ ಕಡೆ ತಿರುಗಿಸಲೆಂಬಂತೆ)
ಅಪ್ಪಯ್ಯ, ನಂದನದೊಳಾಂ ನೀರ್ವೊಯ್ದು ಬೆಳೆಯಿಸಿದ
ಚೂತಲತೆ ಪೂತಿಹುದು. ಅದಕೆ....ಅದಕೆ....(ನಸುನಾಚಿ)
ಉದ್ಯಾಪನಂಗೈಸಬೇಕದಕೆ.

ದುಷ್ಟಬುದ್ಧಿ : ಮದನ, ನೆರವೇರಿಸೀ ನಿನ್ನ ತಂಗಿಯ ನೋಂಪಿಯಂ.

ಮದನ : ತಂಗೀ, ಆ ಭಾರ ನನ್ನ ಮೇಲಿರಲಿ.

ವಿಷಯೆ : ಅಪ್ಪಯ್ಯ, (ನಾಚಿಕೆಯಿಂದ ತಡೆತಡೆದು ಹೇಳುತ್ತಾಳೆ.)
ಗೂಡಿನೊಳಗಿಹ ಹೆಣ್ಣುಗಿಳಿಗೊಂದು ಜೊತೆಯಿಲ್ಲ.
ಅದಕ್ಕೊಂದು ಜೊತೆ ಬೇಕು.

ಮದನ : (ಪರಿಹಾಸ್ಯದಿಂದ) ಪಾಪ ! ಕೊರಗುತಿದೆ ಆ ಶುಕತರುಣಿ !

ವಿಷಯೆ : (ನಸುಮುನಿದಂತೆ) ನಿನಗೇನು, ಅಣ್ಣಯ್ಯ ?
ಮೂರು ಹೊತ್ತೂ ಕತ್ತಿ, ಕುದುರೆ, ಕಾಡು, ಬೇಟೆ !

ದುಷ್ಟಬುದ್ಧಿ : ಇರಲಕ್ಕ, ಬಿಡು....ಇನ್ನೇನು ಬೇಕು ?

ವಿಷಯೆ : ಅಪ್ಪಯ್ಯ, ನಾ ಗಿಡಗಳಿಗೆ ನೀರೆರಚುತಿದ್ದೆ.
ತುಂಬಿಗಳು ಬಂದೆನ್ನ ಮೊಗವೆಲ್ಲವಂ ಮುತ್ತಿ,
ಮುಂಗುರುಳ ಮೇಲೆಲ್ಲ ಸುಳಿ ಸುಳಿದು ಝೇಂಕರಿಸಿ,

ಬಹಳ ಭಯಪಡಿಸಿದುವು. ಕೋಗಿಲೆ ಕೂಡ
ಬರಿದೆ ಬಗ್ಗಿಸುತೆನ್ನ ಮೂದಲಿಸುತಿಹುದು !

ದುಷ್ಟಬುದ್ಧಿ : ಇರಲಮ್ಮಾ ಆ ದುರುಳರಂ ಪಿಡಿದು ಸೆರೆಮನೆಗೆ
ಕಳುಹಿಸಲು ಸಿದ್ಧವಾಗಿದೆ ನಮ್ಮ ಸೇನೆ! (ನಗುತ್ತಾನೆ)

ವಿಷಯೆ : ಅಪ್ಪಯ್ಯ, ಎಲ್ಲಿಗೆ ಹೊರಡುವುದು ನೀವು ?

ದುಷ್ಟಬುದ್ಧಿ : ಚಂದನಾವತಿಗಮ್ಮಾ. ಕೇಳಿಬಲ್ಲೆಯ ನೀನು ?

ವಿಷಯೆ : (ಸಂಭ್ರಮದಿಂದ) ಚಂದ್ರಹಾಸನಿಹ ಪಟ್ಟಣಕ್ಕೇನು ?

ದುಷ್ಟಬುದ್ಧಿ : (ಧ್ವನಿಯನ್ನು ತಟಕ್ಕನೆ ಬದಲಾಯಿಸಿ) ಹೌದು.
ನಾನಿನ್ನು ಹೊರಡುವೆನು ಹೊತ್ತಾಯ್ತು.
ಹೆಣ್ಣಿಗತಿ ಕುತೂಹಲಂ ತಗದು ! (ಹೊರಡುತ್ತಾನೆ)

ವಿಷಯೆ : (ತತ್ತರಿಸಿ, ಆವಾಕ್ಕಾಗಿ, ತಂದೆ ಹೋಗುವುದನ್ನೆ ನೋಡುತ್ತಾ ನಿಂತು
ಮತ್ತೆ ಅಣ್ಣನ ಕಡೆ ತಿರುಗಿ)
ಅಪ್ಪಯ್ಯ ಸಿಟ್ಟುಗೊಂಡರೇ, ಅಣ್ಣಯ್ಯ ?

ಮದನ : ಏನಿಲ್ಲ, ತಂಗಿ. ಒಮ್ಮೊಮ್ಮೆ ಹಾಗಾಗುತ್ತಾರೆ ಅಷ್ಟೆ.

ವಿಷಯೆ : (ಮತ್ತೆ ಮುನ್ನಿನ ಸರಳತೆ, ಸಲುಗೆ, ವಿಶ್ವಾಸ, ವಿನೋದಭಾವದಿಂದ)
ಅಣ್ಣಯ್ಯ, ಅಪ್ಪಯ್ಯ ಅತ್ತಿಗೆಯ ತರಲೆಂದು
ಚಂದನಾವತಿಗೆ ಹೊರಟಿಹನೆ ?

ಮದನ : (ಪ್ರತಿಹಾಸ್ಯಶೀಲನಾಗಿ) ಅಯ್ಯೊ, ನೀನೆಂಥ ಪೆಚ್ಚಿ !
ಅತ್ತಿಗೆಗಲ್ಲ, ಭಾವನನ್ವೇಷಣೆಗೆ !

ವಿಷಯೆ : ಅಣ್ಣಯ್ಯ, ಸಾಕು ನಿನ್ನೀ ವಿನೋದ....ಅದಿರಲಿ ;
ನಿನ್ನ ನಾನೊಂದು ಕೇಳಲೇ ?

ಮದನ : ಒಂದರಿಂದಲೆ ನಿನಗೆ ತೃಪ್ತಿಯೇ ? ಆಶ್ಚರ‍್ಯ !

ವಿಷಯೆ : ನಾನೆಂದರೆ ನಿನಗಷ್ಟು ತಾತ್ಸಾರ :
ಏಗಳುಂ ಮೂದಲಿಕೆ ! (ವಿಷಣ್ಣಳಾಗುತ್ತಾಳೆ)

ಮದನ : (ಸಂತೈಸುವಂತೆ) ಎಂದೆಂದಿಗೂ ಅಲ್ಲ. ನೀನಕ್ಕರೆಯ ತಂಗಿ.
ಪ್ರೀತಿಗಾಗಿಯೆ ನಿನ್ನನಿಂತು ಪೀಡಿಪುದು ! ಗೊತ್ತಾಯ್ತೆ ?

ವಿಷಯೆ : (ಹರ್ಷದಿಂದ)
ಚಂದ್ರಹಾಸನ ನೀನು ನೋಡಿರುವೆ ಏನಣ್ಣಯ್ಯ ?
ಆತನ ಯಶೋದೀಪ್ತಿ ಜಗದ ಮೇಲೆಲ್ಲ
ಹಬ್ಬುತಿದೆಯಂತೆ! ಹೌದೇನು ?

ಮದನ : ಹೌದಾದರೇನಂತೆ ?
ನಿನಗವನಿನಿಯನಾಗಿ ಕೈಹಿಡಿಯಲಾಸೆಯೆ ?

ವಿಷಯೆ : ಬಿಡು ಅಣ್ಣಯ್ಯ, ನಿನಗೇಗಳುಂ ಪರಿಹಾಸ್ಯ.

ಮದನ: ಗೊತ್ತಾಯ್ತು. ಅವನ ಮೇಲಲ್ಲ,
ಅವನ ಕೀರ್ತಿಯ ಮೇಲೆಯೇ ನಿನಗೆ ಕಣ್ !
ಚೆಲುವಿಗೆ ಸೊಬಗಿನಾಶೆ !....
ನಿನಗಿಂತ ಮುಂದಾಗಿ ಬಂದವನು ನಾನು :
ನಾನರಿಯೆನೇನು ನನ್ನ ತಂಗಿಯನು ?

ವಿಷಯೆ : (ಹುಸಿ ಮುನಿಸಿನಿಂದ)
ನಾನರಿಯೆನೇನು ನನ್ನಣ್ಣನನು ?
ನಾ ಬಲ್ಲೆ : ಸರ್ವಜ್ಞಮೂರ್ತಿ ನೀನು !....
ಅಮ್ಮ ಕೂಗುವಳೆನ್ನ ; ಹೋಗುವೆನು.
[ಎಂದು ತಟಕ್ಕನೆ ತಿರುಗಿ ಓಡುತ್ತಾಳೆ.

ಮದನ ಆ ಕಡೆಗೇ ಅಕ್ಕರೆಯಿಂದ ನೋಡುತ್ತಿರುತ್ತಾನೆ.]

ಪರದೆ ಬೀಳುತ್ತದೆ.

ದೃಶ್ಯ ೨

[ಚಂದನಾವತಿಯ ಅರಮನೆಯ ಒಂದು ವೈಭವದ ಕೊಠಡಿ. ದುಷ್ಟಬುದ್ಧಿ ಕುಳಿತಿರುತ್ತಾನೆ. ಸುತ್ತಲೂ ನೋಡಿ ಕೆಳದುಟಿ ಕಚ್ಚಿಕೊಳ್ಳುತ್ತಾನೆ.]

ದುಷ್ಟಬುದ್ಧಿ : ಏನಿದೀ ಸಂಪದಂ ! ಏನಿದೀ ವೈಭವಂ !
ಏನಿದೀ ಬಿಂಕಂ, ಬೆಡಂಗು ! ಚಕ್ರೇಶರ್
ಅನುಭವಿಪ ಸಿರಿ ಇಲ್ಲಿ ಸೂರೆಗೊಂಡಿಹುದಲ್ತೆ !
ಪಳುಕುಗಳ ನೆಲಗಟ್ಟು ; ಮರಕತಂಗಳ ಜಗಲಿ ;
ಪೊಳೆವ ನೀಲದ ಭಿತ್ತಿ ; ಬಜ್ಜರದ ಕಂಭಗಳ್ ;
ತೊಳಪ ವೈಡೂರಿಯದ ಮದನಕೈ ; ಮಿರು ಮಿರುಪ
ಗೋಮೇಧಿಕದ ಬೋದಿಗೆಗಳ್ ; ತಳತಳಿಸುತಿಹ
ಪುಷ್ಯರಾಗದ ತೊಲೆಗಳ್ ; ಎಸೆವ ಮಾಣಿಕಂಗಳ ಲೋವೆ ;
ಮುತ್ತುಗಳ ಸೂಸುಕಂ; ಮಿಸುಪ ಪವಳದ ಪುತ್ತಳಿ ;

ಪೊನ್ನಪೊದಿಕೆ! ಕಂಗಳಂ ಕುರುಡುಗೈಯುವ ತೆರದಿ
ಉರಿಯುತಿಹುದರಮನೆ! ಈ ಪುರವೊ ಭೂತಳದ
ವೈಕುಂಠದಂತಿಹುದು! ಕಿರಿಯರಸಗೇತಕೀ
ವೈಭವಂ? ಈಗಳೆಯೆ ಇವನ ಬಿಂಕವ ಮುರಿದು,
ನಮ್ಮಧೀನಂಗೊಳಿಸದಿದ್ದರೆ.... ಮುಂದೆ....
ಕೈಮಿಾರುವನ್..(ಯಾರೊ ಬರುತ್ತಿರುವುದನ್ನು ಗಮನಿಸುತ್ತಾನೆ.)
ಚಂದ್ರಹಾಸನ ಕೂಡಿ
ಕುಳಿಂದಕನೆ ಬರುತಿಹನು. ಏಂ ಭದ್ರರೂಪಂ
ಆ ತರುಣನಿಗೆ! ಪುಣ್ಯವಂತನೆ ದಿಟಂ ಕುಳಿಂದಕಂ!

[ಕುಳಿಂದಕನು ಚಂದ್ರಹಾಸನೊಡನೆ ಪ್ರವೇಶಿಸಿ ಇಬ್ಬರೂ ದುಷ್ಟಬುದ್ಧಿಗೆ ನಮಸ್ಕರಿಸುತ್ತಾರೆ. ದುಷ್ಟಬುದ್ಧಿ ನಗೆಮೊಗನಾಗಿ ಅರ್ಧ ಎದ್ದು ಪ್ರತಿನಮಸ್ಕಾರ ಮಾಡುತ್ತಾನೆ. ಮೂವರೂ ಕುಳಿತುಕೊಳ್ಳುತ್ತಾರೆ.]

ಕುಳಿಂದಕ: ಮಂತ್ರಿವರ್ಯಂಗೆ ಸುಖಾಗಮನಮಂ ಬಯಸುವೆನ್.

ಚಂದ್ರಹಾಸ: ಹಿರಿಯರಿಗೆ ವಂದಿಪೆನ್.

ದುಷ್ಟಬುದ್ಧಿ: ನಿಮಗೊಳ್ಳಿತಕ್ಕೆ!

ಕುಳಿಂದಕ: ಬಟ್ಟೆಯ ಬಳಲ್ಕೆಯಿಂ ದಣಿದಿಹಿರಿ. ನಾವಿನಿತು
ತಳುವಿ ಬಂದಿರ್ದೊಡೆ ಲೇಸಾಗುತಿತ್ತಲ್ತೆ?

ದುಷ್ಟಬುದ್ಧಿ: ಅಂತಪ್ಪ ದಣಿವಳ್ತೇನಿಲ್ಲ. ನಿಮ್ಮ ನಾಡಿನ
ಮಾರ್ಗಗಳೊ ದಣಿವಿಗವಕಾಶವನೆ ಕೊಡವು!
ಏನ್ ಸೊಗಸು! ಏನ್ ನುಣ್ಪು! ಸಾಲ್ಮರಗಳೇನು!
ಪಸುರ್ಮಂಟಪಗಳೇನು! ಅರವಟ್ಟಿಗೆಗಳೇನು!
ತಣಿವನಲ್ಲದೆ ಕಣ್ಗೆ, ದಣಿವನೆಸಗವು ಮೆಯ್ಗೆ.

ಕುಳಿಂದಕ: ತಮ್ಮ ಈ ಶ್ಲಾಘನೆಯೆ ಪರಮ ಫಲದಂ ನಮಗೆ.
ಈ ಕುಮಾರನ ಮೆಯ್ಮೆಯಿಂದೀ ನಾಡಿಗೀ ಸೊಗಂ.

[ಕುಳಿಂದಕನು ಚಂದ್ರಹಾಸನ ಕಡೆಗೆ ತೋರುಗಣ್ಣಾಗುತ್ತಾನೆ. ದುಷ್ಟಬುದ್ಧಿ ಹಸನ್ಮುಖಿಯಾಗಿ ಚಂದ್ರಹಾಸನನ್ನು ಕುರಿತು,]

ದುಷ್ಟಬುದ್ಧಿ: ಕೇಳಿರ್ದೆನೀತನ ಮಹಾಮಹಿಮೆಯಂ;
ಕಾಣ್ಬ ಸೊಗಮೇ ಈಗಳೊದಗಿಹುದು.
ಏನೇನೊ ಕತೆವೇಳ್ವರೀತನಂ ಕುರಿತು;
ದಿಟದ ಸಂಗತಿಯಂ ನಿನ್ನಿಂದರಿವೆನಿಂದು.
ಈತನೇಂ ನಿನ್ನ ಸುಕುಮಾರನೋ?

ಕುಳಿಂದಕ: ವಿಪಿನದೊಳ್ ನನಗೀ ಕುಮಾರಕಂ ಮುಂಗೈದ
ತಪದ ಫಲದಿಂ ತಾನೆ ದೊರೆಕೊಂಡನ್. ಈತನಂ
ಕೃಪೆಯಿಂದೆ ನೀವೆ ಪಾಲಿಸವೇಳ್ಪುದು.
[ದುಷ್ಟಬುದ್ಧಿ ಚಂದ್ರಹಾಸನ ಕಾಲುಗಳ ಕಡೆ ಗಮನವಿಟ್ಟು ನೋಡಿ ಅನ್ಯಮನಸ್ಕನಾಗುತ್ತಾನೆ.]

ದುಷ್ಟಬುದ್ಧಿ: (ತನ್ನೊಳಗೆ)
ಈತನಹುದಾ ಅನಾಥಬಾಲಕಂ! ಕಾಲ್ಬೆರಳೆ ಸಾಕ್ಷಿ!
ಚಂಡಾಲರೆನಗಿಂತು ವಂಚನೆಯ ಮಾಡಿಹರೆ?
ನನಗರಿಯದಂತೆನ್ನ ಕುತ್ತಿಗೆಯ ಕೊಯ್ದಿಹರು!
[ಏಳುತ್ತಿರುವ ತನ್ನ ಭಾವಗಳನ್ನು ತಡೆದು, ಹುಸಿನಗೆ ಬೀರಿ ಕುಳಿಂದಕನ ಕಡೆ ತಿರುಗಿ ಬಹಿರಂಗವಾಗಿ]
ಕುಳಿಂದಕ, ನಿನ್ನ ಈ ಕುಮಾರನಂ ಕಂಡೊಡನೆ
ಮೂಡಿತುತ್ಸವಮೆನಗೆ. ನಿನ್ನ ಸಿಂಹಾಸನಕೆ
ಈತನೆಯೆ ಮುಂದೆ ಮಹಾರ್ಹನಲ್ತೆ? ಆದೊಡಂ . . .
(ಎಂದು ಸುಮ್ಮನಾಗಿ ದೂರನೋಡಿ ಚಿಂತಿಸುವಂತಾಗುತ್ತಾನೆ)

ಕುಳಿಂದಕ: ತಮ್ಮ ವಿಶ್ವಾಸದೊಳೆ ಚಂದ್ರಹಾಸಂಗೀತಂಗೆ
ಅಭ್ಯುದಯ ಸಿದ್ಧಿ.

ದುಷ್ಟಬುದ್ಧಿ: (ತನ್ನೊಳಗೆ) ಬಂಜೆಯಾಗದು ವಿಪ್ರನ್ ಅಂದೆನ್ನೊಳ್
ಆಡಿದಾ ನುಡಿ. ರಾಜಲಕ್ಷಣದಿಂದೆ ಒಪ್ಪುವಿವನನ್
ಭಂಜಿಸದೊಡೆ ಈ ಧರಣಿಗೀತನೆಯೆ ಅರಸಾದಪನ್;
ಬಳಿಕ ಮಗ ಮದನಂಗೆ ದೊರೆತನಂ ಶಶವಿಷಾಣಂ!
ಬಲಶಾಲಿಯಾಗಿಹನ್. ಅಗ್ಗಳಿಕೆಗೀತೆನ್
ಅಂಜುವವನಲ್ಲ. ನಂಜನೂಡಿಸಿ ಕೊಲುವ
ಉಪಾಯಮಂ ನೆಗಳ್ದಿಪನ್. (ಬಹಿರಂಗವಾಗಿ)
ಕುಳಿಂದಕ,
ನೀನರಸನಾದೊಡಂ ಆಶ್ರಿತಂ. ನಿನಗಿವಂ
ದತ್ತುಮಗನಪ್ಪುದಕೆ ಕುಂತಳೇಂದ್ರನ ಆಜ್ಞೆ
ಬೇಕೆಂದೆ ನನ್ನ ಮತಿ. ಈತನೀ ಭದ್ರರೂಪವೆ
ರಾಜೇಂದ್ರನಂ ಮನವೊಲಿಸಿ, ಆತನನುಮತಿಯ
ಫಲವೀವುದೆಂಬುದೆನ್ನಾಶೆ. ಮಗ ಮದನಂಗೆ
ಅವಸರದ ಪತ್ರವೊಂದನು ಕೊಡುವೆ. ಈಗಳೆಯೆ
ಚಂದ್ರಹಾಸನೆಯೆ ಅದನು ಕೊಂಡೊಯ್ಯಲಾ ಎಡೆಗೆ.

ಕುಳಿಂದಕ: ತಮ್ಮಾಣತಿ.

ದುಷ್ಟಬುದ್ಧಿ : (ಲಘುಮನಸ್ಸಿನಿಂದೆಂಬಂತೆ ಚಂದ್ರಹಾಸನಿಗೆ)
ರಾಜಕುಮಾರ, ನಿನ್ನವೋಲ್ ಯುವಕರ್ಗೆ
ಪಯಣವೆಂದರೆ ಏನು? ಬರಿಯಾಟವೈಸೆ!

ಚಂದ್ರಹಾಸ: ಲೇಖನವ ಬರೆದು ಕೊಡಿ. ಶೀಘ್ರದಲ್ಲಿಯೆ ಹೋಗಿ
ಕಾರ್ಯವನು ಕುಂದಿಲ್ಲದಂತೆಸಗಿ ಬಹೆನು.

ಕುಳಿಂದಕ : ನೀನೊಬ್ಬನೆಯೆ ಹೋಗುವೆಯಾ? ಜೊತೆಗೆ ಕಿಂಕರರು
ಇರಲಿ. ವೀರಸೇನ, ರಣಸಿಂಹರಿಹರಲ್ತೆ?

ದುಷ್ಟಬುದ್ಧಿ : ಆರವರು?

ಕುಳಿಂದಕ: ನಮ್ಮ ಸೈನ್ಯಾಧಿಕಾರಿಗಳ್.
ಆಜೀವಸ್ನೇಹಿತರ್ ಚಂದ್ರಹಾಸಂಗೆ.

ದುಷ್ಟಬುದ್ಧಿ : ಹಾಗೆಯೆ ಮಾಡಲಿ.
ಒಂಟಿಯಾಗಿರೆ ದಾರಿ ದೂರವಾಗುವುದು.

ಚಂದ್ರಹಾಸ: ತೇಜಿಗಳನಳವಡಿಸಿ ಸಿದ್ಧರಾಗುವೆವು.
[ಎಂದು ಏಳುತ್ತಾನೆ]

ದುಷ್ಟಬುದ್ಧಿ : ನೀನು ಹೋಗುವ ಕಾರ್ಯ ಗೋಪ್ಯವೆಂದೆಣಿಸು.

ಚಂದ್ರಹಾಸ: ಹಿರಿಯರಪ್ಪಣೆ. (ತಲೆಬಾಗಿ ಹೊರಡುತ್ತಾನೆ)

ದುಷ್ಟಬುದ್ಧಿ : ಏನದಮ್ಯ ಉತ್ಸಾಹ ಈ ಕುಮಾರನಿಗೆ! . . .
ನಾನೀಗಳೆಯೆ ಲೇಖನವ ಸಿದ್ಧಗೊಳಿಸುವೆನು.
[ಕುಳಿಂದಕ ಎದ್ದು ನಮಸ್ಕರಿಸಿ ಹೊರಡಲುದ್ಯುಕ್ತನಾಗುತ್ತಾನೆ.
ದುಷ್ಟಬುದ್ಧಿಯೂ ಎದ್ದು ಕೈಜೋಡಿಸಿ ಬೀಳ್ಕೊಡುತ್ತಾನೆ.]

ಪರದೆ ಬೀಳುತ್ತದೆ.

ದೃಶ್ಯ ೩

[ಕುಂತಳನಗರದ ಬಾಹ್ಯೋಪವನ. ವೀರಸೇನ, ರಣಸಿಂಹ, ಚಂದ್ರಹಾಸ ಬರುತ್ತಾರೆ
ಕುದುರೆಸವಾರಿ ಮಾಡಿ ಬಹು ದೂರ ಪಯಣ ಬೆಳೆಸಿದ ಚಿಹ್ನೆಗಳೆಲ್ಲ ಕಾಣುತ್ತವೆ.]

ಚಂದ್ರಹಾಸ : ಮಿತ್ರರಿರ, ಇದೆ ಕುಂತಳನಗರಿಯ ಬಾಹ್ಯೋಪವನಂ
ತಾನೆಂಬ ದೂರಭಾವನೆ ನನ್ನ ನೆನಹಿನ

ದಿಗಂತದಲಿ ಸುಳಿಯುತಿದೆ. ನಯಸರದ ಕೋಗಿಲೆಯ
ಸಾದರದ ನುಡಿ ನಮ್ಮನಾದರಿಸಿ ಕರೆಯುತಿದೆ ಕೇಳಿ!
[ಕೋಗಿಲೆಯ ಉಲಿಹ ಕೇಳಿಸುತ್ತದೆ.]

ರಣಸಿಂಹ: ಈ ಒಂದೆಡೆಯೊಳೆಯೆ ಅಲ್ತು. ಎಲ್ಲೆಡೆಯೊಳುಂ
ದಾರಿಯುದ್ದಕೂ ಶುಭದ ಮಳೆ ಕರೆದುದೆಮ್ಮಮೇಲೆ.
ದಿನವೆರಡರಲಿ ಮುಗಿಯಿಸುವ ಪಯಣಮಂ
ಒಂದೆ ದಿನದಲಿ ಬಂದೆವೈಸೆ ಪೂರೈಸಿ!
ಎಲ್ಲೆಡೆ ಸುಖಾಗಮನ! ಸರ್ವರಿಂ ಸುಸ್ವಾಗತ!
ನಿನ್ನ ಮೇಲಿಹ ಸದಾ ಭಗವತ್ ಕೃಪೆಗೆ
ಬೇರೆ ಏತಕೆ ಸಾಕ್ಷಿ, ಚಂದ್ರಹಾಸ?

ವೀರಸೇನ: ಮೊದಲು
ಕುಂಕುಮ ಸುರಂಜಿತ ಹರಿದ್ರಾಂಗದಿಂ ಮೆರೆವ
ನೂತನ ವಧೂವರರು ಬಂದರಿದಿರಾಗಿ!

ಚಂದ್ರಹಾಸ: ಆಮೇಲೆ ಸಮ ಸದಾಕಾರದಿಂ ಬರುತಿರ್ದ
ಋಷಿವರ್ಯರಿರ್ವರಂ ಕಂಡು ನಮಿಸಿದೆವು!

ರಣಸಿಂಹ: ಇರ್ದುದವರಾಶೀರ್ವಾದದೊಳ್
ಅದೆಂತಪ್ಪ ಮಂಗಳಧ್ವನಿ!

ವೀರಸೇನ: ತರುವಾಯ ರಮಣೀಯ ಕುಸುಮ ಫಲಮಂ ಕೊಂಡು
ನಿನಗೀಯಲೈತಹ ವನಾಧಿಪರ ನೋಡಿದೆವು!

ರಣಸಿಂಹ: ಆಮೇಲೆ ಇದಿರು ಬಂದಳು ಕಣ್ಗೆ ಚೆಲ್ವಾಗೆ
ಎಳಗರುವೆರಸಿ ಬರ್ಪ ಗೋಮಾತೆ!

ಚಂದ್ರಹಾಸ: ಇಲ್ಲಿ, ಕುಂತಳನಗರಲಕ್ಷ್ಮಿ ಸುಸ್ವಾಗತಿಸೆ
ಚಾಚಿರುವ ಹಸುರು ಹೂವಿನ ನೀಳ್ದ ತೋಳ್ಗಳೋಲ್
ತಳಿತ ಬನವೆಮ್ಮನೆದುರುಗೊಂಡಿರ್ಪುದೈಸೆ! . . .
ಕೆಳೆಯರಿರ, ಹರಿಗಳಿಗೆ ನೀರ್ಕುಡಿಸಿ,
ಎಳೆವುಲ್ಲಿನಾಹಾರಮಂ ಕೊಯ್ದಡಕೆ,
ತಣ್ಣೆಳಲಲ್ಲಿ ಆಯಸವ ಪರಿಹರಿಸಿಕೊಳ್ಳಿ, ಹೋಗಿ.
ನಾನಿಲ್ಲೆ ಬನದಲ್ಲಿ ಅಡ್ಡಾಡಿ, ಬೇಗನೆಯೆ
ನಿಮ್ಮೆಡೆಗೆ ಬರುವೆ.

ರಣಸಿಂಹ: ಈ ಉದ್ಯಾನ ಶೋಭೆಗೆ ರಸೋದ್ದೀಪನಂಗೊಂಡು
ವೈಮರೆಯದಿರು ಭಕ್ತಿಮೂರ್ಛೆಗೆ ಸಂದು!

ವೀರಸೇನ : ಅರಣ್ಯಾದ್ರಿ ಸೃಷ್ಟಿಸೌಂದರ್ಯದಿಂ ಭಾವವಶನಾಗುವಾ
ನಿನ್ನ ರೂಢಿಯ ನೆನೆದು ನಮಗಿನಿತು ಆಶಂಕೆ !

ಚಂದ್ರಹಾಸ : ಬೇಡ ನಿಮಗಾ ಭಯಂ, ಇಲ್ಲಿ. (ವೀರಸೇನ, ರಣಸಿಂಹ ಹೋಗುತ್ತಾರೆ.)

ಅಃ ಈ ಉದ್ಯಾನ ಶೋಭಾರತಿ
ಪಂಕ್ತಿ ಪಂಕ್ತಿಯೆ ದೀರ್ಘವಂಕಿಮಂ ಮೆರೆವಸಂಖ್ಯೇಯ
ತನ್ನ ಬಹು ಪುಷ್ಪಬಾಹುಗಳಿಂದೆ
ನನ್ನನಕ್ಕರೆಯಿನಪ್ಪುತಿಹಳಲ್ತೆ ?....
ಮನವ ತೇಲಿಸುತಿಹುದು ನೆನಪಿನ ದೋಣಿ
ಕಾಲವಾಹಿನಿಯ ಆ ದೂರತೀರಕ್ಕೆ.
ವಿಸ್ಮೃತಿಯ ವೈತರಣಿಯೊಳ್ ಮುಳುಗಿದ್ದ ಆ ಅನುಭವಂ
ಪೂರ್ವಜನ್ಮ ಸ್ಮರಣೆಯಂತೆ ಮೈದೋರುತಿಹುದಿಂದು.

[ದೂರ ನೋಡಿ]

ಆ ತರಂಗಿಣಿಯ ಸೈಕತದೊಳಲ್ತೆ
ಅಂದೆನಗೆ ದೊರೆತುದಾ ದಿವ್ಯೋಪಲಂ
ಪುಟ್ಟ ಸಾಲಗ್ರಾಮದೊಂದು ರಮಣೀಯ ಶಿಲೆ,
ಶ್ರೀಹರಿ ಕೃಪಾ ಪ್ರತೀಕಂ !....(ಭಕ್ತಿಭಾವದಿಂದ ನಿಲ್ಲುತ್ತಾನೆ.)
ಭಗವಂತನ ಕೃಪೆ ಒಮ್ಮೊಮ್ಮೆ ಎನಿತು ಕಠೋರ !
ಎನಿತು ಘೋರ ?....
ತಳಿತೆಸೆವ ಈ ಮಾಮರದ ಕರಿಯ ತಣ್ಣೆಳಲಲ್ಲಿ
ಹಸುರ ಮೇಲ್ಮಲಗಿ ಮಾರ್ಗಶ್ರಮವ ಕಳೆಯುವೆನು.
[ತೋಳನ್ನು ತಲೆಗಿಂಬುಮಾಡಿ ಮಲಗುತ್ತಾನೆ. ವಿಷಯೆ, ಚಂಪಕಮಾಲಿನಿ, ಪಂಕಜೆ ಪ್ರವೇಶಿಸುತ್ತಾರೆ.]

ಪಂಕಜೆ : ಬನದ ಪೆಂಪೆಂತು ಮೋಹಿಪುದು ಮನವ,
ನೋಡಿದೆಯಾ, ಕೆಳದಿ.

ವಿಷಯೆ : ಬನದೇವಿ ತನ್ನಿನಿಯನಾಗಮನಮಂ ಬಯಸಿ,
ಪಸುರುಡೆಯನುಟ್ಟು, ಪೊಂದೊಡವೆಗಳ ತೊಟ್ಟು,
ನವಕುಸುಮ ಮಾಲೆಯಂ ಮುಡಿದು,
ಪೊಳೆವ ಪೂಗೆಂಪಿನಿಂ ಪಣೆಗೆ ಬೊಟ್ಟಿಟ್ಟು,
ಮೆಯ್ಗೆ ಬಿರಿದಲರ ಪರಿಮಳಂಗಳ ಪೂಸಿ,
ಕಾಣಿಕೆಯ ಕೊಡಲೆಂದು ಕೈಯಲ್ಲಿ ಹಣ್ಣುಗಳ

ಗೊಂಚಲುಗಳಂ ಪಿಡಿದು ಕಾದಿಹಳೊ ಎಂಬಂತೆ
ತೋರುತಿದೆ !

ಚಂಪಕಮಾಲಿನಿ : ನಿನ್ನಂತೆ ಅಲ್ತೆ ನಿನ್ನ ಬನದೇವಿಯುಂ ?

ಪಂಕಜೆ : ವಿಷಯೆ ಯಾರನು ಬಯಸಿ ಕಾದಿಹಳು, ಚಂಪಕಾ ?

ಚಂಪಕಮಾಲಿನಿ : ಅವಳ ಪೊಸ ಜೌವ್ವನವ ನೋಡಿದರೆ ತೋರುವುದು
ಯಾರನೋ ಕಾಯುತಿಹಳೆಂದು !

ವಿಷಯೆ : ಕಾಯುತಿರುವವಳು ನಾನಲ್ಲ ; ನೀನು !

ಚಂಪಕಮಾಲಿನಿ : (ಕೈ ತೋರುತ್ತಾ) ಅಕ್ಕ, ನಿನ್ನೆ ನೀನಾ ಕೊಳದ
ಮಣಿಶಿಲಾ ಸೋಪಾನದಲ್ಲೊಬ್ಬಳೆಯೆ ಕುಳಿತು
ಆವ ಸುಂದರ ಮೂರ್ತಿಯಂ ನೆನೆಯುತಿದ್ದೆ ?
ನಾನು ಬಳಿ ಸಾರ್ದರೂ ನೀನರಿಯಲೆಯೆ ಇಲ್ಲ ;
ನಾನು ಕರೆದರೂ ನಿನಗೆ ಕೇಳಿಸಲೆ ಇಲ್ಲ.
ಬಾಹ್ಯಲೋಕವ ಮರೆತು ಏಕಾಗ್ರಚಿತ್ತದಿಂ
ಜಾನಿಸುವ ಜೋಗಿಯಂತಾಗಿಬಿಟ್ಟಿದ್ದೆ !
ಆರೊ ಆ ಪುಣ್ಯಾತ್ಮ, ನಿನ್ನ ಧ್ಯಾನದ ಪರಮಪುರುಷ ?

ವಿಷಯೆ : ಧ್ಯಾನಿಗಳ್ ಬೇರೆವೇರೆಯಾದೊಡಂ
ಧ್ಯೇಯಮಾ ಪರಮಪುರುಷಂ ಸರ್ವರ್ಗಂ ಒರ್ವನಲ್ತೆ ?
ನಮ್ಮಿರ್ವರ್ಗಮಂತೆ ! ಬೇರೆವೇರೆಯೆ ?

ಚಂಪಕಮಾಲಿನಿ : ಅಬ್ಬ ! ಪಂಡಿತೋತ್ತಮೆ,
ಪರಮಾತ್ಮನಲ್ತು ನನ್ನಾ ಕುತೂಹಲಂ !
ಆ ಕೊಳದ ಮಣಿಶಿಲಾ ಸೋಪಾನದೊಳ್
ಒರ್ವಳೆಯೆ ತಳ್ತು ಕುಳ್ತು
ಆವ ಚೆಲುವನಂ ಜೀವಾತ್ಮನಂ ನೆನೆಯುತಿದ್ದೆ ?
ಎಂಬುದೆನ್ನಯ ಪ್ರಕೃತ ಪ್ರಶ್ನೆ !

ವಿಷಯೆ : (ನಕ್ಕು) ತಂಗಿ, ಕೇಳ್, ಪೇಳ್ವೆನ್ : ತೆಂಬೆಲರ ಸೊಗಸಿಂಗೆ
ತಲೆದೂಗುವಂಬುಜಗಳೆಡೆಯಲ್ಲಿ
ಮಂಜುಳ ನಿನಾದದಿಂ ಮೊರೆದಿರ್ದ
ತುಂಬಿಗಳ ಬಿನದಮಂ ಪರಿಕಿಸುತಲಿದ್ದೆ.

ಚಂಪಕಮಾಲಿನಿ : ಒಚ್ಚೀರೆಗಣ್ಣ ಕೋಮಲೆಯೆ,
ಮನಸಿಜನ ಮಸೆದಂಬೆ,

ನಿನ್ನ ಕಂಗಳಲೇಕೆ ನಾನು ಬಳಿಸಾರೆ
ಕಂಬನಿಗಳಾಡಿದುವು ?
ಕಲಕೀರವಾಣಿಯೇ, ಕಂಠ ಗದ್ಗದವಾದುದೇಕೆ ?
ಏಕೆ ಕಂಪಿಸಿತು ತೊಂಡೆವಣ್ತುಟಿ ?
ಕೆಂದಾವರೆಯ ಮೊಗದಿ ಮಲ್ಲಿಗೆ ಮಲರ್ದ್ದುದೇಕೆ ?
ನಳನಳಿಪ ಹೂಗೆನ್ನೆಯಲಿ ಬೆಮರಿಳಿಯಿತೇಕೆ ?....

ಪಂಕಜೆ : (ಚಂಪಕಮಾಲಿನಿಗೆ)
ನೀನಿಲ್ಲಿಗೈತರುವ ಮುನ್ನವಳು, (ವಿಷಯೆಯ ಕಡೆ ತಿರುಗಿ)
ಹೇಳಲೆ, ಸಖೀ ?....
ಹಾಡುತಿದ್ದಳು ಪ್ರೇಮಗೀತಿಕೆಯೊಂದನಿಂಪಾಗಿ !....
ನಾನು ಮಾಮರವನಪ್ಪಿರುವ ಮಲ್ಲಿಗೆಯ ಹೊದರ
ಬಳ್ಳಿಯಲಿ ಹೂಕೊಯ್ಯುತಿದ್ದಾಗ ಆಲಿಸಿದೆ. (ವಿಷಯೆಗೆ)
ಹಾಡಲಿಲ್ಲವೆ, ದೇವಿ ? ನಿಜವನೊರೆ.

ವಿಷಯೆ : ಪಂಕಜೆ, ನಿನಗೇಗಳೂ ಹಾಡುವುದೆ ಹುಚ್ಚು.
ನೀನಂದು ಬೃಂದಾವನದಿ ಗೋಪಿಯಾಗಿದ್ದೆಯೋ
ಏನೊ ?

ಪಂಕಜೆ: ನೀ ರಾಧೆಯಾಗಿದ್ದಿದ್ದರೆ !....
ಏಗಳುಂ ನೀನಾವನೊಬ್ಬನ ನೆನೆದು ಚಿಂತಿಸಿಹೆ !

ಚಂಪಕಮಾಲಿನಿ : ವಿಷಯೆ, ಅದು ಇರಲಿ. ಆ ಹಾಡ ಹಾಡೀಗ.
(ವಿಷಯೆ ಸುತ್ತಲೂ ನೋಡುತ್ತಾಳೆ.)
ಸುತ್ತ ನೋಡುವುದೇಕೆ ? ಯಾರೂ ಇಲ್ಲಿಲ್ಲ.

ವಿಷಯೆ : ಅದಕ್ಕಲ್ಲ, ಅಂಗಜನ ಸೊಕ್ಕಾನೆ!
ಆ ಕೊಳದೊಳಿದ್ದ ಅರಸಂಚೆಗಳು ಗುಂಪಾಗಿ
ಮಾಲೆಮಾಲೆಗಳಾಗಿ ಹಾರುತಿಹವೇಕೆಂದು
ಬೆರಗಾಗಿ ನೋಡಿದೆನು....

ಪಂಕಜೆ: ಅದಕೇಕೆ ಬೆರಗು ?
ನಿನ್ನ ನಡೆಯ ವಿಲಾಸಮಂ ಕಂಡು
ಕಲಹಂಸಗಳು ನಾಚಿ ಹಾರಿದುವು ನಭಕೆ
ಕಾಲಿಂದೆ ನಡೆಯಲೊಲ್ಲದೆ....

ಚಂಪಕಮಾಲಿನಿ : ಅಲ್ಲದೆಯೆ
ನೀರ ಮೇಲಕೆ ನೆಗೆದು ಮಿಂಚಿ ಮುಳುಗುವ ಮೀನು

ಈ ಲೋಲಲೋಚನೆಯ ದಿಟ್ಟಿಗಳ ಕಂಡು
ತಮ್ಮಾಟ ಪಾಸಟಿಯಾಗದಿರೆ
ಲಜ್ಜೆಯಿಂದಾಳಕ್ಕೆ ಮುಳುಗೆ, ಪಾಪ,
ನೀರಿನಾಹಾರ ದೊರಕದೆ ಬಾನ್ಗೆ ಹಾರಿದುವೊ
ಏನೊ ?

ವಿಷಯೆ : ರಸಿಕತೆಯ ಕಡಲ ಕಡೆಯಲು ಮದನ,
ಕವಿಯ ರಸಲಕ್ಷ್ಮಿ, ನೀನುದಿಸಿ ಬಂದೆಯಲ್ತೆ ?

ಪಂಕಜೆ : ವಿಷಯೆ, ಆ ಹಾಡು ?

ಚಂಪಕಮಾಲಿನಿ : ಅಹುದಹುದು ಮರೆತಿದ್ದೆ.
ಈ ಕಲ್ಮಣೆಯ ಮೇಲ್ಕುಳಿತು ಗೀತೆಯನು ಕೇಳುವೆವು....
[ಎಲ್ಲರೂ ಕುಳಿತುಕೊಳ್ಳುತ್ತಾರೆ.]

ವಿಷಯೆ : ನಾ ಹಾಡಲೊಲ್ಲೆ.

ಚಂಪಕಮಾಲಿನಿ : (ವಿನೋದವಾಗಿ) ಬಿಂಕವೇತಕೆ ನಿನಗೆ ? ಹಾಡಬಾರದೆ, ರಮಣಿ?

ವಿಷಯೆ : (ವಿನೋದವಾಗಿ) ಬರಿದೆ ಪೀಡಿಪೆ ಏಕೆ? ಹಾಡಲೊಲ್ಲೆನು, ರಮಣ?

ಚಂಪಕಮಾಲಿನಿ : ಓಹೊ, ನಿಜದ ನಾಟಕಕೆ ಅಭ್ಯಾಸ ಪೀಠಿಕೆಯೊ ?

ಪಂಕಜೆ : ಹಾಗಲ್ಲ, ಕವಿಗಳನು ರಸಿಕರನು ಕೆಣಕಿದಲ್ಲದೆ
ನಮಗೆ ಲಾಭವೆಲ್ಲಿ ? ತಮ್ಮ ಸರಕಿನ ಮೂಟೆಯನು
ಸುಮ್ಮನೆಯೆ ಬಿಚ್ಚುವರೆ ? ರಸತುಂಬಿ ಬಿರಿಯುತಿಹ
ಕರಿಯ ಕಬ್ಬನು ಬರಿದೆ ಬೇಡಿದೊಡೆ ತನ್ನೆದೆಯ
ಸವಿವೊನಲ ನೀಡುವುದೆ? ಹಿಂಡಿದರೆ ತಾನೆ
ದೊರಕುವುದು ರಸ ?

ವಿಷಯೆ : ಸಾಕು ನಿನ್ನುಪಮಾನ.

ಪಂಕಜೆ : ಸಾಕು ನಿನ್ನನುಮಾನ !

ಚಂಪಕಮಾಲಿನಿ : ಹಾಡಕ್ಕ, ಸಾಕು ನಿನ್ನಭಿಮಾನ !

ವಿಷಯೆ : (ಹಾಡುತ್ತಾಳೆ)

ಬನದ ತಣ್ಣೆಳಲಿನಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು ;
ಬಾರೆಲೆ ಕೆಳದಿ !

ಚಂಪಕಮಾಲಿನಿ : (ಸುತ್ತ ಹುಡುಕಿ ನೋಡುವವಳಂತೆ ನಟಿಸುತ್ತಾ)
ಎಲ್ಲಿ, ಪಂಕಜೆ, ಕಾಯುತಿಹನಂತೆ ?

ಪಂಕಜೆ : ನೋಡಲ್ಲಿ
ತಳಿತೆಸೆವ ಚಂಪಕವೆ ಅವಳಿನಿಯನಿರಬೇಕು !

ವಿಷಯೆ : (ಸರಸದ ಮುನಿಸಿನಿಂದ)
ಸಾಕು, ಬಾಯ್ಮುಚ್ಚು, ಪಂಕಜೆ. ನಿನ್ನ ಮನದನ್ನ
ಗೊಣಗುತ್ತ ಮುದುಕನಂತೆಲರಿನಲಿ ತಲೆಯೊಲೆಯುವಾ
ಬಿದಿರಮೆಳೆಯಿರಬೇಕು. (ಕೈದೋರುತ್ತಾಳೆ)

ಚಂಪಕಮಾಲಿನಿ : ಬಿಡು, ತಂಗಿ ; ಸಿಗ್ಗೇಕೆ ?
ನಿನ್ನ ಇನಿದನಿಯನಾಲಿಸೆ ಮೌನವಾಂತಿದೆ ಬನಂ ;
ನೋಡು ! . . . . . ಹಾಡು !

ವಿಷಯೆ : ನಾನೊಲ್ಲೆ. ನೀವೆಲ್ಲ
ಪರಿಹಾಸ್ಯ ಮಾಡುವಿರಿ.

ಚಂಪಕಮಾಲಿನಿ : ಇನ್ನು ಮಾಡುವುದಿಲ್ಲ.
ಹಾಡು.

ವಿಷಯೆ : (ಹಾಡುತ್ತಾಳೆ)

ಬನದ ತಣ್ಣೆಳಲಿನೆಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು ;
ಬಾರೆಲೆ ಕೆಳದಿ !
ಅಲ್ಲಿ ಕಲಕಂಠಗಳು
ಹಾಡುತಿರುವುವು ;
ಅಲ್ಲಿ ಗಿಳಿವಿಂಡುಗಳು
ಕೂಗುತಿರುವುವು.

ಪಂಕಜೆ : ಗಾನವೆನಿತಿಂಪು ! ಎದೆ ಉಬ್ಬಿ ಹಾರುತಿಹುದೆನಗೆ !

ಚಂಪಕಮಾಲಿನಿ : ಗಾನಕ್ಕೆ ಮನಸೋಲದವರುಂಟೆ ?
ಇದ್ದರವನತಿಪಾಪಿ. ಅವನೆದೆಯೆ ನರಕ . . .
ನೋಡಲ್ಲಿ, ಬಯಲೊಳಿಹ ಗೋವು ತಲೆಯೆತ್ತಿ
ಕಿವಿಯ ನೆಟ್ಟಗೆ ನಿಮಿರಿ, ಪುಲ್ಮೇವನೆಯೆ ಮರೆತು,
ಮೆಯ್ಮರೆತು, ಆಲಿಸುತ್ತಿಹವು ನಟ್ಟಾಲಿಯಾಗಿ !

ಪಂಕಜೆ : ಹಾಡೆನ್ನ ಸರಸತಿಯ ಬೀಣೆ, ಓ, ಹಾಡು !

ವಿಷಯೆ : (ಹಾಡುತ್ತಾಳೆ)

ಎಳದಳಿರೊಳು ನಲಿನಲಿಯುತ
ಮಂದ ಮಾರುತ
ಮೆಲುನಡೆಯಲಿ ಸುಳಿದಲೆವನು
ಮಧುವ ಸಾರುತ !
ಬನದ ತಣ್ಣೆಳಲಿನಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು ;
ಬಾರೆಲೆ ಕೆಳದಿ !

ಪಂಕಜೆ : ಇದೇನು ನಿಲ್ಲಿಸಿದೆ ?

ವಿಷಯೆ : ಹಾಡು ಪೂರೈಸಿತು.

ಪಂಕಜೆ : ಸುಳ್ಳಾಡುತಿಹೆಯಲ್ಲ ; ಮುಂದಿಹುದು ನಾ ಬಲ್ಲೆ.

ಚಂಪಕಮಾಲಿನಿ : ಹೇಳು ನಾಚಿಕೆಯೇಕೆ, ಅಕ್ಕ ? ನಾವೆಲ್ಲ
ನಿನ್ನಂತೆ ! ತರಳೆಯರು, ಮುಗ್ಧೆಯರು, ಜೌವ್ವನೆಯರು !

ವಿಷಯೆ : (ಹಾಡುತ್ತಾಳೆ)

ಸುಮಗಳನು ಕೊಯ್ದು ನೆಯ್ದು
ಮಾಲೆ ಸೂಡುವಾ !
ಮನಸಿಜನ ಕಣೆಗಳಂತೆ
ತೇಲಿ ತಾಗುವಾ !
ಬನದ ತಣ್ಣೆಳಲಿನಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು ;
ಬಾರೆಲೆ ಕೆಳದಿ !

ಪಂಕಜೆ : ನೀನಿನಿತು ರಸಿಕಳೆಂದು ನಾನು ತಿಳಿದಿರಲಿಲ್ಲ.

ವಿಷಯೆ : ಹೊಗಳಿಕೆಯಿರಲಿ, ನೀನೊಂದು ಹಾಡು ಹಾಡಲೆಬೇಕು.

ಪಂಕಜೆ : ನೀನು ಹಾಡಿದ ಮೇಲೆ ನಾನು ಹಾಡುವುದೆ ?
ಹೊತ್ತಾಯ್ತು, ನಾಳೆ ಹಾಡುವೆ ನಾನು. ಈಗ
ಹೂಕೊಯ್ದುಕೊಂಡು ಹೋಗೋಣ ಬೇಗ.

ಚಂಪಕಮಾಲಿನಿ : ಹೌದು. ಹೊತ್ತಾಯ್ತು. ಮೇಲೇಳಿ.

ವಿಷಯೆ : ನೀವೆಲ್ಲ ಜಾಣೆಯರು.
ನನ್ನಂತಹರು ನಿಮ್ಮೊಡನೆ ಬರಬಾರದು.

ಪಂಕಜೆ : ನಾನು ಆ ಸುರಗಿ ಮರವನು ಹತ್ತಿ ಹೂಕೊಯ್ಯುವೆ.
[ಹೊರಡುತ್ತಾಳೆ]

ಚಂಪಕಮಾಲಿನಿ : ನಾನಲ್ಲಿ ಅರಳಿರುವ ಜಾತಿಗಳ ಕುಯ್ವೆ.
[ಹೊರಡುತ್ತಾಳೆ]

ವಿಷಯೆ : ನಾನಿಲ್ಲೆ ಮಾಮರದ ಬಳಿಸೇರಿ, ಮಲ್ಲಿಗೆಯ
ಮೊಗ್ಗುಗಳ ಕೊಯ್ಯುವೆನು !
(ಎಂದು ಮುಂಬರಿದು ಮಲಗಿರುವ ಚಂದ್ರಹಾಸನನ್ನು ನೋಡಿ, ಬೆರಗುವೋಗಿ, ಹಿಂಜರಿದು, ನಟ್ಟನೋಟವಾಗಿ ನಿಲ್ಲುತ್ತಾಳೆ)
ಆರಿವನು? ಆ . . ರಿ . . ವ . . ನು ?
ತೋಳ ತಲೆಗಿಂಬಿನ ತಳಿರ್ವಸೆಯ ಮೇಲೆ
ತಂಗಾಳಿಗೊಡ್ಡಿದ ಮೆಯ್ಯ ಸೊಗಸಿಂದೆ ಮೆರೆದು,
ನಿದ್ರಾಲೋಲನಾಗಿಲ್ಲಿ ಮಲಗಿಹನ್ ! ಆ . . ರಿ . . ವ . . ನು?
(ಒಂದೆರಡು ಹೆಜ್ಜೆ ಮುಂದೆ ಸರಿಯುತ್ತಾಳೆ) –
ಲೋಕತ್ರಯಂ ತನಗೆ ವಶವರ್ತಿಯಾದುದು ;
ಇನ್ನೇಕೆ ಧಾವತಿಯೆಂದು ಸುಖದಿಂದೆ ಪವಡಿಸಿಹ
ಕರ್ವುವಿಲ್ಲನೆನೆ ನಿದ್ರಿಪನು ಸರ್ವಸ್ವಮಂ ಮನಮಂ
ಶೃಂಗಾರದಿಂ ಸೂರೆಗೈದು ! ಆ . . ರಿ . . ವ . . ನು ?
(ಒಂದು ಹೆಜ್ಜೆ ಮುಂಬರಿದು, ಮೆಚ್ಚಿನೋಡುತ್ತಾಳೆ)
ಬೇಸರದೆ ಬಾಂದಳದೊಳಾವಗಂ ತಿರುಗಿ ತೊಳಲಿ,
ಸಾಕಾಗಿ, ಇಳೆಗಿಳಿದು ಪವಡಿಸಿಹ ಚಂದ್ರನೆಯೆ
ಅಕಳಂಕ ಛದ್ಮರೂಪದೊಳಿಂತು . . . (ತಟಕ್ಕನೆ ಹಿಂದೆ ಸರಿದು)
ಎಚ್ಚರುತಿಹನೆ? . . . .
ನಿದ್ದೆಯೊಳೆ ನಗುತಿಹನೆ? ನಟಿಸಿ ನಿದ್ರಿಸುತಿಹನೊ ?
ಇಲ್ಲ, ಇಲ್ಲ. ಕೈತವವನರಿಯದೀ ಮುಗ್ಧಮುಖ !
(ಮತ್ತೆ ಹತ್ತಿರ ಹೋಗಿ ನೋಡುತ್ತಾಳೆ; ನಾಚುತ್ತಾಳೆ ; ತುಟಿಗೆ ಕೈಯಿಟ್ಟು ಮೆಲ್ಲಗೆ ನಗುತ್ತಾಳೆ.)
ನಮ್ಮ ಸಲ್ಲಾಪಗಳನೆಲ್ಲಿ ಕೇಳಿದನೊ ಏನೊ ?
ಎನ್ನ ಕೆಳದಿಯರೆಲ್ಲಿ? (ಸುತ್ತಲೂ ಕದ್ದು ನೋಡುತ್ತಾಳೆ)
ಹಾರುತಿದೆ ನನ್ನೆದೆ !
ಏದುತಿದೆ ಏಕಿಂತು ತಪ್ಪು ಮಾಡಿದ ಮಗುವಿನಂತೆ?

ಒರ್ವರ್ ಒರ್ವರನ್ ಅಗಲರ್ ಅಶ್ವಿನೀದೇವರ್ಕಳ್;
ಉರ್ವ ನಳಕೂಬರ ಜಯಂತಾದಿ ಸುರತನುಜರ್
ಉರ್ವರೆಗದೇಕೆ ಬಹರ್? . . . ಅವರಲ್ತು . . . .
ಯಕ್ಷ ಕಿನ್ನರ ಸಿದ್ಧ ಗರುಡ ಗಂಧರ್ವಾದಿ
ಗೀರ್ವಾಣರೊಳಗಾವನೋ ದಿಟಂ: ಮನುಜನಲ್ಲೀತನ್!
(ಸುತ್ತ ನೋಡುವಳೊಮ್ಮೆ; ನೂಪುರವಲುಗದಂತೆ ಹತ್ತೆ ಸಾರುವಳೊಮ್ಮೆ; ಸೋಂಕಲೆಂತಹುದೆಂದು ಮತ್ತೆ ಮುರಿದಫಳೊಮ್ಮೆ; ಹಜ್ಜೆ ಹಜ್ಜೆಯ ಮೇಲೆ ಸಲ್ವಳಮ್ಮದೆ ನಿಲ್ವಳು! ಚಿತ್ತದೊಳ್ ನಿಚ್ಚಯ್ಸಿ ನೆರೆಯಲೆಳಸುವಳೊಮ್ಮೆ; ಹೊತ್ತಲ್ಲದನುಚಿತಕೆ ಬೆದರಿ ಹಿಂಗುವಳೊಮ್ಮೆ; ತತ್ತಳದ ಬೇಟದೊಳ್ ಬೆಂಡಾಗಿ ವಿಷಯೆ ನಿಂದಿರ್ದಳಾತನ ಪೊರೆಯೊಳು!)
ಮುತ್ತಿಡುವೆನೆಂದೊಡಿವನೀ ನಿದ್ದೆಗಾಗುವುದು
ಭಂಗ! ಗಾಢದಿಂದಪ್ಪುವೆನೆ ಹೊತ್ತಲ್ಲ!
ಎನ್ನ ಕೆಳದಿಯರಿಲ್ಲಿಗೈತಂದು ಕಂಡರೆ?
ಕರುಬುವರು! (ಕಂಚುಕದ ಸೆರಗಿನಲ್ಲಿದ್ದ ಪತ್ರಿಕೆಯನ್ನು ನೋಡಿ)
ಕಂಚುಕದ ಸೆರಗಿನಲಿ ಪತ್ರಿಕೆಯಿದೇನು?
ಬಿಚ್ಚಿ ಮುದ್ರೆಯನೊಡೆದೆ ನೋಡುವೆನ್!
(ಹಾಗೆಯೆ ಮಾಡಿ, ವಿಸ್ಮಯದಿಂದ)
ಏನಿದೆನ್ನಯ ತಂದೆಯಕ್ಷರಂ? ಆತನೆಯೆ
ಬರೆದ ಪತ್ರಿಕೆ ಇದು! ಇರಲಿ, ಓದುವೆನ್;
(ಓದುತ್ತಾಳೆ)
"ಶ್ರೀಮತ್ ಸಚಿವ ಶಿರೋಮಣಿ ದುಷ್ಟಬುದ್ಧಿ
ಸುಪ್ರೇಮದಿಂ ತನ್ನ ಮಗ ಮದನಂಗೆ ಮಿಗೆ ಪರಸಿ
ನೇಮಿಸಿದ ಕಾರ್ಯಮ್:
ಈ ಚಂದ್ರಹಾಸಂ ಮಹಾಹಿತನೆಮಗೆ
ಮೇಲೆ ನಮ್ಮ ಸೀಮೆಗರಸಾದಪಂ;
ಸಂದೇಹಮಿಲ್ಲಿದಕೆ. ಸಾಮಾನ್ಯದವನಲ್ಲ;
ನಮಗೆ ಮುಂದಕೆ ಸರ್ವಥಾಮಿತ್ರನಾಗುವನ್
ಎಂದೀತನಂ ಕಳುಹಿದೆವು ನಿನ್ನ ಬಳಿಗೆ:
ಇದನರಿವುದು! ಹೊತ್ತುಗಳೆಯದೆ,
ಬಂದ ಬಳಿಕಿವನ ಕುಲ ಶೀಲ ವಿತ್ತ ವಿದ್ಯಾ
ವಯೋ ವಿಕ್ರಮಂಗಳನೀಕ್ಷಿಸುತ್ತಿರದೆ
ವಿಷವ ಮೋಹಿಸುವಂತೆ ಕುಡುವುದೀತಂಗೆ ನೀನ್!

ಇದರೊಳೆಮಗೆ ಉತ್ತರೋತ್ತರಮಪ್ಪುದು.
ಅಂ ಬೇಗ ಚಂದನಾವತಿಯಿಂದ ರಾಜಕಾರ್ಯವ ಮುಗಿಸಿ
ಬರ್ಪೆನ್. ಎನ್ನ ಚಿತ್ತಮಂ ನೀನರಿತು
ಹಿಂಜರಿಯದೆಲ್ಲಮಂ ಪೂರೈಸು ಯುಕ್ತಿಯಿಂದ !"
(ಓದಿ ಚಿಂತಾಕ್ರಾಂತಳಾಗಿ ನಿಲ್ಲುತ್ತಾಳೆ. ಆಶ್ಚರ್ಯ, ಶೋಕ, ಕ್ರೋಧ, ಸಂಶಯಾದಿ ಭಾವಗಳು ತರಂಗಿತವಾಗುತ್ತವೆ—ಅವಳ ಮೊಗದಲ್ಲಿ.)
ವಿಷವ ಮೋಹಿಸುವಂತೆ ! ಇದರರ್ಥವೇನು ?
ಮನ್ಮಥನ ಮೀರುತಿಹ ಗಾಡಿಯಿಂದೆಸೆವಿವಗೆ
ವಿಷವನೂಡುವುದುಂಟೆ ? ಪುಸಿ ! ಪುಸಿ! ತೆಗೆತೆಗೆ !
ಈತಂ ತಮಗೆ ಮಹಾ ಹಿತನೆಂದು ;
ನಮ್ಮ ಧರೆಗೀತನರಸನಹನೆಂದು ;
ಕುಲ ಶೀಲ ವಿದ್ಯೆಗಳನ್ ಈತನೊಳ್ ಅರಸಬೇಡ,
ಮುಂದಕೀತಂ ನಮಗೆ ಸರ್ವಥಾ ಮಿತ್ರನಹನೆಂದು ;
ನೀನೀತಂಗೆ ವಿಷಯೆ ಮೋಹಿಸುವಂತೆ ಕುಡುವುದೆಂದು,
ತಂದೆ ಅಣ್ಣಗೆ ಬರೆಸಿ ಕಳುಹಿದ ಪತ್ರವೇ ತಪ್ಪದಿದು !
ಕಡು ಚೆಲ್ವನಾದ ವರನಂ ಕಂಡು, ನಿಶ್ಚಯಿಸಿ,
ತಡೆಯದೀತಂಗೆ ನಾಂ ಮೋಹಿಸುವ ತೆರದಿಂದೆ
ಕುಡುವುದೆಂದೆನ್ನ ಪಿತನೀತನಂ ಕಳುಹಿಸಿರ್ಪನ್.
ಒಡಗೂಡದಿರದು ಎನ್ನ ಮನದೆಣಿಕೆ.
ಪತ್ರಿಕೆಯೊಳ್ ಎಡಹಿ ಬರೆದಕ್ಕರದ ಬೀಳಿದೊಡೆ
ಅದರಿಂದೆ ಕೆಡುವುದಗ್ಗದ ಕಜ್ಜಂ.
ತಪ್ಪಿರ್ದ ಲಿಪಿಯೊಳ್ 'ವ' ಕಾರಮಂ ತೊಡೆದು
ಅಲ್ಲಿಗೊಪ್ಪುವ 'ಯ' ಕಾರಮಂ
ಈ ಮಾಮರದೊಳಿಪ್ಪ ನಿರ್ಯಾಸಮಂ ತೆಗೆದು
ಕಿರುವೆರಳ ಉಗುರ ಕೊನೆಯಿಂದೀಗಳೆಯೆ
ತಿದ್ದಿ ಬರೆದಪೆನ್....
(ಮಾಮರದ ನಿರ್ಯಾಸದಿಂದ ಉಗುರ ಕೊನೆಯಿಂದ ತಿದ್ದಿ ಮೊದಲಿನಂತೆಯೆ ಕಟ್ಟುವಳು. ದೂರದಿಂದ ವಿಷಯೆ ! ವಿಷಯೆ ! ಎಂಬ ಸಖಿಯರ ಕರೆ ಕೇಳಿಸುತ್ತದೆ.)
ಸಖಿಯರೆನ್ನಂ ಕೂಗುತಿಹರು ; ಮನಮಿವನ
ರೂಪಿಂಗೆ ಸೆರೆಸಿಕ್ಕಿ ಚಲಿಸಲೊಲ್ಲದು ; ದಿಟ್ಟಿ
ಮುರಿಯದಿದೆ ; ನಡೆಯಲಡಿ ಅಚಲವಾಗುತಿದೆ !
[ಹಿಂದೆ ನೋಡುತ್ತಾ ನೋಡುತ್ತಾ ನೂಪುರಧ್ವನಿಮಾಡುತ್ತಾ ಹೋಗು

ತ್ತಾಳೆ. ಚಂದ್ರಹಾಸನು ನಿದ್ರೆಯಿಂದೆಚ್ಚತ್ತು ಸುತ್ತಲೂ ನೋಡಿ ಮೇಲೇಳುತ್ತಾನೆ.]

ಚಂದ್ರಹಾಸ : ಅಃ ಅದೆಂತಪ್ಪ ಜೆನ್ಗನಸಿನಿಂದೆಳ್ಚರ್ತೆ ನಾಂ !
ಕನಸಿನೊಳೆ ಕೇಳಿದುದೆ ಅವ್ಯಕ್ತಮಧುರಮಾ ಗಾನಂ ?
ಕನಸಿನೊಳ್ ಕಂಡೆನೆ ಆ ದಿವ್ಯ ಸುಂದರ ಮೂರ್ತಿಯಂ ?
ಕನಸಲ್ಲ. ಕನಸನಿತು ತಿಳಿಯಾಗಿ ತೋರ್ಪುದೇನ್ ?
ಏನ್ ಅಲೌಕಿಕಮೊ ಆ ಅನುಭವಂ ?
ಲಾವಣ್ಯವೇ ಮೂರ್ತಿಮತ್ತಾದಂತೆ ದಿವ್ಯಾಕಾರೆಯೊರ್ವಳ್
ಎನ್ನೆಡೆಯೆ ಸುಳಿದಾಡಿದಂತಾಯ್ತು. ಇನ್ನುಮಿದೆ
ಕಿವಿಗಳೊಳ್ ಆ ನೂಪುರಧ್ವನಿಯಿಂಚರಂ !
ಮುಂದೆ ಎಂದಾದೊಡಂ ಆ ಸ್ವಪ್ನ ಸಾಮ್ರಾಜ್ಯದಲಿ
ಮತ್ತೆ ಸಂಚರಿಪ ಭಾಗ್ಯಮೆನಗೊದಗ್ದುವುದೆ ?
ಆ ಕನಸನುಳಿದೆನ್ನ ಹೃದಯಮಂದಿರವೀಗ
ರಿಕ್ತಮೆನೆ ಬಿಮ್ಮನಿದೆ. ಹಾ ಮಧುರಸ್ವಪ್ನವೆ !....
ಓ ! ರಣಸಿಂಹನೇಕೆ ಓಡೋಡಿ ಬರುತಿಹನ್ ?

(ರಣಸಿಂಹನ ಪ್ರವೇಶ)

ಏಕೆ ಓಡೋಡಿ ಬಂದೆ !

ರಣಸಿಂಹ : ಒಳ್ಳೆಯ ಪ್ರಶ್ನೆ !
ನಿನಗಾಗಿ ಪಾಥೇಯಮುಂ ಬಿಚ್ಚಿ ಕಾದು ಕಾದು
ಸಾಕಾಗಿ ಹೋಯ್ತು. ಬೈಗಾಗಿ ಹೊತ್ತಿಳಿಯುತಿದೆ,
ನೋಡು : ಪಿರಿದೆನಿಪ ಕತ್ತಲೆಯ ರಾಶಿಯಂ
ಪೊತ್ತಿಕೊಂಡುರಿವ ವೆಂಕೆಯ ಕಡೆಯೊಳುಳಿದ
ಕೆಂಗೆಂಡಮೆನೆ ತರಣಿಮಂಡಲಮೆಸೆಯುತಿಹುದು
ಅಪರ ದಿಗ್ಭಾಗದಲ್ಲಿ !

ಚಂದ್ರಹಾಸ : ಬಳಲಿಕೆಯ ನೀಗಲೆಂದಿಲ್ಲಿ ಮಲಗಿದೆನು.
ಒಯ್ಯನೆಯೆ ತೀಡುತ್ತೈತಂದೆಲರ ಸಂಗದಲಿ
ನಿದ್ದೆವೆಣ್ಣೆಯ್ತಂದು ಕದ್ದೊಯ್ದಳೆನ್ನಂ !....
ವೀರಸೇನನೆಲ್ಲಿ ?

ರಣಸಿಂಹ : ಆ ಎಡೆಯೆ ಕಾದಿಹನ್. ಪೋಗುವಂ ಬಾ.

ಚಂದ್ರಹಾಸ : ಮೃಧು ಮಧುರ ಸಂಗೀತಮುಂ ಕೇಳಿದಿರ ನೀವು ?

ರಣಸಿಂಹ : ಹೌದು, ಕೇಳಿದೆವು ; ಬಹುದೂರದಿಂ ತೇಲಿ
ಪೆಣ್ದನಿಯವೋಲಿಳಿದು ಬಂದಂತಿತ್ತು. (ಕೆಳಗೆನೋಡಿ)
ಆರ ಹಜ್ಜೆಗಳಿವು ? ನಿನ್ನವಲ್ಲ !
ಪೂಗಳ ಪರಾಗದಿಂದಿಡಿದ ಪಸುರ್ನೆಲದಲ್ಲಿ
ಚಿತ್ರಕಾರನು ಮುದ್ರಿಸಿದ ತೆರದಿ ತೋರುತಿವೆ.
(ಚೆನ್ನಾಗಿ ಬಾಗಿನೋಡಿ)
ಕೋಮಲೆಯರಡಿಗಳಿವು ದಿಟಂ !

ಚಂದ್ರಹಾಸ : ಎಂತರಿತೆ, ಈ ಪಜ್ಜೆವಿನ್ಯಾಸ ವಿಜ್ಞಾನಮಂ ?

ರಣಸಿಂಹ : ನೋಡಿಲ್ಲಿ; ಚಿಗುರಿದೆಳವುಲ್ಲು ಕೂಡ
ಮುರಿಯದಿವೆ: ಪಾದಸಂಸ್ಪರ್ಶದಿಂದೆ
ಮುದವಾಂತು ನಲಿಯುವಂತಿವೆ ನೋಡು !

ಚಂದ್ರಹಾಸ : ನಿನ್ನದಿದು ಕವಿಯ ವಿಜ್ಞಾನಮೆ ದಿಟಂ !
ನಾನೊ ? ಏನನೂ ಅರಿಯೆ; ಮಲಗಿದ್ದೆ.

ರಣಸಿಂಹ : (ನಗುತ್ತಾ) ಅದರೊಳೇನೂ ಸಂದೇಹವಿಲ್ಲ. ಆದರೆ....

ಚಂದ್ರಹಾಸ : (ಮುಗುಳ್ನಗೆವೆರಸಿ) ಏನ್ ಆದರೆ ?

ರಣಸಿಂಹ : ನಿನ್ನ ಮೊಗದೊಳಗೇನೊ ಸಂತಸದ ಕಳವಳಂ ?
ತೋರದೆನಗಲ್ಲಿ ನಿದ್ದೆಯಿಂ ಬಹ ಮುಗ್ಧ ಶಾಂತಿ !

ಚಂದ್ರಹಾಸ : ವೀರಸೇನನದೊ ಕರೆವಂತಿದೆ !
[ಇಬ್ಬರೂ ಅವಸರವಸರವಾಗಿ ಹೊರಡುತ್ತಾರೆ.]

ಪರದೆ ಬೀಳುತ್ತದೆ.

ದೃಶ್ಯ ೪

[ಚಂದ್ರಶಾಲೆ. ಹಾಲು ಚೆಲ್ಲಿದ ಹಾಗೆ ಬೆಳುದಿಂಗಳು. ಅಲ್ಲಿ ವಿಷಯೆ ಒಬ್ಬಳೆ ಕುಳಿತು ಮೈಮರೆತು ತನಗೆ ತಾನೆ ಕನವರಿಸುವಂತಿದ್ದಾಳೆ]

ವಿಷಯೆ : ಎನಿತು ಮಲಗಿಹನು, ಮಾಮರದ ತಣ್ನೆಳಲಲ್ಲಿ,
ಮೂಲೋಕದಾನಂದ ಮೂರ್ತಿಮತ್ತಾದಂತೆ !
ವದನದೆಳನಗೆ ಎಂತು ಸಿಂಚಿಸಿದೆ ಮೋಹವನು ?
ಸ್ವಪ್ನಲೋಕದೊಳಾವ ಸಂತಸವ ಸವಿಯುತಿಹನೊ ?

ಕನಸಿನಲಿ ಆವ ಚೆಲುವೆಯ ಕಂಡು ನಗುತಿಹನೊ ?....
ನಿನ್ನ ಕನಸಿನ ಆ ಕ್ರಾಂತೆಯಾದರು ಆಗುವಾ
ಪುಣ್ಯವೆನ್ನದಾಗಬಾರದೇ ? .... (ಕಣ್ಣೊರಸಿಕೊಳ್ಳುತ್ತಾಳೆ.)
[ರಾಜಕುಮಾರಿ ಚಂಪಕಮಾಲಿನಿ ಮೆಲ್ಲಗೆ ಹಿಂದಿನಿಂದ ಪ್ರವೇಶಿಸುತ್ತಾಳೆ.]

ಚಂಪಕಮಾಲಿನಿ : ಹಾಲುಗಲ್ಲಲಿ ಕಡೆದ ಪಡಿಮೆಯೆನೆ ಕುಳಿತಿಹಳು !
ಸುಯ್ಯುತಿಹಳೇಕೆ ? ಕಣ್ಣೊರಸಿಕೊಂಡಳಲ್ತೆ ? –
ಇರಲಿ, ಕಣ್ಣಮುಚ್ಚಾಟದಲಿ ರಮಿಸುವೆನವಳ.
[ಹಿಂದಿನಿಂದ ಹೋಗಿ ಕಣ್ಣು ಮುಚ್ಚುತ್ತಾಳೆ]

ವಿಷಯೆ : (ಬೆಚ್ಚಿ, ತನ್ನ ಕಣ್ಣುಗಳನ್ನು ಮುಚ್ಚಿದ್ದ ಎರಡೂ ಕೈಗಳನ್ನು ಮುಟ್ಟಿ ನೋಡುತ್ತಾ)
ಆರದು ?

ಚಂಪಕಮಾಲಿನಿ : (ಕೀರಲು ದನಿಯಿಂದ)
ನೀ ಕಾಣುತಿದ್ದಾ ಕನಸಿನವ ! (ಚಂಪಕಮಾಲಿನಿ ಬೇಕೆಂತಲೆ ತನ್ನ ದನಿಯನ್ನು ಬದಲಾಯಿಸಿದ್ದರಿಂದ ಗುರುತಿಸಲಾರದೆ)

ವಿಷಯೆ : ಓಹೊ, ನಿನ್ನ ಗುರುತಿಸಲು ನಿನ್ನ ದನಿ ಬೇಕೆ ನನಗೆ ?
ಸಾಲದೇನೀ ನಿನ್ನ ಕರಕಮಲಗಳ ಸೋಂಕೆ ?
ತಂಗಿ ಚಂಪಕೆಗಲ್ಲದಿನ್ನಾರಿಗೀ ಮೆಯ್ಯ ಸೊಂಪು ?
ಬಿಡು, ಕೆಳದಿ. (ಕೈ ಬಿಟ್ಟು ಗಟ್ಟಿಯಾಗಿ ನಗುತ್ತಾ ಮುಂದಕ್ಕೆ ಬಂದ ಚಂಪಕಮಾಲಿನಿಗೆ) ಎಷ್ಟು ಹೆದರಿಸಿಬಿಟ್ಟೆ, ತಂಗಿ ?

ಚಂಪಕಮಾಲಿನಿ : ಈ ಚಂದ್ರಶಾಲೆಯಲಿ, ಈ ಬೆಳ್ದಿಂಗಳಲಿ
ಇಲ್ಲಿಗೈತಹ ಕೆಚ್ಚು ಮನ್ಮಥನಿಗಲ್ಲದೆಯೆ
ಮತ್ತಾರಿಗುಂಟು ? ಅವನೆಯೆ ತಾನೆ ನಿನ್ನ ಈ
ಭಯಕೆ ಕಾರಣ ? ಅದಿರಲಿ, ಹೇಳು, ಸಖಿ :
(ತನ್ನ ಎರಡೂ ಅಂಗೈಗಳನು ಮುಂದೆ ಚಾಚಿ)
ನನ್ನ ಈ ಕೈಗಳೇತಕೆ ಒದ್ದೆಯಾಗಿಹವು ?

ವಿಷಯೆ : (ಚೆನ್ನಾಗಿ ನೋಡಿದಂತೆ ನಟಿಸಿ) ವಿರಹತಾಪದಿ ಬೆಮರಿ !

ಚಂಪಕಮಾಲಿನಿ : (ಅಣಕಿಸಿ) ಆಹಾ ! ತಾಪ ನಿನಗೆ, ಬೆಮರು ನನಗೆ ?
ಏನ್ ತರ್ಕಸಿಂಹಿಣಿಯೊ ? ತಪ್ಪು ನಿನತಲ್ಲ.
ಆ ಮನ್ಮಥನ ತರ್ಕಶಾಸ್ತ್ರವೆ ಹೀಗೆ ! ಇರಲಿ,
ನಾನೆ ಕಾರಣವೊರೆವೆ. ನಿನ್ನ ಕಣ್ಣೀರಿಂದೆ
ನನ್ನ ಕೈ ತೊಯ್ದಿಹುದು. ಏಕೆ ಆ ನೀರು ?

ನಿನ್ನ ಕಣ್ಣೇನು ಚಂದ್ರಕಾಂತ ಶಿಲೆಯೆ ?
ಬೆಳ್ದಿಂಗಳಿಗೆ ಇಂತು ಸ್ಸೋರುವುದಕೆ ?

ವಿಷಯೆ : ಆ ಚಂದ್ರನೀ ಹಾಸಕ್ಕೆ ನಿನ್ನ ಮೈಸೋತು ....

ಚಂಪಕಮಾಲಿನಿ : ಓಹೊ ಅರ್ಥವಾಗುತಿದೆ !

ವಿಷಯೆ : ಏನೆಂದೆ ?

ಚಂಪಕಮಾಲಿನಿ : (ನಗುತ್ತಾ) ಏನಿಲ್ಲ ; ಕೌಮುದಿಯ ಪಾಲ್ಗಡಲು
ಮನಮೋಹಿಸುವ ಶಾಂತಿಯಿಂದೆಸೆಯುತಿದೆ ಎಂದೆ !

ವಿಷಯೆ : (ಬಿಸುಸುಯ್ದು) ಇರಬಹುದು.

ಚಂಪಕಮಾಲಿನಿ : ಆ ಚಂದ್ರಹಾಸದಿಂ
ಮಾಧುರ್ಯದಂಬುಧಿ ಬೆಳ್ದಿಂಗಳೀ ರಾತ್ರಿ.

ವಿಷಯೆ : (ನಸು ಮುನಿಸು ನಟಿಸಿ) ಇರಬಹುದು !

ಚಂಪಕಮಾಲಿನಿ : ಕೆಳದಿ, ಇರಬಹುದು ಏಕೆ ?
(ಮತ್ತೆ ವಿಷಯೆ ಸುಯ್ಯುತ್ತಾಳೆ)
ಏಕೆ ಬಿಸುಸುಯ್ಯುತಿಹೆ ?
ನಿನ್ನೆಯಿಂ ನೀನಿಂತು ಕೊರಗಿ ಕುಗ್ಗಿಹೆ ಏಕೆ ?
ಪಂಜರದ ಗಿಳಿಯೊಡನೆ ಸರಸ ಕೇಳಿಯನೇಕೆ
ತೊರೆದಿರುವೆ ? ಪೊಂದೊಡವುಗಳನೇಕೆ ಬಿಸುಟಿರುವೆ ?
ಸಖಿಯರೊಡಗೂಡಿ ನುಡಿಯದೆ ಮೌನವಾಗಿರುವೆ ?
ಹೇಳು, ಮುದ್ದಿನ ಕೆಳದಿ. (ಪಕ್ಕದಲ್ಲಿ ಕುಳಿತು ಸ್ನೇಹದಿಂದ)
ಬಿರುನುಡಿಯನಾಡಿದರೆ ?
ಬಯಕೆಯನು ಸಲ್ಲಿಸದೆ ಧಿಕ್ಕರಿಸಿದರೇ ನಿನ್ನ ?
ಮೈಯಲ್ಲಿ ಏನಾದರೂ ರುಜೆ ತೋರಿಹುದೆ ?

ವಿಷಯೆ : ಏನಿಲ್ಲ, ತಂಗಿ.
ನೀರ್ವೊಯ್ದ ಸುಣ್ಣ ಮರಳುವ ತೆರದಿ ಬೇಯುತಿದೆ
ಹೃದಯ. ಶೀತಳ ಸುಧಾಮಯೂಖನು ಕೂಡ
ಬೆಂಗದಿರನಂತಿಹನು. ಏತಕೋ ನಾನರಿಯೆ !
ಸೃಷ್ಟಿಯೆಲ್ಲವು ನನ್ನ ಮೂದಲಿಸುವಂತಿಹುದು.
ತಳಿರ ಮರೆಯಲ್ಲಡಗಿ ಬಗ್ಗಿಸುವ ಕೋಗಿಲೆಯೂ
ನನ್ನ ನಣಕಿಸುವಂತೆ ಕೂಗುತಿದೆ.

ಚಂಪಕಮಾಲಿನಿ : ಅಕ್ಕ,
ಹುದುಗಿರುವ ಯಾತನೆಯ ಹೊರಗೆಳೆಯಲೊಲ್ಲೆ,
ಬರಿದೆ ಏನೇನೊ ಮಾತುಗಳನಾಡುತಿಹೆ.
ನೀನು ನಿಜ ಹೇಳಿದರೆ ಸರಿ ; ಅಲ್ಲದೊಡೆ,
ನಿನಗೆ ನಾ ಬೇಡೆಂದು ಇಲ್ಲಿಂದ ತೆರಳುವೆನು.
(ಹೊರಡುವಂತೆ ನಟಿಸುತ್ತಾಳೆ)

ವಿಷಯೆ : ಹೋಗದಿರು, ತಂಗಿ. ಹೇಳುವೆನು.
ನಿನಗಲ್ಲದಿನ್ನಾರಿಗೀ ಹೃದಯದೊಳಗುಟ್ಟು ?

ಚಂಪಕಮಾಲಿನಿ : ಹೇಳಕ್ಕ, ನಾನಾರಿಗೂ ಹೇಳೆ.

ವಿಷಯೆ : ನನ್ನ ಜೀವದ ಜೀವ ನೀನು, ತಂಗಿ.
ಇತ್ತ, ಬಾ. (ವಿಷಯೆ ಚಂಪಕಮಾಲಿನಿಯ ಕಿವಿಯಲ್ಲಿ ಹೇಳುತ್ತಿರುತ್ತಾಳೆ. ಅಷ್ಟರಲ್ಲಿ ಪಂಕಜೆ ಓಡೋಡಿ ಬಂದು, ತಕ್ಕನೆ ನೋಡಿ ನಿಲ್ಲುತ್ತಾಳೆ)

ಪಂಕಜೆ : (ವ್ಯಂಗ್ಯ ಧ್ವನಿಯಿಂದ) ಓಹೊ, ತಪ್ಪಾಯ್ತು ! ಬಳಿಗೆ ಬರಬಹುದೆ?

ವಿಷಯೆ : (ಮುಗುಳುನಗುತ್ತಾ) ಏನಿದೀ ದಾಕ್ಷಿಣ್ಯ ? ಎಂದಿಲ್ಲದುದು ?
ಬಾ, ಪಂಕಜೆ.

ಚಂಪಕಮಾಲಿನಿ : ಏನು ಅವಸರ, ಕೆಳದಿ ? ಏಕೆ ಏದುತ್ತಿರುವೆ ?

ಪಂಕಜೆ : ಏನನೋ ಗುಟ್ಟನಾಡುತಲಿದ್ದಿರಿ ?

ವಿಷಯೆ : ಏನಿಲ್ಲ, ನಿನಗೇಕೆ ?

ಪಂಕಜೆ : ಲೋಕಕ್ಕೆ ಗೊತ್ತುಂಟು ! ನಿನಗೊಬ್ಬಳಿಗೆ ಗುಟ್ಟು !

ಚಂಪಕಮಾಲಿನಿ : ಏನದು ಗೊತ್ತಾಗಿರುವುದು ?

ಪಂಕಜೆ : ಈಗಳಾನರಿತೆ, ಸಖಿ ಏಕೆ ಕೊರಗುತಿದ್ದಳು
ಎಂದು.

ಚಂಪಕಮಾಲಿನಿ : ನಿನ್ನರಿವನೆಮಗಿನಿತು ಹಂಚಬಾರದೆ,
ಪಂಕಜೆ ? ಸವಿಯಬಾರದೆ ನಾವೂ, ರುಚಿನೋಡಿ ?

ಪಂಕಜೆ : (ತುಸು ರಾಗಪೂರ್ವಕವಾಗಿ)
ಪಾವಗಿದುಳಿದರುಂಟೆ ? ಹರನ ಕೋಪದೊಳುರಿದು
ಜೀವಿಸಿದರುಂಟೆ ? ಕಾಳ್ಗಿಚ್ಚಿನೊಳ್ ಕೆಳೆಗೊಂಡು
ಬೇವುತಸುವಿಡಿದು ಬಾಳ್ದವರುಂಟೆ ? ಸುಗ್ಗಿಯಲಿ
ತುಂಬುಪೆರೆ ತೆಂಗಾಳಿ ಹೂಗಣೆಯರೊಡ್ಡಿದುರುಳಿಗೆ
ಸಿಲುಕಿ ಅಳುಕದೆ ಇಹರು ಉಂಟೇ ?

ವಿಷಯೆ : (ನಗುತ್ತ) ಏನಿದು ನಿನ್ನ ಗಮಕ ಕಲೆ? ಅದ್ಭುತ!

ಪಂಕಜೆ : ಚಂಪಕಾ, ಕೇಳಿದೆಯ ಹೊಸಸುದ್ದಿ?

ಚಂಪಕಮಾಲಿನಿ : ಏನದು?

ಪಂಕಜೆ : ನನಗೊಂದು ಮಂತ್ರ ತಿಳಿದಿಹುದು.

ಚಂಪಕಮಾಲಿನಿ : ಗುರುವಾರು?

ವಿಷಯೆ : ಆಕೆಯೋಪನೊ ಏನೊ?

ಪಂಕಜೆ : ನನ್ನಕ್ಕನದನೆನಗೆ ಹೇಳಿಕೊಟ್ಟಳು ಇಂದೆ.
ಸಿದ್ಧಿವಡೆದಿಹೆನು ತಪಸ್ಸು ಮಾಡಿ!
ಅದನಿಲ್ಲಿ ಜಪಿಸಿದರೆ . . . (ಹಿಹಿಹಿ ನಗುತ್ತಾಳೆ)

ಚಂಪಕಮಾಲಿನಿ : ಜಪಿಸಿದರೆ?

ಪಂಕಜೆ : ನಡೆವ ಅದ್ಭುತ ಪವಾಡಕ್ಕೆ ಮೈಮರೆಯುವಿರಿ!

ಚಂಪಕಮಾಲಿನಿ : (ಪರಿಹಾಸ್ಯದಿಂದ) ಅಬ್ಬಬ್ಬ!

ಪಂಕಜೆ : ಹೆದರದಿರಿ!
ಅದನಿಲ್ಲಿ ಜಪಿಸಿದರೆ, ನಮ್ಮ ಕೆಳದಿಯ ತಾಪ
ಅರೆಚಣದಿ ಮಾಯವಾಗುವುದು; ನಾ ಬಲ್ಲೆ.

ಚಂಪಕಮಾಲಿನಿ : ಜಪಿಸು ಹಾಗಾದರೆ.

ಪಂಕಜೆ : ಜಪಿಸಲೇ, ವಿಷಯೆ?

ವಿಷಯೆ : ಏನಾದರೂ ಮಾಡು!

ಪಂಕಜೆ : ಹೊಸ ಸುದ್ದಿ ಏನೆಂದು
ಕೇಳಿದೆಯಾ? ಚಂದನಾವತಿಯಿಂದ ಬಂದಿಹನು,
ಚಂದ್ರಹಾಸ! ಪಾಪ, ವಿಷಯೆಗೆ ತಿಳಿಯನವನು!
ಅಲ್ಲವೇ, ವಿಷಯೆ?

ವಿಷಯೆ : ನಿನಗೇಕೆ ಆ ಚಿಂತೆ?

ಪಂಕಜೆ : ನಾಳೆ ಅವನಿಗೆ ಮದುವೆಯಂತೆ!

ವಿಷಯೆ : (ದಿಗಿಲು ಬಿದ್ದು) ಆ್ಞ! ಯಾ . . . ಯಾ . . . ರೊಡನೆ?

ಪಂಕಜೆ : (ವಿಷಯೆಗೆ) ನಿರ್ಲಿಪ್ತೆ ನಿನಗೇಕೆ? ಆವಳೋ ದುರ್ಭಾಗ್ಯೆಯೊಡನೆ!

ಚಂಪಕಮಾಲಿನಿ : ಅವಳಿಗಿಂ ಮಿಗಿಲಿಹರೆ ಸೌಭಾಗ್ಯೆಯರ್ ಜಗದಿ?

ಪಂಕಜೆ: ಓಹೊ, ನಿನಗೂ? . . . ಒಬ್ಬ ಚಂದ್ರನಿಗಿಬ್ಬರಾಸೆ!

ವಿಷಯೆ: (ಪಂಕಜೆಗೆ) ಮೂದಲಿಸದಿರು ಬರಿದೆ ನೀನೆನ್ನ ತಂಗಿಯನು!
ಅವಳಾತನಂ ನೋಡಿಯೂ ಇಲ್ಲ! . . .

ಪಂಕಜೆ: ಓಹೋ,
ನೋಡಿದುದು ನೀನೊಬ್ಬಳೆಯೆ; ಅಂತಾದರೆ. . .

ಚಂಪಕಮಾಲಿನಿ: ಸಾಕು ನಿನ್ನಾಟ. ಬೇಗನೊರೆ, ಕೆಳದಿ.

ಪಂಕಜೆ: (ರಾಗವಾಗಿ) ನಾಳೆ ಅವನಿಗೆ ಮದುವೆಯಂತೆ.
ವಿಷಯೆಯನೆ ಕೇಳಿ ತಿಳಿದುಕೊ ವಿಷಯವಂ.
ವಿಷಯೆ ಎಂಬಾ ಕನ್ಯೆ ಎಲ್ಲಿಹಳೊ ನಾನರಿಯೆ.

ಚಂಪಕಮಾಲಿನಿ: (ವಿಷಯೆಯ ಕಡೆ ತಿರುಗಿ)
ಅಕ್ಕ, ನಿಜಹೇಳು, ನೀ ಬಲ್ಲೆಯೇನು?

ಪಂಕಜೆ: ಪಾಪ! ಬಲು ಮುಗ್ಧೆ! ಅವಳಿಗೇನು ಗೊತ್ತು?

ಚಂಪಕಮಾಲಿನಿ: ಹೇಳಬಾರದೆ ಬೇಗ, ಪಂಕಜಾ?

ಪಂಕಜೆ: ಇಷ್ಟುದಿನ ನಮ್ಮೊಡನೆ ಇದ್ದವಳು, ಹೇಳದೆಯೆ
ಕೇಳದೆಯೆ ಒಳಸಂಚು ನಡೆಸುತ್ತ, ನಾಳೆ
ಚಂದ್ರಹಾಸನ ಕಟ್ಟಿಕೊಂಡೋಡುವಳು, ನೋಡು!
ವೈವಾಹಕೆಲ್ಲ ಸನ್ನಾಹಗಳು ನಡೆದಿಹವು . . .
ನಾಳೆ "ಬನದ ತಣ್ಣೆಳಲಲ್ಲಿ ತಳಿರ ಶಯನದಿ"
ಎಂಬ ಗೀತೆಯ ಹಾಡಬೇಕಿವಳು.

ಚಂಪಕಮಾಲಿನಿ: (ವಿಷಯೆಗೆ ಪರಿಹಾಸ್ಯದಿಂದ)
ಕೆಳದಿ,
ಸಖಿಯರನು ಕೇಳದೆಯೆ ಹೀಗೆ ಗಂಡನ ಗೊತ್ತು
ಮಾಡುವರೆ? ನಿನಗಾರು ಅಪ್ಪಣೆಯನಿತ್ತವರು?
ಚಂದ್ರಹಾಸನ ನೀನು ಮದುವೆಯಾಗುವುದೆನಗೆ
ಸರಿಯಿಲ್ಲ.

ವಿಷಯೆ: (ಪ್ರತಿಹಾಸ್ಯ ಧ್ವನಿಯಿಂದ) ನೀನೆ ಆಗು, ಬೇಡವೆಂದೆನೆ ನಾನು?
ಬರಿದೆ ಕರುಬಿದರೆ ಫಲವೇನು?

ಚಂಪಕಮಾಲಿನಿ: ಬಿನ್ನಾಣಿ, ಸೊಕ್ಕೆಲ್ಲ ಇಳಿಯುವುದು ನಾಳೆ!

ಪಂಕಜೆ: ಕೇಳಲ್ಲಿ ಮಂಗಳವಾದ್ಯಗಳು!
[ವಾದ್ಯಗಳು ಭೋರ್ಗರೆಯುತ್ತವೆ]

ಚಂಪಕಮಾಲಿನಿ : ಕೌಮುದಿ ಹೇಗಿರುವುದೀಗ, ಸಖೀ ?

ವಿಷಯೆ : ಚಂದ್ರಮನ ವದನಹಾಸವನೆ ಹೋಲುತಿದೆ!

ಪಂಕಜೆ : ಚಂದ್ರಮನ ವದನಹಾಸವನೊ ? . . .
ಚಂದ್ರಹಾಸನ ವದನವನೊ ? . . . .
ಮುಗ್ಧೆ ಎಂದವರಾರು ಇವಳ ?
ಶೃಂಗಾರದಲ್ಲಿವಳು ವಿದಗ್ಧೆಯರನೂ
ದಗ್ಧಗೈಯುವ ಪ್ರೌಢೆಯಲ್ತೆ ?

ಚಂಪಕಮಾಲಿನಿ : (ವಿಷಯೆಯನ್ನು ಮುದ್ದಾಡುವಂತೆ ಅಭಿನಯಿಸುತ್ತಾ)
ಅಯ್ಯೊ ಬಿಂಕದ ಹೆಣ್ಣೆ ; ಕಬ್ಬುವಿಲ್ಲನ ಕಣ್ಣೆ !
[ಎಲ್ಲರೂ ಗಹಗಹಿಸಿ ನಗುತ್ತಿರುತ್ತಾರೆ].

ಪರದೆ ಬೀಳುತ್ತದೆ.

ದೃಶ್ಯ ೫

[ದುಷ್ಟಬುದ್ಧಿಯ ಮನೆಯ ಒಂದು ಕೋಣೆ. ದುಷ್ಟಬುದ್ಧಿ ಒಂದು ಆಸನದ ಮೇಲೆ ಕುಳಿತಿದ್ದಾನೆ. ಮದನ ಸ್ವಲ್ಪ ದೂರದಲ್ಲಿ ತಲೆತಗ್ಗಿಸಿ ನಿಂತಿದ್ದಾನೆ. ಮಂತ್ರಿ ಕೋಪೋಗ್ರನಾಗಿದ್ದಾನೆ.]

ದುಷ್ಟಬುದ್ಧಿ : ಮೂರ್ಖ! ಮರುಳ! ನೀಚ! ಕುಲಗೇಡಿ!
ನಾನು ಬರೆದಿಹುದೇನು ? ನೀನು ಮಾಡಿಹುದೇನು ?
ತಿರುಪೆ ಬೇಡಿನ್ನು, ನಡೆ! ನಾನಿಲ್ಲದಂದು
ನನ್ನ ಮಗಳಿಗೆ ಮದುವೆ ಮಾಡಿದೆಯ, ಮೂರ್ಖ!
ನಿನ್ನ ದೊರೆತನಕಾಗಿ ಜೀವವನೆ ಸವೆಸಿದೆನು.
ನಿನಗಾಗಿ ನೆತ್ತರಿನ ಕಡಲಲ್ಲಿ ಮುಳುಗಿದೆನು . . .
ನಿನಗೇಕೆ ಸಾಮ್ರಾಜ್ಯ ? ನಿನಗೇಕೆ ಅರಸುತನ ?
ಹುಟ್ಟುತಿರುಕನಿಗೆ ? ಬೀದಿಯನಲೆದು ತಿರಿ ಇನ್ನು !
ಹಾ ವಿಧಿಯೆ ! (ಮುಖ ಮುಚ್ಚಿಕೊಳ್ಳುತ್ತಾನೆ.)

ಮದನ : (ಶೋಕಧ್ವನಿಯಿಂದ) ಅಪ್ಪಯ್ಯ, ನಾನೆಸಗಿದಪರಾಧವೇನು ?

ದುಷ್ಟಬುದ್ಧಿ : ನಿನಗಿನ್ನು ವನವಾಸವೇ ಗತಿ.

ಮದನ : ಖತಿಯೇಕೆ, ಜೀಯ. ನಿಮ್ಮಡಿಗಳ ನಿರೂಪಮಂ
ಪ್ರತಿಪಾಲಿಸಿಹೆನು. ನಿಮ್ಮ ಆಣತಿಯಂತೆ
ವಿಷಯೆಗೆ ವಿವಾಹಮಂ ವಿರಚಿಸಿದೆ ! ತಪ್ಪೇನು ?

ದುಷ್ಟಬುದ್ಧಿ : ನಿನಗಕ್ಕರದ ಗುರುತಿಹುದೆ, ಹೇಳು ? ನಿನಗೆ
ಬಿಜ್ಜೆಗಲಿಸಿದ ಬೊಜ್ಜುಹಾರುವ, ಆ ಗಾಲವ,
ಹಾಳಾಗಿಹೋಗಲಿ ! - ಎಲ್ಲಿ ? ಕೊಡು ಪತ್ರಿಕೆಯ,
ನೋಡುವೆನು. (ಮದನ ಹೋಗುತ್ತಾನೆ)
ಆದುದಾಯಿತು. ಇನ್ನು ಜಾಮಾತನಂ
ಕೊಂದ ಹೊರತೆನಗೆ ಸುಖ ಶಾಂತಿ ಸಂಪತ್ತು
ಆವುದೂ ಇಲ್ಲ. ವಿಷಯೆಯ ಓಲೆಭಾಗ್ಯ
ಸುಟ್ಟುರಿದರೇನಂತೆ ! ನಿರ್ಭಾಗ್ಯೆ ಹಾಳಾಗಲಿ !
ಊರ ಹೊರ ಬನದೊಳಿಹ ಚಂಡಿಕಾಲಯಕೆ
ಚಂದ್ರಹಾಸನಂ ಕಳುಹಿ ಕಟುಕರಿಂ ಕೊಲ್ಲಿಪೆನ್.

[ನವವಧು ವಿಷಯೆ ಹೆದರಿ ಹೆದರಿ ನಾಚುತ್ತ ಮೆಲ್ಲಮೆಲ್ಲನೆ ಬರುತ್ತಾಳೆ. ದುಷ್ಟಬುದ್ಧಿಗೆ ಮಗಳನ್ನು ನೋಡಿದೊಡನೆ ಅಭ್ಯಾಸಬಲದಿಂದೆಂಬಂತೆ ಸಂತೋಷದ ಮಂದಸ್ಮಿತ ಮುದ್ರೆಯೊಂದು ಸುಳಿದು, ಒಡನೆಯೆ ಮಾಯವಾಗಿ, ಬದ್ಧಭ್ರುಕುಟಿಯ ವದನವಿಕಾರತೆಯುಂಟಾಗುತ್ತದೆ. ಅದನ್ನು ಗಮನಿಸಿದ ಮಗಳು ತತ್ತರಿಸಿ ಕೃತಕವಾದ ನಗೆಮೊಗದಿಂದ ಮಾತನಾಡಿಸುತ್ತಾಳೆ.]

ವಿಷಯೆ : ಅಪ್ಪಯ್ಯ, ವಂದಿಸುವೆ. (ಎಂದು ತಂದೆಯ ಚರಣಗಳಿಗೆ ಎರಗುತ್ತಾಳೆ.)

ದುಷ್ಟಬುದ್ಧಿ : (ತಟಕ್ಕನೆ ಮೇಲೆದ್ದು ಉಗ್ರನಾಗಿ)
ಮುಟ್ಟದಿರು ! ಮುಟ್ಟದಿರು !
ನೀನಿಂದು ವಿಷಯೆಯಲ್ಲ, ವಿಷಕನ್ಯೆ !
ನೋಡಲಾರೆನೀ ನಿನ್ನ ನಾಟಕದ ವೇಷಮಂ.
ಹೊರಡಾಚೆ, ನನ್ನೆದುರು ನಿಲ್ಲದಿರು . . .

ವಿಷಯೆ : (ಅಳುತ್ತಾ) ಅಪ್ಪಯ್ಯ, ತಪ್ಪ ಮನ್ನಿಸು. ಏನು ತಪ್ಪಿದ್ದರೂ
ನನ್ನದದು. ಅಣ್ಣಯ್ಯನದಕೆ ಹೊಣೆಯಲ್ಲ.
ಪಾದಗಳಿಗೆರಗಿ ಬೇಡಿಕೊಳ್ಳುವೆ, ತಂದೆ !
[ಎಂದು ಮತ್ತೊಮ್ಮೆ ಅಡ್ಡಬೀಳಲು ಹವಣಿಸುತ್ತಾಳೆ. ದುಷ್ಟಬುದ್ಧಿ ಮತ್ತೆ ಹಿಂಜರಿದು ನಿಷ್ಠುರನಾಗಿ.]

ದುಷ್ಟಬುದ್ಧಿ : ತೊಲಗು, ತೊತ್ತಿನ ಮಗಳೆ ! ತೊಲಗಾಚೆ ! ನನ್ನ
ಕಣ್ಮುಂದೆ ನಿಲ್ಲದಿರು. ಮಿರ್ತುವಡಗಿದೆ ನಿನ್ನ
ನಗೆದಿಂಗಳಾಟವನು ನಟಿಸುವೀ ಮೊಗದಲ್ಲಿ . . .
ಮುಡಿದಲರ್ಗಂಪಲ್ಲ, ಹೆಣಗಂಪು ಸೂಸುತಿದೆ
ನಿನ್ನ ಮೆಯ್ಯಿಂ. ತೊಲಗು, ನಿರ್ಭಾಗ್ಯೆ, ನಿಲ್ಲದಿರ್

ನನ್ನಿದಿರ್. ನೀನು ಹೆಣ್ಣಲ್ಲ; ಹೆಣ್ಣಿನ ವೇಷವನು
ಹೊತ್ತ ಸುಡುಗಾಡು. ತೊಲಗಾಚೆ! ನಿಲ್ಲದಿರ್! . . .
[ಅರ್ಭಟಿಸುತ್ತಾನೆ. ವಿಷಯೆ ಮರವಟ್ಟಳಂತೆ ಹೆದರಿ ಮುದುರಿ ಕುಗ್ಗಿ ಹೊರಡುತ್ತಾಳೆ. ದುಷ್ಟಬುದ್ಧಿ ಮತ್ತೆ ಮೊದಲಿನ ಆಸನಕ್ಕೆ ಹೋಗಿ ಕುಳಿತು ಕೈಯಿಂದ ಮುಖಮುಚ್ಚಿಕೊಂಡು ಸಂಕಟಪಡುತ್ತಾನೆ.]

ಮದನ : (ಪ್ರವೇಶಿಸಿ, ಕಟ್ಟುಗ್ರಭಾವದಿಂದ ನಿಲ್ಲುತ್ತಾನೆ. ತಂದೆ ತಲೆಯೆತ್ತದಿರಲು ಸ್ವಲ್ಪ ಹೊತ್ತು ಕಾದು)
ಅಪ್ಪಯ್ಯ, ಏತಕೀ ವ್ಯರ್ಥ ಉಗ್ರತೆ, ಮಗಳಮೇಲೆ?
ತಪ್ಪು ಏನಿದ್ದರೂ ಮದುವೆ ಮಾಡಿದ ನನ್ನದಲ್ತೆ?
ನಾನಾದರೂ ನಿಮ್ಮ ಆಣತಿಯ ಮೀರಿದೆನೆ?
ಇದೊ ಕೊಳ್ಳಿ, ಇಲ್ಲಿರುವುದಾ ಪತ್ರಿಕೆ.
[ಮಂತ್ರಿ ಮೆಲ್ಲಗೆ ತಲೆಯೆತ್ತುತ್ತಾನೆ. ಕಣ್ಣುಗಳಿಂದ ನೀರು ಸುರಿದ ಗುರುತು ಮುಖದಮೇಲೆ ತೋರುತ್ತದೆ. ಮುಖಭಂಗಿ ಅತೀವ ದೈನ್ಯವಾಗಿದೆ. ಸೆರಗಿನಿಂದ ಮುಖವೊರಸಿಕೊಂಡು ಕೈನೀಡುತ್ತಾನೆ. ಮದನನು ಕೊಟ್ಟ ಪತ್ರಿಕೆಯನ್ನು ಸಾವಧಾನವಾಗಿ ಓದುತ್ತಾನೆ. ಸಂಕಟ ಕ್ರೋಧ ಆಶ್ಚರ್ಯಾದಿಭಾವಗಳ ಸುಳಿದಾಟದಿಂದ ವದನ ತೆರೆ ತೆರೆಯಾಗುತ್ತದೆ. ಕೊನೆಗೆ ನಿಡಿದಾಗಿ ಸುಯ್ದು ಕನಿಕರಕ್ಕೆ ಅರ್ಹವಾಗಬಹುದಾದ ದೀನಭಾವದಿಂದ ನುಡಿಯುತ್ತಾನೆ.]

ದುಷ್ಟಬುದ್ಧಿ : ಮದನ, ನಿನ್ನ ತಪ್ಪಿದರೊಳಿನಿತಿಲ್ಲ.
ಮರುಗದಿರು ಬೈದೆನೆಂದು.

ಮದನ : ತಂದೆ ಬೈದರೆ ಕೋಪವೇಕೆ?....ಜೀಯ,
ನನ್ನನೀಗಳೆ ಕರೆತರುವುದೆಂದು ದೂತರನ್
ಕಳುಹಿಹನು ಕುಂತಳೇಂದ್ರನ್. ತೆರಳಲೇ?

ದುಷ್ಟಬುದ್ಧಿ : ತೆರಳು. ನಾನೊರೆದ ರಾಜಕಾರಣ ಗೋಪ್ಯಮಂ
ಮರೆಯದೆಯೆ ಕೈಗೂಡಿಸು....ಮತ್ತೆ....
(ಹೊರಡಲಿರುವ ಮದನ ನಿಲ್ಲುತ್ತಾನೆ. ದುಷ್ಟಬುದ್ಧಿ ಏನನ್ನೊ ಚಿಂತಿಸಿ)
ಕಳುಹಿಸಿಲ್ಲಿಗೆ ಚಂದ್ರಹಾಸನಂ ಬೇಗದಿಂ.

ಮದನ : ಅಪ್ಪಣೆ. (ಮದನ ಹೋಗುತ್ತಾನೆ.)

ದುಷ್ಟಬುದ್ಧಿ : ನನ್ನ ಕೋಪವನವಗೆ ಕಾಣಿಸದೆ ಮುಚ್ಚಿಡುವೆ...
ನನ್ನನೇಪರಿ ಮೂದಲಿಸುತಿಹೆ? ಎಲೈ ದುರ್ವಿಧಿಯೆ,
ನಿನ್ನ ವ್ಯೂಹಕೆ ಪ್ರತಿವ್ಯೂಹಮಂ ಒಡ್ಡದಿರೆ

ನಷ್ಟಬುದ್ಧಿಯೆ ನಾ ದಿಟಂ, ದುಷ್ಟಬುದ್ಧಿಯಲ್ತು!
ನನ್ನಾತ್ಮಜೆಯ ಕಣ್ಣನೀರಿನಲಿ ನನ್ನ ಈ
ಪುರುಷಾರ್ಥವನ್ನಿಟ್ಟೆಯಾ?....

ಆ ಕುಳಿಂದನಿಗೆ
ಸೊಕ್ಕಿದವನಿಗೆ ತಕ್ಕುದನೆ ಮಾಡಿ ಬಂದಿಹೆನ್.
ಗುಪ್ತಸೈನ್ಯಾಚರಣೆಯಿಂ ಚಂದನಾವತಿಯಂ
ಅಂಡಲೆದೆನಾ ಕುಳಿಂದನಂ ದಂಡಿಸಿದೆನ್.
ಹಿಂಡಿ ಹಿಳಿದರ್ಥಮಂ, ಸೆರೆಗೆ ನೂಂಕಿದೆನವನ
ಕಾಲ್ಗೆ ನಿಗಳಮಂ ಪೂಡಿ....ಈ ನಂಟು
ಆ ಸಫಲಪ್ರಯತ್ನಮಂ ವ್ಯರ್ಥಗೈಯಲ್ಕೀಂ
ಬಿಟ್ಟಪೆನೆ? ಏನಾ ಕುಳಿಂದಕನ ಸೊರ್ಕು!
ರಾಜ್ಯಮಂ ಕೊಟ್ಟೊಡೆ, ನನ್ನಂ ಮರೆದು,
ನನಗೆ ತಿಳುಹದೆಯೆ ತನಗೊರ್ವ ಮಗನಂ
ಮಾಡಿಕೊಂಡು....ದತ್ತುಮಗನಂ ಕೊಂಬುದೇನ್
ಮಕ್ಕಳಾಟಿಗೆಯಾಯ್ತೆ?....(ದೂರ ನೋಡುತ್ತಾನೆ)

ಅವನೆ? ಹೌದವನೆ!

[ಮದುಮಗನ ವಸನ ಭೂಷಣಗಳಿಂದಲಂಕೃತನಾಗಿ ಚಂದ್ರಹಾಸನು ಪ್ರವೇಶಿಸುತ್ತಾನೆ.]

ಚಂದ್ರಹಾಸ: ಪೂಜ್ಯರಿಗೆ, ವಂದಿಪೆನು. (ಅಡಿಗೆರಗುತ್ತಾನೆ.)

ದುಷ್ಟಬುದ್ಧಿ: ವೀರವರ, ಬಾರೈ, ಚಂದ್ರಹಾಸ!
ನೀನಿನ್ನೆಗಂ ದೂರದವನಾಗಿರ್ದಯ್;
ಇನ್ನೆಮಗೆ ಅಳಿಯನಾಗಿರುವೆ.
ಕುಳಿತಿಕೊ. (ಚಂದ್ರಹಾಸನು ಕುಳಿತುಕೊಳ್ಳುತ್ತಾನೆ.)

ಚಂದ್ರಹಾಸ: ದೂರದಿಂ ಬಂದ ದಣಿವಿಂ ತಮಗಾಯಸಂ
ತಿಣ್ಣಮಾಯ್ತೆಂಬಂತೆ ತೋರುತಿದೆ. ಪೂಜ್ಯರಿಗೆ
ವಂದನಂಗೈಯ್ಯಲೈತಂದೆ. ತಾವಿನ್ನು
ಒಂದಿನಿತು ವಿಶ್ರಮಿಸಿಕೊಳ್ಳಿ. ನಾನ್ ಬಂದಪೆನ್.
[ಅರ್ಧ ಏಳಲೆಳಸುತಿದ್ದ ಅವನನ್ನು ಸನ್ನೆಯಿಂದ ಕುಳ್ಳಿರಿಸಿ]

ದುಷ್ಟಬುದ್ಧಿ: ಅಂತಪ್ಪ ದಣಿವೇನಿಲ್ಲ! ದಣಿವೆಂದರೇನ್
ರಾಜ್ಯಕಾರ್ಯದಿ ಮುಳುಗಿದಾತಂಗೆ?....ಓಹೊ,
ಮರೆತಿದ್ದೆ ನಾನೊಂದನೆಮ್ಮಯ ಕುಲಾಚಾರಮಂ.

ವಂಶದಾಚಾರಮದು ವರನಾದವಂಗೆ.
ಊರ ಹೊರ ಬನದೊಳಿಹ ಚಂಡಿಕಾಲಯಕೆ ನೀಂ
ನೀರಜಸಖಾಸ್ತ ಸಮಯದೊಳೊರ್ವನೆಯೆ ಪೋಗಿ
ಗೌರಿಯಂ ಪೂಜಿಪುದು, ಸರ್ವಮಂಗಳೆಯಂ.

ಚಂದ್ರಹಾಸ : ತಪ್ಪದೆಯೆ ಹೋಗುವೆನು ಜಗದಂಬೆಯೆಡೆಗೆ.

ದುಷ್ಟಬುದ್ಧಿ ಒರ್ವನೆಯೆ ಪೋಗವೇಳ್ಕುಂ; ಕುಲಾಚಾರಕ್ಕೆ
ಭಂಗಮಪ್ಪುದು ತಪ್ಪಿದರೆ; ಮುನಿಯುವಳ್ ಚಂಡಿ;
ಕೇಡಹುದು ನಾಡಿಂಗೆ.

ಚಂದ್ರಹಾಸ : ಸಂಪ್ರದಾಯಕ್ಕಿನಿತು
ಭಂಗ ಬರದಂತೆ ನಡೆಯುವುದೆನ್ನ ಕರ್ತವ್ಯ.

ದುಷ್ಟಬುದ್ಧಿ : (ಹುಸಿನಗುವೆರಸಿ)
ನಿಮ್ಮ ರಾಜ್ಯವ ನೋಡಿ ನನಗೆ ಸಂತಸವಾಯ್ತು.
ನಿನ್ನ ತಂದೆಯ ಕೂಡೆ ನಾಡನೆಲ್ಲವ ಸುತ್ತಿ
ಬಂದಿಹೆನು.

ಚಂದ್ರಹಾಸ : ಶ್ರೀ ಹರಿಯ ಕೃಪೆ! ಮೇಣ್ ನಿಮ್ಮ ದಯೆ!

ದುಷ್ಟಬುದ್ಧಿ (ನಗುತ್ತಾ ಎದ್ದು, ತನ್ನೊಡನೆಯೆ ಎದ್ದು ನಿಂತ ಚಂದ್ರಹಾಸನ ಭುಜವನ್ನು ಚಪ್ಪರಿಸಿ.)
ಮೇಣ್ ನಿನ್ನೊಂದು ಪರಾಕ್ರಮಂ!....
ನೀನಿನ್ನು ತೆರಳು. ಚಂಡಿಕಾರಾಧನೆಗೆ
ಬೇಕಾದುದೆಲ್ಲವನು ಸಿದ್ಧಪಡಿಸುವ ಮುನ್ನ
ಇನ್ನುಳಿದ ಕಟ್ಟಳೆಗಳೆಲ್ಲವನು ಮುಗಿಸು, ನಡೆ.
(ಚಂದ್ರಹಾಸನು ನಮಸ್ಕರಿಸಿ ಬೀಳ್ಕೊಳ್ಳುತ್ತಾನೆ. ದುಷ್ಟಬುದ್ಧಿಯ ಮುಖ ಮತ್ತೆ ಕರ್ಕಶವಾಗುತ್ತದೆ.)
ಕಿಂಕರಾ! [ಕರೆಯುತ್ತಾನೆ]

ಸೇವಕ : (ಪ್ರವೇಶಿಸಿ) ಜೀಯ!
[ದುಷ್ಟಬುದ್ಧಿ ಸೇವಕನ ಕಿವಿಯಲ್ಲಿ ಏನನ್ನೊ ಹೇಳುತ್ತಿರುತ್ತಾನೆ.]

ಪರದೆ ಬೀಳುತ್ತದೆ.

ದೃಶ್ಯ ೬

[ಕಾಳಿಕಾಲಯಕ್ಕೆ ಹೋಗುವ ದಾರಿ. ಸಾಯಂ ಸಮಯ. ಚಂದ್ರಹಾಸ, ರಣಸಿಂಹ, ವೀರಸೇನ ಬರುತ್ತಾರೆ. ಚಂದ್ರಹಾಸನ ಕೈಲಿ ಪೂಜೆಯ ಸಾಮಗ್ರಿಯಿರುವ ಹರಿವಾಣವಿರುತ್ತದೆ.]

ಚಂದ್ರಹಾಸ: ನೀವು ಇಲ್ಲಿಯೆ ನಿಲ್ಲಿ. ನಾನೊರ್ವನೆಯೆ ನಡೆದು
ಪೂಜೆಯಂ ಪೂರೈಸಿ ಬರುವೆ.

ರಣಸಿಂಹ: ನಾವೂ ಬರುತ್ತೇವೆ ನಿನ್ನೊಡನೆ.

ಚಂದ್ರಹಾಸ: ಬೇಡ, ಪದ್ಧತಿಯ ಮೀರುವುದು ತರವಲ್ಲ.
ಮಾವನಿಗೆ ತಿಳಿಯೆ ಕೋಪಗೊಳ್ಳದೆ ಇರನು.

ವೀರಸೇನ: ಮಂತ್ರಿ ಏತಕೆ ಇಂತು ವರ್ತಿಪನೊ ನಾನರಿಯೆ!
ವಿಷಯೆ ಮದನರ ಬೈದು, ತನ್ನ ಸತಿಯಂ
ತಾರೆಕಾಕ್ಷಿಯಂ ಬಡಿದು, ಸೇವಕರ ನಿಂದಿಸಿ,
ಮದುವೆಗೈತಂದ ಕಮಲಮುಖಿಯರ ದೂರಿ,
ಸಿಟ್ಟಿನಿಂದುರಿದನಂತೆ!

ಚಂದ್ರಹಾಸ: ರಾಜಕಾರ್ಯದೊಳೇನು ಕೋಪವುಂಟಾಗಿಹುದೊ?

ರಣಸಿಂಹ: ಅವನೊಳೆನಗೇಕೊ ಸಂದೇಹ.
ಹುಚ್ಚನಂತಾಡುವನು!

ವೀರಸೇನ: ನೋಡಲ್ಲಿ, ಮದನ ಬರುತಿಹನು.
ನುಡಿಯ ಬೇಡಂತು. (ಪಡಿಹಾರಿ ಮತ್ತು ಕಿಂಕರರೊಡನೆ ಮದನನ ಪ್ರವೇಶ)

ಮದನ: ಚಂದ್ರಹಾಸಪ್ರಭುಗೆ ಜಯವಾಗಲಿ!

ಚಂದ್ರಹಾಸ: ಏನಿದೀ ಪರಿಹಾಸ್ಯ, ಮದನ?
ನಿನಗೆ ನಾನೆಂದು ಪ್ರಭುವಾದೆ?

ಮದನ: ಪರಿಹಾಸ್ಯವಿನಿತಿಲ್ಲ: ಇಂದೆ ಆಗಲಿಹೆ!
ಆಗಳೆಯೆ ಆಗಿರುವೆ ಎಂದರೂ ಸುಳ್ಳಾಗದು!
ನೀವೀಗ ಹೊರಟಿರುವುದೆಲ್ಲಿಗೆ?

ಚಂದ್ರಹಾಸ: ಪೂಜೆಗೆ, ಚಂಡಿಕಾಲಯಕೆ.

ರಣಸಿಂಹ: ಮದನ, ನೀನೀಗ ಎಲ್ಲಿಂದ ಬರುತಲಿಹೆ?

ಮದನ:
ತಂದೆಯ ನಿರೂಪಮಂ ಪೊತ್ತು
ಕುಂತಳೇಂದ್ರನ ಬಳಿಗೆ ತೆರಳಿದ್ದೆ.
ಚಂದ್ರಹಾಸನಂ ಈಗಳಿಯೆ ನಾನೊಡಗೊಂಡು ಬರ್ಪುದು
ಎಂದಾಜ್ಞೆ ಇತ್ತೆನ್ನಂ ಕಳುಹಿದನು ಕುಂತಳೇಂದ್ರಂ.

ರಣಸಿಂಹ:
ಏನ್ ಅನಿತೊಂದು ಅವಸರಂ?

ಮದನ:
ನಿಜ ಶರೀರಚ್ಛಾಯೆ ತಲೆಯಿಲ್ಲದಿರೆ ಕಂಡು
ಗಾಲವ ಪುರೋಹಿತಂಗರಿಪಲ್ ಆತನ್
ಅದು ಮೃತಿಗೆ ಕಾರಣಂ ಎನಲ್ಕೆ,
ಕುಂತಳೇಂದ್ರಂ ತನ್ನೊರ್ವಳೆಯೆ ಸುತೆಯಂ
ಚಂದ್ರಹಾಸಂಗೆ ಗಾಂಧರ್ವವೈವಾಹ ವಿಧಿಯಿಂ
ಕೊಟ್ಟು, ರಾಜ್ಯಭಾರವನವನ ಕೈಲಿಟ್ಟು,
ಶ್ರೀಹರಿಯ ಜಾನಿಸಲು ಬನಕೆ ಹೊರಡುವನಂತೆ!
(ಚಂದ್ರಹಾಸನಿಗೆ)
ನೀನೀಗಳಿಯೆ, ಒಂದಿನಿತು ತಳುವದೆಯೆ,
ಹೋಗವೇಳ್ಕರಮನೆಗೆ.

ಚಂದ್ರಗಾಸ:
ನಿನ್ನ ಪಿತೃವಾಜ್ಞೆಯಂ ನಡಸುವ ಕುಲವ್ರತದ
ಚಂಡಿಕಾರಾಧನೆಯ ಮಾಡುವವರಾರು?

ಮದನ:
ವಂಶದಾಚಾರಪದು ನಾನೆ ಮಾಡಿದರಾಯ್ತು.
ನೀನೀಗ ರಣಸಿಂಹ ವೀರಸೇನರ ಕೂಡಿ
ರಾಜನಲ್ಲಿಗೆ ತೆರಳು. ನಿನಗಾಗಿ ಕಾದಿಹನು!
ಪೂಜೆಯ ಸುವಸ್ತುಗಳನಿಲ್ಲಿ ತಾ.
ದಾರಿ ತೋರುವನಿವನು ಈ ಪಡಿಹಾರಿ.
[ಚಂದ್ರಹಾಸನು ಹರಿವಾಣವನ್ನು ಕೊಡುತ್ತಿರುವಾಗ ಮದನನ ಕೈಯಿಂದ ಅದು ಬಳುಕಿ ಪೂಜಾಸಾಮಗ್ರಿಯಲ್ಲಿ ಕೆಲವು ಕೆಳಗೆ ಬೀಳುತ್ತವೆ. ಪಡಿಹಾರಿ ಅದನಾಯ್ದು ಹಾಕುತ್ತಾನೆ]

ಚಂದ್ರಹಾಸ:
ಏನಿದಪಶಕುನ? ನಾನೆ ಪೂಜೆಯ ತೀರ್ಚಿ
ಆಮೇಲೆ ಹೋಗುವೆನು ದೊರೆಯೆಡೆಗೆ.

ಮದನ:
(ನಗುಮೊಗನಾಗಿ)
ಏನಿದು? ಕೈತೊಡರಿ ಬಿದ್ದುದಕೆ ಶಕುನವೆಂದೇಕೆ
ಅಂಜುತಿಹೆ, ವೀರನಾಗಿಹ ನೀನು?

ನಡೆ, ಚಂದ್ರಹಾಸ; ನೀನು ಭಗವದ್ ಭಕ್ತ!
ನಿನಗೆ ಕೇಡುಂಟೆ? ನಿನಗೊಳ್ಳಿತಕ್ಕೆ!

[ವೀರಸೇನ ರಣಸಿಂಹರೊಡನೆ ಪಡಿಹಾರಿ ದಾರಿತೋರುತ್ತಿರಲು ಚಂದ್ರಹಾಸನು ಹೊರಡುತ್ತಾನೆ.]

ಮದನ: ನಾನೊಬ್ಬನೆಯೆ ಹೋಗಬೇಕಾ ಚಂಡಿಕಾಲಯಕೆ.
ನೀವೆನ್ನೊಡನೆ ಬರೆ, ಚಂದ್ರಹಾಸಂಗೆ
ಕುಲವ್ರತದ ನನ್ನಿ ಭಂಗವಾಗುವುದು.
ಬೇಗದಿಂ ಬಂದಪೆನು ಪೂಜೆಯುಂ ಪೂರೈಸಿ.
ನೀವೆನ್ನ ಅಯ್ಯನೆಡೆಯಂ ಸಾರ್ದು ತಳ್ವದೆಯೆ
ನಡೆದ ರಾಜಕಾರ್ಯವನೆಲ್ಲಮಂ ಪೇಳ್ವುದು,
ನಿಮಗಾಗಳೆಯೆ ನಾಂ ಪೇಳ್ದವೋಲೆ.

(ಕಿಂಕರರು ಕೈಮುಗಿದು ಹೊರಡುತ್ತಾರೆ)

ಸೂರ್ಯನಾಗಲೆ ಮುಳುಗಿದನು. ಮುಸುಗುತಿದೆ
ಕತ್ತಲೆಯ ಮುಂಗಪ್ಪು. ಹಕ್ಕಿ ಹಾರುತಿವೆ
ಹಿಂಡಾಗಿ ಗೂಡಿಂಗೆ. ಇತ್ತ ನಭದಲಿ ಚುಕ್ಕಿ
ಮೂಡುತಿವೆ....ಅತ್ತಾ ದಿಗಂತದಿಂದೇಳುತಿಹ
ಕಾರ್ಮೋಡಗಳ್ ಮಿಂಚುತಿವೆ....ಹಾ ಗುಡುಗೂ
ಕೇಳುತಿದೆ!....ದೂರದೊಳ್ ಆ ಚಂಡಿಕಾಲಯದ
ಪೊಂಗಳಸವೆಂತು, ಕಿಕ್ಕಿರಿದ ಮರದಳಿರ
ಕರ್ನೆತ್ತಿಯಂ ಮೀರಿ, ಮೇಲೆದ್ದು ಮಿನುಗುತಿದೆ,
ಬೈಗುಗೆಂಪಿನ ಛಾಯೆಯಲಿ, ನೆತ್ತರ್ ಸೋರ್ವ
ರುದ್ರಕಾಳಿಯ ಜೋಲ್ವ ಕೆನ್ನಾಲಗೆಯವೋಲ್!

[ಹೊರಡುತ್ತಾನೆ]

ಪರದೆ ಬೀಳುತ್ತದೆ.

ದೃಶ್ಯ ೭

[ಕಾಳಿಕಾ ದೇವಸ್ಥಾನದ ಸುತ್ತಣ ಕಾಡು. ಹಳುವಿನ ನಡುವೆ ಭೀಷಣ, ಕಾಳ, ಮಾರ ಮೂವರೂ ಬಿಚ್ಚಿದ ಕತ್ತಿಗಳನ್ನು ಹಿಡಿದು ಮಾತನಾಡುತ್ತಿರುತ್ತಾರೆ.]

ಭೀಷಣ: ಮಾರ, ನೀನು ಬಾಗಿಲ ಹಿಂದೆ ಅವಿತಿರು;
ಕಾಳ, ನೀನು ಮೂರ್ತಿಯ ಹಿಂದೆ ಅಡಗಿರು;

ನಾನಿಲ್ಲಿಯೆ ನಿಂತಡಗಿ, ಅವನು ಬರುವ ಹಾದಿಯನ್ನೆ ನೋಡುತ್ತಿರುವೆ. ದೂರದಲಿ ಕಂಡೊಡನೆ ಗುಡಿಗೆ ಬಂದವಿತುಕೊಳ್ಳುವೆ, ನಿಮಗೆ ಸೂಚನೆಯಾಗಿ.

ಮಾರ : ಅಂದವನ ಬಿಟ್ಟಂತೆ ಇಂದು ಬಿಟ್ಟರೆ ನಮ್ಮ ತಲೆ ಅಟ್ಟಿಗಳ ಮೇಲಿರುವುದಿಲ್ಲ.

ಕಾಳ : ಇಂದು ಬಿಡುವುದೆ? ಯಾರು ಬಿಟ್ಟರೂ ನಾನು ಬಿಡೆ.

ಭೀಷಣ : ಒಂದೆ ಏಟಿಗೆ ತುಂಡಾಗುವಂತೆ ಹೊಡೆಯಬೇಕು. ಯಾರೂ ಹಿಂಜರಿಯಬಾರದು. ಜೋಕೆ! ಅವನು ಕತ್ತಿಕಾಳೆಗದಿ ಬಲುಗಟ್ಟಿಗನಂತೆ. ರಣಾಂಗಣದಿ ನೂರು ಕಾಲಾಳುಗಳನೊಮ್ಮೆಗೆ ತುಂಡು ಮಾಡುವ ಜಾಣ್ಮೆ ಇಹುದಂತೆ!

ಮಾರ : ನಿನಗೇಕೆ ಆ ಚಿಂತೆ? ನಮ್ಮ ಮಾರಿಯ ಮುಂದೆ ನಾವು ಹೆದರುವುದುಂಟೆ?

ಕಾಳ : ಇಂದವಳಿಗೆ ಸಿರಿಯ ನರಬಲಿ!

ಮಾರ : ಒಬ್ಬನೆ ಬರುವನೊ? ಕೂಡಿ ಬರುವನೊ?

ಭೀಷಣ : ಒಬ್ಬನಾಗಲಿ ಇಬ್ಬರಾಗಲಿ ತುಂಡುಮಾಡುವುದೆ ನಮ್ಮ ಕರ್ತವ್ಯ. ಏ ಕಾಳ, ಕತ್ತಿಗಳನು ಚೆನ್ನಾಗಿ ಮಸೆದಿರುವೆಯಷ್ಟೆ?

ಕಾಳ : (ಕತ್ತಿಯ ಬಾಯಿಗೆ ಕೈಹಾಕಿ ತೋರಿಸುತ್ತಾ) ಓಹೊ, ಕಲ್ಲನೂ ಕತ್ತರಿಸಬಲ್ಲುದು!

ಭೀಷಣ : (ಮೇಲೆ ನೋಡಿ) ಏನಾಗಲೆಯೆ ಮೋಡ ಕವಿದು ಮುಂಗಪ್ಪು ಹಬ್ಬಿಬಿಟ್ಟಿದೆ. ಗುಡುಗು ಮಿಂಚು ಬೇರೆ! (ತೆಕ್ಕನೆ ಚಕಿತನಾಗಿ ದೂರ ನೋಡಿ) ನೋಡಿ, ಓ ಆ ದೂರದಲ್ಲಾವುದೊ ಆಕೃತಿ ಚಲಿಸಿದಂತೆ ಕಾಣುವುದಿಲ್ಲವೆ? [ಎಲ್ಲರೂ ಅತ್ತ ನೋಡುತ್ತಾರೆ.]

ಮಾರ : ನನ್ನ ಕಣ್ಣು ಮಂದ. ನನಗೇನೂ ಕಾಣಿಸುವುದಿಲ್ಲ.

ಕಾಳ : (ನಕ್ಕು) ಕಣ್ಣೊಂದೆ ಏನು? ತಲೆಯೂ ಮಂದವೆ ನಿನಗೆ! (ಎಂದು ದೂರ ನೋಡಿ) ಹೌದು, ಏನೊ ಚಲಿಸಿದಂತಾಗುತಿದೆ.

ಭೀಷಣ : ನಿಮ್ಮ ನಿಮ್ಮ ತಾಣಗಳಿಗೆ ಹೋಗಿ ಅಡಗಿರಿ. ಅವನೆ ಬರುತಿಹನು. ನಾನು 'ಹೊಯ್' ಎಂದ ಕೂಡಲೆ ಬಂದು ಮುತ್ತಬೇಕು ತಿಳಿಯಿತೆ ?

[ಮೂವರೂ ಬೇಗ ಬೇಗನೆ ಗುಡಿಯ ಕಡೆ ಓಡಿ ಮರೆಯಾಗುತ್ತಾರೆ. ಬಳಿಕ ಪೂಜಾಸಾಮಗ್ರಿಯಿರುವ ಹರಿವಾಣ ಹಿಡಿದು ಮದನ ಪ್ರವೇಶಿಸುತ್ತಾನೆ.]

ಮದನ : ಯಾರೊ ಮಾತನಾಡಿದ ಹಾಗೆ ಕೇಳಿಸಿತು.
ಯಾರಿರುವರಿಲ್ಲಿ, ಈ ಹೊತ್ತಿನಲ್ಲಿ ? (ಸುತ್ತನೋಡಿ)
ಕಾಡುಗತ್ತಲೆಗೆ ಮೋಡಗತ್ತಲೆಯೂ ಸೇರಿ
ಮಸಿಮುದ್ದೆಯಾಗಿ ಅಳಸಿಹೋಗಿಹುದೆಲ್ಲ.
ನಾನು ಕೇಳಿದುದು ಕಲ್ಪನೆಯ ಸದ್ದಿರಬೇಕು.
ಗುಡುಗ್ಗು ಸದ್ದಿನಲಿ ಮರಗಳ ನಡುವೆ ನುಗ್ಗುವೀ
ಗಾಳಿಯೇ ಗೊಣಗಿದಂತಾಯ್ತೊ ಏನೊ ?
(ಗೂಬೆ ವಿಕಾರವಾಗಿ ಕೂಗುತ್ತದೆ)
ಏನು ಗೂಗೆಯ ಕೂಗಿನಿತು ಕರ್ಕಶ, ವಿಕಾರ !
ಸುತ್ತಲಿಹ ಪ್ರೇತ ಭೂಮಿಯ ಮಹಿಮೆಯಿರಬೇಕು !
ಎನಿತು ಧೈರ್ಯವನೊತ್ತಿದರು ಎದೆಗೆ, ಮನವೇಕೊ
ಕಳವಳಿಸುತಿಹುದು ! ಕತ್ತಲೆಯೆ ಅಂತು !....
ತಂದೆಯಿಂದಿನ ವರ್ತನೆಯು ಕಾರಣವೊ ? ಇರಬೇಕು ....
ತಂಗಿಯನಂತು ಬೈದುದಂ ಕಂಡೆನಗೆ
ತಂದೆಯನೆ ನಿಗ್ರಹಿಪ ಕೋಪವುರಿದಿತ್ತು !
ಕೋಮಲೆ, ಮುಗ್ಧೆ, ನವವಧು, ಪ್ರೇಮಮೂರ್ತಿ,
ಅವಳನಾಪರಿ ಕೆಲೆಯುವುದೆ ?....ಅಥವಾ,
ಅವಳೆಸಗಿದಾ ಕಜ್ಜಗುಟ್ಟು ತಂದೆಗೇನಾದರೂ
ತಿಳಿದಿಹುದೊ ?—ಪಾಪ, ಮುದ್ದು ತಂಗಿ !
ಅಪ್ಪಯ್ಯನಂತು ಬೈದುದಕೆ ಹೆದರಿ ಮುದುರಿ
ಬಿಕ್ಕಿ ಬಿಕ್ಕಳುತೆ ನನ್ನೆಡೆಗೆ ಓಡಿಬಂದು
ಪತ್ರವನು ತಾನೆ ತಿದ್ದಿದಾ ಮುಗ್ಧಗೋಪ್ಯವನು
ಒರೆದಳಲ್ತೆ ? ತನ್ನ ತಪ್ಪನು ಅಪ್ಪಯ್ಯಗೊಪ್ಪಿಸುವೆ
ಎಂದವಳನೆಂತೊ ನಾನೆ ತಡೆದೆ....ಆದರೂ
ಎಲ್ಲಿ ಹೇಳಿ ಬಿಡುವಳೊ ಎಂದು ನನಗೆ ಅಳ್ಕು !....
ಏಕಿಂತು ಕ್ರೂರಿಯಾದನೊ ತಂದೆ ನಾನರಿಯೆ.

ನಾನೆ ಕಾರಣವಂತೆ ! ಅಂತೆಂಬರನಿಬರೂ !....
ಕುಂತಳೇಂದ್ರನ ರಾಜ್ಯವನು ನನಗೆ ಮಾಡುವುದೊಂದೆ
ಆತನಾ ಕ್ರೌರ್ಯಕ್ಕೆ ಗುರಿಯಂತೆ !....
ದೊರೆಯ ಕುವರಿಯನೆನಗೆ ತಂದುಕೊಂಡು
ಆ ಉಪಾಯವ ಸಾಧಿಸುವುದವನ ಬಯಕೆಯಂತೆ !
ಆದರೀಗಳಾ ಬಟ್ಟೆಯೂ ಕಟ್ಟಿದಂತೆಯೆ :
ಗಾಂಧರ್ವ ವೈವಾಹವಿಧಿಯಿಂ ದೊರೆಯ ಮಗಳಾಗಳೆಯೆ
ನನ್ನ ತಂಗೆಗೆ ತಂಗೆಯಾಗಿಹಳಲ್ತೆ ?....
ಅದು ತಿಳಿಯೆ, ತಂದೆಯ ಮುನಿಸಿನುರಿಯನ್
ಆನುವುದೆಂತೊ ? ಆರ ಆಹುತಿಯಪ್ಪುದೊ ?....
ಎನಿತೊ ಸೂಳ್ ಎನಗೆಯೆ ಬರಲಿ ಸಾವಾದರೂ
ಎಂಬಾಸೆ ಸುಳಿದಿಹುದು ನನ್ನ ಹೃದಯದಲಿ.
ಚಂದ್ರಹಾಸನಿಗೇನು ಕೇಡೊದಗುವುದೊ ಎಂದು
ನನಗಳ್ಕು....ನನ್ನ ಹರಣವನೊಡ್ಡಿಯಾದರೂ
ಆ ಸಾತ್ವಿಕ ಶಿರೋಮಣಿಯ ಕ್ಷೇಮಕ್ಕೆ ಹೊಣೆ ನಿಲುವೆ....
ಮುದ್ದು ತಂಗಿಗೆ ಅಮಂಗಳಂ ಬರದಿರ್ಕೆ— (ದೂರಕ್ಕೆ ನೋಡಿ)
ಈ ಕಾಡುಗತ್ತಲಲಿ ಆ ಗುಡಿಯ ಹಣತೆಯ ಸೊಡರು
ಎಂತು ಹೋರಾಡುತಿದೆ, ಬೆಳಕಿನ ಬದುಕಿಗೆಳಸಿ !
ಅಂತೆಯೆ ಅಲ್ತೆ ನನ್ನೆದೆಯ ಬೆಳಕೂ !

[ಆ ಬೆಳಕನ್ನೆ ಗುರಿಮಾಡಿ ನಡೆದು ಮರೆಯಾಗುತ್ತಾನೆ]

ಪರದೆ ಬೀಳುತ್ತದೆ.

ದೃಶ್ಯ ೮

[ತನ್ನ ಅರಮನೆಯ ಒಂದು ವಿಶಾಲ ಕಕ್ಷೆಯಲ್ಲಿ ದುಷ್ಟಬುದ್ಧಿ ಹಿಂದೆಮುಂದೆ ತಿರುಗುತ್ತಿದ್ದಾನೆ. ಸಂಜೆಗಪ್ಪು ಕವಿದಿದೆ. ಕೋಪ ಕ್ರೌರ್ಯ ಶೋಕಾದಿ ನಾನಾ ಭಾವಗಳಿಂದ ಅರೆಮರುಳನಂತೆ ವರ್ತಿಸುತ್ತಿದ್ದಾನೆ.]

ದುಷ್ಟಬುದ್ಧಿ : ಕಟ್ಟಾಣೆಯಿತ್ತಿಹೆನು. ಅಂದಿನಂತಾಗದು.
ಇಂದವನ ಕೊಂದೆ ತೀರ್ಚುವರು ! . . .
(ಸುತ್ತ ನೋಡಿ ಕತ್ತಲಾಗುತ್ತಿರುವುದನ್ನು ಗಮನಿಸಿ)
ಏನಿನ್ನೂ ದೀಪಮಂ ಪೊತ್ತಿಸಿಲ್ಲ . . . ಯಾರಲ್ಲಿ ?

ಸೇವಕ: (ಓಡಿಬಂದು) ಆಜ್ಞೆ ಮಹಾಸ್ವಾಮಿ.

ದುಷ್ಟಬುದ್ಧಿ: ಕಾಣ್ಬುದಿಲ್ಲವೆ ನಿನಗೆ ಕತ್ತಲಾಗುತ್ತಿಹುದು?

ಸೇವಕ: ದೀವಿಗೆಯ ಹೊತ್ತಿಸುವ ಸಮಯವಾಗಿಲ್ಲ, ಒಡೆಯ;
ಕರ್ಮೋಡ ಕವಿಯುತಿದೆ. ಅದಕೆ ಈ ಕತ್ತಲೆ!

ದುಷ್ಟಬುದ್ಧಿ: ಸಾಕು ವಿವರಣೆ. ನಡೆ, ಬೆಳಕ ತಾ.
(ಸೇವಕ ಹೋಗುತ್ತಾನೆ)
ಈ ಬೆಳಕಿನಿಂದೇನಹುದು? ಆ ಬೆಳಕು ನಂದಿದರೆ!. . .
(ಸುಯ್ದು)
ಅಯ್ಯೊ, ಮಗಳ ವೈಧವ್ಯದಿಂ
ಮಗನಭ್ಯುದಯಮಂ ಸಾಧಿಸುವುದಾಯ್ತೆ?
ಛೀ ವಿಕಟ ವಿಧಿಯೆ! . . .
(ಸೇವಕನು ಬೆಳಕು ತಂದಿಟ್ಟು ಹೋಗುತ್ತಾನೆ)
ಎಂತೊದಗಿತಾ ತಪ್ಪು?
'ವಿಷವ ಮೋಹಿಸುವಂತೆ' ಎಂಬುದೆಂತಾಯ್ತು
'ವಿಷಯೆ ಮೋಹಿಸುವಂತೆ'?
ವಿಧಿ ಕೃತವೊ? ತನ್ನ ಮೋಸವೊ?
ಬರೆದವನ ಮರೆಹೊ?
ಅಲ್ಲದಿರೆ ಚಂದ್ರಹಾಸನದೆ ಮೃಷೆಯೊ? . . .
ದಿಟಂ, ಮದನನ ಮೇಲೆ ತಪ್ಪಿಲ್ಲ . . . ಎಂತೂ
ಅಂದೆನಗೆ ಋಷಿಗಳಾಡಿದ ಮಾತು ಪುಸಿಯದಲ್ತೆ?
ಆದೊಡಂ . . . ಆದೊಡಂ . . . ಆದೊಡಂ . . .
ಉಪಾಯದಿಂದೀಗಳಾಂ ವಧಿಸದಿರ್ದೊಡೆ
ಹುಸಿಯಹುದು ನನ್ನ ಸಂತತಿಗೆ
ಈ ಧರೆಯನಾಳ್ವ ಸಂಪದಂ . . . (ಮುನಿಸು ಏರಿ)
ಕುಲಘಾತಕಗೆ ಮದುವೆಯೊದಾ ವಿಷಯೆ,—
ತಂದೆ ಪಿಂತಿರುಗುವಾ ಮೊದಲೆ ಏನವಳ್ಗಿರ್ದತ್ತೊ
ಈ ಮದುವೆಯವಸರಂ?— (ಹಹ್ಹಹ್ಹಾ ಹುಚ್ಚುನಗೆ ನಗುತ್ತಾ)
ವಿಧವೆಯಾಗಿರಲಿ . . . (ಅಳುತುಟಿಯಾಗಿ) ಅಯ್ಯೋ
(ದೈನ್ಯದಿಂದ ದುಃಖಿಸುತ್ತಾನೆ.)
(ಹೊರಗೆ ಬಾಗಿಲು ತಟ್ಟಿದ ಸದ್ದಾಗುತ್ತದೆ.)
ಯಾರಲ್ಲಿ?

ಸೇವಕ : (ಪ್ರವೇಶಿಸಿ ಅವಸರದಿಂದ ಹೇಳುತ್ತಾನೆ)
ಮದನ ಒಡೆಯರು ಅಟ್ಟಿರುವ ಕಿಂಕರರಂತೆ !
ಸಮಯವನೆ ಕಾಯುತಿಹರು.

ದುಷ್ಟಬುದ್ಧಿ : ಬರಹೇಳು. (ಸ್ವಗತ)ನಾನೊರೆದ ಗುಪ್ತ ಕಾರ್ಯದಲಿ
ವಿಜಯಿಯಾಗಿಹನೊ ? ಇಲ್ಲದಿರೆ, ಮತ್ತೆ,
ಮತಿಗೇಡಿತನವನೆ ಮೆರೆದಿಹನೊ ?
(ಕಿಂಕರರಿಬ್ಬರು ಪ್ರವೇಶಿಸಿ ನೆಲಮುಟ್ಟಿ ನಮಸ್ಕರಿಸಿ ಕೈಮುಗಿದು ಬಾಗಿ ನಿಲ್ಲುತ್ತಾರೆ. ದುಷ್ಟಬುದ್ಧಿ ಪ್ರಶ್ನದೃಷ್ಟಿಯಾಗಿ ಅವರನ್ನು ದುರುದುರನೆ ನೋಡುತ್ತಾನೆ. ಅವನ ದೃಷ್ಟಿರೋಷಕ್ಕೆ ಅಳುಕಿ ಮಾತನಾಡಲಂಜಿದ್ದ ಕಿಂಕರರ ಮೇಲೆ ರೇಗಿ, ನೆಲಕ್ಕೆ ಕಾಲುಕುಟ್ಟಿ)
ಮೂಕರೇನ್ ನೀವು ? ಏಕಿಂತು ಕೆಮ್ಮನೆಯೆ
ನಿಂತಿಹಿರಿ, ಬೆಪ್ಪುಗಳೆ ?

೧ನೆಯ ಕಿಂಕರ : (ಬೆಚ್ಚಿ ಬೆದರಿ ತೊದಲುತ್ತಾನೆ.)
ನಾವು . . . ತಮ್ಮ . . . ನಾವು . . . ಸನ್ನಿಧಿಗೆ . . .

ದುಷ್ಟಬುದ್ಧಿ : ಏನದು ? ಬೊಗಳೊ ಬೇಗದಿಂ !

೨ನೆಯ ಕಿಂಕರ : ಮದನ ಒಡೆಯರು ಅವಸರವನರುಹಿ
ನಮ್ಮನಿಲ್ಲಿಗೆ ಕಳುಹಿದರು ತಮ್ಮ ಸನ್ನಿಧಿಗೆ.

ದುಷ್ಟಬುದ್ಧಿ : ಏನೆಂದು ?

೨ನೆಯ ಕಿಂಕರ : ಗಾಲವರ ಬುದ್ಧಿಯಂ ಕೇಳ್ದು, ಕುಂತಳೇಂದ್ರಂ
ಚಂದ್ರಹಾಸ ಪ್ರಭುಗೆ ತನ್ನ ಕುವರಿಯಂ
ಗಾಂಧರ್ವ ವೈವಾಹ ವಿಧಿಯಿಂ
ರಾಜ್ಯಸಹಿತಂ ಧಾರೆಯೆರೆದಿತ್ತು, ತಾಂ
ಸಕಲ ಸೌಭಾಗ್ಯಮಂ ತ್ಯಜಿಸಿ
ಯೋಗಸಿದ್ಧಿಯಂ ಪಡೆಯೆ
ವನವಾಸಕುದ್ಯೋಗಿಸಿದನೆಂದು.
[ದುಷ್ಟಬುದ್ಧಿಯ ಕಣ್ಣುಗಳೂ ಮುಖಭಂಗಿಯೂ ಕಿಂಕರನ ಒಂದೊಂದು ಮಾತಿಗೂ ಅಚ್ಚರಿ ಮುನಿಸು ಜುಗುಪ್ಸೆ ಮೊದಲಾದ ಭಾವಗಳಿಂದ ವಿಕೃತವಾಗುತ್ತಾ ಹೋಗುತ್ತವೆ.]

ದುಷ್ಟಬುದ್ಧಿ : ನಿಜವನೊರೆವೆಯೊ ? ನಿನ್ನ ಮರಣನಾಂದಿಯಂ
ಪಾಡುತಿರುವೆಯೊ ? ಒರಲೊ, ಪಿಶಾಚಿ ! (ಗರ್ಜಿಸುತ್ತಾನೆ)

೨ನೆಯ ಕಿಂಕರ : (ಮೆಲ್ಲಗೆ ಹಿಂದಕ್ಕೆ ಸರಿದು ಮರೆಯಾದ ಮೊದಲನೆಯ ಕಿಂಕರನನ್ನು ಗಮನಿಸಿದರೂ ಗಮನಿಸಲೊಲ್ಲದವನಂತೆ)

ಒಡೆಯ, ಕುಮಾರರು ಒರೆದುದನೆ ನಾನೊರೆದಿಹೆನು.
ನನ್ನದೆಂಬುದು ಒಂದಿನಿತೂ ಇಲ್ಲ.

ದುಷ್ಟಬುದ್ಧಿ : (ವ್ಯಂಗ್ಯ ಧ್ವನಿಯಿಂದ)
ಎಲ್ಲಿಹನೊ? ಕುಮಾರನೆಲ್ಲಿಹನೊ? ಅರಸಂಗೆ
ನೆರವಾಗುತಿಹನೇಂ. ಚಂದ್ರಹಾಸಂಗೆ
ಪಟ್ಟಾಭಿಷೇಕೋತ್ಸವಂ ಗೆಯ್ವ ಸಂಭ್ರಮದಿ? . . .
(ತನಗೆ ತಾನೆಂಬಂತೆ)
ಮೂಢ! ಮೂಢ! ಮೂಢ! . . .
ನಾನಿರ್ದೊಡಂ ಸತ್ತನೆಂದೆಯೆ ತಿಳಿದರೇನಾ
ದ್ರೋಹಿಗಳ್? ವಿದ್ರೋಹಿಗಳ್!
ಬಲಿಗೊಳ್ಳದಿರಳು ನನ್ನ ಕೋಪಕಾಳಿ
ಆ ನೀಚರ್ಕಳಿಲ್ಲರಂ!

೨ನೆಯ ಕಿಂಕರ : ಅಹುದಹುದು ಜೀಯ,
ಮದನ ಕುಮಾರರಾ ಕಾಳಿಯನೆ ಪೂಜೆಗೈಯಲ್ಕೆ
ತೆರಳಿದರು ಊರ ಹೊರಗಣ ಚಂಡಿಕಾಲಯಕೆ.

ದುಷ್ಟಬುದ್ಧಿ : (ದಿಗ್‌ಭ್ರಾಂತನಾಗಿ)
ಆ್ಞ! ಆ್ಞ! ಏನೆಂದೆ?

೨ನೆಯ ಕಿಂಕರ : ಕುಮಾರರಾ ಚಂಡಿಕಾಲಯಕೆ ತೆರಳಿದರು.

ದುಷ್ಟಬುದ್ಧಿ : ಚಂದ್ರಹಾಸನೆ?

೨ನೆಯ ಕಿಂಕರ : ಅಲ್ಲ; ಮದನ ಕುಮಾರರು!
ಪೂಜೆಗಾಗಿಯೆ ಹೋಗುತಿದ್ದಾ ಚಂದ್ರಹಾಸಪ್ರಭುವಂ
ದಾರಿಯಲಿ ಸಂಧಿಸಿ, ಕುಮಾರರವರಂ
ರಾಜಕಾರಣವರುಹಿ ಕಳುಹಿದರು ದೊರೆಯೆಡೆಗೆ.

ದುಷ್ಟಬುದ್ಧಿ : ಕುಲಾಚಾರಮಂ ಮೀರಿದನೆ ಪಾಪಿ?

೨ನೆಯ ಕಿಂಕರ : ಕುಲವ್ರತವ ಪಾಲಿಸಲೆಂದೆ ಅಳಿಯಂದಿರ ಕೈಲಿದ್ದ
ಪೂಜಾಸಾಮಗ್ರಿಯಂ ತಾವೆ ಕೈಕೊಂಡು
ಚಂಡಿಕಾಲಯಕೆ ತೆರಳಿದರು, ನಮ್ಮನಿಲ್ಲಿಗೆ ಕಳುಹಿ.

ದುಷ್ಟಬುದ್ಧಿ : (ಹಮ್ಮಯಿಸಿ, ಸುಯ್ಯು, ತತ್ತರಿಸಿ, ರೋದನಧ್ವನಿಯಿಂದ)
ಸಾಕು! ಸಾಕು! ಸಾಕು!
ತೊಲಗು! ತೊಲಗು! ತೊಲಗು!

ನೀ ದೂತನಲ್ಲ, ಯಮನ ಭೂತ!
ನಿಲಬೇಡ, ಕಣ್ಣೆದುರು ನಿಲಬೇಡ,
ಓ ವಿಧಿಯ ವಿಕಟ ಪರಿಹಾಸ್ಯರೂಪೀ ಪಾಪೀ
ತೊಲಗೊ ಇಲ್ಲಿಂದ!

(ಕಿಂಕರನು ಭಯಗ್ರಸ್ತನಾಗಿ ಹಿಂಜರಿದು ಮರೆಯಾಗುತ್ತಾನೆ)

ಅಯೋ! ಅಯೋ! ಅಯೋ!...
ನಮ್ಮುಪಾಯಮೆ ತಂದುದೆ ನಮಗಪಾಯಮಂ?
ಓ ವಿಧಿ ಏಕಿಂತು ಮೂದಲಿಸುತಿರುವೆ?
ಇನ್ನೇನಂ ಕಾಯ್ದಿಟ್ಟಿರುವೆ ನೀನೆನಗೆ?...
ಕಜ್ಜ ಮಿಾರುವ ಮುನ್ನಮೆ ಉಜ್ಜುಗಂಗೆಯ್ಯದಿರೆ...
ಅಯೋ ಅಯೋ ಅಯೋ
ನೆನೆಯಲಾರೆ! ನೆನೆಯಲಾರೆ!
ನೆನೆಯಲ್ಲಾರೆ, ನಡೆವ ಆ ಘೋರಮಂ!...
ಇದೊಮ್ಮೆಂಗೆ ಕ್ಷಮಿಸಿ ನನ್ನಂ
ಪೊರೆಯಲಾರೆಯ ನನ್ನ ಕಂದನಂ, ಓ ನನ್ನ ದುರ್ವಿಧಿ?
ತೋರೆನಗೆ ದಾರಿಯಂ
ಆ ಚಂಡಿಕಾಲಯಕೆ ತೋರೆನಗೆ ದಾರಿಯಂ;
ಬೇಗ! ಬೇಗ!

(ದಿಕ್ಕು ತಪ್ಪಿದವನಂತೆ ಅತ್ತ ಇತ್ತ ತತ್ತರಿಸಿ ಓಡಾಡುತ್ತಾನೆ)

ಕಾಲುಗಳೆ ಸೋಲುತಿಹವಲ್ಲಾ!
ಓಡೋಡಿ ಕೇಡಂ ತಡೆಯಬೇಕಾಗಿರುವ
ಈವೊಳ್ತಿನಲ್ಲಿ? ಕಣ್ಗೆ ಕತ್ತಲ್ಗಟ್ಟುತಿಹುದಲ್ಲಾ!
ಅಯ್ಯೋ! ಅಯ್ಯೋ! ಮದನಾ! ಮದನಾ!
ನಿಲ್ಲು, ನಿಲ್ಲು! ಬಂದೆ, ಬಂದೆ!...ನಿನ್ನ ತಂದೆ!

[ತತ್ತರಿಸುತ್ತಾ ಓಡುತ್ತಾನೆ.]

ಪರದೆ ಬೀಳುತ್ತದೆ.

ದೃಶ್ಯ ೯

[ಕಾಡಿನ ನಡುವಣ ಚಂಡಿಕಾಲಯ. ಕಗ್ಗತ್ತಲೆ ಕವಿದಿದೆ. ಕಾಳಿಕಾ ವಿಗ್ರಹದ ಮುಂದೆ ಒಂದು ಹಣತೆ ಉರಿಯುತ್ತಿದೆ. ಅದರ ನಸುಬೆಳಕಿನಲ್ಲಿ ದೇವಿಗೆ ಮುಡಿಸಿರುವ ಹೂವುಗಳೂ ಕೆಂಪುದಾಸವಾಳದ ಮಾಲೆಯೂ ಭಯಂಕರವಾಗಿವೆ. ಒಂದೆಡೆ ಜಾಗಟೆಯನ್ನು ನೇತುಹಾಕಿದ್ದಾರೆ. ಅದನ್ನು ಬಾರಿಸುವ ಕಿರಿಯ ಲಾಳವಿಂಡಿಗೆಯೂ ಪಕ್ಕದಲ್ಲಿದೆ. ಹೊರಗೆ ಸನ್ನಿಹಿತವಾದ ಬಿರುಮಳೆಯ ಸೂಚನೆ ಗಾಳಿಯ ಘೋರಾಟದಿಂದಲೂ ಸಿಡಿಲು ಮಿಂಚು ಗುಡುಗುಗಳ ಆರ್ಭಟದಿಂದಲೂ ರೌದ್ರವಾಗಿದೆ. ಹಣತೆಯ ಮಂದ ಕಾಂತಿಯಲ್ಲಿ ವಿಗ್ರಹದ ಹಿಂದೆ ಅವಿತಿರುವ ಕಾಳನ ಮೋರೆಯಾಕಾರ ಆಗಾಗ ಇಣುಕುತ್ತಿರುತ್ತದೆ. ಮಾರ, ಭೀಷಣ ಇಬ್ಬರೂ ಕಗ್ಗತ್ತಲೆಯಲ್ಲಿ ಅಡಗಿ ಕಾಣಿಸುತ್ತಿಲ್ಲ.]

ಭೀಷಣ: (ಕತ್ತಲಲ್ಲಿ ಕಾಣಿಸದೆ, ಗಟ್ಟಿಯಾದ ಪಿಸುದನಿಯಲ್ಲಿ ಭರ್ತ್ಸನೆ ಮಾಡುವಂತೆ ಆಜ್ಞೆ ಮಾಡುತ್ತಾನೆ.)

ಏ ಕಾಳ, ಮತ್ತೆ ಮತ್ತೆ ಹಾಗೆ ತಲೆಯಿಣುಕದಿರೊ, ಮುಟ್ಠಾಳ.

ಮಾರ (ಕತ್ತಲೆಯ ಗರ್ಭದಿಂದಲೆ ಮತ್ತೊಂದು ದಿಕ್ಕಿನಿಂದ ಮಾತನಾಡುತ್ತಾನೆ)

ಈ ಗುಡುಗು ಮಿಂಚು ಬೇರೆ ಮೊದಲಾಗಿದೆ. (ಮಿಂಚು ಬೆಳಗುತ್ತದೆ.)

ಇವತ್ತೇನು ಬರುತ್ತಾರೊ ಇಲ್ಲವೊ?

ಕಾಳ: ದೂರದಲ್ಲಿ ಯಾರನೊ ಕಂಡಂತಾಯಿತು, ಮಿಂಚಿನ ಬೆಳಕಿನಲ್ಲಿ.

ಭೀಷಣ: ಅಡಗಿ ನಿಲ್ಲಿ! ಅಡಗಿ ನಿಲ್ಲಿ! ಏ ಕಾಳ, ಏ ಮಾರ,
ಕೆಲಸದಲಿ ಎಡವಿದಿರೊ ನಿಮಗಿಂದು ತಲೆದಂಡ! ತಿಳಿಯಿತೆ?

[ಮೂವರೂ ಮಾತು ನಿಲ್ಲಿಸಿ ಹುದುಗುತ್ತಾರೆ. ಹೊರಗಡೆ ಗಾಳಿ ಮಿಂಚು ಗುಡುಗು ಜೋರಾಗುತ್ತದೆ. ಒಂದೆರಡು ತೋರ ಮಳೆಹನಿಗಳೂ ಬಿದ್ದ ಸದ್ದಾಗುತ್ತದೆ. ಮದನನು ವಿಗ್ರಹಕ್ಕೆ ಅಭಿಮುಖವಾದ ಬಾಗಿಲಿಂದ, ಕೈಯಲ್ಲಿ ಪೂಜಾ ಸಾಮಗ್ರಿಯಿರುವ ಹರಿವಾಣದೊಂದಿಗೆ, ಪ್ರವೇಶಿಸುತ್ತಾನೆ. ಗಾಳಿಗೆ ತಲೆಕೂದಲು ತುಸು ಕೆದರಿದಂತಿದೆ. ಸ್ವಲ್ಪ ಓಡೋಡಿ ಬಂದ ಅವಸರದ ಭಾವ ತೋರುತ್ತದೆ.]

ಮದನ: ಇದೇನಿದು? ಇದ್ದಕಿದ್ದಂತೆ ತೆಕ್ಕನೆಯೆ
ಅಕಾಲ ಮೇಘಗಳ್ ಕವಿಯುತಿವೆ ಗಗನಮಂ?
ತಿವಿಯುತಿವೆ ಮಿಂಚುಗಳ್ ಕಣ್ಗೆ ಕಾಂತಿಯ ಖಡ್ಗಮಂ!
ಗಾಳಿ, ಕಾಳಿಯೆ ಧಿಮಿ ಧಿಮಿಯೆ ತಾಂಡವಂ ಕುಣಿವಂತೆ,
ಭೋರೆಂದು ಬೀಸತೊಡಗಿದೆ ಮರದ ಮಂಡೆಯಂ
ತಿರುಪ್ಪಿ ಮುರಿದು. ಆಗಮಿಸಿದಂತಿಹುದು ದುರ್ದಿನಂ!

ಕಾಳ: (ವಿಗ್ರಹದ ಹಿಂದೆ ಹಣತೆಯ ಮಂದಕಾಂತಿಯ ನಸುಗತ್ತಲೆಯಲ್ಲಿ ತಲೆಯಿಣುಕಿ, ಆಶ್ಚರ್ಯಚಕಿತನಾಗಿ ಕಣ್ಣರಳಿಸಿ, ತನ್ನಲ್ಲಿ ತಾನೆ)

ಅಯ್ಯೊ ಏನಚ್ಚರಿ !
ಮದನ ಒಡೆಯರ ಮೊಗದ ಹೋಲಿಕೆಯೆ ಈತನದೂ ?
ಇಲ್ಲದಿರೆ, ಹಣತೆ ಬೆಳಕಿನ ಮಸುಗು ಮಾಯೆಯೊ ?
ಇಲ್ಲ, ಇಲ್ಲ, ಮದನ ಒಡೆಯರೆ ದಿಟ !
ಛೆ! ಛೆ! ಅಲ್ಲ, ಅಲ್ಲ, ಅಲ್ಲವೆ ಅಲ್ಲ;
ಒಬ್ಬರಂತೊಬ್ಬರಿರಬಾರದೇನು ?
ಇಲ್ಲ, ಇಲ್ಲ, ದಿಟಕೂ ಮದನ ಒಡೆಯರೆ ! ಹೌದು !
ಇವರನೆಲ್ಲಿಯಾದರೂ ಇರಿದು ಕೊಲ್ಲುವುದುಂಟೆ ?

[ಅನಿತರಲ್ಲಿ ಮದನನು ಹಣತೆ ಬೆಳಕಿಗೆ ಇನ್ನೂ ಹತ್ತಿರನಾಗಿ, ತೂಗು ಹಾಕಿದ್ದ ಜಾಗಟೆ ಬಾರಿಸಲು ಪಕ್ಕದಲ್ಲಿಟ್ಟಿದ್ದ ಲಾಳವಿಂಡಿಗೆಯನ್ನು ಕೈಗೆ ತೆಗೆದುಕೊಂಡು ಒಂದು ಸಾರಿ ಹೊಡೆಯುತ್ತಾನೆ, ನಾದ ಗುಡಿಯನೆಲ್ಲ ತುಂಬುವಂತೆ. ಎರಡನೆ ಸಾರಿ ಬಾರಿಸಲು ಕೈಯೆತ್ತುತ್ತಿದ ಹಾಗೆಯೆ]

ಭೀಷಣ : ಹೊಯ್, ಮಾರ!(ಎಂದು ಅಬ್ಬರಿಸಿ ಕೂಗಿ, ನುಗ್ಗಿ, ಇರಿಯುತ್ತಾನೆ.)

ಮಾರ : ಇರಿ ! ಕಡಿ ! (ಕತ್ತಲೆಯಿಂದ ಕೂಗು ಕೇಳಿಸುತ್ತದೆ.)

[ಭೀಷಣನು ಕೂಗಿ ನುಗ್ಗಿ ಇರಿದೊಡನೆ ಮದನನ ಕೈಲಿದ್ದ ಹರಿವಾಣ ಸಶಬ್ದವಾಗಿ ಕೆಳಗೆ ಬಿದ್ದು ಪೂಜಾಸಾಮಗ್ರಿ ಚೆಲ್ಲಾಪಿಲ್ಲಿಯಾಗುತ್ತದೆ. ಜಾಗಟೆ ಬಾರಿಸಲು ಎತ್ತಿದ್ದ ಲಾಳವಿಂಡಿಗೆಯಿಂದಲೆ ಭೀಷಣನ ಮೋರೆಗೆ ಬಲವಾಗಿ ಹೊಡೆಯುತ್ತಾನೆ, ಕೂಗಿಕೊಳ್ಳುತ್ತಾ . . .]

ಮದನ : ಅಯ್ಯೊ ದುಷ್ಟರಿರಾ ! (ಎಂದು ತತ್ತರಿಸಿ) ಶ್ರೀಹರಿ ! ಶ್ರೀಹರಿ ! [ಎಂದು ಕೆಳಗೆ ಬೀಳುತ್ತಾನೆ.]

ಭೀಷಣ : (ಬೀಳುತ್ತಾ) ಸತ್ತೆನಲ್ಲೋ, ಮಾರ, ಕಾಳ ! (ಭೀಷಣನ ಕೈಲಿದ್ದ ಖಡ್ಗವೂ ಝಣತ್ಕಾರದಿಂದ ಮದನನ ಪಕ್ಕಕ್ಕೆ ಬೀಳುತ್ತದೆ.)

ಕಾಳ : (ವಿಗ್ರಹದ ಹಿಂದಿನಿಂದ ನುಗ್ಗಿಬಂದು) ನಿಲ್ ! ನಿಲ್ ! ನಿಲ್ ! (ಎಂದು ಇರಿಯಲು ನುಗ್ಗುತ್ತಿದ್ದ ಮಾರನನ್ನು ತಡೆಯುತ್ತಾನೆ. ಕ್ಷಣಮಾತ್ರಕೆಂಬಂತೆ ಮಂದಿರದ ಒಳಗೆ ನೀರವವಾಗುತ್ತದೆ. ಹೊರಗಡೆಯೆ ಗಾಳಿ ಮಳೆ ಗುಡುಗಿನ ಸದ್ದು ಕೇಳಿಸುತ್ತದೆ.)

ಮಾರ : (ಕಾಳನಿಗೆ) ಏಕೊ ನಿನಗೀ ದ್ರೋಹ, ನೀಚ ?

ಕಾಳ : (ಸಂಕಟದ ದನಿಯಿಂದ) ಅಯ್ಯೋ ಏನಾಗಿ ಹೋಯ್ತು !

ಮಾರ : ಆಗುತ್ತದೆ ನಿನಗೆ, ದ್ರೋಹಿ !

ಕಾಳ : (ಕೆಳಗೆ ನೋಡುತ್ತಾ) ಮದನ ಒಡೆಯರೊ ಇವರು !

ಮಾರ: ಹುಸಿಯಾಡಬೇಡ, ಸುಳ್ಳ!

[ಕಾಳ ವಿಗ್ರಹದ ಬಳಿಯ ಹಣತೆಯನ್ನು ತರುತ್ತಾನೆ. ಆದರೆ ಬೆಳಕಿನಲ್ಲಿ ರಕ್ತಮಯವಾಗಿ ಬಿದ್ದಿದ್ದ ಮಂತ್ರಿಕುಮಾರನನ್ನು ಗುರುತಿಸುತ್ತಾರೆ. ಬೇಗಬೇಗನೆ ಹಣತೆಯನ್ನು ಹಿಂದಿದ್ದಲ್ಲಿಯೆ ಇಡುತ್ತಾನೆ.]

ಕಾಳ: ಅವನಲ್ಲ ಕಣೋ, ಮಾರ. ಅಂದು ತಪ್ಪಿದಂತೆಯೆ ಅವನು ಇಂದೂ ತಪ್ಪಿದನಲ್ಲೋ! ಶನಿ! ನಮಗೆ ಹಿಡಿದಿರುವ ಶನಿ! ಇವರು ಮಂತ್ರಿಯ ಮಕ್ಕಳಲ್ಲವೇನೊ? ಕೆಟ್ಟೆವಲ್ಲೋ, ಮಾರ!

ಮಾರ: ಎಲ್ಲಿಗಾದರೂ ಓಡಿ ತಪ್ಪಿಸಿಕೊಳ್ಳುವ, ಬಾ! ತಡೆದರೆ ತಲೆಗೇಡು!

ಕಾಳ: ಭೀಷಣ?

ಮಾರ: ಅವನು ಹಾಳಾಗಲಿ!

[ಇಬ್ಬರೂ "ನಮ್ಮಮ್ಮಾ, ಕಾಪಾಡು, ತಾಯಿ", ಎಂದು ವಿಗ್ರಹಕ್ಕೆ ಕೈಮುಗಿದು ಓಡಿಹೋಗುತ್ತಾರೆ.]

[ತುಸು ಹೊತ್ತಿನ ಮೇಲೆ ಮದನನು ಹೊರಳುತ್ತಾ ಏಳಲು ಪ್ರಯತ್ನಿಸಿ ಮತ್ತೆ ಬೀಳುತ್ತಾನೆ.]

ಮದನ: (ಹೊರಳುತ್ತಾ)

ಅಯ್ಯೊ, ತಂದೆ! ವಿಷಯೆ, ತಂಗಿ! ಚಂದ್ರಹಾಸ!
ತಪ್ಪ ಮನ್ನಿಸು, ತಾತ. ಅಪರಾಧವೆಸಗಿದೆನೆ?
ತಪ್ಪಾಯ್ತು! ಕ್ರೂರವಿದು! ಕ್ರೂರವಿದು, ಈ ಶಿಕ್ಷೆ!
ಚಂದ್ರಹಾಸನೆ, ಬಾ, ಮದನ ಕರೆವನು ನಿನ್ನ.
ಪುಣ್ಯವಂತನು ನೀನು; ಪುಣ್ಯವಂತನು ನೀನು.
ನೀನಲ್ಲ ಸಾಯುವನು: ನನಗದೇ ಶಾಂತಿ!
ಅಯ್ಯೊ ಇರಿಯುತಿದ್ದರು ನಿನ್ನನಿವರು!
ನೀನುಳಿದೆ, ನೀನುಳಿದೆ, ಶ್ರೀಹರಿಯ ಕೃಪೆಯಿಂದೆ:
ತಂಗಿ, ನಿನ್ನ ಓಲೆಯ ಭಾಗ್ಯ ಚಿರವಾಗಲಿ!
ಓ ಚಂದ್ರಹಾಸ, ನಿನ್ನ ಭಕ್ತಿಯೆ ನಿನ್ನ ರಕ್ಷಿಸಿತು!
ಅದಕಾಗಿ ನಾ ಧನ್ಯ. ನನ್ನ ಸಾವೂ ಧನ್ಯ!
ಶ್ರೀಹರಿ! ಶ್ರೀಹರಿ! ಶ್ರೀಹರಿ! ಶ್ರೀಹರಿ!
(ಧ್ವನಿ ಕ್ಷೀಣಿಸಿ ನಿಶ್ಶಬ್ದನಾಗುತ್ತಾನೆ)

[ದುಷ್ಟಬುದ್ಧಿ ಓಡೋಡಿ ಬಂದು ಏದುತ್ತಾ ನಿಲ್ಲುತ್ತಾನೆ. ಉಟ್ಟಬಟ್ಟೆ ಮಳೆಯಲ್ಲಿ ತೊಪ್ಪನೆ ತೊಯ್ದಿದೆ. ಕೂದಲೆಲ್ಲ ಕೆದರಿ ತೊಯ್ದು ತೊಟ್ಟಿಕ್ಕಿ ಮುಖದ ಮೇಲೆ ಬಿದ್ದಿದೆ. ಉಟ್ಟವಸನ ಅಸ್ತವ್ಯಸ್ತ. ಅಲ್ಲಲ್ಲಿ ಎಡವಿ ಬಿದ್ದುದರಿಂದಲೆಂಬಂತೆ ಮೈಗೆ ಬಟ್ಟೆಗೆ ಕೆಸರು ಮೆತ್ತಿದೆ. ಬುದ್ಧಿಗೆಟ್ಟವನಂತೆ ಉನ್ಮಾದವೇರಿದವನಂತೆ ಹೆಗ್ಗಣ್ಣಾಗಿ ಮುಖ ವಿಕಾರವಾಗಿದೆ.]

ದುಷ್ಟಬುದ್ಧಿ : ಬೇಡ! ಬೇಡ! ಛಂಡಾಲರಿರ, ಬೇಡ!
ನಿಮಗೇನು ಬೇಕಾದರೂ ನೀಡುವೆನು : ಬೇಡ!
ಎನ್ನ ಮಗನನ್ನುಳುಹಿ! ನಿಮ್ಮ ಅವಿಧೇಯತೆಗೆ
ಇಂದು ನಿಮಗೀಯುವೆನು ಅನರ್ಘ್ಯಬಹುಮಾನಮಂ!
ಮದನಾ! ಮದನಾ! ಓ ಮದನಾ, ಎಲ್ಲಿರುವೆ?
ಎಲೆ ಘೋರತಿಮಿರವೇ, ಒಂದು ನಿಮಿಷಕೆ ಮಾತ್ರ
ಹಿಂದೆ ಸರಿ; ಬೆಳಕ ಬಿಡು. ಹೊಳೆದು ನಿಲ್ಲಲೆ ಮಿಂಚೆ;
ತೋರೆನ್ನ ಮದನನಂ (ಮೋರೆಯ ಮೇಲೆ ಬಿದ್ದಿದ್ದ ಕೂದಲನ್ನು ಹಿಂದಕ್ಕೆ ಸರಿಸಿ, ಕಣ್ಣಿನ ಮೇಲೆ ಸೋರುತಿದ್ದ ನೀರನ್ನು ಒರೆಸಿಕೊಂಡು ಸುತ್ತಲೂ ನೋಡಿ ಒಂದು ಹೆಜ್ಜೆ ಮುಂಬರಿದು ಬೆಚ್ಚಿ, ಕಾಲಿಗೇನೊ ಸಿಕ್ಕಿದುದರಿಂದ, ಕೆಳಗೆ ನೋಡುತ್ತಾನೆ.)
ಏನಿದು? ಓ ಹಾಳು ಹಣತೆಯ ಸೊಡರೆ,
ಏನ ತೋರುತಿಹೆ? ಏನಿದು ಕೆಸರು? ನೆತ್ತರ್ಗೆಸರ್!
ಆರಿಲ್ಲಿ? ಮದನ? ಅಯ್ಯೊ ನನ್ನ ಮದನ! (ಚೀರುತ್ತಾನೆ)
(ಪಕ್ಕದಲ್ಲಿ ಬಿದ್ದಿದ್ದ ಖಡ್ಗವನ್ನೆಡವಿ ಮದನನ ಮೇಲೆ ಬೀಳುತ್ತಾನೆ)
ಮದನ! ಮದನ! ಮದನ! (ಅರ್ಧ ಎದ್ದು ಮೊಳಕಾಲೂರಿ)
ನೀಚರಿರಾ, ನೀಚರಿರಾ, ಓ ನೀಚರಿರಾ,
ನಿಮ್ಮ ಕಣ್ಣಿಂಗಿಹೋಗಿತ್ತೆ? ಗುರುತಿಸದೆ ಹೋದಿರಾ
ದಿನದಿನವು ಸಾಕಿ ಸಲಹಿದ ನಿಮ್ಮ ಈ ಒಡೆಯನಂ?
ಓ ಮಿಂಚೆ ಬೆಳಗದಿರು ಈ ಘೋರಮಂ;
ನಿಲ್ಲಿ, ಓ ಮಳೆಗಾಳಿ ಮೊಳಗುಗಳೆ, ನಿಲ್ಲಿ,
ಆಲಿಸಲಿ ಲೋಕವೆಲ್ಲಂ ಪಾಪಿಯಿಾ ಗೋಳಾಟವಂ.
ಕತ್ತಲೆಯೆ ಕವಿ, ಮುತ್ತು; ಮನಕೆ ಮರೆಹವನೊತ್ತು.
ಪರಮಾತ್ಮ, ಕ್ಷಮಿಸೆನ್ನ....ಬೇಡ, ಮನ್ನಿಸಬೇಡ!....
ನರಕವೇ ಬಾಯಿತೆರೆ! ನುಂಗೆನ್ನ ಜೀವಮಂ!
ನಿನಗಿಂತಲೂ ಘೋರತರವೀ ಘೋರಭೂತಲಂ!
ಓ ಚಂದ್ರಹಾಸ, ಓ ವಿಷಯೆ, ಪಾಪಿಯಂ ಕ್ಷಮಿಸಿ.
ಮತ್ಸರದಿ ಬಾಳುವವರು, ಕರುಬುವವರು,
ಅತ್ಯಾಶೆ ಮಾಡುವವರೆಲ್ಲ ಬಂದೆನ್ನ ನೋಡಿ....
ಮನ್ನಿಪೆನು, ಮದನ. ಓ ಏಳು, ಮೇಲೇಳು.
ನಿನಗಾಗಿ ಬಾಳಿದೆನ್, ನಿನಗಾಗಿ ಆಳಿದೆನ್,
ನಿನಗಾಗಿ ರಕ್ತದೀ ನರಕದಲಿ ಮುಳುಗಿಹೆನ್.

ಬಾಳೆಂಬುದಿದು ಬಿದಿಯ ಮೂದಲಿಕೆ. ಓ ಬಾಳಿ,
ನಿನ್ನ ಬಲಿಗೊಳಗಾಗುವೀ ಜೀವನಿಗೆ ಮರುಳಲ್ತೆ ?
ಮದನನೊಡಲಿಂದಿಳಿಯುತಿಹ ಬಿಸುನೆತ್ತರೇ,
ಕಂಪಿಸಳೆ ಭೂತಾಯಿ ನಿನ್ನ ಸೋಂಕಿಂದೆ ?
ಸರ್ವವಿಧ್ವಂಸನಂಗೆಯ್ಯ ಬಾರದೆ—ಪ್ರಕಂಪಿಸಿ !
ಓ ಗಾಲವಾ, ಬಾ ಇಲ್ಲಿ, ನಿನ್ನ ಮುದ್ದಿನ ಶಿಷ್ಯನ್
ಏನಾಗಿಹನು, ನೋಡು ! ನಿನ್ನ ಮಂತ್ರದಿ ಶಕ್ತಿ
ಇರೆ ಇವನನೆಚ್ಚರಿಸು. ಕುಂತಳೇಂದ್ರನೆ ಬಾ ;
ಮದನನೇಳುವ ತೆರದಿ ಅಣತಿಯ ನೀಡು !
ಹೇ ದುಷ್ಟಬುದ್ಧಿ, ನಿನ್ನ ಮಂತ್ರಿಯ ಯುಕ್ತಿ
ಈಗೆಲ್ಲಿ ? ತೋರು ! ತಾರಕಾಕ್ಷಿಯೆ ಬಾ
ತಾಯಿಯೊಲ್ಮೆಯ ಬಲದಿ ನಿನ್ನ ಮುದ್ದಿನ ಮಗುವ
ಎಚ್ಚರಿಸು !....ಕ್ರೂರಪರಿಹಾಸ್ಯವೀ ಭೂಮಿ ;
ಕ್ರೂರಪರಿಹಾಸ್ಯವೀ ಬಾಳು ; ಕ್ರೂರರೊಳ್
ಕ್ರೂರಿ ಆ ಪರಮಾತ್ಮನೆಂಬುವಂ ! ಕ್ರೂರವಿಧಿ,
ನಿನ್ನ ಕ್ರೌರ್ಯದ ಮುಂದೆ ನನ್ನದೊರ್ ಸೀರ್ಪುಲ್ !
ಮಗನ ಒಡಲನು ಇರಿದ ಕೂರಸಿಯೆ ಬಾ ಇಲ್ಲಿ,
ತಂದೆಯ ಎದೆಯ ನೆತ್ತರ್ಸವಿಮು ಕರುಣೆಯಿಂ ಬಾಳ್ !

(ಮದನನ ಪಕ್ಕದಲ್ಲಿ ಬಿದ್ದಿದ್ದ ಖಡ್ಗವನ್ನೆತ್ತಿಕೊಳ್ಳುತ್ತಾನೆ)

ಓ ನರಕ, ಬಾಯಿ ತೆರೆ, ಹಿಂದೆಂದೂ ನಿನ್ನೆಡೆಗೆ
ಬಂದಿರದ ನರನೊಬ್ಬನಿಂದು ಬರುತಿಹನು !
ಬೆದರದಿರು ! (ದೇವಿಯ ವಿಗ್ರಹದ ಕಡೆ ಉಗ್ರವಾಗಿ ನೋಡಿ)
ಓ ಕಾಳಿ, ಕರಾಳಿ,
ನೀನು ತಾಮಸ ದೇವತೆ,
ನನಗಿಂತಲೂ ಕೇಡಿ !
ಪಡೆವೆನೇನಂ ನಿನ್ನಂ ಬೇಡಿ ?
ಕೊಳ್ ನನ್ನನುಂ ಬಲಿಯ ಮಾಡಿ !

[ಖಡ್ಗದಿಂದ ಇರಿದುಕೊಂಡು ಸಾಯುತ್ತಾನೆ]

[ಗುಡಿಯ ಒಳಗಿನ ಕತ್ತಲೆ ಕಡಮೆಯಾಗುತ್ತಾ, ಹೊರಗಡೆಯ ಮಳೆ ಗಾಳಿಯ ಸದ್ದು ನಿಂತಂತಾಗಿ, ಯಾರೊ ಬರುತ್ತಿರುವವರ ಬೇಗದ ಸದ್ದು ಕೇಳಿಸಿ, ದೀವಿಗೆ ಹಿಡಿದವರೊಡನೆ ಚಂದ್ರಹಾಸ, ಗಾಲವ, ವೀರಸೇನ, ರಣಸಿಂಹ ಬೇಗಬೇಗನೆ ಬರುತ್ತಾರೆ. ಬೆರಗು ಬಡಿದು ದಿಟ್ಟಿಸುತ್ತಾರೆ.]

ಗಾಲವ: ಶಶಿಹಾಸ, ಮಿಂಚಿಹೋಯಿತು ಕಾರ್ಯ : ಮುಂದಾಗಿ
ಬರಲಿಲ್ಲ ನಾವು.

ಚಂದ್ರಹಾಸ: (ಮುಖದಲ್ಲಿ ಅಸಹಾಯಕತೆ, ಸಂಕಟ ತೋರಿ ಬಿಸುಸುಯ್ದು)
ಶ್ರೀಹರಿ! ಶ್ರೀಕೃಷ್ಣ !....
ತಳುವಿ ಕಳುಹಿದಳಲ್ತೆ ವಿಷಯೆ ವಿಷವಾರ್ತೆಯಂ?
ಮೊದಲೆ ಬಂದಿದ್ದರದು ಮಥಿಸುತಿತ್ತಮೃತಮಂ!

ರಣಸಿಂಹ: ಗಾಲವರೆ, ಇದರರ್ಥವೇನು?

ಗಾಲವ: ನಾನರಿಯೆ. ಶ್ರೀಹರಿಯೆ ಬಲ್ಲ.

ಭೀಷಣ: (ಮೂರ್ಛೆ ತಿಳಿದು ಕೂಗುತ್ತಾನೆ)
ಅಯ್ಯೊ, ಮಾರ! ಕಾಳ!

ವೀರಸೇನ: ಇವನಾರೊ ಬದುಕಿಹನು!
ಕ್ರೂರ ಕಾರ್ಯಕೆ ಬಂದ ಚಂಡಾಲನಿರಬೇಕು.

ಗಾಲವ: (ನೋಡಿ ಬೆರಗಾಗಿ ತನ್ನಲ್ಲಿಯೆ)
ಭೀಷಣ! (ಬಹಿರಂಗವಾಗಿ) ಭೀಷಣಾ!

ಭೀಷಣ: ಸಾಯುತಿಹೆ! ಅಯ್ಯೋ ನೀರು!

ಗಾಲವ: ಭೀಷಣ, ಇದೇನು?

ಭೀಷಣ: ಎಲ್ಲ ಹೇಳುವೆನೊಡೆಯಾ! ನೀರು! ನೀರು!
(ರಣಸಿಂಹನು ನೀರು ಕುಡಿಸುತ್ತಾನೆ)
ಮಂತ್ರಿವರ್ಯರ ಆಜ್ಞೆಯಂತೆ ಕೊಲೆಮಾಡಿದೆವು!

ವೀರಸೇನ: ಏನಂತೆ?

ಚಂದ್ರಹಾಸ: ಸುಮ್ಮನಿರು ಹೇಳಲಿ.

ಭೀಷಣ: (ತಡೆದು ತಡೆದು ಉಸಿರೆಳೆಯುತ್ತಾ ಹೇಳುತ್ತಾನೆ.)
ಕಾಳಿಕಾಲಯಕೆ.... ಸಂಜೆಯಲಿ.... ಪೂಜೆಗೆ.... ಬರುವವನ....
ಕೊಲೆಮಾಡಬೇಕೆಂದು ಬೆಸಸಿದರು.... ನಾನವನನ್....
ಇರಿವಾಗ ಲಾಳವಿಂಡಿಗೆಯಿಂದೆನ್ನ ಹೊಡೆದನಯ್ಯೋ....
ಸಾಯುವೆನು........ಸಾಯುವೆನು........ಮಾರ! ಕಾಳ!.....
(ಸಾಯುತ್ತಾನೆ)
[ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಾರೆ, ಅರ್ಥಪೂರ್ಣವಾಗಿ.]

ಗಾಲವ : ಶಶಿಹಾಸ, ಶ್ರೀಹರಿಯೆ ಕಾಪಾಡಿದನು ನಿನ್ನ !....
ಕರ್ಮಫಲ ತಪ್ಪುವುದೆ ?....ದೈವವನು ಮೀರುವರೆ ?....
ದೇವರಿಗಿದಿರ್ವೋಗೆ ವಂಚಕರೆ ವಂಚಿತರ್ !

(ಚಂದ್ರಹಾಸನು ಭಾವಾವೇಶದಿಂದ ದೇವಿಯ ಮೂರ್ತಿಯನ್ನೆ ಎವೆಯಿಕ್ಕದೆ ನೋಡತೊಡಗುತ್ತಾನೆ. ತೂಣಗೊಂಡವನಂತೆ ವಿಗ್ರಹದ ಕಡೆಗೆ ಎರಡು ಹಜ್ಜೆಯಿಟ್ಟು ಕೈಮುಗಿದು ನಿಲ್ಲುತ್ತಾನೆ. ಅದನ್ನು ಕಂಡು ಗಾಲವನು ಅವನನ್ನು ಬೀಳದಂತೆ ಹಿಡಿದುಕೊಳ್ಳಲೆಂಬಂತೆ ಮುಂಬರಿಯುತ್ತಾನೆ)

ಶಶಿಹಾಸ ! ಶಶಿಹಾಸ ! ಜಾರದಿರು, ಜಾರದಿರು !

ರಣಸಿಂಹ : (ಗಾಲವನನ್ನು ತಡೆದು ಕಿವಿಯಲ್ಲಿ)

ಗಾಲವರೆ, ಸುಮ್ಮನಿರಿ ! ಚಂದ್ರಹಾಸನಿಗಿಂತು
ದೇವಸಾನ್ನಿಧ್ಯದಲಿ ಭಕ್ತಿಭಾವಾವೇಗದಿಂ
ಒಮ್ಮೊಮ್ಮೆ....

ಚಂದ್ರಹಾಸ : (ಸ್ವಗತ) ತಾಯಿ, ಜಗನ್ಮಾತೆ, ಸರ್ವಶಕ್ತೆ,
ಆರ ಪಾಪಕೆ ಆರ ಬಲಿಕೊಳುವೆ ?
ನನ್ನ ಭಕ್ತಿಗೆ ಶಕ್ತಿಯಿರ್ಪೊಡೆ
ನಿನ್ನ ಕೃಪೆಯಿಂ
ನನ್ನನುಳುಹಿದ ಇವನು ಬದುಕಲಿ !

ಗಾಲವ : (ರಣಸಿಂಹನಿಗೆ)

ಏನನಾಡುತ್ತಿಹನು ? ನುಡಿ ತೊದಲಿದಂತಿಹುದು !

ರಣಸಿಂಹ : ತಾಯಿಗೇನನೊ ಹೇಳುತಿರುವಂತೆ ತೋರುತಿದೆ.

[ಚಂದ್ರಹಾಸನು ಭಾವಾವಿಷ್ಟನಾಗಿಯೆ ಮದನನ ಕಳೇಬರದ ಬಳಿಗೆ ಹೋಗಿ, ಮೊಳಕಾಲೂರಿ ಕುಳಿತು, ಅವನ ಹಣೆ ಮುಟ್ಟುತ್ತಾನೆ. ಮತ್ತೆ ಗಾಲವಾದಿಗಳ ಕಡೆ ಮೊಗದಿರುಹಿ]

ಚಂದ್ರಹಾಸ : ಪುರೋಹಿತರೆ, ಮದನಗಿನ್ನೂ ಹರಣ ಹೋದಂತಿಲ್ಲ !

ಗಾಲವ : (ಬಂದು ಮುಟ್ಟಿನೋಡಿ)

ಹೌದು, ರಕ್ತಸ್ರಾವದಿಂ ಪ್ರಜ್ಞೆ ತಪ್ಪಿಹನೆಂದೆ
ತೋರುತಿದೆ. ಮಂತ್ರೌಷಧಿಗಳಿಂ, ಭಿಷಗ್ವರರ
ವೈದ್ಯೋಪಚಾರದಿಂ ನಿಷ್ಪ್ರಾಪನೀತನಂ
ಬದುಕಿಸಲ್ ಭಗವತ್ ಕೃಪಾಶಕ್ತಿ ಸಾಧ್ಯಂ !

[ತೆಕ್ಕನೆ ಅಂತರಿಕ್ಷದಲ್ಲಿ ಎಂಬಂತೆ ಸುಮಧುರ ಗಾನ ಕೇಳಿಸುತ್ತದೆ. ಚಂದ್ರಹಾಸನಂತೆ ಇತರರೂ ತಲೆಯೆತ್ತಿ ಆಲಿಸುತ್ತಿರುವಂತೆಯೆ ತರೆ ಇಳಿಯುತ್ತದೆ.]

ದೃಶ್ಯ ೧೦

[ಅಂತರಿಕ್ಷದಲ್ಲಿ ಮೇಘಪಂಕ್ತಿಯ ಮಧ್ಯೆ ಕಾಣಿಸಿಕೊಂಡು ಭಕ್ತಿ, ಪ್ರಾರ್ಥನಾ ಮತ್ತು ಕೃಪಾದೇವಿಯರು ಹಾಡುತ್ತಿರುತ್ತಾರೆ.]

ಭಕ್ತಿದೇವಿ : ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ,

ಪ್ರಾರ್ಥನಾದೇವಿ : ಅಮೃತೋ ಭವತಿ,

ಕೃಪಾದೇವಿ : ತೃಪ್ತೋ ಭವತಿ !

ಭಕ್ತಿದೇವಿ : ಯತ್ ಪ್ರಾಪ್ಯ ನ ಕಿಂಚಿದ್ ವಾಂಛತಿ,

ಪ್ರಾರ್ಥನಾದೇವಿ : ನ ಶೋಚತಿ, ನ ದ್ವೇಷ್ಟಿ,

ಕೃಪಾದೇವಿ : ನ ರಮತೇ, ನೋತ್ಸಾಹೀ ಭವತಿ !

ಭಕ್ತಿದೇವಿ : ಯತ್ ಜ್ಞಾತ್ವಾ ಮತ್ತೋ ಭವತಿ,

ಪ್ರಾರ್ಥನಾದೇವಿ : ಸ್ತಬ್ಧೋ ಭವತಿ,

ಕೃಪಾದೇವಿ : ಆತ್ಮರಾಮೋ ಭವತಿ !

ಭಕ್ತಿದೇವಿ : ತೀರ್ಥೀಕುರ್ವನ್ತಿ ತೀರ್ಥಾನಿ,

ಪ್ರಾರ್ಥನಾದೇವಿ : ಸುಕರ್ಮೀಕುರ್ವನ್ತಿ ಕರ್ಮಾಣಿ,

ಕೃಪಾದೇವಿ : ಸಚ್ಛಾಸ್ತ್ರೀಕುರ್ವನ್ತಿ ಶಾಸ್ತ್ರಾಣಿ !

ಭಕ್ತಿದೇವಿ : ಮೋದಂತೇ ಪಿತರೋ,

ಪ್ರಾರ್ಥನಾದೇವಿ : ನೃತ್ಯಂತಿ ದೇವತಾಃ,

ಕೃಪಾದೇವಿ : ಸನಾಥಾ ಚೇಯಂ ಭೂರ್ಭವತಿ !

[ಮೂವರೂ ಒಟ್ಟಿಗೆ ನರ್ತಿಸುತ್ತಾ ಹಾಡುತ್ತಾರೆ:
" ಮೋದಂತೇ ಪಿತರೋ ನೃತ್ಯಂತಿ ದೇವತಾಃ
ಸನಾಥಾ ಚೇಯಂ ಭೂರ್ಭವತಿ ! "]

ಪರದೆ ಬೀಳುತ್ತದೆ.

—ಕುವೆಂಪು

‘ಮಾನಸೋಲ್ಲಾಸ’ದಲ್ಲಿ ಛಂದಸ್ಸು

ಕಲ್ಯಾಣಿಯ ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ ಆರನೆಯ ವಿಕ್ರಮಾದಿತ್ಯನ ಮಗ ಮೂರನೆಯ ಸೋಮೇಶ್ವರ ಅಥವಾ ಭೂಲೋಕಮಲ್ಲನು ೧೧೨೬ರಿಂದ ೧೧೩೮ರ ವರೆಗೆ ರಾಜ್ಯಭಾರಮಾಡುತ್ತಿದ್ದು ‘ಅಭಿಲಷಿತಾರ್ಥ ಚಿಂತಾಮಣಿ’ ಅಥವಾ ‘ಮಾನಸೋಲ್ಲಾಸ’ವೆಂಬ ಗ್ರಂಥವನ್ನು ೧೧೨೯ರಲ್ಲಿ ಬರೆದನೆಂಬ ವಿಷಯ ಕರ್ಣಾಟಕದ ಚರಿತ್ರೆಯಲ್ಲಿ ಸುವಿದಿತವಾಗಿದೆ. ಈ ಗ್ರಂಥವನ್ನು ಬರೆದದ್ದರಿಂದ ಆ ರಾಜನಿಗೆ ಸರ್ವಜ್ಞಚಕ್ರವರ್ತಿನ್ ಎಂಬ ಹೆಸರುಂಟಾದ ಹಾಗೆ ಕಾಣುತ್ತದೆ. ಈ ಮಹಾಗ್ರಂಥದ ಮೊದಲ ಮೂರು ಪ್ರಕರಣಗಳು ‘ಅಭಿಲಷಿತಾರ್ಥ ಚಿಂತಾಮಣಿ’ ಎಂಬ ಶೀರ್ಷಿಕೆಯೊಡನೆ ಡಾ|| ಆರ್. ಶಾಮಶಾಸ್ತ್ರಿಯವರಿಂದ ಪರಿಷ್ಕೃತವಾಗಿ ಮೈಸೂರಿನ ಓರಿಯಂಟಲ್ ಲೈಬ್ರೆರಿಯಿಂದ ಅಚ್ಚಾಗಿ ಪ್ರಕಟವಾಯಿತು ೧೯೨೬ರಲ್ಲಿ. ಬರೋಡಾದ “ಗಾಯಕ್‌ವಾರ್ ಓರಿಯಂಟಲ್ ಸೀರೀಸ್” ಎಂಬ ಗ್ರಂಥಮಾಲೆಯಲ್ಲಿ ಈ ಗ್ರಂಥದ ಮೊದಲ ಮೂರು ಪ್ರಕರಣಗಳೂ, ನಾಲ್ಕನೆಯದರಲ್ಲಿ ಎಂಟು ಅಧ್ಯಾಯಗಳೂ ಶ್ರೀ ಜಿ. ಕೆ., ಶ್ರೀಗೊಂಡೇಕರ್ ಎಂಬವರಿಂದ ಸಂಪಾದಿತವಾಗಿ ಎರಡು ಭಾಗಗಳಲ್ಲಿ ೧೯೨೫ರಲ್ಲೂ, ೧೯೩೯ರಲ್ಲೂ ಪ್ರಕಟವಾದುವು; ಈಗ (೧೯೬೧) ಚತುರ್ವಿಂಶತಿಯಲ್ಲಿ ಉಳಿದ ಐದು ಅಧ್ಯಾಯಗಳೂ, ಪಂಚವಿಂಶತಿಯೂ ಪ್ರಕಟವಾಗಿ ಗ್ರಂಥವು ಪರಿಪೂರ್ಣವಾಗಿದೆ. ಇದು ಒಂದು ಸಣ್ಣ ವಿಶ್ವಕೋಶವಿದ್ದಂತೆ ಇದೆ; ಆ ಕಾಲದಲ್ಲಿ ಪ್ರಚುರವಾಗಿದ್ದ ಶಾಸ್ತ್ರಗಳ ಮತ್ತು ಕಲೆಗಳ ಪರಿಚಯವನ್ನು ಇದು ಉಂಟುಮಾಡಿಕೊಡುತ್ತದೆ. ಗ್ರಂಥಕರ್ತನ ಮಾತುಗಳಲ್ಲಿ “ಕಾಮಧೇನುರಿದಂ ಶಾಸ್ತ್ರಂ”; “ನಾಸ್ತ್ಯನೇನ ಸಮಂ ಶಾಸ್ತ್ರಂ ಸರ್ವವಸ್ತು ಪ್ರಕಾಶನೇ”. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ಅರ್ಥಶಾಸ್ತ್ರ ಮುಂತಾದ ನೂರು ವಿಷಯಗಳಲ್ಲಿ ಒಂದೊಂದು ಈ ಗ್ರಂಥದಲ್ಲಿರುವ ೧೦೦ ಅಧ್ಯಾಯಗಳಲ್ಲಿ ಒಂದೊಂದಕ್ಕೆ ವಸ್ತುವಾಗಿದೆ. ಚತುರ್ಥವಿಂಶತಿಯ ಹದಿನಾರನೆಯ ಅಧ್ಯಾಯದಲ್ಲಿ ಛಂದಸ್ಸಿನ ವಿಷಯವಾಗಿ ಕೆಲವು ಅಂಶಗಳು ಪ್ರತಿಪಾದಿತವಾಗಿವೆ(೨೦೦-೫೬೭ ಶ್ಲೋಕಗಳು). ಈ ಶ್ಲೋಕಗಳಲ್ಲಿ ೩೫೯ರಿಂದ ೩೬೦ರ ಮಧ್ಯದಲ್ಲಿ, ಒಂದು ಪ್ರತಿಯಾದ **D**ಯಲ್ಲಿ ೨೧೦ ಪದ್ಯಗಳನ್ನುಳ್ಳ ಭಿನ್ನಪಾಠವಿದೆ. ಈಗ ಈ ಭಾಗದಲ್ಲಿ ನಿರೂಪಿತವಾಗಿರುವ ಛಂದಸ್ಸಿನ ಕೆಲವು ಅಂಶಗಳನ್ನು ಕೆಳಗೆ ಸಂಗ್ರಹವಾಗಿ ಕೊಡಲು ಪ್ರಯತ್ನಿಸಿದೆ. ಇದರಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಛಂದಸ್ಸುಗಳಲ್ಲಿ ಕೆಲಕೆಲವು ಉಕ್ತವಾಗಿವೆ.

ರಾಗಗಳ ಲಕ್ಷಣವನ್ನು ಹೇಳಿದ ಮೇಲೆ ಪ್ರಬಂಧಗಳ ಲಕ್ಷಣವನ್ನು ಹೇಳಿದೆ. ಪದಾಂತರದಲ್ಲಿ ಸ್ವರನ್ಯಾಸಮಾಡುವುದರಿಂದ ವೃತ್ತಜಾತಿಗಳು ಹಾಡಲ್ಪಡುತ್ತವೆ; ಅಲ್ಲಿ ತಾಳನಿಯಮವಿಲ್ಲ, ಛಂದಸ್ಸೇ ಮುಖ್ಯ. ಈ ಛಂದಸ್ಸುಗಳ ಪ್ರಭೇದಗಳನ್ನು

ವರ್ಣಮಾತ್ರಾದಿ ಸಂಖ್ಯೆಗಳಿಂದ ಉದಾಹರಣ ಸಮೇತವಾಗಿ ನಿರೂಪಿಸಿದೆ. ಇಲ್ಲಿ ಪ್ರಬಂಧಗಳೆಂದರೆ ಬಗೆಬಗೆಯ ವೃತ್ತಜಾತಿಗಳು ಎಂಬರ್ಥವಿರುವಂತೆ ತೋರುತ್ತದೆ. ಆರಂಭದಲ್ಲಿ ಶ್ಲೋಕದ ಲಕ್ಷಣ ಹೇಳಿದೆ; ಅದಕ್ಕೆ ಒಂದು ಉದಾಹರಣೆಯೂ ಇದೆ. ಅನಂತರ ಮಗಣಾದಿ ಅಷ್ಟಗಣಗಳ ನಿರೂಪಣೆ ಒಂದು ವೃತ್ತದಲ್ಲಿ ಹೇಳಿದೆ.[1] ಶಿಶುಭೃತಾ (ನನಮ), ರುಕ್ಮವತೀ (ಭಮಸಗು), ಇಂದ್ರವಜ್ರ (ತತಜ ೨ ಗು), ವಂಶಸ್ಥ (ಜತಜರ), ಪ್ರಹರ್ಷಿಣೀ (ಮನಜರಗು), ವಸಂತತಿಲಕಾ (ತಭಜಜ ೨ ಗು), ಮಾಲಿನೀ (ನನಮಯಯ; ೮, ೭ರಲ್ಲಿ ಯತಿ), ವಾಣಿನೀ (ನಜಭಜರಗು), ಮಂದಾಕ್ರಾಂತ (ಮಭನತತ ೨ ಗು), ಕುಸುಮಿತಲತಾವೇಲ್ಲಿತಂ (ಮತನಯಯಯ), ಶಾರ್ದೂಲ ವಿಕ್ರೀಡಿತ (ಮಸಜಸತತಗು), ಸುವದನಾ (ಮರಭನಯಭಲಗು), ಸ್ರಗ್ಧರಾ (ಮರಭನಯಯಯ), ಭದ್ರಕ (ಭರನರನರನಗು), ಅಶ್ವಲಲಿತಂ (ನಜಭಜಭಜಭಲಗು), ತನ್ವೀ (ಭತನಸಭಭನಯ), ಕ್ರೌಂಚಪದ (ಭಮಸಭ ನನನನ ಗು), ಅಪವಾಹಕರಿ (ಮ ೬ ನಸ ೨ ಗು)—ಈ ವೃತ್ತಗಳ ಲಕ್ಷಣಗಳೂ, ಒಂದೊಂದಕ್ಕೂ ಒಂದೊಂದು ಉದಾಹರಣ ಪದ್ಯವೂ ಅನಂತರ ಉಕ್ತವಾಗಿವೆ. ಉದಾಹರಣೆಯ ಪದ್ಯಗಳೆಲ್ಲ ವಿಷ್ಣುಸ್ತುತಿ ರೂಪವಾಗಿವೆ. ಗ್ರಂಥ ವಿಸ್ತಾರಭೀತಿಯಿಂದ ವೃತ್ತಗಳ ಅನಂತವಾದ ಅವಾಂತರ ಭೇದಗಳನ್ನು ಹೇಳಿಲ್ಲ. ಇದಾದ ಮೇಲೆ, ವೃತ್ತ ಎಂಬ ಹೆಸರುಳ್ಳ ಒಂದು ವೃತ್ತದ ಲಕ್ಷಣವನ್ನು ಹೇಳಬೇಕೆಂದು ಕೆಲವರು ಮತಂಗನ ಮತಾನುಸಾರವಾಗಿ ಹೇಳುತ್ತಾರೆಂದು ತಿಳಿಸಿ, ಪ್ರತಿ ಪಾದದಲ್ಲಿಯೂ ರಗಣ, ಜಗಣಗಳು ಮೂರು ಸಲ ಬಂದು ಕೊನೆಯಲ್ಲಿ ಗುರು ಲಘುಗಳಿದ್ದರೆ ಆ ವೃತ್ತಕ್ಕೆ ವೃತ್ತವೆಂಬ ಹೆಸರೆಂದು ನಿರೂಪಿಸಿ,

> ವಚ(ವೇಧ)ಸಾ ಮನೋಹರ ಸ್ವರಸ್ತವಾಯೋ (ವಾಯ) ಗೇಯಮಾನ (ವೃತ್ತ) ಸಾಮ
> ರಾಜತೇ ಜಗತ್ತ್ರಯೇಽಪಿ ಯಸ್ಯ ದುಷ್ಟದೈತ್ಯವಂಶ ದಾಹಿಧಾಮ
> ಸರ್ವ ಪಾಪಹಾರಿ ಪಾವನಂ ಹರೇಃ ಸದಾ ಸ್ಮರಾಮಿ ತಸ್ಯ ನಾಮ
> ಕೀರ್ತಯಾಮಿವಾದ್ಭುತಂ ಚರಿತ್ರಮಸ್ಯ ವಿಷ್ಟಪತ್ರಯಿಾ ಲಲಾಮ ॥ ೪-೧೬-೨೪೫.

ಎಂಬ ಒಂದು ಲಕ್ಷ್ಯವನ್ನು ಕೊಟ್ಟಿದ್ದಾನೆ ಸೋಮಭೂಪ, ಗೀತವಿದ್ಯಾವಂತರಾದ ನರರ ಶಿಕ್ಷಣಾರ್ಥವಾಗಿ. ಮುಂದುವರಿಯುತ್ತಾ, ಸೋಮೇಶ್ವರನು ಗದ್ಯದ ಲಕ್ಷಣವನ್ನು

> ಪಾದಾನಾಂ ನಿಯಮೋ ನಾಸ್ತಿ ಛಂದೋ ಯತ್ರ ನ ವಿದ್ಯತೇ
> ಸಮಾಸಪದ ಭೂಯಿಷ್ಠಂ ತತ್ತು ಗದ್ಯಂ ನಿಗದ್ಯತೇ ॥ ೪-೧೬-೨೪೭.

---

[1] ಈ ವೃತ್ತ ನಾಗವರ್ಮನ ಛಂದೋಂಬುಧಿಯ ೧-೩೭ನೆಯ ಪದ್ಯದ ಸಂಸ್ಕೃತ ರೂಪವೆಂದು ತೋರುತ್ತದೆ.

ಎಂದು ನಿರೂಪಿಸಿ ಸುಮಾರು ೧೨ ಪಂಕ್ತಿಗಳಷ್ಟು ದೀರ್ಘವಾದ ವಿಷ್ಣುಸ್ತುತಿ ರೂಪವಾದ ಒಂದು ಗದ್ಯವನ್ನು ಕೊಟ್ಟಿದ್ದಾನೆ. ಈ ಗದ್ಯವು ಸ್ವರಸಂಯುಕ್ತವೆಂದೂ ತಾಲವಿವರ್ಜಿತವೆಂದೂ ಪ್ರಾಂತ ತಾಲದಲ್ಲಿ ಹಾಡಬೇಕೆಂದೂ ಹೇಳಿ ದಂಡಕದ ಲಕ್ಷಣ ನಿರೂಪಣೆಗೆ ಗ್ರಂಥಕರ್ತ ತೊಡಗುತ್ತಾನೆ. ಪ್ರತಿ ಪಾದದ ಆದಿಯಲ್ಲಿ ಎರಡು ನಗಣಗಳೂ, ಅನಂತರ ಏಳು ರಗಣಗಳೂ ಬಂದು, ಬಹುಪಾದಗಳಿಂದ ಯುಕ್ತವಾಗಿದ್ದರೆ ಅದು ದಂಡಕವೆಂದು ಪರಿಕೀರ್ತಿತವಾಗುತ್ತದೆ; ಒಂದು ಉದಾಹರಣೆಯನ್ನು ಕೊಟ್ಟಿದೆ. ಮೊದಲನೆಯ ಪಾದದಲ್ಲಿ ೧೨ ಮಾತ್ರೆಗಳು, ಎರಡನೆಯದರಲ್ಲಿ ೧೮ ಮಾತ್ರೆಗಳು, ಮೂರನೆಯದರಲ್ಲಿ ೧೨ ಮಾತ್ರೆಗಳು, ನಾಲ್ಕನೆಯದರಲ್ಲಿ ೧೫ ಮಾತ್ರೆಗಳು—ಹೀಗೆ ಇದ್ದರೆ ಆರ್ಯಾವೃತ್ತವಾಗುತ್ತದೆ. ಇದಕ್ಕೇ ಪ್ರಾಕೃತದಲ್ಲಿ ಗಾಥಾವೃತ್ತವೆಂದು ಹೆಸರು. ಒಂದು ಮತ್ತು ಮೂರನೆಯ ಪಾದಗಳಲ್ಲಿ ಮೂರು ಗಣಗಳೂ (ಚತುಷ್ಕಲ) ಒಂದು ಗುರುವೂ, ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡೆರಡು ಚತುಷ್ಕಲಗಳೂ ಎರಡು ಗುರುವೂ ಇದ್ದರೆ ಅದು ದ್ವಿಪಥಕಂ ಎಂಬ ವೃತ್ತವಾಗುತ್ತದೆ; ಇಲ್ಲಿ ಜಗಣ ಬರಕೂಡದು; ಎರಡು ಮತ್ತು ನಾಲ್ಕನೆಯ ಪಾದಾಂತ್ಯದಲ್ಲಿ ಪ್ರಾಸವಿರಬೇಕು. ಉದಾಹರಣೆ :—

> ಕುವಲಯ ಕಿಸಲಯ ಕಾಂತಿರ್ವಃ
> ಸೌಖ್ಯಂ ವಿತರತು ವಿಷ್ಣುಃ
> ತ್ರಿಭುವನ | ಸಂಭವ | ಪರಿರ | ಕ್ಷಾಸಂ
> ಹರಣಪ್ರಭ ವಿಷ್ಣುಃ ‖[2] ೪-೬-೨೬೦.

ದ್ವಿಪಥಾ ಎಂಬ ಈ ಪ್ರಬಂಧವನ್ನು ಸ್ವರ ಸಂಯುಕ್ತವಾಗಿ, ತಾಲವರ್ಜಿತವಾಗಿ ಗೀತ ವಿದ್ಯಾವಿಶಾರದರು ಹಾಡಬೇಕು.

ಇಲ್ಲಿಂದ ಮುಂದಕ್ಕೆ ಮತ್ತೆ ಕೆಲವು ಸಂಸ್ಕೃತ ವರ್ಣವೃತ್ತಗಳು ಲಕ್ಷಣ ಲಕ್ಷ್ಯ ಯುಕ್ತವಾಗಿ ನಿರೂಪಿತವಾಗಿವೆ. ದೋಧಕ (೩ಭ+೨ಗು); ಇದನ್ನು "ಯೇನ ಕೇನಾಪಿ ತಾಲೇನ" ಹಾಡಬಹುದು ; ತೋಟಕ (೪ ಸಗಣಗಳು) ; ಇದು ಸಂಸ್ಕೃತದಲ್ಲಾಗಲಿ, ಪ್ರಾಕೃತದಲ್ಲಾಗಲಿ ಇರಬಹುದು; ಇದನ್ನು ಅಭೀಪ್ಸಿತವಾದ ರಾಗದಲ್ಲಿ 'ಯೇನಕೇನಾಪಿ ತಾಲೇನ' ಹಾಡಬೇಕು. ಇದಾದ ಮೇಲೆ ಅಡಿಲ್ಲಾ ಎಂಬ ಪ್ರಾಕೃತ ವೃತ್ತದ ಲಕ್ಷಣವನ್ನು ಉದಾಹರಣೆಯ ಸಮೇತ ಹೇಳಿದೆ[3]; ೪ ಪಾದಗಳು; ಪ್ರತಿಪಾದದಲ್ಲಿ ೧೬ ಮಾತ್ರೆಗಳು, ಪಾದಾಂತ್ಯದಲ್ಲಿ ಪ್ರಾಸವಿರಬೇಕು. ಆದಿಯಲ್ಲಿ ಒಂದು ಷಟ್ಕಲ, ಆಮೇಲೆ ಐದು ಚತುಷ್ಕಲಗಳು, ಪಾದಾಂತ್ಯಗಳಲ್ಲಿ ಗುರುವೂ ಇದ್ದರೆ ಅದು ದ್ವಿಪದೀ ಎಂಬ ವೃತ್ತವಾಗುತ್ತದೆ.

---

[2] ಇಲ್ಲಿ ನಾಲ್ಕನೆಯ ಪಾದದಲ್ಲಿ ಎರಡು ಮಾತ್ರೆಗಳು ಸಾಲವು.

[3] ಇದರಲ್ಲಿ ಮೂರೇ ಪಾದಗಳಿವೆ, ನಾಲ್ಕಿರಬೇಕು.

ಜಯಕೀರ್ತಿಯ 'ಛಂದೋನುಶಾಸನ'ದಲ್ಲಿ ಹೇಳಿರುವಂತೆ ರತಿ, ಮದನ ಗಣಗಳ ವಿಷಯವನ್ನು ಈ ಕೆಳಗಿನ ಶ್ಲೋಕಗಳಲ್ಲಿ ಸೂಚಿಸಿದೆ:

ಲಘ್ವಾದಿಷುಗಣೇಷ್ವಾದೌ ಕರ್ತವ್ಯಾಸಧಿಕೇ ಲಘುಃ
ಗುರ್ವಾಡಯಃ ಪ್ರಕೃತ್ಯೈವ ಸ್ಯುರೇತೇ ಮಾನ್ಮಥಾ ಗಣಾಃ ॥ ೪–೧೬–೨೭೬.

ತತ್ರಾದ್ಯಾನಾಂ ಚತುರ್ಣಾಂಚ ಪುರೋರಂತಸ್ಯ ಜಾಯತೇ
ರತಿ ಸಂಜ್ಞಾಮನಂಗೇನ ಗಣೈಶ್ಚತ್ವಾರ ಈರಿತಾಃ ॥ ೪–೧೬–೨೭೭

ಈ ಗಣಗಳಿಂದ ರಚಿತವಾಗಿರುವ ತ್ರಿಪದೀ ವೃತ್ತದ ಲಕ್ಷಣವನ್ನು ಕೆಳಗೆ ಕಂಡಂತೆ ಹೇಳಿದೆ:

ಆದ್ಯ ದ್ವಿತೀಯೌ ದ್ವಿಗಣೌ ತೃತೀಯಸ್ತು ಚತುರ್ಗಣಃ
ಚತುರ್ಥಸ್ತ್ರಿಗಣಾಃ ಪಾದೋ ಗಣಾಸ್ತ್ವೇಕಾಧಿಕಾದಶ ॥ ೪–೧೬–೨೭೮

ಷಷ್ಠಶ್ಚ ದಶಮಶ್ಚೈವ ಭವೇತ್ಕಾಮ ಪ್ರಿಯಾ (ಯೋ) ಗಣಾಃ (ಣಃ)
ಶೇಷಾ ಸ್ಮರಗಣಾ ಯಸ್ಯಾ ಸ್ತ್ರಿಪದೀ ಸಾ ನಿಗದ್ಯತೇ ॥ ೪–೧೬–೨೭೯

ಇದರಂತೆ ತ್ರಿಪದಿಯನ್ನು ನಾಲ್ಕು ಪಾದಗಳಂತೆ ಭಾವಿಸಬೇಕು. ಮೊದಲ ಪಾದದ ನಾಲ್ಕು ಗಣಗಳಲ್ಲಿ ಮೊದಲ ಎರಡು ಒಂದು ಪಾದ; ಅನಂತರದ ಎರಡು ಗಣಗಳು ಎರಡನೆಯ ಪಾದ; ಮೂರನೆಯ ಪಾದದಲ್ಲಿ ನಾಲ್ಕು ಗಣಗಳು; ನಾಲ್ಕನೆಯದರಲ್ಲಿ ಮೂರು ಗಣಗಳು; ಒಟ್ಟು ೧೧ ಗಣಗಳಿರುತ್ತವೆ. ಇವುಗಳಲ್ಲಿ ೬ನೆಯ ಮತ್ತು ೧೦ನೆಯ ಗಣಗಳು ಕಾಮಪ್ರಿಯಾ ಎಂದರೆ, ರತಿಗಣಗಳು (=ಬ್ರಹ್ಮ); ಉಳಿದ ೯ ಗಣಗಳು ಸ್ಮರಗಣಗಳು (=ವಿಷ್ಣು). ಇದಕ್ಕೆ

ಮೇದನೀ ವರ್ಣೇ ಸಲ್ಲೂಕಾ ದಿ ಯಣು ಮೀನಾಗಿ ವೇದವೋತ್ತಗೇಯ
ಗಿಪನೇ ಲತದೇಕದವನ ಪಾದಂಗಲಿಗೇ ಮಹಿಮೇಯಂ ॥

೪–೧೬–೨೮೦.

ಎಂಬ ಉದಾಹರಣೆಯಿದೆ. ಇದರ ಭಾಷೆ ಕನ್ನಡವಿರುವಂತೆ ತೋರುತ್ತದೆ. ಹ್ರಸ್ವ ಎ ಮತ್ತು ಒಕಾರಗಳು ಸಂಸ್ಕೃತದಲ್ಲಿಲ್ಲದಿರುವುದರಿಂದ ಅವಕ್ಕೆ ಪ್ರತೀಕವಾದ ಲಿಪಿ ದೇವನಾಗರಿಯಲ್ಲಿಲ್ಲ; ಇವುಗಳಿಗೆ ಏ ಮತ್ತು ಓಕಾರಗಳ ಚಿಹ್ನೆಗಳನ್ನೇ ಬಳಸಿದೆ. ಇದನ್ನು ಗಮನಿಸಿ ಈ ಪದ್ಯವನ್ನು, ಇದಕ್ಕೆ ಪಾಠಾಂತರಗಳೇನೂ ಇಲ್ಲದಿದ್ದರೂ ತಿದ್ದಿ ಬರೆಯಬಹುದು, ಸರಿಸುಮಾರಾಗಿ :

ಮೇದಿನಿ ವರ್ಣಿಸಲ್ಕಾದಿಯೊಳ್ ಮೀನಾಗಿ
ವೇದವೊತ್ತಗೆಯನೆತ್ತಿ ತಂದಿತ್ತವನ
ಪಾದಂಗಳೀಗೆ ಮಹಿಮೆಯಂ ॥

ತ್ರಿಪದಿಯಲ್ಲಿ ಬರುವ ಪ್ರಾಸದ ಸ್ವರೂಪವನ್ನೂ, ಅದನ್ನು ಹಾಡುವ ವಿಧಾನವನ್ನೂ ಈ ಕೆಳಗಿನ ಶ್ಲೋಕಗಳು ತಿಳಿಸುತ್ತವೆ:

ದ್ವಿತೀಯಮಕ್ಷರಂ ಪಾದೇ ಪ್ರಾಣಾಕ್ಷರಮಿತಿ ಸ್ಮೃತಮ್
ಪಾದೇಷ್ವಾವರ್ತತೇ ತತ್ತು ಸ್ವರಸ್ಯ ನಿಯಮೋ ನ ಹಿ ॥ ೨೮೧

ಆದ್ಯಂ ಪಾದದ್ವಯಂ ಗೀತ್ವಾ ಕಿಂಚಿಚ್ಛೇಷಂ ತೃತೀಯಕಮ್
ತೃತೀಯಂ ಪುನರಾವರ್ತ್ಯ ಚತುರ್ಥಂ ಪರಿಗೀಯತೇ ॥ ೨೮೨

ಪ್ರತಿ ಪಾದದ ಎರಡನೆಯ ಅಕ್ಷರ ಪ್ರಾಸಾಕ್ಷರ; ಇದನ್ನು ಪ್ರಾಣಾಕ್ಷರವೆಂದು ಇಲ್ಲಿ ಕರೆದಿದೆ; ಈ ಅಕ್ಷರದೊಡನೆ ಇಂಥ ಸ್ವರವಿರಬೇಕೆಂಬ ನಿಯಮವೇನೂ ಇಲ್ಲ; ಹಾಡುವಾಗ ಮೊದಲಿನ ಎರಡು ಪಾದಗಳನ್ನೂ, ಮೂರನೆಯ ಪಾದದ ಸ್ವಲ್ಪ ಭಾಗವನ್ನೂ ಹೇಳಿ, ಅನಂತರ ಅದನ್ನು ಪುನರಾವೃತ್ತಿ ಮಾಡಿ ಮೂರನೆಯ ಪಾದವನ್ನು ಮುಗಿಸಿ, ಆಮೇಲೆ ನಾಲ್ಕನೆಯ ಪಾದವನ್ನು ಹಾಡಬೇಕು.

ತ್ರಿಪದಿಯ ವಿಷಯ ಮುಗಿದ ಮೇಲೆ ಚತುಷ್ಪದಿಯ ಲಕ್ಷಣ ಉಕ್ತವಾಗಿದೆ. ಪ್ರತಿಪಾದದಲ್ಲಿ ೧೬ ಮಾತ್ರೆಗಳುಳ್ಳದ್ದು, ೨೧ ಮಾತ್ರೆಗಳುಳ್ಳದ್ದು, ೨೪ ಮಾತ್ರೆಗಳುಳ್ಳದ್ದು—ಎಂದು ಇದರಲ್ಲಿ ಮೂರು ಬಗೆಗಳಿವೆ. ಯಾವುದಾದರೂ ತಾಳದಲ್ಲಿ, ಅಭಿಮತವಾದ ರಾಗದಿಂದ ಸ್ವರಸಂಯುಕ್ತವಾಗಿ ಗೀತಜ್ಞರು ಇದನ್ನು ಹಾಡಬಹುದು.

ತ್ರಿಪದೀ ವಿಷಯವನ್ನು ಹೇಳುವ ಮುನ್ನ ರತಿ ಮದನ ಗಣಸ್ವರೂಪವನ್ನು ಹೇಳಿದೆ; ಬಾಣಗಣದ ವಿಷಯವನ್ನು ಅಲ್ಲಿ ಹೇಳಿಲ್ಲ. ಚತುಷ್ಪದಿಯ ವಿಷಯ ಮುಗಿದ ಮೇಲೆ

ಗಣಾನಾಂ ಕಾಮ ಸಂಜ್ಞಾನಾಂ ಚತುರ್ಣಾಂ ಪುರತೋ ಗುರುಃ
ಅಷ್ಟಾನಾಂ ಲಘುವಸ್ತದ್ವದ್ ಗಣಾಃ ಷೋಡಶ ಬಾಣಕಾಃ ॥ ೨೮೬

ಎಂದು ೧೬ ಬಾಣಗಣಗಳ (=ರುದ್ರಗಣ) ಸ್ವರೂಪವನ್ನು ತಿಳಿಸಿದೆ. ಈ ಗಣಗಳ ಪ್ರಯೋಗವನ್ನು ಹೊಂದಿರುವ ಷಟ್ಪದಿಯ ಲಕ್ಷಣವನ್ನು ಈ ಕೆಳಗಿನ ಶ್ಲೋಕದಲ್ಲಿ ಹೇಳಿದೆ:

ಪಾದೇ ಪಾದೇ ತು ಕರ್ತವ್ಯೌ ದ್ವೌ ಗಣೌ ಮಾನ್ಮಥಸ್ತ್ರಿಷು
ಅಂತೇ ಬಾಣಸ್ತು ಷಟ್ಪದ್ಯಾಮುತ್ತರಾರ್ಧಂ ತಥೈವ ಚ ॥ ೨೮೭

ಷಟ್ಪದಿಯ ಪೂರ್ವಾರ್ಧದಲ್ಲಿ ಪ್ರತಿಪಾದದಲ್ಲೂ ಎರಡೆರಡು ಮನ್ಮಥಗಣ(=ವಿಷ್ಣು) ಗಳೂ, ಮೂರನೆಯ ಪಾದಾಂತ್ಯದಲ್ಲಿ ಒಂದು ಬಾಣಗಣವೂ (=ರುದ್ರ) ಇರಬೇಕು; ಇದರಂತೆ ಉತ್ತರಾರ್ಧವೂ ಇರುತ್ತದೆ. ಇದಕ್ಕೆ ಕೊಟ್ಟಿರುವ ಉದಾಹರಣೆ:

ಗಡಣದಿ ತುರಗನ ಮೇಡೇ ಚರ್ಣ್ಣಗಲ ದೀಪ್ತಿಃ |
'ಗೇಡೇ ಗೋಂಡ ತಮಗೇಶ್ವಿ ಚಾರತಿಯಾ ಸೋದಿರ್ಗಲ ಫೋಲೇ |
ಪಾತುಲು ಗಡ ತೋಲಹೀ ವಿಷುಕು ಇತಿ ಕೇನ ಮಂಗಿಸ್ವಸಂಸಿದ್ಧಿಯ ‖ ೨೮೮.

ಇದಕ್ಕೆ D ಪ್ರತಿಯಲ್ಲಿರುವ ಪಾಠಾಂತರ :

ಗಡಣದಿಂದುರಗಣ ಪೇಡೇವಣಿಗಲದೀಪ್ತಿ |
ಗೇಡೇ ಗೋಂಡು ತವಗೇತ್ತಿವಾರತಿಯಾ ಸೋಡಿರ್ಗಲ ಪಾಲಿಪಾಲುಗಡಲೋ
ಲಿರ್ದ್ದಾ ವಿಷ್ಣುಕು ಇತಿ ವೇ ನಮುಗ್ಗಿಸ್ತಸಂಸಿದ್ಧಯ |

ಇದರ ಸಹಾಯದಿಂದ ಈ ಪದ್ಯದ ಪಾಠವನ್ನು ಹೀಗೆ ಪರಿಷ್ಕರಿಸಬಹುದು :

ಗಡಣದಿಂದುರಗನ
ಪೆಡೆವಣಿಗಳ ದೀಪ್ತಿ
ಗೆಡೆಗೊಂಡು ತಮಗೆತ್ತುವಾರತಿಯಾ
ಸೊಡರ್ಗಳ ಫೋಲೆ ಪಾ
ಲ್ಗಡಲೊಳಿರ್ದಾ ವಿಷ್ಣು
ಕುಡುತಿಕ್ಕೆ ನಮಗಿಷ್ಟ ಸಂಸಿದ್ಧಿಯಂ ‖

ಇದು ಛಂದಸ್ಸಿನ ದೃಷ್ಟಿಯಿಂದ ನಿರ್ದುಷ್ಟವಾಗಿರುವ ಷಟ್ಪದಿ. ನಾಗವರ್ಮಾದಿಗಳು ಹೇಳಿರುವ ಲಕ್ಷಣದಂತೆ ಇದರಲ್ಲಿ ೧, ೨, ೪, ೫ನೆಯ ಪಾದಗಳಲ್ಲಿ ಎರಡೆರಡು ವಿಷ್ಣು ಗಣಗಳೂ (=ಮದನ), ೩ ಮತ್ತು ೬ನೆಯ ಪಾದಗಳಲ್ಲಿ ಎರಡು ವಿಷ್ಣುಗಣಗಳೂ (=ಮದನ), ಒಂದು ರುದ್ರಗಣವೂ (=ಬಾಣ) ಇರುವುದು ವಿಶದವಾಗಿದೆ. ಇತರರಂತೆ ಇದನ್ನು ಷಟ್ಪದ ಎಂದು ಕರೆಯದೆ ಷಟ್ಪದಿ ಎಂದು ಹೆಸರಿಸಿರುವುದನ್ನು ನೋಡಬಹುದು. ಈ ಷಟ್ಪದಿಯ ವಿಚಾರವಾಗಿ

ಕರ್ಣಾಟಭಾಷಯಾ ಗೇಯಾ ಪ್ರಾಣಾಕ್ಷರ ಸಮನ್ವಿತಾ
ಷಟ್ಪದೀ ತಾಲರಹಿತಾ ಸಾನುಪ್ರಾಸಾ ಕಥಾತ್ಮಿಕಾ ‖ ೨೮೯.

ಎಂಬ ಪದ್ಯವಿದೆ. ಇದು ಕರ್ಣಾಟಭಾಷೆಯಲ್ಲಿ ಹಾಡತಕ್ಕದ್ದು; ಪ್ರಾಣಾಕ್ಷರ (ಪ್ರಾಸ)ಗಳನ್ನುಳ್ಳದ್ದು; ತಾಳರಹಿತವಾದದ್ದು; ಅನುಪ್ರಾಸಾತ್ಮಕವಾದದ್ದು; ಕಥೆಯನ್ನು ಒಳಕೊಂಡಿರುವುದು. ಕಥನಕಾವ್ಯಗಳಿಗೆ ಈ ವೃತ್ತವನ್ನು ಬಳಸುತ್ತಿದ್ದರೆಂದು ಊಹಿಸಬಹುದು.

ಪ್ರಥಮ ಪಾದದಲ್ಲಿ ದ್ವಾದಶ ಮಾತ್ರೆಗಳೂ, ದ್ವಿತೀಯ ಪಾದದಲ್ಲಿ ಇಪ್ಪತ್ತು ಮಾತ್ರೆಗಳೂ, ಮತ್ತು ಹೀಗೆಯೇ ಉತ್ತರಾರ್ಧವೂ ಇದ್ದರೆ ಅದು ಕಂದಪದ್ಯ ವಾಗುತ್ತದೆ. ಇದಕ್ಕೆ ಉದಾಹರಣೆ :—

ಕೌಸ್ತುಭರುಚಿಯನ್ತನ್ಕುರದೋಲು ಕೇಃಣುಗಿಲ ವೋಹೇರಯ ವಿದ್ಯಾ ಚ ವಿಯಂನಿ
ರೇಪತರಂಜಿಯ ಸುರಗುರು ಪರಿವೃನ್ದನೇಮುಗೀಗೇ ವಿಷ್ಣುರ್ವಡಿದ ಛರಮೀ ‖ ೨೯೧.

ಇದಕ್ಕೆ D ಪ್ರತಿಯಲ್ಲಿ ಪಾಠಾಂತರ:

> ಸಿರಿಕೌಸ್ತುಭರುಚಿಯಂ ತತ್ಸುರದೋಲು ಕೋಸ್ಫುಲಿಂಗಯೋರಪವಿದ್ಯಾಧವಿಯಂತಿ
> ರಪರಿರಂಜಿಷ ಪುರಗಣಪರ ದೃಢನೇಮುಗೀಗೇ ವೇಷು ವೇಡಿದ ಪರಮಾ ॥

ಡಾ॥ ಶಾಮಶಾಸ್ತ್ರಿಗಳು ಕೊಟ್ಟಿರುವ ಪಾಠ:

> ಕೌಸ್ತುಭರುಚಿಯಂತಿಂ ನೃಕರದೊಲುಕೇಃ ನುಗಿಲ ಪೋನೇರಯ ವಿದ್ಯುಚ್ಛ
> ವಿಯವಿಯನ್ ನಿರೆ ಪಲರಂಜಿಪ ಸುರಗು ಸುಪರಿವೃನ್ದ ಹೆಮುಗಿಗೆ
> ವಿಷ್ಣುರ್ವರದಿದ ಚರಮಿ ॥

ಈ ಪದ್ಯದ ಸರಿಯಾದ ಪಾಠ ಕೆಳಗೆ ಕಂಡಂತೆ ಇರಬೇಕೆಂದು ಡಾ॥ ಶಾಮಶಾಸ್ತ್ರಿಗಳು ಕಾಣಿಸಿದ್ದಾರೆ:

> ಕೌಸ್ತುಭರುಚಿಯುಂ ತನ್ನಯುರಸ್ಥಲದೊಲ್ಕರಮುದುಲ್ಕೆ ಮುಗಿಲೊಳ್ನಿರೆ ವಿದ್ಯುಚ್ಛ
> ವಿಯಂತಿರೆ ರಂಜಿಪನಚ್ಯುತನೆಮಗೀಗೆ ವಿಷ್ಣು ಬೇಡಿದ ವರಮಂ ॥

ಮೇಲಿನ ಪದ್ಯದಲ್ಲಿ ಪ್ರಾಸಾಕ್ಷರವೇ ಇಲ್ಲದಂತಾಗಿದೆ; ಆದ್ದರಿಂದ ಈ ಪರಿಷ್ಕರಣ ಸಾಧುವಾಗಿಲ್ಲ. ಅಲ್ಲದೆ ಪಾದಗಳನ್ನಾಗಿ ಪದ್ಯವನ್ನು ವಿಂಗಡಿಸಿಲ್ಲ. ಕೌಸ್ತುಭರುಚಿಯುಂ ಎಂಬಲ್ಲಿನ ಉಂ ಸಮುಚ್ಚಯಕ್ಕೆ ಏನೂ ಸಾರ್ಥಕತೆ ಇಲ್ಲ. ಇವನ್ನೆಲ್ಲ ಗಮನಿಸಿ ಪದ್ಯದ ಪಾಠವನ್ನು ಕೆಳಗೆ ಕೊಟ್ಟಿರುವಂತೆ ಪರಿಷ್ಕರಿಸಿದೆ:

> ಸಿರಿಕೌಸ್ತುಭರುಚಿಯಂ ತ
> ಳ್ತುರದೊಳ್ ಕಾರ್ಮುಗಿಲ ಪೊಣರ ವಿದ್ಯುಚ್ಛವಿಯಂ
> ತಿರೆ ಪರಿರಂಜಿಪ ಸುರಗಣ
> ಪರಿವೃಢನೆಮಗೀಗೆ ವಿಷ್ಣು ಬೇಡಿದ ವರಮಂ ॥

ಛಂದಸ್ಸಿನ ದೃಷ್ಟಿಯಿಂದ ಈ ಪರಿಷ್ಕರಣ ಸರಿಯಾಗಿದೆಯೆಂದು ಹೇಳಬಹುದು. ಗಾನದ ದೃಷ್ಟಿಯಿಂದ ಇದು ತಾಲಶೂನ್ಯವೆಂದು ಹೇಳಿದೆ:

> ಸ ತಾಲಶೂನ್ಯ ಪದ್ಯೈ[ಶ್ಚತುರ್ಭಿ]ಶ್ಚ ಸಮನ್ವಿತಃ
> ಕರ್ಣಾಟಭಾಷಯೈವಾಸೌ ಗೀಯತೇ ಕಂದ ಸಂಜ್ಞಕಃ ॥ ೨೯೨

ಇದನ್ನೇ ಕರ್ಣಾಟಭಾಷೆಯಲ್ಲಿ ಬಿರುದುಗಳಿಂದ ಕೂಡಿರುವುದಾಗಿ, ವರ್ಣತಾಲದಿಂದ ಹಾಡಿದರೆ ಇದಕ್ಕೆ ವರ್ಣ ಎಂಬ ಹೆಸರುಂಟಾಗುತ್ತದೆ. ಇದಾದ ಮೇಲೆ ವಸ್ತು ಎಂಬ ಹೆಸರಿನ ಪ್ರಬಂಧದ ಲಕ್ಷಣ ಲಕ್ಷ್ಯಗಳು ಉಕ್ತವಾಗಿವೆ; ಲಕ್ಷ್ಯವು ಪ್ರಾಕೃತಭಾಷೆಯಲ್ಲಿದೆ. ಈ ಪ್ರಬಂಧವನ್ನು ನಾಟಕದಲ್ಲಿ ಕೂಡ ಹಾಡುತ್ತಾರೆ.

ಚರ್ಚರೀ : ಪ್ರತಿಪಾದದಲ್ಲೂ ೧೬ ಮಾತ್ರೆಗಳು; ಎರಡೆರಡು ಪಾದಗಳಿಗೆ ಪ್ರಾಸ; ಈ ತೆರನಾದ ಬಹುಪಾದಗಳಿಂದ ಕೂಡಿದ್ದರೆ ಅದಕ್ಕೆ ಚರ್ಚರೀ ಎಂದು

ಹೆಸರು. ರಾಗ ಹಿಂದೋಲಕ; ತಾಲ ಚರ್ಚರೀ; ಇದನ್ನು ವಸಂತೋತ್ಸವದಲ್ಲಿ ಹಾಡಬೇಕು, ಪ್ರಾಕೃತ ಭಾಷೆಯಲ್ಲಿ.

ಚಕ್ರವಾ (ತಾ) ಲಾ : ಇದು ಪದ್ಯದಲ್ಲಿಯಾದರೂ ಗದ್ಯದಲ್ಲಿಯಾದರೂ ಇರಬಹುದು. ಪಾದಕ್ಕೆ ಇಷ್ಟೇ ಮಾತ್ರೆಗಳೆಂಬ ನಿಯಮವೇನೂ ಇಲ್ಲವೆಂದು ತೋರುತ್ತದೆ. ಒಂದು ಪಾದದ ಅಂತ್ಯದಲ್ಲಿ ಬರುವ ಶಬ್ದದಿಂದ ಮುಂದಿನ ಪಾದ ಆರಂಭವಾಗುತ್ತದೆ; ಒಂದು ತೆರನಾದ ಮುಕ್ತಪದ ಗ್ರಹಣ ಇದೆ. ಉದಾಹರಣೆ :

ಕಮಲಾ ಕುಚ ಕಲಶ ಕೇಲಿ ಕಲ್ಪಿತ ಕಸ್ತೂರಿಕಾ ಪತ್ರಭಂಗ
ಪತ್ರಭಂಗ ವಿಷದಾನವ ಪೂತನಾ ಪ್ರಲಯಕರ
ಕರಕಲಿತ ಸುದರ್ಶನಾನುಗೃಹೀತ ಪುರಂದರ
ದರ ಚಕಿತ ಭಕ್ತಜನ ವತ್ಸಲ ಕೌಸ್ತುಭ ಪ್ರಭಾಜಾಲ ಸಹಸ್ರ
ರಚನಾವಿದಗ್ಧ
ದಗ್ಧ ನಿಖಿಲ ದುರಿತ ಭಗವನ್ನಾರಾಯಣ ನಮಸ್ತೇ ‖ ೩೦೫

ಜಯಮಾಲಿಕಾ : ಜಯ ಶಬ್ದದಿಂದ ಆರಂಭವಾಗುವ ಪಾದಗಳಿರುತ್ತವೆ. ಇದರಲ್ಲಿ; 'ಯೇನಕೇನಾಪಿ ರಾಗೇನ' ಹಾಡಬಹುದು, ಜಯತಾಲದಲ್ಲಿ.

ಉದಾ. :—

ಜಯ ಭುಜ ಪರಿಘ ಧೃತ ಗೋವರ್ಧನ ಧರಾಧರ, -

ಇತ್ಯಾದಿ ೮ ಪಂಕ್ತಿಗಳು.

ಮಾತೃಕಾ : ಪಾದಾದಿಯಲ್ಲಿ ಮಾತೃಕಾಕ್ಷರವೊಂದೊಂದನ್ನು ನಿಯೋಜಿಸಿ ಯಾವ ವೃತ್ತದಲ್ಲಿಯಾದರೂ ಇರುವ ಪ್ರಬಂಧ :

ಅಸೌ ಶರಣ್ಯಃ ಶರಣಾಗತಾನಾಂ
ಆಕಾರ ಮಾಹಾತ್ಮ್ಯ ಪರಾಸ್ತಕಾಮಃ
ಇಷ್ಟಾರ್ಥದಾಯೀ ಸತತಂ ಪ್ರಜಾನಾಂ
ಈಶಾನ ಕಲ್ಪಃ ಕಲಿಕಾಲ ಜೇತಾ....

ಹೀಗೆ ಅಂ ಇಂದ ಆರಂಭವಾಗುವ ಪಂಕ್ತಿಯನ್ನೊಳಕೊಂಡ ಪಾದಗಳಿರುತ್ತವೆ. ಇಲ್ಲಿ ತಾಲನಿಯಮವಿಲ್ಲ. ರಾಗನಿಯಮವೂ ಇಲ್ಲ; ಇದನ್ನು ಸ್ವೇಚ್ಛೆಯಂತೆ ಹಾಡಬಹುದು. ಇದು 'ಪ್ರಬಂಧಾ ಮಾತೃಕಾನಾಮ.'

ಪದ್ದಲೀ (ಪದ್ಧಡೀ) : ಇದರ ಲಕ್ಷಣ :

ಸ್ವರೈಃ ಪಾಟೈಃ ಸ ಬಿರುದೈಸ್ತಾಲೇನ ಚ ಸಮನ್ವಿತಾ
ಕಯಾಪಿ ಭಾಷಯಾ ಕ್ಲುಪ್ತಾ ಯುಗ್ಮ ಪ್ರಾಸಾತು ಪದ್ಧಡೀ (ಪದ್ದಲೀ) ‖

ಇದರ ಲಕ್ಷ್ಯ :

ಜನಿತ ಕಮಲಾನಂದ ಪ್ರಣತ ಸುರ ಗೋವಿಂದ
ದನುಜ ಕುಲ ಸಂಹಾರ ಅಘಕಮಲ ನೀಹಾರ

ಭಕ್ತಜನ ಭಯಹರಣ ಸುರಸಂಘ ನತ ಚರಣ
ಪುಣ್ಯ ಸಂಚಯ ಸದನ ಸರಸಿರುಹನಿಭ ವದನ
ನೀಲ ಜಲಧರ ವರ್ಣ ಮಕರ ಕುಂಡಲ ಕರ್ಣ
ತರುಣ ರವಿನಿಭಚಕ್ರ ಸ್ವಭುಜ ಪಾಲಿತ ಚಕ್ರ
ಹತ ದೈತ್ಯ ಗಣದರ್ಪ ದಮಿತ ಕಾಲಿಯ ಸರ್ಪ
ಕಂಸ ಭುಜಬಲ ನಾಶ ದಕ್ಷ ॥ ೩೧೭

ಇದರ ಪ್ರತಿಪಾದದಲ್ಲೂ ನಾಲ್ಕು ಪಂಚಕಲಗಳಿವೆ. ಎರಡು ಗಣಗಳ ಅಂತ್ಯದಲ್ಲಿ ಪ್ರಾಸವಿದೆ. ಕೊನೆಯ ಪಾದದಲ್ಲಿ ಎರಡು ಪಂಚಮಾತ್ರಾಗಣಗಳು ಬಂದು ಮೂರು ಮಾತ್ರೆಯ ಒಂದು ಗಣ ಅಂತ್ಯದಲ್ಲಿದೆ. ಕನ್ನಡದ ಲಲಿತರಗಳೆಯಲ್ಲಿ ವೈವಿಧ್ಯಕ್ಕಾಗಿ ಈ ತೆರನಾದ ರಚನೆಯನ್ನು ಕೆಲವರು ಕವಿಗಳು ಮಾಡಿದ್ದಾರೆ. ಕ್ರಿ. ಶ. ೧೧೭೭ರಲ್ಲಿ ಲಿಖಿತವಾದ ಒಂದು ಶಾಸನದಲ್ಲಿ[4] ಲಲಿತರಗಳೆ ಕಂಡುಬರುತ್ತದೆ; ಅದರಲ್ಲಿ ಕೆಲವು ಪಂಕ್ತಿಗಳು :

ಸಾಹಸೋತ್ತುಂಗರುಂ ಹರಪಾದ ಭೃಂಗರುಂ
ಚಲದಂಕ ರಾಮರುಂ ಬಲಗರ್ವಭೀಮರುಂ
ಅಸಹಾಯ ಶೌರ್ಯರುಂ ಮೇರುಗಿರಿ ಧೈರ್ಯರುಂ
ಏಕೈಕ ವೀರರುಂ ಲೋಕೈಕ ಸೂರರುಂ....

ಎಂಬಿವು ಇಲ್ಲಿ ಹೇಳಿರುವ ಪದ್ಧಡಿಗೆ ಸಮಾನವಾಗಿವೆ. ಹರಿಹರನ 'ಪುಷ್ಪರಗಳೆ'ಯ ಅಂತ್ಯದಲ್ಲಿ ಹೀಗೆಯೇ ಹಲವು ಪಾದಗಳಿವೆ; ಇಲ್ಲಿ ಆದಿಪ್ರಾಸವನ್ನು ಆ ಕವಿ ಬಳಸಿದ್ದಾನೆ. ತಾಲಸಂಯುಕ್ತವಾಗಿ ಪದ್ಧಡಿಯನ್ನು ಯಾವ ಭಾಷೆಯಲ್ಲಾದರೂ ಹಾಡಬಹುದೆಂದು ಹೇಳಿದೆ :

ಈದೃಕ್ ಪದ್ಧಡಿಕಾ ಪ್ರಾಂತೇ ಸ್ವರಾಃ ಪಾಟಾಶ್ಚ ಕೋವಿದೈಃ
ತಾಲೇನ ಸಂಯುತಾ ಗೇಯಾ ಭಾಷಯಾ ತು ಯಯಾ ಕಯಾ ॥ ೩೧೮

ಕ್ರೌಂಚಪದ, ಪದದ್ವಯದಲ್ಲಿ ಸಮಾನಗಣ ಸಮ್ಮಿತವಾಗಿ ಸಂಸ್ಕೃತ ಅಥವಾ ದೇಶ್ಯ ಭಾಷೆಯಲ್ಲಿರುವ ಹಂಸಪದಿ, ಕಲಹಂಸಕ, ಪ್ರಶ್ನೋತ್ತರ ರೂಪದಲ್ಲಿರುವ ಶುಕ ಸಾರಿಕಾ, ಹಯಲೀಲಾ, ಗಜಲೀಲಾ, ಶರಭಲೀಲಕ (೪ ಪಾದಗಳು)—ಈ ಗೇಯ ಪ್ರಬಂಧಗಳ ವಿಷಯವನ್ನು ಹೇಳಿದೆ. ಆಮೇಲೆ ವಿಚಿತ್ರಕ, ತ್ರಿಭಂಗೀ, ಚತುರಂಗಕ, ಸಿಂಹವಿಕ್ರಾಂತ, ರಣರಂಗ ಪ್ರಬಂಧ (ಇದರಲ್ಲಿ ಮೂರು ಬಗೆ), ಉದ್ಗ್ರಾಹ ಮತ್ತು ಆಭೋಗ (=ಉಗಾಭೋಗ ?), ಮುಕ್ತಾವಲೀ, ಅಂಕಚಾರಿಣೀ—ಈ ಪ್ರಬಂಧಗಳ ಲಕ್ಷಣವನ್ನೂ, ಲಕ್ಷ್ಯಗಳನ್ನೂ ಪ್ರತಿಪಾದಿಸಿದೆ. ಆಮೇಲೆ ಕಮಲಾನಂದ, ಧ್ವನಿಕುಟ್ಟನೀ, ಲಲಿತ, ಪಂಚಭಂಗಿ, ಪದಾವಲಿ, ಅಕ್ಷರಚ್ಯುತಕ, ರಾಹಡೀ,

---

[4] SII. IX. No. 297

ದೋಹದ, ಝೊಂಬಡ, ಡೊಲ್ಲಾರೀ ("ಗೀಯತೇ ಲಾಟಭಾಷಯಾ"), ಕೈವಾಡ, ಧ್ರುವಕ, ಮೇಲಾಪಕ—ಈ ಗೇಯ ಪ್ರಬಂಧಗಳ ವಿಷಯವನ್ನು ಸಂಗೀತ ದೃಷ್ಟಿಯಿಂದ ನಿರೂಪಿಸಿದೆ.

ಏಲಾ : ಇದರಲ್ಲಿ ಗಣೈಲಾ, ವರ್ಣೈಲಾ, ಮಾತ್ರೈಲಾ ಎಂಬ ಮೂರು ಪ್ರಕಾರಗಳಿವೆ. 'ಯಗಣಾದಿ ವರ್ಣಗಣಗಳಿಂದ ರಚಿತವಾದ ಏಲಾಗಳಲ್ಲಿ **ನಾದಾವತೀ** ಎಂಬುದರ ಲಕ್ಷಣ ಹೀಗೆ ಉಕ್ತವಾಗಿದೆ :

ಸುಧಾಕರ ಗಣಾಃ ಪಂಚ ಸುರಾಲಯು ಗಣಸ್ತತಃ
ಪದಮೇಕಮಿದಂ ಪ್ರೋಕ್ತಂ ಸಾನುಪ್ರಾಸಂ ತಥಾ ಪರಂ ‖ ೪೪೯
ಇತಿ ಪಾದತ್ರಯಂ ಯಸ್ಯಾಮೇಲಾ ನಾದಾವತೀ ತುಸಾ ‖

ಇದರಂತೆ ೫ ಭಗಣಗಳು ಮತ್ತು ಒಂದು ನಗಣ ಪ್ರತಿಪಾದದಲ್ಲಿಯೂ ಇರಬೇಕು; ಇಂತಹ ಮೂರು ಪಾದಗಳು, ಅಂತ್ಯಪ್ರಾಸಯುಕ್ತವಾಗಿರುವುವು; ಈ ಏಲೆಗೆ ನಾದಾವತೀ ಎಂಬ ಹೆಸರು. ಉದಾಹರಣೆ :—

ಯೌವನ | ಭೂಷಿತ | ಗೋಪವ | ಧೂಮುಖ | ಪದ್ಮ ಮ | ಧುಕರ
ಶ್ಯಾಮಲ | ವಿಗ್ರಹ | ಕಾಂತಿವಿ | ನಿರ್ಜಿತ | ನವ್ಯ ಜ | ಲಧರ
ದೇವಕಿ ನಂದನ ಸ್ಮೇರಸರೋರುಹ ಸಂಚಯ ಪಿಂಜರ
ಶೋಭನ ವಸನ ಕಲಿತ ಸತ್ಕಮಲಾ ನಯನಾಂಬುಜ ವಿಭ್ರಮ ಭವನ
ಪ್ರದುಗ್ಧಾಬ್ಧಿ ವೃತ ಶಯನ ದಲಿತ ಪುಂಡರೀಕ ನಯನ
ಕೌಸ್ತುಭರತ್ನ ಮರೀಚಿ ಕದಂಬಕ ಭಾಸುರವರದ ಪಾಹಿ ಪುರಂದರ ಗೀತಕ
ಬಿರುದ ಸಪ್ರೇಮ ಕುಸುಮ ಶರಜನನ ವಿಮೋಹಿತ ನಿಖಿಲಭುವನ
ಉತ್ಪತ್ತಿ ಸ್ಥಿತಿ ಕಾರಣ ಪ್ರಭೋ ನಾರಾಯಣ ‖

ಇದಕ್ಕೆ D ಪ್ರತಿಯಲ್ಲಿ ಪಾಠಭೇದವಿದೆ :—

ಯೌವನ ಭೂಷಿತ ಗೋಪವಧೂ ಮುಖಪದ್ಮ ಮಧುಕರ
ಶ್ಯಾಮಲ ವಿಗ್ರಹ ಕಾಂತಿ ವಿನಿರ್ಜಿತ ನವ ಜಲಧರ
ದೇವಕಿ ನಂದನ ಸ್ಮೇರ ಸರೋರುಹ ಕೇಸರ ಸಂಚಯ ಪಿಂಜರ ವಸನ
ಕೇಲಿಲಸತ್ಕಮಲಾನಯನಾಂಬುಜ ವಿಭ್ರಮ ಭವನ, ಪ್ರದುಗ್ಧಾಬ್ಧಿಕೃತ ಶಯನ
ದಲಿತ ಪುಂಡರೀಕ ನಯನ
ಕೌಸ್ತುಭರತ್ನ ಮರೀಚಿ ಕದಂಬ (ಕ) ಭಾಸುರವರದ ಪಾಹಿಪುರಂದರ ಮಂದರ
ಗೀತ ಸುಖಾವಹ ಬಿರುದ ಪರಮ ಕುಸುಮಶರ ಜನನ ವಿಮೋಹಿತ ನಿಖಿಲ ಭುವನ
ಉತ್ಪತ್ತಿ ಸ್ಥಿತಿ ಕಾರಣ ಪ್ರಭೋ ನಾರಾಯಣ ‖

ಈ ಎರಡು ಪಾಠಗಳಲ್ಲಿರುವ ಮೊದಲೆರಡು ಪಂಕ್ತಿಗಳು ಉಕ್ತ ಲಕ್ಷಣಾನುಸಾರವಾಗಿರುವುದು ಸ್ಪಷ್ಟವಾಗಿದೆ; ಅಂತ್ಯಪ್ರಾಸವೂ ಇದೆ. ಅಲ್ಲಿಂದ ಮುಂದಕ್ಕೆ ಪಾಠ ಕೆಟ್ಟುಹೋಗಿ ಸರಿಯಾಗಿ ಪಾದಗಳನ್ನು ವಿಂಗಡಿಸುವುದು ಕಷ್ಟವಾಗಿದೆ;

ಪಾದಗಳ ಸಂಖ್ಯೆ ಇಷ್ಟು ಎಂದೂ ತಿಳಿಯುವುದಿಲ್ಲ. "ಕೌಸ್ತುಭ....ವರದ, ಪಾಹಿ....ಬಿರುದು "—ಈ ಎರಡು ಪಾದಗಳು ಸರಿಯಾಗಿರುವಂತೆ ತೋರುತ್ತದೆ. ಈ ಏಲೆಯ ಪಾಠವನ್ನು ಸರಿಯಾಗಿ ಪರಿಷ್ಕರಣ ಮಾಡಿ ನಿರ್ಣಯಿಸಬೇಕಾಗಿದೆ.

೨ **ಹಂಸವತೀ** : ಇದರ ಲಕ್ಷಣ : ೫ ರಗಣಗಳು+೧ ಸಗಣ ಪ್ರತಿಪಾದದಲ್ಲಿ; ಅನುಪ್ರಾಸಯುಕ್ತ. ಇದಕ್ಕೆ ಉದಾಹರಣೆಯಾಗಿ

ರೌದ್ರ ಕಾಲಾನಲೋದ್ಭೂತ ಖಡ್ಗಪ್ರಭಾ ಸುಶೋಭಿತಾ

ಎಂದು ಮೊದಲಾಗುವ ೧೨ ಪಂಕ್ತಿಗಳ ಒಂದು ಪ್ರಬಂಧವಿದೆ. ಇದಕ್ಕೆ D ಪ್ರತಿಯಲ್ಲಿ ಭಿನ್ನಪಾಠವಿದೆ. ಯಾವ ಪ್ರತಿಯದೂ ಸರಿಯಾದ ಪಾಠವಾಗಿಲ್ಲ. ಆದ್ದರಿಂದ ಈ ಏಲೆಗೆ ಉಕ್ತವಾಗಿರುವ ಲಕ್ಷಣವನ್ನು ಲಕ್ಷ್ಯದಲ್ಲಿ ಕಾಣುವುದು ಸಾಧ್ಯವಿಲ್ಲವಾಗಿದೆ.

೩ **ನಾದಾವತೀ (ನಂದಾವತೀ) ಏಲಾ** : ಪ್ರತಿ ಪಾದದಲ್ಲಿ ೫ ತಗಣಗಳು ಮತ್ತು ಒಂದು ಜಗಣ ಇರುತ್ತವೆ; ಮೂರು ಪಾದಗಳು; ಅನುಪ್ರಾಸವುಳ್ಳದು.

ಕುಂಡಲಾ | ದಾರ್ಮಂಡ | ಲೋದ್ದಾಮ | ಲೇ ಕೈಶ್ಯೈ (ಶಿ) ರ್ನಿದಾರಣ (ಶೌಂಡ) ಶೌಂಡ,
ಸಂತುಷ್ಟ | ಗೀರ್ವಾಣ | ಮವ್ಯಾಭ | ವಜ್ಜನೋಕ್ಷಿತ
ಭಾಸ್ವದ್ಭುಜದಂಡ ಪ್ರಕರಕಲಿತ ಚಕ್ರ ಕೃತಾರ್ಥೀಕೃತಶಕ್ರಃ

ಇತ್ಯಾದಿಯಾಗಿ ೧೨ ಸಾಲುಗಳಿವೆ. ಇಲ್ಲಿ ಕೆಲವೆಡೆ ತಗಣಗಳ ವಿನ್ಯಾಸವನ್ನು ಕಾಣಬಹುದು; ಪ್ರಾಸವೂ ಇರುವಂತೆ ಕಾಣುತ್ತದೆ. ಆದರೆ ಪಾಠ ವ್ಯತ್ಯಾಸದಿಂದ ಲಕ್ಷಣವನ್ನು ಪೂರ್ಣವಾಗಿ ಅನ್ವಯಿಸಲಾಗುವುದಿಲ್ಲ. ಇದನ್ನು ಮಾಲವ ಕೈಶಿಕಾ ರಾಗದಲ್ಲಿ ಹಾಡತಕ್ಕದ್ದು.

೪ **ಭದ್ರಾವತೀ ಏಲಾ** : ಪ್ರತಿಪಾದದಲ್ಲಿ ೫ ಮಗಣ+೧ ಯಗಣ; ಮೂರು ಪಾದಗಳು ; ಅನುಪ್ರಾಸವಿರುತ್ತದೆ.

ನಾನಾಕಾರ್ಯೈರ್ನಿಜಾ ಕಾರ್ಯೈರ್ನಿತ್ಯಂ ವಿಕಾರಿತಂ ದೈತ್ಯೇಂದ್ರಾಣಾಮುತ್ರಸ್ನಾಯುಸ್ಸಿಗ್
ವಸಾಮಜ್ಜಾಸೃಕ್ಕರ್ಷಕಾರಿ ಪ್ರಪಾತ ಪೂತನಾ ಲೋಹೇನ ತಾಟಕಾರ್ಪಿತಾ|
ಶಕ್ರಸ್ತ್ರೀಣಾಮಾತ್ಯಂತಾಯಾರ್ತಾನಾಂ ಶೃಣ್ವನ್ನಾಕ್ರಂದಾನಮನ್ದಾನ್

ಇತ್ಯಾದಿಯಾದ ೧೧ ಸಾಲುಗಳಿವೆ. ಇದನ್ನು ಗಣಗಳಂತೆ ವಿಭಾಗಮಾಡಿ ಪ್ರತಿ ಪಾದವನ್ನೂ ಪ್ರತ್ಯೇಕವಾಗಿ ತೋರಿಸುವುದು ಕಷ್ಟವಾಗಿದೆ.

ಮೇಲೆ ಹೇಳಿದ ನಾಲ್ಕು ಏಲಾಗಳು ವರ್ಣಗಣಗಳಿಂದ ರಚಿತವಾದುವು; ಇವು ಗಣ್ಯೈಲಾಗಳು. ಹೀಗೆಯೇ ಮಾತ್ರಾಗಣಗಳಿಂದ ರಚಿತವಾದ ನಾಲ್ಕು ಏಲಾಗಳಿವೆ; ಇವಕ್ಕೆ ಮಾತ್ರೈಲಾ ಎಂಬ ಹೆಸರಿದೆ. ಇವುಗಳಲ್ಲಿ:—

೧ **ರತಿಲೇಖಾ** ಎಂಬ ಏಲೆಯ ಲಕ್ಷಣ :—

ಪದಂ ಷಣ್ಮಾತ್ರಮೇಕಂ ಸ್ಯಾತ್ ದ್ವಿತೀಯಂ ಪಂಚಮಾತ್ರಿಕಮ್
ಅನುಪ್ರಾಸ ಸಮೋಪೇತಃ ಪಾದಃ ಪ್ರಥಮ ಈರಿತಃ ॥ ೪೭೩

ಏವಂ ವಿಧೋ ದ್ವಿತೀಯಂ ಸ್ಯಾತ್ತೃತೀಯೋ ದಶಮಾತ್ರಕಃ
ಅನುಪ್ರಾಸೇನ ಸಂಯುಕ್ತಃ ಪ್ರಯುಕ್ತಃ ಪಂಚಭಿಃ ಪದೈಃ (ಪಂಕ್ತಿಭಿಶ್ಚ ಯಥಾ ಪದೈಃ) ॥ ೪೭೪

ವಿಭಜ್ಯ ತ್ರಿಷು ಮಾತ್ರೇಷು ದ್ವಾತ್ರಿಂಶನ್ಮಾತೃಕಾಕ್ರಮಾತ್
ಕ್ರಿಯತೇ ಸಾ ಭವೇದೇಲಾ ರತಿರೇ[ಲೇ]ಖೇತಿ ಸಂಜ್ಞಿತಾ ॥ ೪೭೫

ಇದರಂತೆ ಒಂದನೆಯದು ೬ ಮಾತ್ರೆಗಳುಳ್ಳ ಒಂದು ಪದ ; ಅನಂತರ ಎರಡನೆಯದು ೫ ಮಾತ್ರೆಗಳುಳ್ಳ ಪದ ; ಅನುಪ್ರಾಸವಿರಬೇಕು ; ಉಳಿದದ್ದು ಅಸ್ಪಷ್ಟವಾಗಿದೆ.

ಉದಾಹರಣೆ :—

ಪದ್ಮನಯನ ಜಲಶಯನ ಲಕ್ಷ್ಮೀಸ್ತನಾಭೋಗ ಮಧ್ಯಸ್ಥಿತ ಮುಕ್ತಾಹಾರ
ಭಕ್ತಶರಣ ಪ್ರವಿಬುಧಾರ್ತಿಹರಣ ಸಕಲದೈತ್ಯವಂಶಚ್ಛೇದನ ಕುಠಾರ
ಅಘಹರಣ ಭವತಾರಣ ಮೇ ಲಕ್ಷ್ಮೀಕಾಂತ ಜಯಜಯದೇವ ನಾರಾಯಣ
ನಮೋಽಸ್ತು ತೇ | ಆ ಸೋಮೇಶ್ವರದೇವ ವಿರಚಿತೇಯಮೇಲಾ ರೇಖಾವತೀ
೪೭೬

ಇದರಲ್ಲಿ ಕೊನೆಯ ಸಾಲಿನ "ಆ ಸೋ..........ವತೀ" ಎಂಬ ಭಾಗ ಉದಾಹರಣೆಯ ಭಾಗವಲ್ಲವೆಂದು ಭಾವಿಸಬಹುದು. ಉಳಿದ ಪಂಕ್ತಿಗಳನ್ನು ನೋಡಿದರೆ, ಮೊದಲನೆಯದರಲ್ಲಿ ಪ್ರಥಮ ಪದ ೬ ಮಾತ್ರೆ, ದ್ವಿತೀಯ ಪದ ೫ ಮಾತ್ರೆ, ಮುಂದಕ್ಕೆ ೨೩ ಮಾತ್ರೆಗಳು ; ಎರಡನೆಯದರಲ್ಲಿ ೬ ಮಾತ್ರೆ, ೯ ಮಾತ್ರೆ, ೧೮ ಮಾತ್ರೆಗಳು ; ಮೂರನೆಯದರಲ್ಲಿ ೫ ಮಾತ್ರೆ, ೬ ಮಾತ್ರೆ, ೨೮ ಮಾತ್ರೆಗಳು. ಹೇಳಿರುವ ಲಕ್ಷಣಕ್ಕೆ ಸದೃಶವಾದ ಲಕ್ಷ್ಯವಿದಲ್ಲವೆಂದು ಹೇಳಬೇಕಾಗಿದೆ, ಛಂದಸ್ಸಿನ ದೃಷ್ಟಿಯಿಂದ. ಸಂಗೀತದ ದೃಷ್ಟಿಯಿಂದ ಹೇಗೋ ?

೨ **ಕಾಮಲೇಖಾ** : ಲಕ್ಷಣ :—

ಮಾತ್ರಾಶ್ಚ ರತಿಲೇಖಾಯಾ ದ್ವೈಗುಣ್ಯೇನ ನಿಯೋಜಿತಾಃ ॥
ಹೃದ್ಯಾಃ ಪಾದಾಸ್ತ್ರಯೋ ಯಸ್ಯಾಃ ಕಾಮಲೇಖೇತಿ ಸಾ ಸ್ಮೃತಾ ॥ ೪೭೮

ರತಿಲೇಖೆಯಲ್ಲಿರುವಷ್ಟು ಮಾತ್ರೆಗಳನ್ನು ಇಮ್ಮಡಿಸಿದರೆ ಕಾಮಲೇಖಾ ಎಂಬ ಏಲೆಯಾಗುತ್ತದೆ. ೧೨, ೧೦ ಇತ್ಯಾದಿ ಮಾತ್ರೆಗಳಿರಬೇಕು, ಪ್ರತಿ ಪಾದದಲ್ಲಿ ; ಪಾದಗಳು ಮೂರು. ಉದಾಹರಣೆ :—

೧೨ ೧೦ ೨೪
ನಿಹತ ಖರಾಸುರದೂಷಣ | ಶ್ರೀವತ್ಸ ಭೂಷಣ | ಪ್ರಸಂಸಾರ ಸಾಗರ ತಾರಣ ನಿಖಿಲ ಭುವನ ಶರಣ

೧೨ ೧೦ ೧೯
ಅಮಿತ ಮಹಾದ್ಭುತ ವಿಕ್ರಮ | ಪಾಲಿತಧರ್ಮ ಕ್ರಮ | ಪ್ರಮಾಯಾವಾಮನರೂಪ ಬಲಿ ಬಂಧಕರ

೧೨ ೧೦ ೨೧
ಕಂಸಾಸುರ ಮರ್ದನ ದಶ | ಕಂಧರ ತರ್ಜನ ಧೃತ | ಜಯರಘುತಿಲಕ ಅಭಿರಾಮ ನಮೋಽಸ್ತು ತೇ ॥

(ಆ ಸೋಮೇಶ್ವರ ವಿರಚಿತಾ ಕಾಮಲೇಖೇಯಮೇಲಾ)

ಇದರಲ್ಲಿ ಮೂರು ಪಾದಗಳಿರುವುದೂ, ಪ್ರತಿ ಪಾದದ ಆದಿಯಲ್ಲಿ ೧೨ ಮತ್ತು ೧೦, ಹೀಗೆ ಮಾತ್ರಾವಿನ್ಯಾಸವಿರುವುದೂ (ರತಿಲೇಖೆಯ ೬ ಮತ್ತು ೫ರ ಇಮ್ಮಡಿ) ಕಾಣುತ್ತದೆ; ಅಲ್ಲಿಂದ ಮುಂದಕ್ಕೆ ೨೪, ೧೯, ೨೧ ಹೀಗೆ ಅನುಕ್ರಮವಾಗಿ ಮಾತ್ರೆಗಳಿವೆ. ಇದರ ವಿಷಯವೇನೋ? ಇಷ್ಟವಾದ ರಾಗದಲ್ಲಿ, ಬೇಕಾದ ಭಾಷೆಯಲ್ಲಿ ಇದನ್ನು ಹಾಡಬಹುದು.

೩ ಬಾಣಲೇಖಾ : ಲಕ್ಷಣ :—

ರತಿಲೇಖಾಗತಾಮಾತ್ರಾಸ್ತ್ರಿಗುಣಶ್ಚೇತ್ ಪ್ರಯೋಜಿತಾಃ
ವಿಭಜ್ಯ ತ್ರಿಷು ಪಾದೇಷು ಬಾಣಲೇಖಾತು ಸಾ ಭವೇತ್ ॥ ೪೮೧

ರತಿಲೇಖೆಯಲ್ಲಿರುವ ಮಾತ್ರೆಗಳನ್ನು ಮುಮ್ಮಡಿಸಿ, ಮೂರು ಪಾದಗಳಾಗಿ ವಿಂಗಡಿಸಿದರೆ ಬಾಣಲೇಖಾ ಎಂಬ ಏಲೆಯಾಗುತ್ತದೆ.

ಉದಾಹರಣೆ: ನಖಶಿಖಾವ್ಯಾಪಾದಿತದೈತ್ಯ ವಕ್ಷಃಸ್ಥಲ ಪಾಲಿತ ಜಂಭಾರಾತಿ ಭುಜಬಲ ಪ್ರಕರ
ಕಮಲಾ ಕಸ್ತೂರಿಕಾ ಪತ್ರ ಪ್ರಶಮಿತ ನಿಖಿಲ ಭುವನಭಂಗ |

೧೮ ೧೫
ಕರಕಮಲ ಪುಟಾಕಲಿತ ಶಂಖಸುದರ್ಶನ | ಸುಕೃತ ಶತಲಭ್ಯ ಪುಣ್ಯದರ್ಶನ |

೨೬
ಗಂಗಾಪ್ರವಾಹ ಪ್ರಭವ ಪದ ಪಂಕಜಚಿತ್ರತ ಜಗತ್ತ್ರಯ |
ಕಾಲಿಂದೀ ಸಲಿಲ ಕೇಲಿಕಾ ರತ್ನ ಸರಭಸರಚಿತ ಕಾಲಿಯ ನಿಕಾರ ಮೇಘಜಠರ ಕುಹರ ನಿಹಿತವಿಷ್ಟಪತ್ರಯ

ಜಯಜಯದೇವ ಜಗನ್ನಿವಾಸ ವಾಸುದೇವ ॥

(ಸೋಮೇಶ್ವರ ವಿರಚಿತಾ ಬಾಣಲೇಖೇಯಮೇಲಾ)

ಇದರಲ್ಲಿ ಎರಡನೆಯ ಪಂಕ್ತಿಯ ಆರಂಭದಲ್ಲಿ ಕ್ರಮವಾಗಿ ೧೮ ಮತ್ತು ೧೫ ಮಾತ್ರೆಗಳಿವೆ. ಮಿಕ್ಕ ಪಾದಗಳಲ್ಲಿಯೂ ಹೀಗೆಯೇ ಇರಬೇಕು; ಪಾಠವ್ಯತ್ಯಾಸಗಳಿರುವುದರಿಂದ ಈ ವಿಷಯವನ್ನು ನಿರ್ಣಯಿಸುವುದು ಕಷ್ಟ.

೪ ಚಂದ್ರಲೇಖಾ : ಈ ಏಲೆಯ ಲಕ್ಷಣ :—

ಯಾ ಮಾತ್ರಾ ರತಿಲೇಖಾಯಾಶ್ಚಾತುರ್ಗುಣ್ಯ ವಿಭಾಜಿತಾ
ಪಾದತ್ರಯೋಪಿ ಸಾ ಪ್ರೋಕ್ತಾ ಚಂದ್ರಲೇಖಾ ಸುಶೋಭನಾ ॥ ೪೮೪

ಇದರಂತೆ ಪ್ರತಿಪಾದದ ಆರಂಭದಲ್ಲಿ ೨೪ ಮತ್ತು ೨೦ ಮಾತ್ರೆಗಳಿರಬೇಕು ; ಉಳಿದ ಭಾಗದಲ್ಲಿ ಎಷ್ಟಿರಬೇಕೋ !

೨೪ ೨೦
ಶಶಧರಕರ ನಿಕರ ವಿಕಾಸಿತ ಕುವಲಯ ದಲ ಮೇಚಕ | ಸಕಲಭುವನ ತಲ ಧರ್ಮಾಧರ್ಮ ವಿಮೋಚಕ
ಕರ ಕಲಿತ ಭುವನತಲ ಧರ್ಮಾಧರ್ಮ ಮಧುಕೈಟಭ ಶಮನ |
೨೪
ನಾಭಿನಲಿನ ನಿವಾಸಿತ ಚತುರ್ಮುಖ ಚರಿತ ವಿವಿಧ ಜನ | ದೇವಕೀ ಮಂಡನ (ನಂದನ) ಪರಿಪಾಲಿತ ಸುರ
ಪತಿ ವಿಹರಣ ನಂದನ ಪ್ರಕರಕಲಿತ ಪಾಂಚಜನ್ಯ ಭುಜವಿಜಿತ ಮಹಾ ಸುರಸಮರ
ಅಧಿಶಯಿತ ಶಶಧರಕರ ವಿಶದ ಭುಜಗತಲ್ಪ ಪ್ರಣತಜನ ಪೀಯೂಷ ಧಾರಾ (ಸಾರ) ಕಲ್ಪ ಗುಣಗಣ ನಿಲಯ
ನಿಖಿಲಗುಣ ವಿರಹಿತ ಜಯದೇವ· ಪೀತಾಂಬರ ಅಖಿಲ ಭುವನ ವಾಸ ತುಭ್ಯಂ ನಮಃ ॥ ೪೮೫

(ಆ ಸೋಮೇಶ್ವರ ವಿರಚಿತಾ ಚಂದ್ರಲೇಖೇಯಮೇಲಾ)

ಇಷ್ಟ ರಾಗಾರ್ಥ ತಾಲದಲ್ಲಿ ಇದನ್ನು ಹಾಡಬೇಕು. ಇದಾದ ಮೇಲೆ **ಮದನಾವತಿ** ಯೆಂಬ ಏಲೆಯ ವಿಷಯವನ್ನು ಹೇಳಿದೆ. ಇದನ್ನು ವರ್ಣೇಲಾ ಎಂದು ಕರೆದಿದೆ. ಇದಕ್ಕೆ ಲಕ್ಷ್ಯ :—

ಅನವರತ ಭುಜಗ ಶರಣ ಪ್ರಣತಜನ ದುರಿತಹರಣ (ಗಮಕಃ)
ಸಕಲ ಸುರಾಸುರ ಪೂಜಿತ ಪದಯುಗಲಂ | ಸತತ ವಿಬುಧ ಭಯ ಶಮನಂ |
ಶಂಖಾಬ್ಜ ಚಕ್ರಪಾಣಿ ದಾಮೋದರಂ | ವಿಕಚ ಸರಸೀರುಹ ವದನಂ |
ಸಕಲ ಶುಭನಿಚಯ ಸದನಂ | (ಮಧು) ಲಕ್ಷ್ಮೀಕಂಠ ಕಂದಲ ಹಾರಂ
ಸಂಸಾರ ಮಂಡಪ ಸೂತ್ರಧಾರಂ | ನಮಾಮಿ ರಾವಣಾಂತ ಕರಂ ರಾಮಂ
ಗೋಪಿ ಜನ ಮನೋಹರಂ ರಾಮಂ

ಇದರ ಸ್ವರೂಪವನ್ನು ಹೀಗೆ ಹೇಳಿದೆ :—

ಏವಂ ಪ್ರಾಸಯುತೈರ್ಪಾದೈ ರ್ದ್ವಿಪದ್ಯೈ ಸ್ತ್ರಿಭಿರೀರಿತಾವನ್
ದ್ವಿಪಂಚಾಂಕಾದಿಕೈರ್ವರ್ಣೈರ್ಗೀತವ್ಯಾ ಮದನಾವತೀ ॥

೨ ಶಶಿಲೇಖಾ : ಇದು ಮದನಾವತೀ ಎಂಬ ಏಲೆಯ ಹಾಗೆ ಇದ್ದು ಪ್ರತಿ ಪಾದದಲ್ಲಿ ೧೨ ವರ್ಣಗಳನ್ನು ಹೊಂದಿರುತ್ತದೆ. ಉದಾಹರಣೆ :—

೧೨ ೧೨
ಮರಕತಮಣಿ ನಿಜಯ ರುಚಿರಮ್ | ದಧತಮುದಧಿಶಯನಮಚಿರಮ್
ಪೀತಾಂಬರಧರಂ ಲಕ್ಷ್ಮೀಪತಿಂ ವಿರಚಿತ ವಿಹಗಪತಿಗಮನಂ
ಅವಿನಯಮದಮತ್ತಾರಿ ಶಮನಂ ಶ್ರೀವತ್ಸಾಂಕಿತ ವತ್ಸಂ ಪುಂಡರೀಕಾಕ್ಷಂ
ಉದರ ನಿಹಿತ ನಿಖಿಲ ಭುವನಮ್, ದಲಿತ ದಶವದನ ಭುಜವನಮ್
ತಂ ಪ್ರಣಮಾಮಿ ದಶರಥ ನಂದನಂ (ಜನಕಸುತಾ ಹೃದಯನಂದನಮ್
ಕೇಶಿ ನಿಷೂದನಂ)[5] ಕೇಶವದೇವಂ ನಾರಾಯಣಮ್ ||

ಇದರಲ್ಲಿ ಸಾಧಾರಣವಾಗಿ ಪ್ರತಿ ಪಾದದಲ್ಲೂ ೧೨ ಅಕ್ಷರಗಳಿವೆ; ಮೂರನೆಯ ಪಾದಧಲ್ಲಿ ಮಾತ್ರ ಹತ್ತು ಅಕ್ಷರಗಳಿವೆ, ಏನೋ ಅಪಪಾಠ ಕಾರಣವಾಗಿರಬಹುದು; ಕೊನೆಯ ಪಾದದಲ್ಲಿ ೧೨ಕ್ಕಿಂತ ಅಧಿಕಾಕ್ಷರಗಳಿವೆ. ಒಟ್ಟು ೬ ಪಾದಗಳು, ಎಂದರೆ ೧೨ ಪದಗಳು.

೩ ಪ್ರಭಾವತೀ ಏಲಾ : ಪ್ರತಿ ಪದದಲ್ಲಿ ೧೩ ಅಕ್ಷರಗಳು; ಪಾದತ್ರಯ (ಷಟ್ಕ) ವಿರುತ್ತದೆ; ಉದಾಹರಣೆ:—

ವಿಹಿತನತಿಮನು ಶುಭಭಾವಕಮ್ | ದಶವದನವನ [ದಹನ] ಪಾವಕಮ್
ಪ್ರಲಯಲಕ್ಷ್ಮೀ ಹೃದಯವಲ್ಲಭಂ | ದೇವಂ ಭುವನ ಪತಿಂ ಹರಿಂ
ಅಧಿಸಲಿಲನಿಧಿ ವಿರಚಿತ ಸೇತುಮ್ | ಜಗದವನ ನಿಧನಕರಣ ಹೇತುಂ
ಶುದ್ಧ ಸಂವೇದನಮಯಂ ಮಾಧವಂ | ಮಧುಸೂದನಂ ವಿಭುಮ್
ಚರಣಯುಗಲ ಕೃತ ಸಕಲಾಕ್ರಮಣಂ | ತ್ರಿಭುವನ ಮಹಿತ ಕಮಲಾವರಣಂ
ದುರಿತ ಭಯಹರಂ ಕೌಸ್ತುಭ ಭೂಷಣಂ | ಪೀತಾಂಬರ ವಸನಂ ಶ್ರೀಧರಂ ||

ಇಲ್ಲಿ ಪ್ರತಿಪಾದದಲ್ಲೂ ಸಾಧಾರಣವಾಗಿ ೧೩ ಅಕ್ಷರಗಳಿವೆ. ಹಾಡುವಾಗ ಕಡಮೆ ವರ್ಣಗಳಿರುವ ಪಾದಗಳನ್ನು ವಿಸ್ತರಿಸಿಕೊಳ್ಳಬೇಕೇನೋ? "ಗೀತವರ್ಣಂ ಸಮಂ ಕೃತ್ವಾ ತಾಲಮಾನ ವಿಭೂಷಿತ"ವಾಗಿ ಹಾಡಬೇಕು.

೪. ಮಾಲತೀ : ೧೪ ಅಕ್ಷರಗಳುಳ್ಳ ಪದಗಳಿಂದಲೂ, ಮೂರು (ಆರು) ಪಾದಗಳಿಂದಲೂ ಕೂಡಿರುತ್ತದೆ. ಉದಾಹರಣೆ:—

ನಿಜವಿಭವ ರಚಿತ ದಶಾವತಾರಮ್ | ನಿಶಿತ ಶರಶತಕ್ಷತ ದನುಜಭಾರಂ
ಪ್ರಪೂತನಾ ಸೂದನಂ | ಕೇಶಿಕದನಂ ದಾಮೋದರಂ
ಖಗಪತಿಗಮನಮಭಯಪ್ರದಂ | ಕರಸರಸಿಜ ಕಲಿತ ರುಚಿರಗದಂ
ಪ್ರಚಂಡದಾನವ ವಿವಾಸಿನಂ | ಮಧುಸೂದನಂ ರಮಾಪಿತಂ
ಶಿಶುಸಮುಚಿತ (ಲಲಿತ) ಲೀಲಾನಿಹತ ಕರಿಸಂ | ಸ್ಮರತ ನರಹರಿಮಿಹ ಪರಮಹರಿಸಂ
ಸಂಸ್ಮರ ಸಂಗಭಂಗಕರಂ | ಶಂಖ ಶಾರ್ಙ್ಗಧರಂ
ಶ್ರೀ ವತ್ಸವಕ್ಷಸಂ ತ್ರಿಭುವನ ಗುರುಂ | ನಾಥ ನಾರಾಯಣಂ

ಇದರಲ್ಲಿ ಕೆಲವು ಪದಗಳಲ್ಲಿ ೧೪ ಅಕ್ಷರಗಳಿವೆ; ಕೆಲವೆಡೆ ಕಡಮೆ ಸಂಖ್ಯೆಯವಿವೆ.

---

[5] D ಪ್ರತಿಯಲ್ಲಿ ಮಾತ್ರ ಇದೆ.

ದೀರ್ಘಾಕ್ಷರ ಪ್ರಯೋಗ ಬಾಹುಲ್ಯ ಇದರಲ್ಲುಂಟು; "ಪ್ರಯೋಗೈಃ ಬಹುಲೈಃ ದೀರ್ಘೈಃ ಗಾಯಂತಿ."

(೪) **ಲಲಿತಾ :** ಇದರ ಲಕ್ಷಣ :—

> ತಿಥಿ ಸಂಖ್ಯಾಕ್ಷರ ಪದೈಸ್ತ್ರಿಭಿಃ ಪಾದೈರ್ವಿರಾಜಿತಾ
> ಏಲಾ ಸಾ ಲಲಿತಾ ನಾಮ ತದುದಾಹರಣಂ ಯಥಾ ॥ ೫೦೩.

ಪ್ರತಿ ಪದದಲ್ಲಿ ೧೫ ಅಕ್ಷರಗಳಿರುತ್ತವೆ; ಮೂರು (ಐದು) ಪಾದಗಳೆಂದು ಉದಾಹರಣೆಯಿಂದ ತಿಳಿಯುತ್ತದೆ :—

> ಶಿಶಿರ ಕರ ಕರನಿಕರ ಸದೃಶ ಶಂಖ ಕರಕಮಲಂ ರಣದಲಿತ ಕುಲಮುಖಂ
> ಮುನಿಜನವಂದಿತಂ ಚರಾಚರಪತಿಂ | ಶುಚಿಮಣಿಚಯ ರಚಿತ ವಿಕಟಮುಕುಟಂ
> ಬಹುದಿತಿತನಯ ಸಮರಸುಭಟಂ | ಅನುಗೃಹೀತ ಪಾರ್ಥಂ ವಸುದೇವನಂದನಂ
> ಅಜಮಮರ ಪತಿಸಖಂ ಭಜತ | ಹರಿಮತಿಶಯಿತ ಸಕಲಮುಖಮ್
> ಅನುಗತ ವೇದಾಂಗಮಂದಿರಂ | ಕೈಟಭರಿಪುಂ ಪದ್ಮನಾಭಂ ಪಿತಾಮಹಜನಕಂ

ಇದನ್ನು ಲಲಿತವಾದ ಗೀತದಿಂದ, ಲಲಿತವಾದ ಗಮಕಗಳಿಂದ ಹಾಡಬೇಕು.

(೬) **ಭೋಗವತೀ :** ಇದರ ಲಕ್ಷಣ :—

> ನಿಶಾಕರಕರಾಃ ಸಂಖ್ಯಾ ವರ್ಣಾರಬ್ಧ ಪದೈಸ್ತ್ರಿಭಿಃ
> ಪಾದೈಃ ಭೋಗವತೀ ಪ್ರೋಕ್ತಾ ವರ್ಣೈಲಾ ಯತಿಭಿಸ್ತಥಾ ॥ ೫೦೬.

ಇದರ ಪ್ರತಿಪದದಲ್ಲಿ ೧೬ ಅಕ್ಷರಗಳಿರಬೇಕು; ಪಾದಗಳು ಆರು–(ಮೂರು). ಉದಾಹರಣೆ :—

> ಕಚಾಚಿತರುಚಿರ ಚಾರುವಕ್ತ್ರಂ | ಪದಕಮಲಯುಗಲ ನಿಪತಿತ ಶಕ್ರಂ
> ಧೃತಗೋವರ್ಧನಂ ಭುವನಭೂಷಣಂ ದೇವಂ | ಮುನಿಭಿರಪಿ ನ ಸಮಧಿ ಗತಮತಿ ಗಹನಂ |
> ಅವನಿತಲನಿಹಿತ ಬಲಿದನುಜಾರ್ತಿಹರಂ| ಅದಿತಿನಂದನಂ ಭುವನ ಭೂಷಣಂ ದೇವಂ[6]|
> ಅಭಿನವ ಜಲಧರ ಭರಸದೃಶವಪುಷಂ | ಪರಮಪರಮಗತರುಷಂ
> ಸತತಮಹಂ ಧ್ಯಾಯಾಮಿ ವಿಷ್ಣುಂ | ಉಪದೇಶಾನುಗೃಹೀತ ಜಿಷ್ಣುಂ
> ಶಂಖಚಕ್ರಗದಾಧರಂ ಪರಮಾತ್ಮಾನಂ ॥

ಬರಿ ವರ್ಣಗಳಿಂದ ಭೂಷಿತವಾಗಿರುವ ಮತ್ತು ಸುಧಾರಸಸ್ಯಂದಿಯಾಗಿರುವ ಈ ಗೀತವನ್ನು ಗಮಕ ಸಮೇತವಾಗಿ ಹಾಡತಕ್ಕದ್ದು.

(೭) **ಕುಸುಮಾವತೀ :** ಇದರ ಲಕ್ಷಣ :—

> ತ್ರಯಃ ಪಾದಾಃ ಪದೈಷ್ಷಡ್ಭಿಃ ಸರ್ವೈಃ ಸಪ್ತದಶಾಕ್ಷರೈಃ
> ಏಲಾಯಾಂ ಕುಸುಮಾವತ್ಯಾಂ ಸ್ಯುರುದಾಹೃತಿರುಚ್ಯತೇ ॥ ೫೦೯.

---

[6] D ಪ್ರತಿಯಲ್ಲಿಲ್ಲ.

ಉದಾಹರಣೆ :—

ಕ್ಷಿತಿ ಪವನ ಗಗನ ಹುತವಹ ಜಲ ಭು(ಭ)ವನ | ಪ್ರಣತಮುನಿಜನ ದತದನುಜ
ವೇದವೇದಾಂಗ ಪಾರಗ ಲೋಕಾವಾಸವಿಭೋ ಶ್ರೀಪತೇ
ಕುಸುಮಶರ ವಿವಶ ಯುವತಿಶತರತಿದಕ್ಷ | ಶರನಿಪತನಹತ ಸುರಪತಿರಿಪುಪಕ್ಷ
ಪ್ರತಿರುಚಿರ ಪುರೋಧಸಂ ಪಾವನಮೂರ್ತೇ ವಿಮಲಕೀರ್ತೇ
ಸತತ ಗಮನ ವಿಧಿ ವಿರಚಿತ ಚತುರವಿಹಂಗ | ಜಯಜಯ ವಿದಿತ ಜನನ ಮರಣಭಯ ಭಂಗ
ದುರಿತತೃಣದಾವಾನಲ | ಆರಿಷ್ಟದಾವಾನಲ
ಸಕಲ ಜನ ದಯಾಲೋ | ಶೇಷಶಯ್ಯಾಶಯಾಲೋ ॥

ಇಲ್ಲಿ ಕೆಲವು ಪಾದಗಳಲ್ಲಿ ೧೭ ಅಕ್ಷರಗಳಿವೆ. ಇದನ್ನು ದ್ರುತವಿನ್ಯಾಸಗೀತದಿಂದ ನಿಬಿಡವಾದ ಗಮಕಗಳಿಂದ ತಾರಚುಂಬಿನಿಯಾಗಿ ಹಾಡತಕ್ಕದ್ದು.

ಮೇಲೆ ಹೇಳಿರುವ ಬಗೆಬಗೆಯ ಏಲಾ ಪ್ರಬಂಧಗಳಿಗೂ ಕರ್ಣಾಟಕ ವಿಷಯ ಜಾತಿಯಲ್ಲಿ ನಾಗವರ್ಮ ಜಯಕೀರ್ತಿಗಳು ಹೇಳಿರುವ ಏಳೆ ಎಂಬ ವೃತ್ತಕ್ಕೂ ಯಾವ ಸಂಬಂಧವೂ ಇರುವಂತೆ ತೋರುವುದಿಲ್ಲ.

ಮಾನಸೋಲ್ಲಾಸದ **D** ಪ್ರತಿಯಲ್ಲಿ ಮಾತ್ರ ಉಕ್ತವಾಗಿರುವ ಕೆಲವು ಛಂದೋರೂಪಗಳನ್ನು ನೋಡಬಹುದು. ಇವುಗಳಲ್ಲಿ ಮೊದಲನೆಯದು **ಧವಲ** ಎಂಬ ಗೀತ. ಇದರ ವಿಷಯವಾಗಿ ಈ ಕೆಳಗಿನ ಲಕ್ಷಣ ಶ್ಲೋಕವಿದೆ:

ಧವಲಾದಿಪದ್ಯೈಃ ಪಾದ್ಯೈರಾಶೀರ್ವಾದ ಸಮನ್ವಿತೈಃ
ಛಂದಸಾ ಯೇನಕೇನಾಪಿ ಕರ್ತವ್ಯೋ ಧವಲಾಭಿಧಃ ॥ ೧೪

(ಪುಟ ೪೩)

ಧವಲಾ ಎಂದು ಆರಂಭವಾಗುವ ಪದಗಳಿಂದ ಕೂಡಿ ಆಶೀರ್ವಾದಯುಕ್ತಗಳಾದ ಪಾದಗಳನ್ನು ಹೊಂದಿದ್ದು ಯಾವ ಛಂದಸ್ಸಿನಲ್ಲಾದರೂ ಇರುವ ಗೀತಕ್ಕೆ ಧವಲಾ ಎಂಬ ಹೆಸರು. ಇದಕ್ಕೆ ಉದಾಹರಣೆ :—

ಧವಲು ಹಿಮಾಲಉ ಧವ [ಲ] ಗಂಗಾಧವಲು ಏರಾವಣುಧವಲು |
ಚಂದ್ರಧವಲು ಮಹೇಸರು| ಧವಲು ಛತ್ರ ಅ(ಬ)ಮ್ಹದೇ ಛ ಪಸನೇ ಧವಲು ಜಸು ॥ ೧೫

ಪ್ರಾಕೃತದಲ್ಲಿರುವ ಈ ಉದಾಹರಣೆ ಧವಲಾದಿಪದಗಳಿಂದ ಕೂಡಿದೆ; ಆದರೆ ಆಶೀರ್ವಾದಯುಕ್ತವಾಗಿರುವಂತೆ ಕಾಣುವುದಿಲ್ಲ. ಮುಂದಕ್ಕೆ—

ಆಶೀರ್ವಾದಯುತೈಃ ಪಾದ್ಯೈರೀದೃಕ್ ಧವಲ ಪೂರ್ವಕೈಃ
ಅನೇನ ನಿಯಮೇನಾಯಂ ಗೀಯತೇ ಧವಲಾಭಿದಃ ॥

ಎಂಬ ಶ್ಲೋಕವಿದೆ. ಇದರಿಂದ ಹೆಚ್ಚಿನ ವಿಷಯವೇನೂ ತಿಳಿದುಬರುವುದಿಲ್ಲ.

ಹೇಮಚಂದ್ರಾಚಾರ್ಯನು ಧವಲಾಛಂದಸ್ಸಿನ ವಿಚಾರವಾಗಿ ಕೆಲವು ಸೂತ್ರೋದಾಹರಣೆಗಳನ್ನು ಕೊಟ್ಟಿದ್ದಾನೆ. (ಛಂದೋನುಶಾಸನ, V. 32–38). ಧವಲ

ಎಂಬ ಹೆಸರಿನ ಛಂದಸ್ಸಿನಲ್ಲಿ ೮, ೬ ಮತ್ತು ೪ ಪಾದಗಳ ವೃತ್ತಗಳಿವೆ; ಸಾತವಾಹನನ ಮಾತುಗಳಲ್ಲಿ ಇವನ್ನು ನೋಡಬಹುದು. ಇಲ್ಲಿ ದಿಗ್ಮಾತ್ರಸೂಚಿಯಾಗಿ ಮಾತ್ರ ಹೇಳಿದೆ :—

(೧) ಶ್ರೀಧವಲ :
೮ ಪಾದಗಳು ; ವಿಷಮಪಾದಗಳಲ್ಲಿ ೩ ಚತುಷ್ಕಲಗಳು + ೨ ಲಘು ;
ಸಮಪಾದಗಳಲ್ಲಿ ೨ ಚತುಷ್ಕಲಗಳು.

(೨) ಯಶೋಧವಲ : ೧ ಮತ್ತು ೩ರಲ್ಲಿ ೩ ಚತುಷ್ಕಲ + ೧ ದ್ವಿಕಲ.
೮ ಪಾದಗಳು ; ೨ ಮತ್ತು ೪ರಲ್ಲಿ ೩ ಚತುಷ್ಕಲ.
೫ ಮತ್ತು ೭ರಲ್ಲಿ ೨ ಚತುಷ್ಕಲ + ೧ ತ್ರಿಕಲ.
೬ ಮತ್ತು ೮ರಲ್ಲಿ ೨ ಚತುಷ್ಕಲ + ದ್ವಿಮಾತ್ರೆ ಅಥವಾ ೩ ಚತುಷ್ಕಲಗಳು.

(೩) ಕೀರ್ತಿಧವಲ : ೧ ಮತ್ತು ೪ರಲ್ಲಿ ೨ ಷಟ್ಕಲ + ೧ ದ್ವಿಮಾತ್ರೆ.
೬ ಪಾದಗಳು ; ೨ ಮತ್ತು ೫ರಲ್ಲಿ ೨ ಚತುಷ್ಕಲಗಳು.
೩ ಮತ್ತು ೬ರಲ್ಲಿ ೨ ಷಟ್ಕಲ + ೧ ಚತುಷ್ಕಲ ಅಥವಾ ೧ ಪಂಚಕಲ.

(೪) ಗುಣಧವಲ : ವಿಷಮಪಾದಗಳಲ್ಲಿ ೧ ಷಟ್ಕಲ + ೨ ಚತುಷ್ಕಲ.
೪ ಪಾದಗಳು ; ಸಮಪಾದಗಳಲ್ಲಿ ೧ ಷಟ್ಕಲ +೨ ಚತುಷ್ಕಲ + ೧ ದ್ವಿಮಾತ್ರೆ ಅಥವಾ ತ್ರಿಮಾತ್ರೆ.

(೫) ಭ್ರಮರಧವಲ : ವಿಷಮಪಾದಗಳಲ್ಲಿ ೧ ಷಟ್ಕಲ + ೧ ಚತುಷ್ಕಲ + ೧ ತ್ರಿಮಾತ್ರೆ.
೪ ಪಾದಗಳು ; ಸಮಪಾದಗಳಲ್ಲಿ ೧ ಷಟ್ಕಲ + ೧ ಚತುಷ್ಕಲ.

(೬) ಅಮರಧವಲ : ವಿಷಮಪಾದಗಳಲ್ಲಿ ೧ ಷಟ್ಕಲ + ೧ ಚತುಷ್ಕಲ + ೧ ತ್ರಿಮಾತ್ರೆ.
೪ ಪಾದಗಳು ; ಸಮಪಾದಗಳಲ್ಲಿ ೧ ಷಟ್ಕಲ + ೨ ಚತುಷ್ಕಲ.

(೭) ಮಂಗಲಧವಲ : ೧ ಮತ್ತು ೨ನೆಯ ಪಾದಗಳ ಲ್ಲಿ ೧ ಷಟ್ಕಲ + ೩ ಚತು
೪ ಪಾದಗಳು ; ದ್ವಿಕಲ.
೩ ಮತ್ತು ೪ನೆಯ ಪಾದಗಳಲ್ಲಿ ೫ ಚತುಷ್ಕಲ+ದ್ವಿಕಲ
(ಸರ್ವಪಾದೇಷು ಕೊನೆಯಲ್ಲಿ ೧ ದ್ವಿಕಲ).

ಹೇಮಚಂದ್ರನು ನಿರೂಪಿಸಿರುವಷ್ಟು ಧವಲದ ಪ್ರಭೇದಗಳನ್ನು ಮಾನಸೋಲ್ಲಾಸ ಕಾರನು ಹೇಳಿಲ್ಲ. ಧವಲ ಯಾವ ಛಂದಸ್ಸಿನಲ್ಲಾದರೂ ಇರಬಹುದೆಂಬ ಅವನ ಮಾತಿನಲ್ಲಿ ಎಲ್ಲವೂ ಅಡಕವಾಗಿರುವಂತೆ ತೋರುತ್ತದೆ. ಕನ್ನಡದಲ್ಲೂ 'ಧವಳದ ಹಾಡುಗಳು' ಎಂಬ ರಚನೆಗಳು ಕಾಣುತ್ತವೆ; ಇಂದಿಗೂ ಆ ಹಾಡುಗಳನ್ನು

ಅಲ್ಲಲ್ಲಿ ಹಾಡುವುದು ರೂಢಿಯಾಗಿದೆ. ಹತ್ತನೆಯ ಶತಮಾನದಷ್ಟು ಹಿಂದಿನ ಕಾಲದಲ್ಲೇ ಈ ಹಾಡುಗಳು ಕನ್ನಡ ನಾಡಿನಲ್ಲಿ ಪ್ರಚುರವಾಗಿದ್ದುವು.[7] ಈ ದಿಕ್ಕಿನಲ್ಲಿ ಇನ್ನೂ ಹೆಚ್ಚು ಕೆಲಸ ನಡೆಯಬೇಕಾಗಿದೆ.

ಎರಡನೆಯದು **ಮಂಗಲ ಗೀತಕಂ** ಎಂಬ ರಚನೆ. ಇದರ ಲಕ್ಷಣವನ್ನು ಕೆಳಗಿನ ಶ್ಲೋಕದಲ್ಲಿ ಹೇಳಿದೆ :—

ಸುಮಂಗಲ ಪದೋಪೇತೈಃ ಶುಭೈರ್ವಾಕ್ಯೈರ್ಮನೋರಮೈಃ
ಕೈಶಿಕ್ಯಾ ವೋಟ್ಟರಾಗೇಣ ಗೇಯಂ ಮಂಗಲ ಗೀತಕಂ ॥ ೧೭ (ಪು. ೪೩).

ಕೈಶಿಕೀ ವೃತ್ತಿಯಲ್ಲಿ, ವೋಟ್ಟರಾಗದಲ್ಲಿ ಇದನ್ನು ಹಾಡಬೇಕಂತೆ. ಇದಕ್ಕೆ ಉದಾಹರಣೆ :—

ದಧಿ ದೂರ್ವಾಕ್ಷತ ಚೂತ ಪಲ್ಲವ ಕನಕ ಕಲಶ ಮಾತುಲುಂಗ ಕಮಲಸ್ವಸ್ತಿಕ
ನಂದ್ಯಾವರ್ತಸಿತ ಕುಸುಮ ಚಂದನ ಕುಂಕುಮ ಲಾಜಾದಿ ಮಂಗಲದ್ರವ್ಯಾಣಿ
ವಿಪ್ರಾಃ ಪುಣ್ಯತಮಾಯೋಷಿತಃ ಮಹರ್ಷಯಃ ದೇವಮಾತರಃ ನವಗ್ರಹಾ
ಲೋಕಪಾಲಾಶ್ಚ ಬ್ರಹ್ಮ ವಿಷ್ಣು ಮಹೇಶ್ವರಾಃ
ಏತೇ ಪ್ರಯಚ್ಛಂತು ಮಮ ಮಂಗಲಮ್ ॥ ೧೮

ಇಲ್ಲಿ ಮಂಗಲದ್ರವ್ಯಗಳು, ಋಷಿಗಳು, ದೇವತೆಗಳು, ವಿಪ್ರರು, ವಿಲಾಸಿನಿಯರು— ಮುಂತಾದ ಮಂಗಲಕರವಾದ ಪದಪ್ರಯೋಗಗಳಿದ್ದು ಶುಭವಾಕ್ಯದಿಂದ ಸಮನ್ವಿತ ವಾಗಿದೆ. ಅಲ್ಲದೆ ಮಂಗಲಾಭಿಧ ಪ್ರಬಂಧವು ಪ್ರಶಾಂತವಾದ ಮೂರು ಪಾದಗಳ ನ್ನೊಳಕೊಂಡಿದ್ದು ತೃತೀಯ ತಾಳದಲ್ಲಿ ಹಾಡತಕ್ಕದ್ದಾಗಿದೆ. ಹೇಮಚಂದ್ರಾ ಚಾರ್ಯನು " ಉತ್ಸವಾದಿನಾ ಯೇನ್ಯೈವ ಧವಲ ಮಂಗಲ ಭಾಷಾ ಗಾನೇ ತನ್ನಾ ಮಾದ್ಯೇ ಧವಲ ಮಂಗಲೇ " ಎಂಬ ಸೂತ್ರದಲ್ಲಿ (V–40) ಹೇಳಿರುವ ಧವಲ ಮಂಗಲವು ಈ ಮಂಗಲಗೀತಕವಾಗಿರಬಹುದು.

ಮೂರನೆಯದು **ಓವಿ** ಎಂಬ ಹಾಡು. ಇದರ ಲಕ್ಷಣವನ್ನೂ ಲಕ್ಷ್ಯವನ್ನೂ ಕೆಳಗಿನ ಶ್ಲೋಕದಲ್ಲಿ ಹೇಳಿದೆ :—

ಉವಿ ಶಬ್ದೇನ ಸಾಚಾಂತೇ ಕಾರ್ಯಾಸ್ಯಾದೋವಿಕಾ ಬುಧೈಃ
ಗೋತ್ರಲೇಂ ಗೋಲಿ ನಿಹ್ಮಂವಿ ಅಚಲುವಲುತೋ ಮಝುಪಡಿಹೇ ಕನ್ನೋಸಾ
ಚಲೂಲಾದಿ (ಉ) ವಿಏ ॥

ಸಂಭೋಗ ವಿಪ್ರಲಂಭ ಶೃಂಗಾರಗಳಲ್ಲಿ, ಹೃದಯಸ್ಥಿತ ಪ್ರಿಯನನ್ನು ಉದ್ದೇಶಿಸಿ ಈ ವೃತ್ತದ ಮೂಲಕ ಭಾವಪ್ರದರ್ಶನ ಮಾಡಬೇಕು. ಇಷ್ಟತಾಲದಿಂದ

---

7 'ಧವಳವೆಂಬ ಹಾಡಿನ ಸ್ವರೂಪ' ಎಂಬ ನನ್ನ ಲೇಖನವನ್ನು ನೋಡಿ: 'ಪಂಜೆಯವರ ನೆನಪಿಗಾಗಿ', ಪು. ೧೯೦–೧೯೪.

ಹಾಡತಕ್ಕದ್ದು; ಅನುಪ್ರಾಸವುಳ್ಳ ಪಾದದ್ವಯಗಳು; ಇದನ್ನು ಓವಿಕಾ ಎಂದು ಹೇಳುತ್ತಾರೆ. ಮರಾಠಿ ಸಾಹಿತ್ಯದಲ್ಲಿ ತುಂಬ ಪ್ರಚುರವಾಗಿರುವ ಓವಿ ಎಂಬ ಪದ್ಯಕ್ಕೂ ಇದಕ್ಕೂ ಸಂಬಂಧವಿರಬಹುದು.

ಈ ಅಧ್ಯಾಯದ ಅಂತ್ಯದಲ್ಲಿರುವ ಈ ಕೆಳಗಿನ ಶ್ಲೋಕಗಳು ಗಮನಾರ್ಹವಾಗಿವೆ :—

> ತ್ರಿಪದೀ ಷಟ್ಪದೀ ಚೈವ ಧವಲೋ ಮಂಗಲಸ್ತಥಾ
> ಓವೀ ಚ ಚರ್ಚರೀ ಚರ್ಯಾ ರಾಹಡೀ ದಂತಿಕಾ ತಥಾ ॥ ೫೪೯
>
> ಏತೇ ಸೂಡೇಷುತೋ ಗೇಯಾಃ ಪ್ರಬಂಧಾ ಲೌಕಿಕಾ ಮತಾಃ
> ವಿಪ್ರಕೀರ್ಣಾಃ ಪ್ರಗಾತವ್ಯಾ ವ್ಯಾಪಾರೇಷು ಪೃಥಕ್ ಪೃಥಕ್ ॥ ೫೫೦
>
> ತ್ರಿಪದೀ ಕಂಡನೇ ಚೈವ ಶೃಂಗಾರೇ ವಿಪ್ರಲಂಭಕೇ
> ಪ್ರಾಯಃಶಾಸ್ತ್ರಿಭಿರೇವೈಷಾ ಗೇಯಾ ನಾನಾರ್ಥ ಭೂಷಿತಾ ॥ ೫೫೧
>
> ಕಥಾಸು ಷಟ್ಪದೀ ಯೋಜ್ಯಾ ವಿವಾಹೇ ಧವಲಸ್ತಥಾ
> ಉತ್ಸವೇ ಮಂಗಲೋ ಗೇಯಶ್ಚರ್ಯಾ ಯೋಗಿಜನೈಸ್ತಥಾ ॥ ೫೫೨
>
> ಮಹಾರಾಷ್ಟ್ರೇಷು ಯೋಷಿದ್ಭಿರೋವೀ ಗೇಯಾತು ಕಂಡನೇ
> ಹೋಲಾಕೇ ಚಚ್ಚರೀ ಗೇಯಾ ರಾಹಡೀ ವೀರ ವರ್ಣನೇ ॥ ೫೫೩
>
> ದಂತೀ ಗೋಪಾಲಕೈರ್ವಾದೇ ಗಾತವ್ಯಾ ನಿಜ ಭಾಷಯಾ
> ಏವಂ ವಿಷಯಭೇದೇನ ಪ್ರಬಂಧಾಃ ಪರಿಕೀರ್ತಿತಾಃ ॥ ೫೫೪

ತ್ರಿಪದಿಯನ್ನು, ಧಾನ್ಯವನ್ನು ಒರಳಲ್ಲಿ ಹಾಕಿ ಕುಟ್ಟುವಾಗಲೂ (=ಕಂಡನ) ಶೃಂಗಾರ ವಿಪ್ರಲಂಭಗಳನ್ನು ವರ್ಣಿಸುವಾಗಲೂ ಹಾಡಬೇಕು; ಕಥನಕಾವ್ಯದಲ್ಲಿ ಷಟ್ಪದಿಯನ್ನು ಬಳಸಬೇಕು; ವಿವಾಹಕಾಲದಲ್ಲಿ ಧವಲವನ್ನು ಆಲಾಪಿಸಬೇಕು; ಮಂಗಲ ಗೀತವನ್ನು ಉತ್ಸವ ಕಾಲದಲ್ಲಿ ಉಪಯೋಗಿಸಬೇಕು; ಯೋಗಿಜನರು ಅಧ್ಯಾತ್ಮನಿರೂಪಣೆಯಲ್ಲಿ ಚರ್ಯಾ ಎಂಬ ಪ್ರಬಂಧವನ್ನು ರಚಿಸಿಕೊಳ್ಳಬೇಕು; ಮಹಾರಾಷ್ಟ್ರದ ಸ್ತ್ರೀಯರು ಒನಕೆವಾಡಾಗಿ ಓವಿಯನ್ನು ಉಪಯೋಗಿಸುತ್ತಾರೆ; ಚಚ್ಚರೀ ಪ್ರಬಂಧವನ್ನು ವಸಂತಕಾಲದ ಹೋಳಿ ಹಬ್ಬದಲ್ಲಿಯೂ (=ಹೋಲಾಕಾ), ವೀರವರ್ಣನೆಯಲ್ಲಿ ರಾಹಡಿಯನ್ನೂ, ದಂತಿಯನ್ನು ಗೋಪಾಲಕರ ಸಂವಾದದಲ್ಲೂ ತಂತಮ್ಮ ಸಹಜ ಭಾಷೆಯಲ್ಲಿ ಹಾಡಬೇಕು—ಎಂದು ಮೇಲಿನ ಶ್ಲೋಕಗಳ ಅಭಿಪ್ರಾಯ. 'ಮಾನಸೋಲ್ಲಾಸ'ದ ಬೇರೊಂದೆಡೆಯಲ್ಲಿ ತ್ರಿಪದೀ ವಿನಿಯೋಗದ ವಿಷಯವಾಗಿ ಈ ಕೆಳಗಿನ ಶ್ಲೋಕವಿದೆ :—

> ಪರಿಹಾಸ ಪದಾರ್ಥಾಭಿಃ ಮರ್ಮಭಿನ್ನಿತ ಗಾಲಿಭಿಃ
> ತ್ರಿಪದೀಭಿಃ ಸರಾಗಾಭಿಃ ಗಾಪಯೇಯುಃ ಪರಾಜಿತಾನ್ ॥ (೪–೭–೩೨).

ಅಂಕದಲ್ಲಾಗಲಿ ಮಲ್ಲಯುದ್ಧದಲ್ಲಾಗಲಿ ಸೋತವನನ್ನು ರಾಗಯುಕ್ತವಾದ, ಪರಿಹಾಸಗರ್ಭಿತವಾದ ಮತ್ತು ಮರ್ಮಭೇದಕವೂ ಮಿತವೂ ಆದ ನಿಂದೆಯನ್ನುಳ್ಳ ತ್ರಿಪದಿಗಳಿಂದ ಹಾಡಿಸಬೇಕು. ಇಂಥ ಛಂದಸ್ಸನ್ನು ಇಂಥ ಕೆಲಸಕ್ಕೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಮೇಲಿನ ಶ್ಲೋಕಗಳು ಹೊಸ ತಿಳಿವಳಿಕೆಯನ್ನು ನೀಡುತ್ತವೆ. ಸೋಮೇಶ್ವರನ ಕಾಲಕ್ಕಾಗಲೇ (೧೧೨೬–೧೧೩೮) ಕನ್ನಡದಲ್ಲಿ ಷಟ್ಪದೀನಿಬದ್ಧವಾದ ಕಥನಕಾವ್ಯಗಳು ರಚಿತವಾಗಿದ್ದುವೆಂಬ ಹೊಸ ಅಂಶ ಬೆಳಕಿಗೆ ಬರುತ್ತದೆ. ಅದೇ ಗ್ರಂಥದ ಇನ್ನೊಂದೆಡೆಯಲ್ಲಿ[7] ಚಿತ್ರಕಥಕನ ಲಕ್ಷಣವನ್ನು ಹೇಳುವಾಗ "ಕರ್ಣಾಟ ಭಾಷಯಾ ಯಸ್ತು ಷಟ್ಪದೀ ಪಠನೋದ್ಯತಃ ಎಂದು ಹೇಳಿರುವುದರಿಂದ ಚಿತ್ರಕಥಕನು ಷಟ್ಪದಿಯನ್ನು ಪಠಿಸುತ್ತಿದ್ದನು ಎಂದು ತಿಳಿದು ಬರುತ್ತದೆ. ಛಂದಸ್ಸಿನ ದೃಷ್ಟಿಯಿಂದ 'ಮಾನಸೋಲ್ಲಾಸ'ವು ಪ್ರಮುಖವಾದುದೆಂದು ಸ್ಪಷ್ಟವಾಗಿದೆ. ಸಂಸ್ಕೃತ ಪ್ರಾಕೃತ ವೃತ್ತಜಾತಿಗಳ ವಿಷಯವಾಗಿ ನೂತನ ವಿಷಯಗಳೇನೂ ಇಲ್ಲವೆಂದು ಹೇಳಬಹುದು. ಪ್ರಸಿದ್ಧವಾದ ಕೆಲವು ಸಂಸ್ಕೃತ ವರ್ಣವೃತ್ತಗಳ ವಿಷಯವನ್ನು ಸ್ವಲ್ಪ ವಿಸ್ತಾರವಾಗಿ ನಿರೂಪಿಸಿದೆ. ಪ್ರಾಕೃತ ಛಂದೋರೂಪಗಳ ವಿಷಯ ತುಂಬ ಕಡಮೆಯಾಗಿದೆ. ಕರ್ಣಾಟಕ ದೇಶೀಯ ಛಂದಸ್ಸುಗಳಲ್ಲಿ ಕಂದ, ತ್ರಿಪದಿ, ಷಟ್ಪದಿಗಳ ವಿಷಯವಾಗಿ ಮಾತ್ರ ಪ್ರಸ್ತಾಪಿಸಿದೆ. ಇಲ್ಲಿ ಬರುವ ಏಲಾ ಪ್ರಬಂಧಗಳ ರಚನೆಯನ್ನು ಛಂದಸ್ಸಿನ ದೃಷ್ಟಿಯಿಂದಲೂ ಸಂಗೀತದ ದೃಷ್ಟಿಯಿಂದಲೂ, ಎರಡನ್ನೂ ಬಲ್ಲವರು ಹೆಚ್ಚು ಗಾಢವಾಗಿ ವಿಚಾರಮಾಡಬೇಕಾಗಿದೆ.

—ಡಿ. ಎಲ್. ನರಸಿಂಹಾಚಾರ್

7 ೪-೧೬-೧೪೨೫.

ವಿಶಾಲಾಕ್ಷಿ

ಮನೆಗವಳೆ ಹಿರಿಮಗಳು. ಕಂಪೆಸೆವ ಬಿರಿಮುಗುಳು.
ಮೊದಲಂತೆ ಇತ್ತೀಚೆಗವಳು ನಗಳು!
ಬೊಗಸೆಗಣ್ಣಿನ ತುಂಬ ಮಧುರ ಸ್ವಪ್ನದ ಬಿಂಬ.
ತಂದೆ ತಾಯಿಗೆ ಚಿಂತೆ: ಬೆಳೆದ ಮಗಳು!!

ಬೆಳಗೊಲುಮೆ ಕಾರಂಜಿ; ಹಗಲು, ಕಾಮನಬಿಲ್ಲು
ಚಂದ್ರಲೋಕಕೆ ಪಯಣಗೈವ ಚಪಲ!
ಸಂಜೆ ಬಾನಿನ ಮೊಗದಿ ನೂರು ಚಿಂತೆಯ ಚುಕ್ಕೆ.
ವಿಧಿಯಾಟಕೆದುರುಂಟೆ?—ಯಾತ್ರೆ ವಿಫಲ!

ಕುಳಿತು ಮೌನದೊಳೊಂಟಿ, ಯೋಚಿಸುವಳೇನೇನೊ.
ಕೇಳಿದರೆ ಬಾಯ್ಬಿಡಳು ಹುಚ್ಚು ಹುಡುಗಿ!
ಎದೆಯ ವೇದನೆ ಮನೆಗೆ ಕಿಟಕಿ ಬಾಗಿಲನಿಡದೆ
ಎಲ್ಲಿ ಹೋದನೊ ಅವನು, ಜಗದ ಬಡಗಿ!!

ಬರಿದೆ, ಆಗದ ಹಲವು ಹಂಬಲಿಸಿ ಫಲವೇನು?
ಬರಲಿಲ್ಲ ನಾನದನು ಕೇಳಿಕೊಂಡು!
ಹಗಲಿರುಳು ಹಡೆದೊಡಲು ಹರಕೆ ಹೊರುವಂದದೊಳು
ಹರಸುತಿಹೆನಿದೊ, ನೋವ ನುಂಗಿಕೊಂಡು:

'ಹೃದಯ ಶ್ರೀಮಂತಿಕೆಯ ಗಂಡು ದೊರಕಲಿ ಬೇಗ;
ಸರಸ ಜೀವನ ಸರಸಿ ಬತ್ತದಿರಲಿ.
ಸುಕುಮಾರ ಸುಮದಂತೆ ನಿನ್ನ ಹೊಸ ಬಾಳರಳಿ
ಸೌಶೀಲ್ಯ ಸೌಗಂಧ ಸೂಸುತಿರಲಿ!'

—ಸುಧಾಕರ

ಅಂಕದಲ್ಲಾಗಲಿ ಮಲ್ಲಯುದ್ಧದಲ್ಲಾಗಲಿ ಸೋತವನನ್ನು ರಾಗಯುಕ್ತವಾದ, ಪರಿಹಾಸಗರ್ಭಿತವಾದ ಮತ್ತು ಮರ್ಮಭೇದಕವೂ ಮಿತವೂ ಆದ ನಿಂದೆಯುನ್ನುಳ್ಳ ತ್ರಿಪದಿಗಳಿಂದ ಹಾಡಿಸಬೇಕು. ಇಂಥ ಛಂದಸ್ಸನ್ನು ಇಂಥ ಕೆಲಸಕ್ಕೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಮೇಲಿನ ಶ್ಲೋಕಗಳು ಹೊಸ ತಿಳಿವಳಿಕೆಯನ್ನು ನೀಡುತ್ತವೆ. ಸೋಮೇಶ್ವರನ ಕಾಲಕ್ಕಾಗಲೇ (೧೧೨೬–೧೧೩೮) ಕನ್ನಡದಲ್ಲಿ ಷಟ್ಪದೀ ನಿಬದ್ಧವಾದ ಕಥನಕಾವ್ಯಗಳು ರಚಿತವಾಗಿದ್ದುವೆಂಬ ಹೊಸ ಅಂಶ ಬೆಳಕಿಗೆ ಬರುತ್ತದೆ. ಅದೇ ಗ್ರಂಥದ ಇನ್ನೊಂದೆಡೆಯಲ್ಲಿ[7] ಚಿತ್ರಕಥಕನ ಲಕ್ಷಣವನ್ನು ಹೇಳುವಾಗ "ಕರ್ಣಾಟ ಭಾಷಯಾ ಯಸ್ತು ಷಟ್ಪದೀ ಪಠನೋದ್ಯತಃ ಎಂದು ಹೇಳಿರುವುದರಿಂದ ಚಿತ್ರಕಥಕನು ಷಟ್ಪದಿಯನ್ನು ಪಠಿಸುತ್ತಿದ್ದನು ಎಂದು ತಿಳಿದು ಬರುತ್ತದೆ. ಛಂದಸ್ಸಿನ ದೃಷ್ಟಿಯಿಂದ 'ಮಾನಸೋಲ್ಲಾಸ'ವು ಪ್ರಮುಖವಾದುದೆಂದು ಸ್ಪಷ್ಟವಾಗಿದೆ. ಸಂಸ್ಕೃತ ಪ್ರಾಕೃತ ವೃತ್ತಜಾತಿಗಳ ವಿಷಯವಾಗಿ ನೂತನ ವಿಷಯಗಳೇನೂ ಇಲ್ಲವೆಂದು ಹೇಳಬಹುದು. ಪ್ರಸಿದ್ಧವಾದ ಕೆಲವು ಸಂಸ್ಕೃತ ವರ್ಣವೃತ್ತಗಳ ವಿಷಯವನ್ನು ಸ್ವಲ್ಪ ವಿಸ್ತಾರವಾಗಿ ನಿರೂಪಿಸಿದೆ. ಪ್ರಾಕೃತ ಛಂದೋರೂಪಗಳ ವಿಷಯ ತುಂಬ ಕಡಮೆಯಾಗಿದೆ. ಕರ್ಣಾಟಕ ದೇಶೀಯ ಛಂದಸ್ಸುಗಳಲ್ಲಿ ಕಂದ, ತ್ರಿಪದಿ, ಷಟ್ಪದಿಗಳ ವಿಷಯವಾಗಿ ಮಾತ್ರ ಪ್ರಸ್ತಾಪಿಸಿದೆ. ಇಲ್ಲಿ ಬರುವ ಏಲಾ ಪ್ರಬಂಧಗಳ ರಚನೆಯನ್ನು ಛಂದಸ್ಸಿನ ದೃಷ್ಟಿಯಿಂದಲೂ ಸಂಗೀತದ ದೃಷ್ಟಿಯಿಂದಲೂ, ಎರಡನ್ನೂ ಬಲ್ಲವರು ಹೆಚ್ಚು ಗಾಢವಾಗಿ ವಿಚಾರಮಾಡಬೇಕಾಗಿದೆ.

—ಡಿ. ಎಲ್. ನರಸಿಂಹಾಚಾರ್

7 ೪-೧೬-೧೪೨೫.

ವಿಶಾಲಾಕ್ಷಿ

ಮನೆಗವಳೆ ಹಿರಿಮಗಳು. ಕಂಪಿಸಿವ ಬಿರಿಮುಗುಳು.
ಮೊದಲಂತೆ ಇತ್ತೀಚೆಗವಳು ನಗಳು!
ಬೊಗಸೆಗಣ್ಣಿನ ತುಂಬ ಮಧುರ ಸ್ವಪ್ನದ ಬಿಂಬ.
ತಂದೆ ತಾಯಿಗೆ ಚಿಂತೆ: ಬೆಳೆದ ಮಗಳು!!

ಬೆಳಗೊಲುಮೆ ಕಾರಂಜಿ; ಹಗಲು, ಕಾಮನಬಿಲ್ಲು
ಚಂದ್ರಲೋಕಕೆ ಪಯಣಗೈವ ಚಪಲ!
ಸಂಜೆ ಬಾನಿನ ಮೊಗದಿ ನೂರು ಚಿಂತೆಯ ಚುಕ್ಕೆ.
ವಿಧಿಯಾಟಕೆದುರುಂಟೆ?—ಯಾತ್ರೆ ವಿಫಲ!

ಕುಳಿತು ಮೌನದೊಳೊಂಟಿ, ಯೋಚಿಸುವಳೇನೇನೊ.
ಕೇಳಿದರೆ ಬಾಯ್ಬಿಡಳು ಹುಚ್ಚು ಹುಡುಗಿ!
ಎದೆಯ ವೇದನೆ ಮನೆಗೆ ಕಿಟಕಿ ಬಾಗಿಲನಿಡದೆ
ಎಲ್ಲಿ ಹೋದನೊ ಅವನು, ಜಗದ ಬಡಗಿ!!

ಬರಿದೆ, ಆಗದ ಹಲವು ಹಂಬಲಿಸಿ ಫಲವೇನು?
ಬರಲಿಲ್ಲ ನಾನದನು ಕೇಳಿಕೊಂಡು!
ಹಗಲಿರುಳು ಹಡೆದೊಡಲು ಹರಕೆ ಹೊರುವಂದದೊಳು
ಹರಸುತಿಹೆನಿದೊ, ನೋವ ನುಂಗಿಕೊಂಡು:

'ಹೃದಯ ಶ್ರೀಮಂತಿಕೆಯ ಗಂಡು ದೊರಕಲಿ ಬೇಗ;
ಸರಸ ಜೀವನ ಸರಸಿ ಬತ್ತದಿರಲಿ.
ಸುಕುಮಾರ ಸುಮದಂತೆ ನಿನ್ನ ಹೊಸ ಬಾಳರಳಿ
ಸೌಶೀಲ್ಯ ಸೌಗಂಧ ಸೂಸುತಿರಲಿ!'

—ಸುಧಾಕರ

ಬಾಗಿಲಿಗೆ ಬಂದು ಮಾರುವವರು

ಇದು ಆಟಂ ಯುಗ, ಸ್ಪುಟ್ನಿಕ್ ಯುಗ ಎಂದು ಮುಂತಾಗಿ ಹೇಳುವುದುಂಟು. ಅದೇನೇ ಇರಲಿ, ಇದು ಸದ್ದಿನ ಯುಗ ಎಂಬುದನ್ನಂತೂ ಅಲ್ಲಗಳೆಯುವಂತಿಲ್ಲ.

ಜಗತ್ತಿನಲ್ಲಿರುವ ಸದ್ದುಗಳನ್ನೆಲ್ಲ ವಿಂಗಡಿಸಿ ವರ್ಗೀಕರಿಸಿ ಟಿಪ್ಪಣಿ ಬರೆಯುತ್ತ ಹೋದರೆ ದೊಡ್ಡ ಒಂದು ಕಂತೆಯೇ ಸಿದ್ಧವಾದೀತು. ರಾಮಾಯಣ ಕಾವ್ಯಗಳ ಹೊರೆಯನ್ನು ಹೊರಲಾರದೆ ಫಣಿರಾಯ ತುಂಬ ಬಳಲಿದನಂತೆ. ಆದರೆ ಸದ್ದಿನ ಕುರಿತು ಒಂದು ಕಂತೆ ಸಿದ್ಧವಾದರಂತೂ ಆತ ಬಜ್ಜಿಯಾಗಿ ಹೋದಾನೆಂದು ಕಾಣುತ್ತದೆ. ಅಷ್ಟೊಂದು ಬಗೆಯ ಸದ್ದುಗಳಿವೆ ಇಂದಿನ ಪ್ರಪಂಚದಲ್ಲಿ.

ನಗರವೊಂದರ ಕಿವುಡುಗೊಳಿಸುವ ಸದ್ದಿನ ನಡುವೆ ಕುಳಿತಾಗ ಹತ್ತು ಹದಿನೈದು ವರ್ಷಗಳ ಹಿಂದೆ, ಬಾಲ್ಯದಲ್ಲಿ ನಾನಿದ್ದ ಊರಿನ ಬೀದಿಯನ್ನು ಜ್ಞಾಪಿಸಿಕೊಂಡೆ. ಜಾತ್ರೆ, ತೇರು, ಮದುವೆ ಮೆರವಣಿಗೆ ಅಥವಾ ವಿಶೇಷ ಸಮಾರಂಭಗಳೇನಾದರೂ ಇಲ್ಲದಿದ್ದರೆ ಆ ಬೀದಿಯಲ್ಲಿ ಅಂಥ ಗದ್ದಲವೆಂಬುದೇ ಇರಲಿಲ್ಲ. ಶಾಲೆಗೆ ಹೋಗುವ ಅಥವಾ ಆಟವಾಡುವ ಮಕ್ಕಳ ಮಾತುಕತೆಯ ಧ್ವನಿ, ಅವರ ಹರ್ಷೋದ್ಗಾರಗಳು, ಕೂಗಾಟ ಚೀರಾಟಗಳು—ಇವೆಲ್ಲಾ ಗಲಾಟೆಯೆನಿಸಬಹುದಾದರೂ ಇರಲಿ ಎನಿಸುವ ಗಲಾಟೆಗಳು. ಮಕ್ಕಳ ಸದ್ದಿಲ್ಲದೆ ಮೆರೆಯುವ ಶಾಂತಿ ಸ್ಮಶಾನದ ಶಾಂತಿಯಂತೆ.

ಆ ಬೀದಿಯ ಕುರಿತು ಹೀಗೇ ಯೋಚಿಸುತ್ತ ಕುಳಿತಿರಲು, ಅಲ್ಲಿ ಕೇಳಿಬರುತ್ತಿದ್ದ ಬೇರೊಂದು ಬಗೆಯ ಸದ್ದುಗಳೂ ಜ್ಞಾಪಕಕ್ಕೆ ಬಂದುವು. ತಮ್ಮಲ್ಲಿರುವ ಸರಕನ್ನು ತಲೆಯಮೇಲೆ ಹೇರಿಕೊಂಡೋ ಚಿಕ್ಕ ಗಾಡಿಗಳಲ್ಲಿ ತಳ್ಳಿಕೊಂಡೋ ಮನೆ ಮನೆಯ ಬಾಗಿಲಿಗೆ ಕೊಂಡೊಯ್ದು ಕೂಗಿ ಮಾರುವವರ ಸದ್ದದು. ಕೇವಲ ಜೀವನ ನಿರ್ವ ಹಣೆಗಾಗಿ ಮನುಷ್ಯಕಂಠದಿಂದ ಹೊರಹೊಮ್ಮಿ ಬೀದಿಯಲ್ಲಿ ಕೇಳಿಬರುವ ಈ ಸದ್ದು ನಮ್ಮ ಸಹನೆಯನ್ನು ಬೇಡುತ್ತದೆ. ಆ ಸದ್ದುಗಳನ್ನು ನೆನಪಿಗೆ ತಂದುಕೊಂಡಂತೆಲ್ಲ ಅವುಗಳಿಗೆ ಸಂಬಂಧಿಸಿದ ಮಧುರವಾದ ಚಿತ್ರಗಳು ಮನಸ್ಸಿನಲ್ಲಿ ಮೂಡತೊಡಗಿದವು.

ಬೆಳಗ್ಗೆದ್ದ ಕೂಡಲೇ ಕೇಳಿ ಬರುತ್ತಿದ್ದುದು 'ಹಾಲು' ಎಂಬ ಸದ್ದು. ಆ ಸದ್ದು ಸಕಾಲದಲ್ಲಿ ಕೇಳಿಬಂದರೆ ಉಂಟಾಗುವ ಭರವಸೆಯಾದರೂ ಎಂತಹದು! ಇನ್ನೇನು ಕಾಫಿ ಸಿದ್ಧವಾಗಿಬಿಡುತ್ತದೆ ಎಂಬ ಭರವಸೆ ನಮ್ಮ ಹುರುಪನ್ನು ಇಮ್ಮಡಿ ಸುತ್ತದೆ. ಹಾಲಿನ ಪಾತ್ರೆಯನ್ನು ಒಳಗೊಯ್ಯಲು ಮಕ್ಕಳು ನಾ ಮುಂದು ತಾ ಮುಂದು ಎಂದು ನುಗ್ಗುತ್ತವೆ. ಉತ್ಸಾಹ ಅತಿಯಾದರೆ ಹಾಲಿನ ಪಾತ್ರೆ ಮಗುಚಿ ಕೊಂಡು ಸಂಬಂಧಪಟ್ಟವರಿಗೆ ತಕ್ಕ ಪುರಸ್ಕಾರ ದೊರೆಯುವುದೂ ಇದೆ.

ಅನಂತರ ಬರುವವಳು ಮೊಸರಿನವಳು. ಅವಳೊಡನೆ ಬೆಣ್ಣೆಯೂ ಇರುತ್ತದೆ. ಆದರೂ ಆಕೆ "ಮೊಸರು ಬೇಕೇನಮ್ಮ ಮೊಸರೋ" ಎಂತಲೇ ಕೂಗುವುದು. ಮೊಸರು ಬೆಣ್ಣೆಗಳನ್ನು ನಾವೇನು ಪ್ರತಿನಿತ್ಯ ಹಾಕಿಸಿಕೊಳ್ಳುತ್ತಿದ್ದಿಲ್ಲ. ಬೇಕೆನಿಸಿದಾಗ

ಮಾತ್ರ ಆಕೆಗೆ ಕರೆ. ಆಕೆ ಮೊಸರಿನ ಪಾತ್ರೆಗಳುಳ್ಳ ಬುಟ್ಟಿಯನ್ನು ಕೆಳಗಿಳಿಸಿದಳೆಂದರೆ ಸರಿ; ಎಳೆಜೀವಗಳೆಲ್ಲ ಅವಳ ಸುತ್ತಮುತ್ತ ನೆರೆದುಬಿಟ್ಟಿರುತ್ತವೆ. ಅವರಿಗೇನು ಅಷ್ಟು ಕುತೂಹಲ ಎಂದು ಕೇಳಬಹುದು. ಕುತೂಹಲಕ್ಕೆ ಕಾರಣವುಂಟು. ಮೊಸರು ಬೆಣ್ಣೆಗಳನ್ನು ಆಕೆ ಅಳೆದು ತೂಗಿ ಕೊಡುವುದನ್ನು ನೋಡುವ ಕುತೂಹಲವೇ? ಹೌದು. ಆದರೆ ಅದು ಮಾತ್ರವಲ್ಲ. ಮೊಸರಿನವಳ ಬುಟ್ಟಿಯಲ್ಲಿ, ಮಡಕೆಗಳ ಎಡೆಯಲ್ಲಿ, ಏನಿದೆಯೋ ಯಾರು ಬಲ್ಲರು? ಹೆಣ್ಣು ಮಕ್ಕಳ ಕೈಗೆ ಒಳ್ಳೆಯ ಸುಗಂಧವುಳ್ಳ ಒಂದು ಹೂವಿನ ಕುಚ್ಚು ಸಿಗಬಹುದು. ಹುಡುಗರಿಗೆ ಪೇರಳೆಯೋ ನೇರಳೆಯೋ ದಕ್ಕಿದರೂ ದಕ್ಕಬಹುದು. ಅಂತೂ ಅದು ಹಾಲು ಬೆಣ್ಣೆ, ಮೊಸರುಗಳ ಬುಟ್ಟಿಯೆಂದು ಆಕೆ ಹೇಳಿದರೂ ನಂಬುವಂತಿಲ್ಲ. ಏಕೆಂದರೆ ಸ್ವಾನುಭವ ನೋಡಿ! ಮಕ್ಕಳತಾಯಿ ಮೊಸರು ಬೆಣ್ಣೆಗಳಿಗೆ ಪಾತ್ರೆ ತರುವ ಈ ಹೊತ್ತಿಗೆ ಈ ಪುಟ್ಟ ಕೈಗಳು ಬುಟ್ಟಿಯ ಶೋಧನೆ ನಡೆಸಿಯಾಗಿರುತ್ತದೆ. ಮೊಸರಿನವಳು ಗದರಿಸಿದರೆ ಗದರಿಸುತ್ತಲೇ ಇರಬೇಕು. ಎಂದೂ ಮಡಕೆ ಒಡೆದುಹೋಗದಿದ್ದುದು ಆಕೆಯ ಪುಣ್ಯ!

ಸರಿ, ಪಾತ್ರೆಗಳು ಬಂದುವು. ರಸರಸವಾಗಿ ಮಾತನಾಡುತ್ತ, ತನ್ನ ಮೊಸರು ಬೆಣ್ಣೆಗಳನ್ನೆಲ್ಲ ಬಣ್ಣಿಸುತ್ತಾ ಮೊಸರಿನವಳು ಕೇಳಿದ್ದಕ್ಕಿಂತ ಎರಡು ಪಾಲು ದಾಟಿಸಿಬಿಟ್ಟಿರುತ್ತಾಳೆ. ಆಮೇಲೆ ನಾಲ್ಕು ಸುಖ ದುಃಖದ ಮಾತು. ಒಳಗೆ ಏನಾದರೂ ತಿಂಡಿಯಿದ್ದರೆ ಎಲೆಯಲ್ಲಿ ಬರುತ್ತದೆ. ಅದು ಮುಗಿಸಿ ಆಕೆ ತಾಂಬೂಲದ ಚೀಲ ಬಿಚ್ಚಿದಳೆಂದರೆ ಮತ್ತೆ ಕೊಂಚ ಹರಟೆ. ಹೀಗೆ ಒಂದು ವ್ಯಾಪಾರಕ್ಕೆ ಅರ್ಧಗಂಟೆಯೇ ಬೇಕಾಗುತ್ತದೆ. ಆದರೂ ಮೊಸರಿನವಳು ವಿಳಂಬವಾಯಿತೆಂದು ಆತುರಪಟ್ಟದ್ದನ್ನು ಕಾಣೆ. ಮತ್ತೊಂದು ಕ್ಷಣದಲ್ಲಿ ಆಕೆ ಬೀದಿಗಿಳಿದು ಸಾಗುತ್ತಾ "ಮೊಸರು ಬೇಕೆನಮ್ಮಾ! ಮೊಸರೋ" ಎಂದು ಮಧುರವಾಗಿ ಕೂಗುವಾಗಲೂ ಅದರಲ್ಲಿ ಅವಸರದ ಛಾಯೆ ಇಲ್ಲ.

ಮೊಸರಿನವಳು ಹೋದ ಬೆನ್ನಿಗೇ ಹೂವಿನ ಹುಡುಗಿ ಬಂದರೂ ಬಂದಳು. ಆದರೆ ಆಕೆ ಹೆಚ್ಚಾಗಿ ಬರುವುದು ಸಾಯಂಕಾಲದ ಹೊತ್ತಿಗೆ. ಆಕೆ ಬಂದಳೆಂದರೆ ಸಡಗರವೆಲ್ಲ ಹುಡುಗಿಯರಿಗೆ. ಹೆಣ್ಣು ಮಕ್ಕಳಿಗೆ ಹೂತಿಡುವಷ್ಟು ಹೂವಿದ್ದರೂ ತೃಪ್ತಿಯುಂಟೆ? ಬೆಳೆದ ಮೇಲೆ ಅವರು 'ಫ್ಯಾಶನಿ'ಗೆ ಚೆನ್ನಲ್ಲ ಎಂದು ಹೂವುಗಳನ್ನು ಕಡೆಗಣಿಸುವ ಸಂಭವವಿರಬಹುದಾದರೂ ಲಂಗ ಹಾಕುವಾಗ ಹಾಗೆಯೇ? ಬಂದಷ್ಟು ಬರಲಿ ಎನ್ನುತ್ತಾರೆ. ವಾಸನೆಯಿದ್ದರೂ ಆಗುತ್ತದೆ, ಇಲ್ಲದಿದ್ದರೂ ಆಗುತ್ತದೆ, ಅಂತೂ ಹೂವಾದರೆ ಸರಿ. ಅವರ ಈ ಚಪಲ ಹುಡುಗರನ್ನು ಕೀಟಲೆಗೆ ಪ್ರೇರೇಪಿಸುತ್ತದೆ. ಹೂವಿನವಳು ದೂರದಿಂದ ಬರುತ್ತಿರುವಾಗಲೇ "ಲೇ ಹೂವ ಬೇಡ ನಮಗೆ ಹೋಗು ಹೋಗು" ಎಂದು ಬೊಬ್ಬಿರಿಯತೊಡಗುತ್ತಾರವರು. ಹುಡುಗಿಯರು ಈ ತುಂಟರನ್ನು ಕೆಂಡಕಾರುವ ಕಣ್ಣುಗಳಿಂದ ನೋಡುತ್ತಾ "ಅಮ್ಮಾ.... ನೋಡಲ್ಲಿ ರಾಮು...." ಎಂದು ಮುಂತಾಗಿ ನಿಂತಲ್ಲಿಂದಲೇ ಕೂಗಿ ದೂರಿಡುತ್ತಾ ಹೂವಿನವಳಿಗೆ "ಬಾರೇ,

ಬೇಕು ನಮಗೆ ಹೂವು" ಎಂದು ಆಮಂತ್ರಣ ಕೊಡುತ್ತಾರೆ. ಆಕೆಗೆ ಈ ಕರೆ ಬೇಕಾಗಿಯೇ ಇಲ್ಲ. ಸ್ವಜಾತಿ ಪ್ರೇಮ! ಅಲ್ಲದೆ ಗುಟ್ಟು ಆಕೆಗೆ ಗೊತ್ತು. ಆದ್ದರಿಂದ ಬಂದೇ ಬರುತ್ತಾಳೆ ನಗುತ್ತಾ. ಹುಡುಗರಿಗೆ ಇನ್ನೇನು ಮಾಡಲೂ ತೋಚದೆ, ಒಂದು ವಿಲಕ್ಷಣವಾದ ಮತ್ಸರದಿಂದ ಉರಿಯುತ್ತಾ ತಂಗಿಯ ಜಡೆಹಿಡಿದು ಜಗ್ಗಿಯೋ, ಅಕ್ಕನ ಬೆನ್ನಿಗೊಂದು ಬಾರಿಸಿಯೋ ಅಲ್ಲಿಂದ ಕಂಬಿಕೀಳುತ್ತಾರೆ. ಆ ಹೊತ್ತಿಗೆ ಹುಡುಗಿಯರಿಗೆ ಅದರ ಪರಿವೆಯೇ ಇರುವುದಿಲ್ಲ. ಏಕೆಂದರೆ ಅವರು ಹೂವಿನಲ್ಲಿ ಮುಳುಗಿರುತ್ತಾರೆ.

ಬಳೆಗಾರ ಬಂದರೂನೂ ಹಾಗೇನೆ. ಹುಡುಗರದೇನೂ ನಡೆಯುವುದಿಲ್ಲ. ಹುಡುಗಿಯರದೇ ಕಾರುಬಾರು. ಸಾಲದ್ದಕ್ಕೆ ಆತ ಹುಡುಗರೇನಾದರೂ ಕೀಟಲೆ ಮಾಡಿದರೆ ತನ್ನ ಕೈಯಲ್ಲಿರುವ ಬಡಿಗೆಯನ್ನೇ ಎತ್ತುತ್ತಾನೆ. "ಬಳೆಗಾರ ಚನ್ನಯ್ಯ–ಅಲ್ಲ ತಿಪ್ಪಣ್ಣ–ಬಾಗಿಲಿಗೆ ಬಂದಿಹನು" ಎಂದರೆ ಹುಡುಗರೆಲ್ಲ ಹಿತ್ತಲ ಕಡೆಗೆ ಓಡಬೇಕು ಅಥವಾ ಬೀದಿಗೆ ಬೀಳಬೇಕು. ಆತ ಗಂಡುಮಕ್ಕಳನ್ನು ಹತ್ತಿರ ಬರಗೊಡಿಸುವುದಿಲ್ಲ. ಎಂದೋ ಯಾರೋ ಹುಡುಗ ಅವನ ಬಳೆಯಕಟ್ಟನ್ನು ಎತ್ತಿಹಾಕಿ ಅನಾಹುತ ಮಾಡಿದ್ದನಂತೆ. ಆದ್ದರಿಂದಲೇ ಆತನಿಗೆ ಬಾಲಕವರ್ಗದ ಮೇಲೆ ದ್ವೇಷ. ಹುಡುಗರೇನಾದರೂ ಮುಂದೆ ಬಂದರೆ "ಬಾ ಇಲ್ಲಿ ಬಳೆ ಅಲ್ಲ, ಬೇಡಿ ತೊಡಿಸ್ತೀನಿ ಕೈಗೆ" ಎಂದು ಗದರಿಸುವ ಆತ. ಮುದುಕ ಸಾಬಿಯೊಬ್ಬ "ಹುಡುಗರನ್ನು ಹೂತಿಟ್ಟ ಜಾಗದಲ್ಲಿ ಮಾತ್ರ ನನ್ನನ್ನು ಹೂಳಬೇಡಿ" ಎಂದು ಕೇಳಿಕೊಂಡ ಕತೆಯನ್ನು ಹೇಳುವ. ಹುಡುಗರು ದೂರದಿಂದ ನಿಂತು ಆತನ "ಬಳೆ ಬೇಕೇನಪ್ಪಾ ಬಳೆ" ಎಂಬ ಕೂಗನ್ನು ಅನುಕರಿಸಿ ಅಣಕಿಸಿಯೇ ತೃಪ್ತಿಗೊಳ್ಳಬೇಕು. ಆದರೆ ಹೆಣ್ಣುಮಕ್ಕಳ ಕುರಿತು ಆತನಿಗೆ ಎಷ್ಟೊಂದು ಕಕುಲಾತಿ. ಆಹಾ, ಅವರಿಗೂ ಆತನನ್ನು ಕಂಡರೆ ಏನು ಆದರ! . . . !

ಇನ್ನು ಹಣ್ಣುಗಳನ್ನು ತಲೆಯಮೇಲೆ ಹೊತ್ತು ಮಾರುವ ಬುಡಾನ್ ಸಾಬಿ ಬಂದರೆ ಎಲ್ಲರಿಗೂ ಸಂತೋಷ. ಆಗ ಹುಡುಗರು ಹುಡುಗಿಯರು ಎಂಬ ಭೇದವಿಲ್ಲ. ಬೀದಿಯ ತುದಿಯಲ್ಲಿ ಆತ ದನಿಯೆತ್ತಿದರೆ ಸಾಕು, ಮಕ್ಕಳೆಲ್ಲಾ ಜಗಲಿಗೆ ಬಂದು ನಿಲ್ಲುತ್ತಾರೆ. ಆತ ಸರಿಯಾಗಿ ಪ್ರತಿ ಐವತ್ತು ಹೆಜ್ಜೆಗೊಂದು ಸಲ ಯಾವುದಾದರೊಂದು ಹಣ್ಣಿನ ಹೆಸರೆತ್ತಿ ಕೂಗುತ್ತಾನೆಂದು ನಾವು ಎಣಿಸಿ ನೋಡಿದ್ದೆವು. ಮೂರು ಸಲಕ್ಕೊಮ್ಮೆ ತನ್ನಲ್ಲಿರುವ ಎಲ್ಲಾ ಹಣ್ಣುಗಳ ಹೆಸರನ್ನು ಉಚ್ಚರಿಸುತ್ತಾನೆ. ಆತನ ಕೂಗು ಅವನ ಹಣ್ಣಿಗಿಂತಲೂ ರುಚಿ ರುಚಿ. ರೈಲ್ವೇ ಸ್ಟೇಶನ್ನುಗಳಲ್ಲೂ ಆ ಹಣ್ಣು, ಈ ಹಣ್ಣು ಎಂದು ಸೊಗಸಾಗಿ ಕೂಗಿ ಮಾರುವವರಿದ್ದಾರೆ. ಆದರೆ ಅವರಾರೂ ನಮ್ಮ ಬುಡಾನ್ ಸಾಬಿಯನ್ನು ಮೀರಿಸುವಂತಿಲ್ಲ. ಆತ "ಹಲಸ್ನಣ್ಣು, ಬಾಳೆಹಣ್ಣು.... ಮಾಯಿನಣ್ಣೋ" ಎಂದು ಒಮ್ಮೆ ಕೂಗಿದರೆ ಸಾಲದೆ! ಅಷ್ಟೇ ಅಲ್ಲ; ಆತ ಹುಡುಗರು ಮಕ್ಕಳಿಗೂ ಕೂಡ ಸ್ಯಾಂಪಲ್ ನೋಡಲು ಚಾಕುವಿನಿಂದ ಕೆತ್ತಿ ಹಣ್ಣಿನ ತುಣಕೊಂದನ್ನು ಕೊಡುವಷ್ಟು ಉದಾರಿ!

ಅವನಂತೆಯೇ ಕೊಬ್ಬರಿ ಮಿಠಾಯಿ ಇತ್ಯಾದಿಗಳನ್ನು ಮಾರುವವನಿಗೂ, ಹುರಿಗಡಲೆ ಮಂಡಕ್ಕಿಯವನಿಗೂ ನಮ್ಮ ಬೀದಿಯಲ್ಲಿ ಸದಾ ಸ್ವಾಗತವಿದೆ. ಅವರೇನೊ ಕೂಗಿ ಹೇಳುತ್ತಾರೆ. ಆದರೆ ಅವರು ದನಿಯೆತ್ತದಿದ್ದರೂ ಮಕ್ಕಳಿಗೆ ಅವರ ಆಗಮನ ಹೇಗೋ ತಿಳಿದುಹೋಗಿಬಿಡುತ್ತದೆ. ಆ ಕ್ಷಣ ಅವರು ತಂದೆ ತಾಯಿಗಳನ್ನು ಕಾಡತೊಡಗುತ್ತಾರೆ. ಪುಟ್ಟ ಪುಟ್ಟ ನೆಂಟ ನಾದನಿಯರೆಲ್ಲಾ ಭಾವನ ಷರ್ಟು ಹಿಡಿದು ಜಗ್ಗುತ್ತಾರೆ. ಜನಿವಾರ ಕಡಿಯುತ್ತೇವೆಂದು ಬೆದರಿಸುವುದೂ ಉಂಟು.

ಹೀಗೆ ತಿಂಡಿ ತಿನಸುಗಳನ್ನೂ, ಹಣ್ಣು ಹಂಪಲುಗಳನ್ನೂ, ಹೊತ್ತು ಮಾರುವವರ ಕುರಿತು ಪ್ರಸ್ತಾಪಿಸುವಾಗ ಆನಂದರ 'ಪಾಪಯ್ಯ ಶೆಟ್ಟಿ' ಯನ್ನು ನೆನೆಯದಿರುವುದು ಸಾಧ್ಯವಿಲ್ಲ. ಅವಲಕ್ಕಿ, ಪುರಿ, ಕಡಲೆಕಾಯಿ, ಕಿತ್ತಳೆತೊಳೆ ಪೆಪ್ಪರ್‌ಮಿಂಟ್ ಬೆಣ್ಣೆ ಬಿಸ್ಕತ್ತುಗಳನ್ನು ಕತ್ತಿಗೆ ಕಟ್ಟಿಕೊಂಡ ಡಬ್ಬಿಯಲ್ಲಿ ತುಂಬಿಕೊಂಡು, ಸರಸ್ವತಿಯ ಅವಕೃಪೆಗೆ ಒಳಗಾಗಿದ್ದ ಆತ "ಅಬಡಕ್ಕಿ ಪುಡಿ ಹೊಂಡೆ", "ಹುಡಿಗಡಡೆ", "ಬೆಡ್ಡೆ ಬಿದ್ದದ್ದೋ" ಎಂದು ಮುಂತಾಗಿ ಕೂಗುತ್ತಾ ಕಾಲೆಳೆದು ಹಾಕುತ್ತಿರುವ ದೃಶ್ಯ ಕಣ್ಣಮುಂದೆ ಕಟ್ಟಿದಂತಾಗುತ್ತದೆ. ದುಃಸ್ಥಿತಿಗೊಳಗಾಗಿದ್ದ ನಳ ಮಹಾರಾಜನ ರೂಪವನ್ನೂ, ಅಂಗಾಂಗ ವೈಖರಿಯನ್ನು ಪಡೆದ ಅಂಥವನೊಬ್ಬ ಶಿವಮೊಗ್ಗದಲ್ಲಿ ಇದ್ದನೋ ಇಲ್ಲವೋ-ಅಂತೂ ಆತ ನನ್ನ ಮಟ್ಟಿಗೆ ತೀರಾ ನಿಜ ನಿಜ ಎನಿಸಿ ಬಿಟ್ಟಿದ್ದಾನೆ-ಆನಂದರ ಕೈವಾಡದಿಂದ. ಇರಲಿ. ಇದುವರೆಗೆ ಮುಖ್ಯವಾಗಿ ಕಿರಿಯರ ಆಸಕ್ತಿ ಕುತೂಹಲಗಳನ್ನು ಕೆರಳಿಸುವ ಮಾರಾಟಗಾರರ ಕುರಿತು ಮಾತ್ರ ಪ್ರಸ್ತಾಪಿಸಿದ್ದಾಯಿತು. ಇನ್ನು ತರಕಾರಿ ಹೊತ್ತು ಬರುವವರ ತಂಡ ಬೇರೆಯೇ ಇದೆ. ಅವರ ವ್ಯವಹಾರದಲ್ಲಿ ಹುಡುಗರಿಗಿರುವ ಆಸಕ್ತಿ ಅಷ್ಟಕ್ಕಷ್ಟೆ. ಆ ವಿಚಾರವೆಲ್ಲ ತಾಯಂದರಿಗೆ, "ಮೆಂತೆಸೊಪ್ಪು ಹೋಗ್ತಾ ಇದೆ, ಕೂಗೋ" ಎಂದು ತಾಯಿ ಹೇಳಿದರೆ ಮಕ್ಕಳು ಬೇಕೋ ಬೇಡವೋ ಎಂಬಂತೆ ಎದ್ದು ಬೀದಿ ಬಾಗಿಲಿಗೆ ಹೋಗಿ "ಏಯ್ ಸೊಪ್ಪು" ಎಂದು ಬಿಟ್ಟು ಬರುವುದುಂಟು. ಹುಲ್ಲಿನ ಹೊರೆಹೊತ್ತು ಬರುವ ಹಳ್ಳಿಯ ಲಂಬಾಣಿಗರ ಹೆಂಗಸರ ವಿಷಯದಲ್ಲಿಯೂ ಹಾಗೆಯೇ; ಹುಡುಗರಿಗೆ ಒಂದು ತರದ ಔದಾಸೀನ್ಯ.

ಇವರೆಲ್ಲ ನಮ್ಮ ಬೀದಿಯ ಚಿರಪರಿಚಿತ ಯಾತ್ರಿಕರು. ಇನ್ನು ಆಗೊಮ್ಮೆ ಈಗೊಮ್ಮೆ ಸಂದರ್ಶಿಸುವವರೂ ಇದ್ದಾರೆ. ಹಳೆ ಜರಿ ಇದೆಯೇ ಎಂದು ವಿಚಾರಿಸುತ್ತಾ ಬರುವವರು, ರದ್ದಿ ಕಾಗದ, ಖಾಲಿಸೀಸೆ, ಇತ್ಯಾದಿಗಳನ್ನು ಸಂಗ್ರಹಿಸಲು ಬರುವವರು, ಕೇಸರಿ, ಕರ್ಪೂರ ಮೊದಲಾದ ಸುಗಂಧದ್ರವ್ಯಗಳನ್ನು ಮಾರುವ ಉತ್ತರದವರು, ಅಷ್ಟೇಕೆ, ಜಾತಿ ನಾಯಿಮರಿಗಳನ್ನು ಕುಕ್ಕೆಯಲ್ಲಿ ತುಂಬಿಕೊಂಡು ಬೇಕೆ ಬೇಕೆ ಎಂದು ಕೇಳುವವರು—ಹೀಗೆ ನಾನಾ ವಿಧದ ಸರಕುಗಳನ್ನು ಬಾಗಿಲಿಗೆ ತಂದು ಮಾರುವವರು ಅನೇಕರು. ಅವರು ಮಾರುವ ವಸ್ತುಗಳಲ್ಲಿ ಎಷ್ಟು ವೈವಿಧ್ಯವಿದೆಯೋ

ಅವರ ಮಾತುಕತೆ, ವೇಷಭೂಷಣ, ತಮ್ಮ ವಸ್ತುವಿನ ಹೆಸರನ್ನು ಹಿಡಿದು ಕೂಗುವ ಪರಿ,–ಇವುಗಳಲ್ಲಿಯೂ ಅಷ್ಟೇ ವೈವಿಧ್ಯವಿದೆ. ಹಿಂಗು ಮಾರುವವನೊಬ್ಬನಿದ್ದಾನೆ. ಅವನ ಮುಂಡಾಸು ಮೂವತ್ತು ಮೊಳದುದ್ದ. ಎಳೆ ಮಕ್ಕಳು ಊಟಮಾಡದೆ ಹಟ ಹಿಡಿದಾಗ, ಆ ಮೀಸೆ ಮುಂಡಾಸಿನ ಗೊಗ್ಗಯ್ಯ ಬಂದು ಹಿಡಿದುಕೊಂಡು ಹೋಗುತ್ತಾನೆಂದರೆ ಸರಿ–ಅವು ಅಳುನಿಲ್ಲಿಸಿ ಒಳಗೊಳಗೇ ಬಿಕ್ಕತೊಡಗುವುವು.

ಒಮ್ಮೆ ಈ ಬೀದಿಗೆ ನವನವೀನ ಸಾಮಗ್ರಿಯೊಂದನ್ನು ಮಾರಿಕೊಂಡು ಒಬ್ಬಾತ ಬಂದಿದ್ದ. ನಮ್ಮ ಬೀದಿಯ ತುದಿಯಲ್ಲಿ ಆತ ತನ್ನ ಸರಕಿನ ಹೆಸರು ಹಿಡಿದು, ನಾವು ಎಂದೂ ಕೇಳಿರದ ರೀತಿಯಲ್ಲಿ ಕೂಗುತ್ತಾ ಬಂದಾಗ ಆತ ಮಾರುವ ವಸ್ತು ಏನೆಂದು ತಿಳಿಯಲು ನಮಗೆಲ್ಲ ತುಂಬ ಕುತೂಹಲ. ಅವನ ರೂಪವೋ ಅವನ ಘೋಷಣೆಯಷ್ಟೇ ವಿಲಕ್ಷಣವಾಗಿತ್ತು. ಅತ್ಯಂತ ಕೊಳೆಯಾದ ಬಟ್ಟೆಗಳನ್ನು ಧರಿಸಿಕೊಂಡು ಬಗಲಿಗೊಂದು ಪೆಟ್ಟಿಗೆಯನ್ನು ತೂಗಿಸಿ, ಕೈಯಲ್ಲೊಂದು ಚಿಕ್ಕ ಬಾಟಲಿಯ ಮಾಲೆಯನ್ನು ಹಿಡಿದು, ಅಂಥದೇ ಒಂದು ಮಾಲೆಯನ್ನು ಕತ್ತಿನಲ್ಲಿ ಧರಿಸಿ, ಕಪಾಲಮಾಲಿಯಂತೆ ಬರುತ್ತಿದ್ದ ಆತ ಮಾರುತ್ತಿದ್ದುದು ‘ನೊಯಿಲೆಣ್ಣೆ’ ಎಂಬ ವಸ್ತುವಿಶೇಷವೊಂದನ್ನು. ಆತ ವಿವರಿಸಿ ಹೇಳಿದ ಮೇಲೆ ‘ನೊಯಿಲೆಣ್ಣೆ’ ಬೇರೆ ಏನೂ ಆಗಿರದೆ ‘ನವಿಲಿನೆಣ್ಣೆ’ ಎಂದು ತಿಳಿಯಿತು. ಮಾನವನ ಈ ಘಟಕ್ಕೆ ಇರಬಹುದಾದ, ಇಲ್ಲದಿರಬಹುದಾದ, ಎಲ್ಲಾ ಬಗೆಯ ಪೀಡೆಗಳ ನಾಮಾವಳಿಯನ್ನು ಪಠಿಸಿ, ಅವುಗಳಿಗೆಲ್ಲಾ ಇದು ದಿವ್ಯೌಷಧಿ ಎನ್ನುತ್ತಾ ಸೇವನಾಕ್ರಮದಿಂದ ವಿವರಣೆಗಳೊಡನೆ ಒಂದು ಚಿಕ್ಕ ಬಾಟಲನ್ನು ತನ್ನ ಕೊರಳಮಾಲೆಯಿಂದ ತೆಗೆದುಕೊಟ್ಟ ನೊಯಿಲೆಣ್ಣೆಯವ. ಕೇವಲ ಒಂದು ರೂಪಾಯಿ ಕೊಟ್ಟರೆ ಸಾಕು ಎಂದ. ನಮ್ಮವರಿಗೆ ತಿಳಿಯದೆ ಇಂಥ ವ್ಯಾಪಾರ? “ಎಂಟಾಣೆ ಸಾಕೇ?” ಎಂದು ಕೇಳಿದರು ನಮ್ಮ ತಂದೆ. ಆತ ಒಂದೊಂದೇ ಆಣೆ ಇಳಿಸಿ ಕೊನೆಗೆ ನಾವು ಕೇಳಿದಷ್ಟಕ್ಕೇ ಕೊಟ್ಟುಬಿಟ್ಟ. ಅಷ್ಟರಲ್ಲಿ ಕುತೂಹಲಗೊಂಡು ಅಲ್ಲಿಗೆ ಬಂದಿದ್ದ ನಮ್ಮಜ್ಜಿ “ಏನಪ್ಪ ನವಿಲುಗರಿಗಳಿಂದ ತಯಾರಿಸುತ್ತೀರಾ ಈ ಎಣ್ಣೇನ?” ಎಂದು ಕೇಳಿದರು.

ಅದರಿಂದ ಉತ್ತೇಜನಗೊಂಡ ನವಿಲೆಣ್ಣೆಯವನು ತನ್ನ ಕಂತೆಯನ್ನು ಬಿಚ್ಚಿದ. ತನ್ನ ಊರು, ದೇಶ ಇತ್ಯಾದಿಗಳ ಪೀಠಿಕೆಯಿಂದ ಪ್ರಾರಂಭಿಸಿ ತಾನು ಹೆಗ್ಗಡದೇವನ ಕೋಟೆಯವನೋ ಹುಣಸೂರು ಕಡೆಯವನೋ ಎಂದು ತಿಳಿಸಿ, ನವಿಲಿನ ಚರ್ಬಿಯಿಂದ ಈ ಎಣ್ಣೆ ತಯಾರಿಸಿ ಮಾರಾಟಮಾಡುತ್ತಾ ಹೀಗೆ ಅಲೆದಾಡುವುದೆಂದು ವಿಶದಪಡಿಸಿದ. ಬಗಲಿಗೆ ನೇತುಹಾಕಿದ್ದ ಪೆಟ್ಟಿಗೆಯನ್ನು ಬಿಚ್ಚಿ ಅದರೊಳಗಿನ ಮುದ್ದೆ ಮುದ್ದೆಯಾದ ಏನೋ ಹೊಲಸು ಪದಾರ್ಥವನ್ನು ತೋರಿಸುತ್ತಾ “ಇದೇ ನೋಡಿ ನೊಯಿಲಿನ ಚರ್ಬಿ. ಇದರಲ್ಲಿ ಹತ್ತು ನೊಯಿಲಿನ ಚರ್ಬಿ ಇದೆ. ಈ ಕಡೆ ಮೂಲೆಯಲ್ಲಿ ಬಂದು ಸೇರಿದೆಯಲ್ಲ, ಇದು ಚರ್ಬಿ ಬಿಸಿಲಿನಲ್ಲಿ ಕರಗಿ ಎಣ್ಣೆಯಾದದ್ದು” ಎನ್ನುತ್ತಾ ಎಣ್ಣೆಯನ್ನು ತೋರಿಸಿ ಅದರ ಮಾಹಾತ್ಮ್ಯೆಯನ್ನು

ಮತ್ತೊಮ್ಮೆ ವರ್ಣಿಸತೊಡಗಿದ. ನಮ್ಮ ತಂದೆ 'ಚರ್ಬಿ' ಎಂಬ ಶಬ್ದ ಕಿವಿಗೆ ಬಿದ್ದೊಡನೆ ಆತ ಕೊಟ್ಟಿದ್ದ ಬಾಟಲನ್ನು ತೆಗೆದು ಕೆಳಗಿಡುತ್ತಾ "ಇದು ಸತ್ತ ನವಿಲುಗಳ ಚರ್ಬಿ ತಾನೆ?" ಎಂದು ವಿಚಾರಿಸಿದರು. ಆತ ಆಶ್ಚರ್ಯಗೊಂಡು "ಸತ್ತ ನೊಯಿಲೆಲ್ಲಿ ಬಂತು ಸ್ವಾಮಿ! ನಾವು ಕಷ್ಟಪಟ್ಟು ಹಿಡೀಬೇಕು ಅವನ್ನು" ಎಂದು ಮತ್ತೆ ಅದರ ವಿವರಣೆಗೆ ತೊಡಗಿದ. ಅಮ್ಮ ಹರಳೆಣ್ಣೆ ಕುಡಿದವರ ಮುಖಮಾಡಿಕೊಂಡು ಹೊರಟು ಹೋದರು. ನಾವು ಮಕ್ಕಳೆಲ್ಲಾ ಜುಗುಪ್ಸೆಗೊಂಡು "ಥೂ ಥೂ" ಎಂದೆವು. "ಮಹಾಪಾಪಿಗಳು ಕಣ್ರೋ, ನೀವು" ಎಂದರು ತಂದೆ, ನೊಯಿಲೆಣ್ಣೆಯವನಿಗೆ. "ಯಾಕೆ ಸ್ವಾಮಿ?"—ಎಂದು ಆತ ತಬ್ಬಿಬ್ಬಾಗಿ ಕೇಳಿದ. "ದೇವರು ಅಂಥ ಸೊಗಸಾದ ಹಕ್ಕಿಯನ್ನು ಸೃಷ್ಟಿಸಿದ್ದಾನೆ. ಅವುಗಳನ್ನು ಈ ರೀತಿ ಹಿಂಸೆಮಾಡಿ ಕೊಲ್ತೀರಲ್ಲೋ" ಎಂದು ಖೇದಗೊಂಡು ಹೇಳಿದರಿವರು.

ಆದರೆ ಆತ ಜಗ್ಗುವವನೇ? "ಅಯ್ಯೋ ಸ್ವಾಮಿ, ಸಾವ್ರ ಜನರ ಜೀವ ಉಳಿಸೋದಿಲ್ಲವೇ ನೊಯಿಲೆಣ್ಣೆ?" ಎಂದು ಸವಾಲು ಹಾಕಿದ ಆತ. "ಆಯಿತಪ್ಪ ಹೊರಡು, ಹೊರಡು" ಎಂದರಿವರು ಬೇಸತ್ತು. "ಇಸ್ಸಿ ಇಸ್ಸಿ" ಎಂದು ಕೂಗುತ್ತ ನಾವಾತನನ್ನು ಬೀಳ್ಕೊಟ್ಟೆವು. ಆತ ಹೊರಡುವಾಗ ಸತ್ತ ನವಿಲಿನ ರುಂಡ ಭಾಗವನ್ನು ತನ್ನ ಹೊಲಸು ಕೋಟಿನ ಜೇಬಿನಿಂದ ತೆಗೆದು ತೋರಿಸಿದಾಗಲಂತೂ ನಾವು ಕೈಗಳಿಂದ ಕಣ್ಣು ಮುಚ್ಚಿಕೊಂಡು ಚೀರಿಬಿಟ್ಟೆವು.

ನೊಯಿಲೆಣ್ಣೆಯವನ ಆ ಸಂದರ್ಶನವನ್ನು ನಾನು ಮರೆಯುವಂತಿಲ್ಲ. ಆ ಚಿತ್ರ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಜೀವಕಳೆ ನಂದಿ, ಹಿಂಡಿ ಹಿಪ್ಪೆಯಾಗಿ ಹೋಗಿದ್ದ ಆ ಪಕ್ಷಿಯ ಶಿರೋಭಾಗ, ಹಿಂದೊಮ್ಮೆ ದಿವ್ಯ ಸುಂದರ ಪುಷ್ಪದಂಥ ಜೀವಿಯೊಂದರ ಎಲ್ಲ ಬೆಡಗು ಬಿನ್ನಾಣಗಳಿಗೆ ಜೀವಕಳೆಕೊಡುವ ಮಕುಟವಾಗಿ ತ್ತೆಂಬುದನ್ನು ನೆನಸಿಕೊಂಡು ಈಗಲೂ ವೇದನೆಯಾಗುತ್ತದೆ. ನಮ್ಮ ಸ್ವಾರ್ಥಕ್ಕಾಗಿ ಈಶಸೃಷ್ಟಿಯ ಎಷ್ಟೊಂದು ವಸ್ತುಗಳನ್ನು ನಾವು ಹಿಂಸೆಗೊಳಪಡಿಸುತ್ತೇವೆ! ವೈಜ್ಞಾನಿಕ ಪ್ರಯೋಗಗಳಿಗಾಗಿ ಕೋತಿ, ಇಲಿ, ಕಪ್ಪೆ, ಕಪಿ ಇತ್ಯಾದಿಗಳ ಜೀವಹಾನಿಯುಂಟಾಗುವುದನ್ನು ನೆನೆದರೂ ಕೂಡ ಇಂಥ ಜೀವಹಾನಿಗೆ ಮಾನವ ನಿಗೆ ಏನು ಹಕ್ಕಿದೆ ಎನಿಸುವುದುಂಟು. ಆದರೆ ನವಿಲಿನಂತಹ ಹಕ್ಕಿಯನ್ನು ಕೊಂದೂ ಸುಖ ಪಡೆಯಲೆಳಸುವುದಕ್ಕೆ ಏನು ಹೇಳಬೇಕು.

ಆ ಕ್ಷಣ ಹೀಗೂ ಕಾಣುತ್ತದೆ. ಬುದ್ಧಿವಂತರೆನಿಸಿಕೊಳ್ಳುವವರೇ ಹಿಂದು ಮುಂದು ನೋಡದೆ ಮಾನವ ಜನಾಂಗವನ್ನೊಳಗೊಂಡು ಸಮಸ್ತ ಜೀವಕೋಟಿಗಳ ಮುಂಬರುವ ಪೀಳಿಗೆಯನ್ನು ಅಣುಶಕ್ತಿಯ ದುಷ್ಪರಿಣಾಮಗಳಿಗೆ ಬಲಿಕೊಡುವಂಥ ಹುಚ್ಚಾಟಗಳನ್ನಾಡುತ್ತಿರುವಾಗ ಹಳ್ಳಿಗಾಡಿನ ಬಡವನೊಬ್ಬ ತನ್ನ ಹೊಟ್ಟೆಯ ಪಾಡಿಗಾಗಿ ಜೀವಹಾನಿಯುಂಟುಮಾಡುವುದು ಅಷ್ಟೊಂದು ದೊಡ್ಡ ಅಪರಾಧ ವೆನಿಸದೋ ಏನೊ!

ಅಂತೂ, "'ನೋಯಿಲೆಣ್ಣೆ,' 'ಕೋಗಿಲೆ ತುಪ್ಪ' 'ಗುಬ್ಬಚ್ಚಿ ಭಸ್ಮ' ಎಂದು ಯಾರಾದರೂ ಮಾರಾಟ ಮಾಡಿಕೊಂಡು ಬಂದರೆ ಇನ್ನು ಮುಂದೆ ಹತ್ತಿರ ಬರಗೊಡಿಸಬೇಡಿ" ಎಂದರು ನಮ್ಮ ತಂದೆ. ಅಲ್ಲದೆ ಚೌಕಾಸಿಯಲ್ಲಿ ನಿಪುಣರಾದ ನಮ್ಮ ಪಕ್ಕದ ಮನೆಯವರು ಒಂದೇ ಆಣೆಗೆ ನವಿಲೆಣ್ಣೆ ಸೀಸೆಯನ್ನು ಗಿಟ್ಟಿಸಿಕೊಂಡಾಗಲಂತೂ ಅವರಿಗೆ ಆ ವರ್ಗದ ಮಾರಾಟಗಾರರ ಮೇಲಿನ ಕೋಪ ಇಮ್ಮಡಿಯಾಯಿತು.

ಚೌಕಾಸಿ ಎನ್ನುವಾಗ ಒಂದು ಮಾತು ಹೇಳಬೇಕು. ಅಲೆದಾಡಿ ಮಾರುವವರು, ಅದರಲ್ಲಿಯೂ ಅಪೂರ್ವ ವಸ್ತುಗಳನ್ನು ತರುವವರು ಯಾರೇ ಇರಲಿ, ಅಂಥವರೊಡನೆ ವ್ಯವಹರಿಸಲು ಸಾಮಾನ್ಯ ಬುದ್ಧಿವಂತಿಕೆ ಸಾಲದು. ಅವರೊಡನೆ ಸೇರಿಗೆ ಸವ್ವಾಸೇರಾಗಿ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ತುಂಬಾ ತಾಳ್ಮೆಯೂ ಬೇಕು. ನಮ್ಮ ತಂದೆ ಆ ಕೆಲಸಕ್ಕೆ ಹೇಳಿಸಿದವರಾಗಿದ್ದಿರಲಿಲ್ಲ. ಏಕೆಂದರೆ ಹಳೇ ಬಟ್ಟೆಗಳನ್ನು ಕೊಂಡುಕೊಂಡು ಬದಲಿಗೆ ಪಾತ್ರೆ ಪಡಗುಗಳನ್ನು ಕೊಡುವ ವ್ಯಾಪಾರಿಗಳು ಬಂದಾಗ, ಖಾಲಿ ಸೀಸೆ, ಹಳೇಪತ್ರಿಕೆ, ಮತ್ತು ಇತರ ಹಳೇ ಸಾಮಾನುಗಳನ್ನು ಕೊಂಡುಕೊಳ್ಳುವವರು ಬಂದಾಗ ನಮ್ಮ ತಂದೆ ಕೋಣೆ ಬಿಟ್ಟು ಹೊರಗೆ ಬರುತ್ತಿರಲಿಲ್ಲ. ತಾಸೆರಡು ತಾಸ ನಡೆಯುವ ಆ ಗೊಂದಲದ ವ್ಯವಹಾರಕ್ಕೆ ತಾಳ್ಮೆಯುಳ್ಳ ಸಮರ್ಥರು ನಮ್ಮಲ್ಲಿ ಬೇರೆಯೇ ಇದ್ದರು. ನಮ್ಮ ತಂದೆ ಬಲು ಬೇಗನೆ ಬುಟ್ಟಿಗೆ ಬೀಳುವ ಮೀನು. ಅದಕ್ಕೆ ಅವರ 'ನೊಯಿಲೆಣ್ಣೆ' ವ್ಯಾಪಾರವೇ ಸಾಕ್ಷಿ.

ಇದುವರೆಗೆಲ್ಲ ಮನೆಬಾಗಿಲಿಗೆ ಬಂದು ಏನಾದರೊಂದು ವಸ್ತುವನ್ನು ಮಾರುವವರ ಅಥವಾ ಕೇಳುವವರ ಸಮಾಚಾರ. ಇನ್ನು ಮಾರಾಟಕ್ಕೆ ಸರಕೇನಿಲ್ಲದಿದ್ದರೂ ತಮ್ಮಲ್ಲಿರುವ ವಿಶಿಷ್ಟ–ದೈಹಿಕ, ಮಾನಸಿಕ ಶಕ್ತಿಗಳನ್ನು ಹಣಕೊಟ್ಟಲ್ಲಿ ನಮಗಾಗಿ ವಿನಿಯೋಗಿಸಲು ಸಿದ್ಧರಾಗಿ ನಮ್ಮ ಬೀದಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಕೆಲವರ ನೆನಪಾಗುತ್ತದೆ. ಎಂದರೆ ಕಣಿ ಹೇಳುವವರು ಕೊರವಂಜಿಗಳೆ? ಹಾಲ್‌ಪಕ್ಕಿ ನರಸಣ್ಣಗಳೇ? ಅಲ್ಲ. ಅಂಥವರ ವಿಷಯ ಈಗ ಬೇಡ. ಕಟ್ಟಿಗೆ ಸೀಳುವ, ಸಾಣೆ ಹಿಡಿಯುವ, ಕಲ್ಲಿಗೆ ಚೇಣಿ ಹಾಕುವ ಕೆಲಸಗಳಲ್ಲಿ ಕುಶಲಿಗಳಾಗಿದ್ದ ಕೆಲವರು ತಮ್ಮ ವಿಶಿಷ್ಟತರದ ಕೂಗಿನಿಂದ ಆಗಾಗ ನಮ್ಮ ಗಮನವನ್ನು ಸೆಳೆಯುತ್ತಿದ್ದುದುಂಟು. ಅವರಿಂದ ಕೆಲಸಮಾಡಿಸದಿದ್ದರೂ, ಕೇವಲ ಅವರ ಕಂಠಶೋಷಣೆಗಾಗಿ ಏನಾದರೂ ಕಾಸು ಕೊಡುವುದು ಧರ್ಮ ಎಂದು ಒಂದೊಂದು ಸಲ ಅನಿಸುವುದೂ ಉಂಟು. ಆದರೆ ಹಕ್ಕಿಶಕುನದವರೋ, ಹಸ್ತಸಾಮುದ್ರಿಕರೋ ಜನರನ್ನು ಮರುಳು ಮಾಡಿ ಒಂದೆರಡಾಣೆಗಳನ್ನು ಹಾರಿಸಿಬಿಡಬಲ್ಲರಾದರೂ, ದುಡಿಯಲಿಚ್ಛಿಸುವ ಶ್ರಮಜೀವಿಗಳಿಗೆ ಕೆಲವೊಮ್ಮೆ ದಿನವಿಡೀ ಅಲೆದರೂ ಬಿಡುಗಾಸು ದೊರೆಯದಿರುವುದುಂಟು.

ಭಿಕ್ಷೆಎತ್ತಿ ಕೂಡ ಎಷ್ಟೋ ಜನರು ಹೊಟ್ಟೆ ತುಂಬಿಸಿಕೊಳ್ಳಲು ಸಮರ್ಥರಾಗಿರುವಾಗ ತಮಗೆ ಕೆಲಸಕ್ಕೆ ಅವಕಾಶ ಸಿಗದೆ ಹಸಿದಿರಬೇಕಾದ ಸಂದರ್ಭವುಂಟಾಗಿರಲು ಅವರಿಗೆ ಹೇಗನ್ನಿಸುತ್ತದೋ !

ನಮ್ಮ ಬೀದಿಗೆ ಅಂಥ ಇನ್ನೂ ಒಬ್ಬ ಸಂದರ್ಶಕನಿದ್ದ. ಇತರರಿಗೆ ಎಂದರೆ ಪರವೂರವರಿಗೆ ಅವನ ಕೂಗು ಲವಲೇಶ ಅರ್ಥವಾಗದು. ನಮ್ಮೂರಿನವರಿಗೆ ಅವನು ಬೇಕೆಬೇಕಾಗಿದ್ದ. ಆತನ ಹೆಸರು ಆಗಲೂ ನನಗೆ ಸರಿಯಾಗಿ ತಿಳಿದಿರಲಿಲ್ಲ. ಈಗಲಂತೂ ಜ್ಞಾಪಕವೇ ಬರುವುದಿಲ್ಲ. ಆದರೆ ನೀರು ಸೇದುವಾಗ ಕೈತಪ್ಪಿ ಬಾವಿಗೆ ಬಿದ್ದ ಕೊಡ ತಂಬಿಗೆ ಮೊದಲಾದ ಪಾತ್ರೆಗಳನ್ನೂ ಇತರ ವಸ್ತುಗಳನ್ನೂ ಲೀಲಾಜಾಲವಾಗಿ ಮೇಲಕ್ಕೆತ್ತಿ ತರುತ್ತಿದ್ದ ಆ ಗಾರುಡಿಗನ ಚಿತ್ರ ಮಾತ್ರ ಕಣ್ಣ ಮುಂದಿದೆ. ಎಂಥ ಆಳವಾದ ಬಾವಿಯನ್ನಾದರೂ ಆತ ಹಿಂದೆ ಮುಂದೆ ನೋಡದೆ ಹೊಕ್ಕು ಅದರಲ್ಲಿ ಬಿದ್ದ ಎಷ್ಟು ಚಿಕ್ಕ ವಸ್ತುವನ್ನಾದರೂ ಹುಡುಕಿ ತರುವ ವಿಶಿಷ್ಟ ಶಕ್ತಿ ಅವನಿಗಿತ್ತು. ಪುಣ್ಯಾತ್ಮನಿಗೆ ಸಂಪಾದನೆಯೂ ಚೆನ್ನಾಗಿತ್ತು. ಆದರೆ ಆತ ಅಹಂಕಾರಿಯಾಗಿದ್ದಿಲ್ಲ. ಕರೆದಕೂಡಲೇ ಬಂದುಬಿಡುತ್ತಿದ್ದ. ಅಲ್ಲದೆ ಎಷ್ಟೋ ಜೀವಗಳನ್ನು ಆತ ಬದುಕಿಸಿದ್ದ ! ಒಂದು ಅಶೋಕಚಕ್ರಕ್ಕೆ ಅರ್ಹನಾಗುವಷ್ಟು ಒಳ್ಳೆಯ ಕೆಲಸಮಾಡುತ್ತಿದ್ದನಾತ. ಆದರೆ ಚಕ್ರವಿರಲಿ, ಆತನ ಹೆಸರು ಕೂಡ ನನಗೆ ನೆನಪಾಗಲೊಲ್ಲದಲ್ಲ !

ಬಾಲಕರಾಗಿದ್ದ ನಮಗೆ ಆತನನ್ನು ಕಂಡರೆ ಎಷ್ಟೊಂದು ಆದರ ! ಬೇಕೆಂದೇ ಕೊಡವನ್ನೋ, ತಂಬಿಗೆಯನ್ನೋ ಬಾವಿಗೆ ತಳ್ಳಿ ಆತನ ಸಾಮರ್ಥ್ಯವನ್ನು ನೋಡುವ ಸುಯೋಗವನ್ನು ನಮ್ಮಲ್ಲಿ ಅನೇಕರು ಒದಗಿಸಿಕೊಂಡಿದ್ದೆವು !

" ಕೊಡ ತೆಗೆಯೋದಕ್ಕಿಯೆ ? " ಎಂದು ಆತ ತಾರಕದಲ್ಲಿ ಕೂಗುತ್ತಾ ಬೀದಿಯಲ್ಲಿ ಸಾಗುತ್ತಿದ್ದರೆ, ನಮಗೆ ಆ ಕೂಗನ್ನು ಅಣಕಿಸಿ ಕೂಗಿದಷ್ಟೂ ತೃಪ್ತಿಯಿಲ್ಲ. ಒಮ್ಮೆ ನಮ್ಮ ಚಿಕ್ಕಪ್ಪ " ಲೋ, ' ಕೊಡ ತೆಗೆಯೋದಕ್ಕಿದೆಯೆ ? ' ಎಂದು ಸ್ಪಷ್ಟವಾಗಿ ಕೂಗಿದರೇನಾಗುತ್ತಯ್ಯ ನಿನಗೆ ? ಏನೋ ಕತ್ತೆಗೇಯೋದಿದಿಯೆ ? ಎಂದ ಹಾಗೆ ಕೇಳಿಸುತ್ತೆ ನಿನ್ನ ಕೂಗು. " ಎಂದು ಆಕ್ಷೇಪಿಸಿದರು. ಅದಕ್ಕೆ ಆತನ ಉತ್ತರ ಇಷ್ಟೆ " ನಿತ್ಯ ನೂರೈವತ್ತು ಸಲ ಹೀಗೆಯೆ ಕೂಗುತ್ತ ನನ್ನ ಹಾಗೆ ನೀವೂ ಅಲೆದು ನೋಡಿ ಸ್ವಾಮಿ ; ಆಗ ಗೊತ್ತಾಗುತ್ತೆ " ಎಂದ. ಸುಳ್ಳಲ್ಲ ! ಪದೇ ಪದೇ ಒದರಿದರೆ ಮಾತು ಏನೇನೊ ಆಗಿ ರಾಗ ಮಾತ್ರ ಉಳಿಯುತ್ತದೆ. ಅದೇನೆ ಇರಲಿ, ಕೂಗುತ್ತ ಬೀದಿ ಅಲೆದು ಮಾರಾಟ ಮಾಡಿಯೋ, ಏನಾದರೂ ಕೆಲಸಮಾಡಿಯೋ ಬದುಕು ಸಾಗಿಸುವುದು ಸುಲಭವಲ್ಲ. ಅವರು ಮಾರುವ ವಸ್ತು, ಅವರು ಮಾಡುವ ಸೇವೆ ಹೇಗೇ ಇರಲಿ ; ಅವರ ಕೂಗಿಗಾದರೂ ಬೆಲೆಯಿರಬೇಕು. ಅವರು ಮಾಡುವ ಸದ್ದು ಒಮ್ಮೊಮ್ಮೆ ರಗಳೆ ಎನಿಸಿದರೂ ಒಟ್ಟಿನಲ್ಲಿ ನೋಡಿದರೆ ಅಂಥ ಸದ್ದುಗಳೆಲ್ಲ ನಮ್ಮ ಸಹನೆಯನ್ನೂ, ಸಹಾನುಭೂತಿಯನ್ನೂ ಬೇಡುತ್ತವೆ.

—ಎ. ಎಸ್. ರಾಮಕೃಷ್ಣ

ಕಡಲ ನೆನಹು

ಕಡಲ ಗುಡುಗು ಕರೆಯುತಿಹುದು,
ಬಿಡುವ ಕೊಡದೆ ಮೊರೆಯುತಿಹುದು,
ನಿರಂತರಂ ಚಣಂ ಚಣಂ
ದಿವಾರಾತ್ರಿ ನನ್ನ ಮನಂ
ನೋಡಿ ನಾನು ಓಡಿ ಬಂದ
ನಿಧಿಯ ನೆನೆದು ದೂರದಿಂದ
ಕೊರಗುತಿಹುದು ಕೃಪಣನಂತೆ
ವಿರಹ ಇರಿವ ಪ್ರಣಯಿಯಂತೆ.

ಮೂರು ದಿವಸ ನೂರು ಸಾರಿ
ಕಡಲ ತಡಿಯ ಮಳಲ ಸೇರಿ
ಬೆಳಗು ಬೈಗು ಬಿಸಿಲಿನಲ್ಲಿ
ಬೆಳುದಿಂಗಳು ಸುಸಿಲಿನಲ್ಲಿ
ತೆರೆಗಳುರುಳಿ ಹೊರಳುತಿದ್ದ
ಹಸುಳೆಯಂತೆ ನಿದ್ರಿಸಿದ್ದ
ನಮ್ಮ ನಾಡ ಮೂಡು-ಗಡಿಯ
ಕಂಡೆ ದಿವ್ಯ ಭವ್ಯ ಗುಡಿಯ.

ಥಳಥಳಥಳ ಥಳಿಸುತಿತ್ತು,
ಫಳಫಳಫಳ ಹೊಳೆಯುತಿತ್ತು,
ತಕತಕತಕ ಕುಣಿಯುತಿತ್ತು,
ಪಕಪಕಪಕ ನಗುತಲಿತ್ತು,
ಉಬ್ಬಿ ಹಬ್ಬಿ ನುಗ್ಗುತಿತ್ತು,
ಹೆದರಿದಂತೆ ಕುಗ್ಗುತಿತ್ತು,
ಭೋರೆನುತ್ತ ಕೂಗುತಿತ್ತು;
ಬಿಮ್ಮೆನ್ನಿಸಿ ಸುಮ್ಮನಿತ್ತು.

ಏನು ಆ ಅನಂತಲೀಲೆ!
ಶರಧಿ ನೀಲ ಜಲದ ಮೇಲೆ
ಕೋಟ್ಯಂತರ ವೀಚಿಮಾಲೆ!
ಆಶ್ಚರ್ಯವೆ ಕಣ್ಣು ಸೋಲೆ?

ಎಲ್ಲಿ ಹುಟ್ಟಿ ಅಟ್ಟಿ ಬಹವೊ,
ಸ್ಪರ್ಧಿಸುತ್ತ ವರ್ಧಿಸುವುವೊ!
ಕ್ರೀಡೆಯದರೊಳೆಂಥ ಕ್ರಮವು!
ಯಾವ ಫಲಕೊ ಅಂಥ ಶ್ರಮವು!

“ಹೊಳಲ ಮಡಿಲ ಹೊಲಸಿನಲ್ಲಿ
ಗೋಳು ಗಲಭೆ ಧೂಳಿನಲ್ಲಿ
ಬೆಂದು ನೊಂದ ಮನುಜರಿಲ್ಲಿ
ಒಂದು ತಾಸು ಬಂದು ನಿಲ್ಲಿ.
ನಿಮ್ಮ ಕಣ್ಣು ಕಿವಿಗಳನ್ನು
ನಿಮ್ಮ ಮನಸು ಮೈಗಳನ್ನು
ತಣಿಸಿರೆನ್ನ ಕರೆಯೊ”ಳೆಂದು
ಒರೆಯುತಿತ್ತು ತೆರೆಯು ಅಂದು.

ದಿನೋದಯದ ಕಡಲ ಕೆಂಪು,
ಹಗಲೊಳದರ ಮೊಗದ ಪೆಂಪು,
ಸಂಜೆಯಾಗೆ ತಡಿಯ ತಂಪು,
ಅಲೆಗಳುಲಿವ ಗಾನದಿಂಪು,
ಶಶಿಯು ಸೆಳೆದ ನೀರ ನೃತ್ಯ—
ಎಸೆದು ಬಹವು ಮನದಿ ನಿತ್ಯ.
ಜೊನ್ನದಿರುಳ ಜಲಧಿಯಾಟ—
ಅಹಹಹಹಹ! ಏನು ಮಾಟ!

ಕಡಲ ಘೋಷ ಕಿವಿಯೊಳಿಹುದು,
ಪಡೆದ ತೋಷ ಎದೆಯೊಳಿಹುದು,
ನನಸಿನಲ್ಲಿ ಕನಸಿನಲ್ಲಿ
ಸದಾ ಕಡಲೆ ಮನಸಿನಲ್ಲಿ!
ಇನ್ನು ನಾನು ಎಲ್ಲೆ ಇರಲಿ,
ನನ್ನ ಬಾಳೊಳೇನೆ ಬರಲಿ,
ಬಂದಿಯಾದೆ ಕಡಲ ಬಲೆಗೆ,
ತೆರೆಯ ನೊರೆಯ ರಚನ ಕಲೆಗೆ.

—ಎಂ. ರಾಮರಾವ್

ಸತ್ತವನ ಹಿಂದೆ

"ಸತ್ತವರ ಹಿಂದೆ ಯಾರೂ ಹೋಗುವುದಿಲ್ಲ; ಅವರವರು ಮಾಡಿದ ಪಾಪ-ಪುಣ್ಯಗಳು ಅವರ ಬೆನ್ನ ಹಿಂದೆ ಹೋಗುತ್ತವೆ"

—ಇವು ಅಜ್ಜಿ ಹೇಳುವ ಮಾತುಗಳು.

ಅಂಥ ಅಜ್ಜಿಯನ್ನು ನೋಡಲು ಇಂದು ಹಳ್ಳಿಗೆ ಹೊರಟಿದ್ದೇನೆ. ಅಜ್ಜಿ ಎಂದರೆ ನಮ್ಮ ತಂದೆಯ ತಾಯಿ. ನಮ್ಮ ತಂದೆ ಷಷ್ಟ್ಯಬ್ದಿ ಮಾಡಿಸಿಕೊಂಡು ಸತ್ತವರು. ಅಂದಮೇಲೆ ಅಜ್ಜಿಗೆ ಈಗ ವಯಸ್ಸು ಎಂಬತ್ತಾದರೂ ಇರಬೇಕು. ಹಳ್ಳಿಯಲ್ಲಿಯೇ ಹುಟ್ಟಿ ಹಳ್ಳಿಯಲ್ಲಿಯೇ ಬೆಳೆದ ಅಜ್ಜಿಗೆ ಪಟ್ಟಣ ಎಷ್ಟಕ್ಕೂ ಹಿಡಿಸದು. ಅದರಿಂದಾಗಿ ನಾವೆಲ್ಲ ಪಟ್ಟಣ ಸೇರಿದ್ದರೂ ಅಜ್ಜಿ ಮಾತ್ರ ಹಳ್ಳಿಯಿಂದ ಈವರೆಗೂ ಕದಲಿಲ್ಲ. ಅಜ್ಜಿಯನ್ನು ನೋಡಬೇಕೆನಿಸಿದವರು ಹಳ್ಳಿಗೆ ಹೋಗಬೇಕೇ ವಿನಾ ಆಕೆ ನಮ್ಮಲ್ಲಿಗೆ ಎಂದಿಗೂ ಬರಲಾರಳು.

ಹಳ್ಳಿ ಎಂದರೆ ಸಾಮಾನ್ಯ ಹಳ್ಳಿಯಲ್ಲ; ಸಾವಿರ ಮನೆಗಳಿವೆ. ಐದು ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಯಿದೆ. ನಮ್ಮ ತಂದೆ ಅಲ್ಲಿಯೇ ಪಟೇಲಿಕೆ ನಡೆಸಿ ಸತ್ತವರು. ನನ್ನ ಇಚ್ಛೆಯಂತೆ ಎಲ್ಲವೂ ನಡೆದಿದ್ದರೆ ನಾನೂ ಕೂಡ ಹಳ್ಳಿಯಲ್ಲಿಯೇ ನೆಲಸಿ ಮಣ್ಣಿನ ಮಗನಾಗಿ ಬಾಳಬೇಕಿತ್ತು. ನಮ್ಮದೊಂದು ಎಣಿಕೆಯಾದರೆ ವಿಧಿಯ ಎಣಿಕೆಯೇ ಬೇರೆಯಾಗಿರುತ್ತೆ.

ನಾನು ಈಗ ಹಳ್ಳಿ ತೊರೆದು ಬಹಳದೂರ ಹೋಗಿದ್ದೇನೆ. ಸುಮಾರು ಆರು ವರುಷಗಳಾದವು ಹಳ್ಳಿ ಮತ್ತು ನನ್ನ ಅಜ್ಜಿಯನ್ನು ನೋಡಿ. ಆರು ವರುಷಗಳ ಅಂತರದಲ್ಲಿ ಇದೀಗ ಹಳ್ಳಿಗೆ ತಿರುಗಿ ಹೊರಟಿದ್ದೇನೆ. ಹಳ್ಳಿಯಲ್ಲಿ ಈಗ ಎಷ್ಟೋ ಬದಲಾವಣೆಗಳು ಕಾಣುತ್ತಿವೆ. ಆದರೆ ನಮ್ಮ ಮನೆ ಮಾತ್ರ 'ಮಾಜಿ ಪಟೇಲರ' ಮನೆ ಎನ್ನಿಸಿಕೊಂಡು ವಯಸ್ಸಾದ ಮುದುಕಿಯೊಂದಿಗೆ ವಯಸ್ಸಾದ ಮನೆಯೂ ಗತವೈಭವದ ಗುರುತಾಗಿ ನಿಂತಿದೆ.

ಮೊದಲು ನನ್ನನ್ನು ಕಂಡಾಗ ಅಜ್ಜಿಗೆ ನನ್ನ ಗುರುತು ಹತ್ತಲಿಲ್ಲ. ತೀರ ಹತ್ತಿರದಲ್ಲಿ ನಿಂತಮೇಲೆ

"ನನ್ನ ಪಾಯಿ, ಯಾವಾಗ ಬಂದೆ?" ಎಂದು ಬಾಚಿ ತಬ್ಬಿಕೊಂಡು ಕಣ್ಣೀರು ಹಾಕಿದಳು. ವಯಸ್ಸಾದವರೇ ಹಾಗೆ. ಸಂತೋಷಕ್ಕೂ ಅಳುತ್ತಾರೆ; ದುಃಖಕ್ಕೂ ಅಳುತ್ತಾರೆ.

ಎರಡು ರಾತ್ರಿ ರೈಲು ಪ್ರಯಾಣಮಾಡಿ ಕಂಗೆಟ್ಟ ನನಗೆ ಅಜ್ಜಿ ಬಿಸಿನೀರು ಕಾಯಿಸಿ ಅಭ್ಯಂಜನ ಮಾಡಿಸಿದಳು. ತಲೆಗೆ ಸ್ನಾನವಾದ ಮೇಲೆ ಮಾಮೂಲಿನಂತೆ ಬಿಸಿ ಅನ್ನ–ಕೆನೆ ಮೊಸರು–ಉಪ್ಪಿನಕಾಯಿ ಬಡಿಸಿದಳು. ಎಲ್ಲವನ್ನು ಕಬಳಿಸಿ ನಿದ್ರೆಹೋದೆ. ಮತ್ತೆ ಎಚ್ಚರವಾದುದು ಸಂಜೆಗೆ.

ಸಂಜೆ ಎದ್ದಮೇಲೆ ನಾನೇ ಅಜ್ಜಿಗೆ ನೆರವಾಗಿ ಸ್ಟ್ರಾಂಗ್ ಕಾಫಿ ಕಾಯಿಸಿ ಅಜ್ಜಿಗೂ ಸ್ವಲ್ಪಕೊಟ್ಟು ನಾನೂ ಕುಡಿದೆ. ಅಜ್ಜಿ ಹಾಗೆಯೆ ನನ್ನ ಕೆಲಸ–ಊರು–ಪ್ರಗತಿಯ ಬಗ್ಗೆ ಲೋಕಾಭಿರಾಮವಾಗಿ ವಿಚಾರಿಸಿದಳು. ಎಲ್ಲಕ್ಕು ಅಜ್ಜಿಗೆ ತಿಳಿಯುವಂತೆ ಉತ್ತರ ಹೇಳಿ ನಮ್ಮ ಹಳೇ ಮನೆಯ ಮಾಡನ್ನು ನೋಡುತ್ತ ಕುಳಿತೆ.

—ಮೂಕನಾಗಿ ಕುಳಿತ ನನ್ನನ್ನು ನೋಡಿ ಅಜ್ಜಿ ಕೇಳಿದಳು :

" ಪಾಯಿ, (ಮೊಮ್ಮಕ್ಕಳನ್ನು ಕರೆಯುವ ಪ್ರೀತಿಯ ಮಾತು) ಚಂದಣ್ಣ ಮಲಗಿ ಬಿಟ್ಟವ್ನೇ ತಿಂಗಳಾಯಿತು. ಹೋಗಿ ನೋಡ್ಕೊಂಡು ಬರಲ್ವಾ, ಪಾಪ ! ಈಗೇನು ಮಾಡ್ತಿಯ ಇಲ್ಲಿ. ಹೋಗಿಬಾ, ಹಾಗೆ ಬರುವಾಗ ತೋಟ ನೋಡ್ಕೊಂಡು ಬಂದರಾಯಿತು "

ಆಗ ನನಗೆ ಪೂರ್ಣ ವಿಶ್ರಾಂತಿ ಬೇಕಾಗಿತ್ತು. ಹೊರಗಡೆ ಹೋಗುವ ಮನಸ್ಸಾಗಲಿಲ್ಲ. ಆದ್ದರಿಂದ ಅಜ್ಜಿಯ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಸುತ್ತಿದ ಹಾಸಿಗೆಯನ್ನು ಬಿಡಿಸಿ ಮತ್ತೆ ಉರುಳಿದೆ.

ಆದರೂ ' ಚಂದಣ್ಣ ಮಲಗಿಬಿಟ್ಟವ್ನೆ '....ಎಂದ ಅಜ್ಜಿಯ ಮಾತುಗಳು ಗುಂಗೆಯ ಹುಳುವಿನಂತೆ ನನ್ನ ತಲೆಯೊಳಗೆ ಸುತ್ತ ತೊಡಗಿದವು.

ಚಂದಣ್ಣನ ಪೂರ್ಣ ಹೆಸರು ದೊಡ್ಡಮನೆ ಚಂದ್ರಶೇಖರಯ್ಯ ಎಂದು. ಅವನ ಮನೆಯವರು ಪ್ರೀತಿಗಾಗಿ ಚಂದ್ರಣ್ಣ ಎಂದು ಕೂಗುತ್ತಿದ್ದರು. ಕ್ರಮೇಣ ಗ್ರಾಮಸ್ಥರ ಬಾಯಲ್ಲಿ ಅದು ಚಂದ್ರಣ್ಣ ಹೋಗಿ ' ಚಂದಣ್ಣ ' ಆಗಿದೆ.

ನಾನು ಕಂಡು, ಕೇಳಿದ ಮಟ್ಟಿಗೆ ಚಂದಣ್ಣ ಸಾಮಾನ್ಯ ವ್ಯಕ್ತಿಯಲ್ಲ. ಅವನ ಇಡೀ ಜೀವನವನ್ನು ಸಿಂಹಾವಲೋಕನ ಮಾಡಿದರೆ ಹತ್ತು ಕಾದಂಬರಿಗಳಿಗೆ ವಸ್ತುವಾಗುತ್ತೆ. ಚಂದಣ್ಣ ಆಡದ ಆಟವಿಲ್ಲ; ಮಾಡದ ಕೆಲಸಗಳಿಲ್ಲ. ಇಷ್ಟಾಗಿಯೂ ಆತ ಯಾರನ್ನೂ ನೋಯಿಸದ ವ್ಯಕ್ತಿ; ಯಾರ ಪ್ರೀತಿಯನ್ನೂ ಕಳೆದುಕೊಳ್ಳದ ಗೌರವಾನ್ವಿತ.

ಅಜ್ಜಿಗೆ ಚಂದಣ್ಣ ಎಂದರೆ ಬಲು ಪ್ರೀತಿ. ಅಜ್ಜಿಗಿನ್ನ ಇಪ್ಪತ್ತು ವರುಷ ಚಿಕ್ಕವ ಚಂದಣ್ಣ. ಚಂದಣ್ಣ ಹುಟ್ಟಿದ ಮೂರು ತಿಂಗಳಲ್ಲಿಯೇ ತಾಯಿಯನ್ನು ಕಳೆದುಕೊಂಡ. ತಾಯಿಯಿಲ್ಲದ ಚಂದಣ್ಣನಿಗೆ ಅಜ್ಜಿಯೇ ಮೊಲೆಯುಣಿಸಿ ಬೆಳೆಸಿದರಂತೆ. ಆಗ ಅಜ್ಜಿ ನಮ್ಮ ತಂದೆಗೆ ಬಾಣಂತಿಯಂತೆ.

—ಯಾಕೊ ಚಂದಣ್ಣನ ಬಗ್ಗೆ ನನ್ನ ಯೋಚನೆ ಗಾಢವಾಗತೊಡಗಿತು.

ನಮ್ಮ ತಂದೆ ಮತ್ತು ಚಂದಣ್ಣ ಸಮಕಾಲೀನರು. ಚಂದಣ್ಣನ ಎರಡನೇ ಮಗ ನನ್ನ ಪರಮಾಪ್ತ ಸ್ನೇಹಿತ. ಈಗ ಅವನು ಪೂನಾದಲ್ಲಿದ್ದಾನೆ. ಅವರ ಕೊನೆಯ ಮಗಳು ರತ್ನ ನನ್ನ ಜೊತೆಗಾತಿ. ಜೊತೆಗಾತಿಯೇನು ಅವಳನ್ನೇ ಸಂಗಾತಿಯನ್ನಾಗಿ ಮಾಡಿಕೊಳ್ಳಲೂ ತಯಾರಾಗಿದ್ದೆ. ಆದರೆ ಸಮಾಜ ನನ್ನ ಆಸೆಯ ಗಾಳಿಪಟಕ್ಕೆ ಬಿರುಗಾಳಿಯಾಗಿ ನಿಂತಿತು.

ರತ್ನಳಿಗೂ ನನ್ನಮೇಲೆ ಅಪಾರ ಪ್ರೀತಿಯಿತ್ತು. ಕೆರೆಯ ಹಿಂಭಾಗಕ್ಕೆ ಅಂಟಿಕೊಂಡಿರುವ ನಮ್ಮ ತೋಟದಲ್ಲಿ ನಮ್ಮ ಪ್ರಣಯ ಬೆಳೆಯಿತು. ಬಟ್ಟೆ ಒಗೆಯುವ ನೆಪಮಾಡಿಕೊಂಡು ರತ್ನ ತೋಟಕ್ಕೆ ಬರುತ್ತಿದ್ದಳು. ಕೋತಿಗಳನ್ನು ಓಡಿಸುವ ನೆಪಹೂಡಿ ನಾನೂ ಅಲ್ಲಿಗೆ ಹೋಗುತ್ತಿದ್ದೆ. ಅಲ್ಲಿಯ ನಮ್ಮ ಲಹರೀ ಲಗ್ಗೆಗಳೇನು ?

ನಮ್ಮೀ ಪ್ರೇಮದ ಕಥೆ ಕೆಲದಿನಗಳಲ್ಲಿಯೇ ಹಳ್ಳಿಯಲ್ಲಿ ಡಂಗೂರ ಹಾಕಿತು. ನಮ್ಮನ್ನು ಎಲ್ಲರೂ ಸಂಶಯ ದೃಷ್ಟಿಯಿಂದ ನೋಡಿದರು—ಅಪಹಾಸ್ಯ ಮಾಡಿದರು. ರತ್ನಳಂಥ ಚೆಲುವೆ ನನ್ನ ಒಲಿದಿದ್ದಾಳಲ್ಲ ಎಂಬ ಆಕ್ರೋಶ ಹಲವರಲ್ಲಿತ್ತು. ನಮ್ಮಿಬ್ಬರ ಪ್ರೇಮಕ್ಕೆ ಕಂಟಕವಾಗಿ ಅನೇಕ ಶಕ್ತಿಗಳು ನಿಂತವು. ಹಲವನ್ನು ನಾನೂ ಎದುರಿಸಿ ನಿಂತೆ. ಕೊನೆಯಲ್ಲಿ ನನ್ನ ಎಣಿಕೆ ತಪ್ಪಾಯಿತು. ಇಡೀ ಹಳ್ಳಿಯೇ ನನ್ನ ಮತ್ತು ರತ್ನಳ ವಿರುದ್ಧ ನಿಂತಿತು.

ಪ್ರೇಮ ಬೀಸಿದ ಬಲೆ; ಹಳ್ಳಿಯವರ ಕುತ್ತು ಇವುಗಳಿಂದ ಪಾರಾಗುವುದು ಹೇಗೆ ಎಂದು ಯೋಚಿಸುವ ಮುನ್ನವೇ ಚಂದಣ್ಣ ರತ್ನಳ ಮದುವೆಯನ್ನು ಬೇರೊಂದುಕಡೆಗೆ ಗೊತ್ತುಮಾಡಿದನು. ಮದುವೆಯೂ ನಡೆದುಹೋಯಿತು. ನನ್ನ ಜೀವದಜೀವ ರತ್ನ ಬೇರೊಬ್ಬನ ಹಿಂದೆ ನಡೆದಳು.

ಈ ದುಃಖ ನನ್ನಿಂದ ಮರೆಯಲಾಗಲಿಲ್ಲ. ರತ್ನಳಿಲ್ಲದ ಹಳ್ಳಿ ಬೇಸರತಂದಿತು. ಒಂದು ದಿನ ಹಳ್ಳಿಯಿಂದ ಯಾರಿಗೂ ಹೇಳದೆ ಕೇಳದೆ ಬಹಳದೂರ ಹೊರಟುಹೋದೆ. ನಾನು ಹೋದ ಕೊರಗಿನಲ್ಲಿಯೇ ತಂದೆಯೂ ಕಾಲವಾದರು. ಆಗಲೂ ಹಳ್ಳಿಗೆ ಬರಲಿಲ್ಲ. ಇದೀಗ ಬಂದಿದ್ದೇನೆ.

ರತ್ನ ಗಂಡನ ಮನೆಯಲ್ಲಿ ಸುಖವಾಗಿದ್ದಾಳೆಯೇ? ಮಕ್ಕಳೆಷ್ಟು ? ಹೇಗಿದ್ದಾಳೆ ? ಈ ಯಾವ ಮಾಹಿತಿಗಳೂ ಸಿಕ್ಕಿಲ್ಲ ಕಳೆದ ಆರು ವರುಷಗಳಿಂದ. ಒಂದು ದೃಷ್ಟಿಯಲ್ಲಿ ಎಲ್ಲವನ್ನೂ ಮರೆತು ಅಜ್ಞಾತವಾಸದಲ್ಲಿದ್ದೆ ಎಂದರೂ ತಪ್ಪಲ್ಲ. ಅಂಥದರಲ್ಲಿ ಅಜ್ಜಿ ಏಕಾಏಕಿ ಚಂದಣ್ಣನ ಸುದ್ದಿ ತೆಗೆದು, ರತ್ನಳ ನೆನಪುಮಾಡಿಕೊಟ್ಟು ನನ್ನ ಹೃದಯದಲ್ಲಿ ಸಮುದ್ರಮಥನ ಮಾಡತೊಡಗಿದಳು.

ರತ್ನ....! ಈ ಎರಡು ಅಕ್ಷರಗಳನ್ನು ಉಚ್ಚರಿಸುವುದೇ ಒಂದು ಆನಂದ. ಅಂಥ ರೂಪುಳ್ಳ ಹೆಣ್ಣು ಈವರೆಗೂ ನನ್ನ ಕಣ್ಣಿಗೆ ಬಿದ್ದಿಲ್ಲ. ಸೌಂದರ್ಯಕ್ಕೆ ಸಾಕ್ಷೀ ಭೂತಳು ರತ್ನ. ಛೀ ! ಎಲ್ಲಿಯ ಸುದ್ದಿ. ಬೇರೊಬ್ಬನ ಕೈಹಿಡಿದ ಆ ಹೆಣ್ಣನ್ನು ನೆನಪು ಮಾಡಿಕೊಳ್ಳುವುದಾದರೂ ಏನನ್ನು !

ಆದರೂ 'ಚಂದಣ್ಣ ಮಲಗಿ ಒಂದು ತಿಂಗಳಾಯಿತು' ಎಂದ ಅಜ್ಜಿಯ ಮಾತು ಏಕೊ ನನಗೆ ಅಷ್ಟು ಹಿತವಾಗಲಿಲ್ಲ. ಹಾಗೆಂದು ಚಂದಣ್ಣ ನಮ್ಮ ಹತ್ತಿರದ ಸಂಬಂಧಿಯೇನೂ ಅಲ್ಲ. ಆತನಿಗೂ ನಮಗೂ ಜಾತಿ—ಸಂಬಂಧ—ಗೌರವ—ಪ್ರತಿಷ್ಠೆ ಎಲ್ಲದರಲ್ಲೂ ಅಂತರವಿದೆ.

ಹಳ್ಳಿಗೊಬ್ಬ ಚಂದಣ್ಣ; ಏಕೆ? ಊರಿಗೊಬ್ಬ ಚಂದಣ್ಣನಂಥವರು ಸಿಕ್ಕಲಾರರು. ಚಂದಣ್ಣ ಚಂದವಾಗಿ, ಚೊಕ್ಕವಾಗಿ ಬಾಳಿದವನು. ಹಲವರ ದೃಷ್ಟಿಯಲ್ಲಿ ಅವನ ಬಾಳ್ವೆ ಓರೆಕೋರೆಯಾಗಿತ್ತು. ವಿಮರ್ಶಾತ್ಮಕ ದೃಷ್ಟಿಯಲ್ಲಿ ನೋಡಿದರೆ ಚಂದಣ್ಣ ಹಸನಾದ ಬಾಳು ಬಾಳಿದನೆಂದರೆ ತಪ್ಪಲ್ಲ.

ಚಂದಣ್ಣ ಗೌರವಯುತ ಮನೆತನದಲ್ಲಿಯೇ ಹುಟ್ಟಿದ. ಅವನ ಪೂರ್ವಿಕರು 'ದೊಡ್ಡಮನೆ'ಯವರೆಂದು ಪ್ರಸಿದ್ಧರಾಗಿದ್ದರು. ಆಗ್ಗೆ ಆ ಹಳ್ಳಿಗೆ ಚಂದಣ್ಣನ ತಂದೆಯದೇ ದೊಡ್ಡಮನೆ–ಮಹಡಿಮನೆ. ಅವರ ಮನೆ ಬಾಗಿಲಲ್ಲಿ ಎರಡು ದೊಡ್ಡ ಹರವಿಗಳನ್ನು ಇಟ್ಟಿದ್ದರಂತೆ; ಒಂದರಲ್ಲಿ ಹಸುವಿನ ಹಾಲು; ಇನ್ನೊಂದರಲ್ಲಿ ಮಜ್ಜಿಗೆ ತುಂಬಿರುತ್ತಿತ್ತಂತೆ. ಮಕ್ಕಳುಳ್ಳ ಯಾರಾದರೂ ಹಾಲು–ಮಜ್ಜಿಗೆಯನ್ನು ಮನೆಯವರ ಅಪ್ಪಣೆಯಿಲ್ಲದೆ ತೆಗೆದುಕೊಂಡು ಹೋಗಬಹುದಿತ್ತಂತೆ. ಈಗ ನೀರನ್ನೂ ಅಷ್ಟು ಧಾರಾಳವಾಗಿ ಯಾರೂ ಕೊಡಲಾರರು.

ಹೀಗೆ ಸಂಪದ್ಭರಿತ ಮನೆಯಲ್ಲಿ ಹುಟ್ಟಿದ ಚಂದಣ್ಣ ಹುಟ್ಟುವಾಗಲೇ ತಾಯಿಯನ್ನು ಕಳೆದುಕೊಂಡ. ಮಗುವನ್ನು ತಬ್ಬಲಿಮಾಡಲು ಬಿಡದೆ ಚಂದಣ್ಣನ ಸೋದರತ್ತೆ ಅವನನ್ನು ತನ್ನಮನೆಗೆ ಕರೆದುಕೊಂಡುಹೋದಳು. ಚಂದಣ್ಣನ ಹಳ್ಳಿಗೂ ಸೋದರತ್ತೆಯಿದ್ದ ಹಳ್ಳಿಗೂ ಒಂದೇ ಮೈಲಿ. ಇದರಿಂದಾಗಿ ಚಂದಣ್ಣ ಎರಡೂ ಮನೆಯಲ್ಲಿ ಬೆಳೆದ; ಬೆಳೆದು ಉಢಾಳನಾದ.

ಹೆಂಡತಿಯನ್ನು ಕಳೆದುಕೊಂಡ ಚಂದಣ್ಣನ ತಂದೆ ಇನ್ನೊಂದು ಮದುವೆಯಾದರು. ಆದರೆ ಆಕೆಗೆ ಗಂಡುಮಕ್ಕಳಾಗದೆ ಎರಡು ಹೆಣ್ಣುಮಕ್ಕಳಾಗಿ ಅವೂ ತೀರಿಕೊಂಡವು. ಹೀಗಾಗಿ ಚಂದಣ್ಣ ಕುಲದ ಏಕಮಾತ್ರ ಪುತ್ರನಾಗಿ ಬೆಳೆದು ನಿಂತ.

ಅಕ್ಕರೆಯಿಂದ ಚಂದಣ್ಣನನ್ನು ಬೆಳಸಿದ ಸೋದರತ್ತೆಗೆ ಒಬ್ಬ ಮಗಳಿದ್ದಳು. ಅವಳನ್ನು ಕೊಟ್ಟು ಚಂದಣ್ಣನಿಗೆ ಲಗ್ನಮಾಡಬೇಕೆಂಬ ಆಕಾಂಕ್ಷೆ ಎಲ್ಲರಲ್ಲೂ ಇತ್ತು. ಈ ಸಂಬಂಧಕ್ಕೆ ಚಂದಣ್ಣನ ತಂದೆಯ ಒಪ್ಪಿಗೆಯೂ ಸಿಕ್ಕಿತು.

ಆ ವರ್ಷ ಲಗ್ನದ ಏರ್ಪಾಡು ನಡೆದಿತ್ತು. ದುರದೃಷ್ಟವಶದಿಂದ ಲಗ್ನವಾಗಬೇಕಾದ ಹೆಣ್ಣು ಲಗ್ನದ ಕಾಲದಲ್ಲಿ ಹಾಸಿಗೆ ಹಿಡಿದವಳು ಎರಡು ತಿಂಗಳು ಮೇಲೇಳಲಿಲ್ಲ. ಲಗ್ನದಕಾಲ ಮಿಂಚಿದಮೇಲೆ ಚೇತರಿಸಿಕೊಂಡ ಆ ಹೆಣ್ಣು ದೈಹಿಕವಾಗಿ ತುಂಬ ನವೆದಿದ್ದಳು. ಆ ಪೀಚಲು ಹೆಣ್ಣನ್ನು ನೋಡಿ ಚಂದಣ್ಣ ಮುಖ ತಿರುಗಿಸಿದ. ಹಿಂದೆ ಮಾಡಿದ ನಿರ್ಧಾರವನ್ನು ಬದಲಾಯಿಸಹತ್ತಿದ.

ಕೆಟ್ಟಮನಸ್ಸು, ಕೆಟ್ಟಗಾಳಿ ಎರಡೂ ದೇಹಕ್ಕೆ ಹಿತವಲ್ಲವಂತೆ. ಅತ್ತೆಯ ಮಗಳನ್ನು ಒಲಿಯದ ಚಂದಣ್ಣನ ಮನಸ್ಸು ಸ್ವಾಭಾವಿಕವಾಗಿ ಹಾರಾಡತೊಡಗಿತು. ಪ್ರಾಯ ಬೇರೆ ಅವನ ಬೆನ್ನೇರಿ ಕುತ್ತಿಗೆಯನ್ನು ಮಿದಿಯುತ್ತಿತ್ತು.

ಧರ್ಮಕರ್ಮಸಂಯೋಗ ಎಂಬಂತೆ ಆ ಹಳ್ಳಿಗೆ ಒಂದು ಬಾರಿ ದೊಂಬರ

ಆಗಮನವಾಯಿತು. ನಾಲ್ಕಾರು ದಿನ ಅವರ ಬಿಡಾರ ಹಳ್ಳಿಯಲ್ಲಿ ನಿಂತಿತು. ವಿಧ ವಿಧದ ಆಟಗಳನ್ನು ತೋರಿಸಿ ದೊಂಬರು ಹಳ್ಳಿಯವರ ಮನ ಗೆದ್ದರು. ಪ್ರತಿಫಲ ವಾಗಿ ಎಲ್ಲರ ಮನೆಯಿಂದಲೂ ದವಸಧಾನ್ಯಗಳ ಹೇರನ್ನು ದೊಂಬರ ಕತ್ತೆಗಳು ಹೊತ್ತವು.

ಚಂದಣ್ಣ ತಾನೇ ಖುದ್ದು ನಿಂತು ಮೂಟೆಗಳಲ್ಲಿ ದವಸಗಳನ್ನು ತುಂಬಿ ಕೊಟ್ಟನು ದೊಂಬರ ಮುಖಂಡನಿಗೆ. ಮುಖಂಡನ ಹಿಂದೆಯೇ ಬಂದಿದ್ದ ಅವನ ಮಗಳು ಚಂಗೂಲಿ ಚೆಲುವೆ ಚಂದಣ್ಣನನ್ನು ನೋಡಿ ಖಿಸಕ್ಕನೆ ನಕ್ಕಳು. ನೋಡಿದಳು ಒಮ್ಮೆ ವಾರೆಗಣ್ಣಲ್ಲಿ ಚಂದಣ್ಣನನ್ನು. ಅವಳ ಆ ನಗೆ, ಆ ನೋಟ ಚಂದಣ್ಣನ ಜೀವಕ್ಕೆ ಚಾಟಿಯಾಯಿತು; ಇರಿವ ಈಟಿಯಾಯಿತು.

ದೊಂಬರ ಲಕ್ಷ್ಮಿ ಚಂದಣ್ಣನಿಗೆ ಚಂದುಳ್ಳ ಚೆಲುವೆಯಾಗಿ ಕಂಡಳು. ಅವಳನ್ನು ಪಡೆಯಬೇಕೆಂಬ ಪಿತ್ತವೇರಿತು ಅವನಿಗೆ. ಅದಕ್ಕಾಗಿ ಸಂಚು–ಸನ್ನಾಹ ಗಳನ್ನು ನಡೆಸಿದನು. ಆ ರಾತ್ರಿ ದೊಂಬರ ಬಿಡಾರಕ್ಕೆ ಚಂದಣ್ಣನ ಸವಾರಿಯೂ ಹೊರಟಿತು.

ದೊಂಬರ ಲಕ್ಷ್ಮಿ ಎಂದರೆ ಸಾಮಾನ್ಯಳೇನು? ಚಂದಣ್ಣನಂಥ ಎಷ್ಟು ಜನರನ್ನು ಕೈಯೊಳಗಿನ ಬುಗುರಿ ಮಾಡಿಕೊಂಡಿದ್ದಳೊ! ಅಂತೂ ಚಂದಣ್ಣನ ಬಯಕೆ ಫಲಿಸಿತು. ಅವನ ಬಯಕೆಗೆ ಸೆರಗು ಹಾಸಿದಳು ಲಕ್ಷ್ಮಿ. ಆ ರಾತ್ರಿಯೆಲ್ಲ ಚಂದಣ್ಣ ದೊಂಬರ ಬಿಡಾರದಲ್ಲಿ ಕಳೆದನು.

ಬೆಳಗಾಗ ಹಳ್ಳಿಯಲ್ಲಿ ಸುದ್ದಿಯೊಂದು ಹಬ್ಬಿತು. ಚಂದಣ್ಣನನ್ನು ದೊಂಬರು ಕಟ್ಟಿ ಹಾಕಿದ್ದಾರೆಂದು. ಈ ಸುದ್ದಿ ತಿಳಿದು ಹಳ್ಳಿಗೆ ಹಳ್ಳಿಯೇ ದೊಂಬರ ಬಿಡಾರದತ್ತ ಸಾಗಿತು ಚಂದಣ್ಣನನ್ನು ಕಾಣಲು.

ದೊಂಬರ ಗುಡಾರದೊಳಗಿನ ಮಧ್ಯದ ಕಂಬಕ್ಕೆ ಚಂದಣ್ಣನನ್ನು ಕಟ್ಟಿ ಹಾಕಲಾಗಿತ್ತು ಹರಕೆಯ ಕುರಿಯಂತೆ. ದೊಂಬರ ಮುಖಂಡ ಚಂದಣ್ಣನ ಎದುರಿಗೆ ಮೀಸೆ ತಿರುವುತ್ತ ಕುಳಿತಿದ್ದ. ಹಳ್ಳಿಯ ಮುಖಂಡರು ಒಳಗೆ ಬಂದು ವಿಷಯವೇ ನೆಂದು ಕೇಳಿದರು. ಅವರೆಲ್ಲರಿಗೂ ದೊಂಬರ ಮುಖಂಡನ ಒಂದೇ ಉತ್ತರವಾಗಿತ್ತು.

"ಈ ಹೈದ ನನ್ನ ಮಗಳನ್ನು ಕೆಡಸಿದ್ದಾನೆ. ಅವಳನ್ನು ಮದುವೆಯಾಗು ವುದಾದರೆ ಕಟ್ಟಿರುವ ಕಟ್ಟನ್ನು ಸಡಿಲಿಸುತ್ತೇನೆ. ಇಲ್ಲದಿದ್ದರೆ ಇವನ ಚರ್ಮ ನನ್ನ ಕಾಲಿನ ಎಕ್ಕಡವಾಗುತ್ತದೆ."

ಹಳ್ಳಿಯವರೆಲ್ಲ ವಿಚಾರ ತಿಳಿದು ಅವಾಕ್ಕಾದರು. ಪಟೇಲರ ವಂಶದ ಮಾನ ದೊಂಬರ ಬಿಡಾರದೊಳಗೆ ನುಸಿದಿತ್ತು. ಚಂದಣ್ಣನನ್ನು ಕಂಡ ಹಳ್ಳಿಯ ಚಿಕ್ಕಪುಟ್ಟವರೆಲ್ಲ ತಮ್ಮಲ್ಲಿಯೇ ಪಿಸುಗುಟ್ಟಲಾರಂಭಿಸಿದರು.

ಹಳ್ಳಿಯ ಮುಖಂಡರು ದೊಂಬರ ಮುಖಂಡನೊಂದಿಗೆ ಸಂಧಾನ ನಡೆಸಿ, "ಈ ಮದುವೆ ಎಂದಿಗೂ ಸಾಧ್ಯವಿಲ್ಲ; ಹುಡುಗನನ್ನು ಕ್ಷಮಿಸಿಬಿಡು" ಎಂದರು.

—ಇಂಥ ಮಾತುಗಳು ಬರಲಿ ಎಂದು ಎದುರು ನೋಡುತ್ತಿದ್ದ ದೊಂಬ.

"ಎರಡು ಸಾವಿರ ದಂಡ ತೆತ್ತರೆ ಕ್ಷಮಿಸಲು ಸಾಧ್ಯ" ಎಂದನು. ಮತ್ತೆ ಸಂಧಾನಗಳ ಮೇಲೆ ಸಂಧಾನವಾಗಿ ಒಂದೂವರೆ ಸಾವಿರ ರೂಪಾಯಿ ಚಂದಣ್ಣನ ತಂದೆ ದಂಡ ತೆತ್ತು, ಹೋದ ಮಾನ ಮತ್ತು ಮಗನನ್ನು ಮನೆಗೆ ಕರೆತಂದರು. ಅಂದೇ ಆ ದೊಂಬರನ್ನು ಹಳ್ಳಿಯಿಂದ ಕಾಲ್ತೆಗೆಸಿದರು.

ಅಡಕೆಗೆ ಹೋದ ಮಾನ ಆನೆ ತೆತ್ತರೂ ಬಾರದು. ಈ ಪ್ರಕರಣ ನಡೆದ ಮೇಲೆ ಚಂದಣ್ಣ ಜೀವನದಲ್ಲಿ ಜುಗುಪ್ಸೆಗೊಂಡನು. ಎಲ್ಲರೂ ಅವನನ್ನು ಅಪಹಾಸ್ಯ ಮಾಡತೊಡಗಿದರು. ಇದರಿಂದಾಗಿ ಹಳ್ಳಿ ಮತ್ತು ತನ್ನ ಜನ ಇಬ್ಬರನ್ನು ಕಂಡರೂ ಬೇಸರಪಟ್ಟುಕೊಳ್ಳುವಂತಾದನು.

ಇತ್ತ ಮಗನ ಚಿಂತೆಯಲ್ಲಿ ತಂದೆ ಮೆತ್ತಗಾದರು. ಸಂಬಂಧೀಕರ ಎದುರಿನಲ್ಲಿ ತಲೆ ಎತ್ತದಂತಾದರು. ಮಗ ನಡೆಸಿದ ಕೃತ್ಯ ಅವರನ್ನು ಒಳಗೊಳಗೇ ದಹಿಸ ತೊಡಗಿತು. ಏನು ಮಾಡಿದರೆ ಮಗ ದಾರಿಗೆ ಬಂದಾನು? ಎಂದು ಚಿಂತಿಸ ತೊಡಗಿದರು. ಹಲವರು ಚಂದಣ್ಣನಿಗೆ ಬೇಗನೆ ಮದುವೆಮಾಡುವುದು ಸೂಕ್ತ ವೆಂದರು.

ಅತ್ತ ಹೆಣ್ಣೂ ಸಿದ್ಧವಾಗಿತ್ತು. ಸೋದರತ್ತೆಯ ಮಗಳನ್ನು ಚಂದಣ್ಣನಿಗೆ ಕೊಟ್ಟು ಮದುವೆ ಮಾಡುವುದೆಂದು ತೀರ್ಮಾನಿಸಿ ಲಗ್ನ ನಿಶ್ಚಯಿಸಿಬಿಟ್ಟರು. ಆ ಬಗ್ಗೆ ಚಂದಣ್ಣನ ಇರಾದೆಯೇನು ಎಂದು ಯಾರೂ ಒಂದು ಮಾತು ಕೇಳಲಿಲ್ಲ.

ತಾನು ನಡೆಸಿದ ಅಕೃತ್ಯ; ಒಳಗೊಳಗೇ ದೊಂಬರ ಮುಖಂಡ ನಡೆಸಿದ ಮಸ್ಲಲತ್ತು. ದೊಂಬರ ಲಕ್ಷ್ಮಿ ಏನೂ ತಿಳಿಯದವಳಂತೆ ಆ ರಾತ್ರಿ ನಟಿಸಿದ ರೀತಿ. ಇವೆಲ್ಲ ಬೇಕೆಂತಲೇ ತನ್ನನ್ನು ಬಲೆಗೆ ಸಿಕ್ಕಿಸಿಕೊಳ್ಳಲು ಹೂಡಿದ ಆಟವೆಂದು ಚಂದಣ್ಣ ತಿಳಿದ. ತಾನು ಆ ಬಗ್ಗೆ ನಿರ್ದೋಷಿ. ದೊಂಬರು ಬೇಕಂತಲೇ ಅಪಮಾನ ಮಾಡಿ ಹಣ ಕಿತ್ತಿದ್ದಾರೆಂದು ಯಾರ ಕೈಲಿ ಹೇಳಲು ಸಾಧ್ಯ. ಹೇಳಿದರೂ ಚಂದಣ್ಣನ ಮಾತು ಕೇಳುವರಾರು? ಹೀಗಾಗಿ ಚಂದಣ್ಣ ತನ್ನನ್ನು ತಾನೇ ಶಪಿಸಿಕೊಂಡ.

ಈ ಚಿಂತೆಯಲ್ಲಿರುವಾಗಲೇ ತನ್ನ ತಂದೆ ಮದುವೆಗೆ ಏರ್ಪಾಟು ಮಾಡಿದ್ದು ಚಂದಣ್ಣನಿಗೆ ಏನೇನೂ ಹಿಡಿಸಲಿಲ್ಲ. ಆದರೆ ಈ ಬಗ್ಗೆ ತಂದೆಯ ಎದುರು ನಿಂತು ಮಾತಾಡುವ ಧೈರ್ಯವೂ ಬರಲಿಲ್ಲ. ಮೂಕಪಶುವಿನಂತೆ ಲಗ್ನ ಮಂಟಪದಲ್ಲಿ ನಿಂತು, ಕಣ್ಣುಮುಚ್ಚಿಕೊಂಡು ಸೋದರತ್ತೆಯ ಮಗಳ ಕೊರಳಿಗೆ ತಾಳಿ ಕಟ್ಟಿದ. ಮದುವೆಯ ವಿಧ್ಯುಕ್ತಕ್ರಿಯೆಗಳು ನಡೆಯುವಾಗ ಚಂದಣ್ಣನ ಮುಖದಲ್ಲಿ ಕಿಂಚಿತ್ತಾದರೂ ಕಳೆಯಿಲ್ಲದ್ದನ್ನು ಕಂಡು, ಈ ಮದುವೆ ಚಂದಣ್ಣನಿಗೆ ಬೇಕಿಲ್ಲ ಎಂದು ಹಲವರು ಊಹಿಸಿದರು.

ಮದುವೆಯ ಸಂಭ್ರಮದಲ್ಲಿದ್ದ ಜನಕ್ಕೆ ಚಂದಣ್ಣ ಆ ರಾತ್ರಿ ನಾಪತ್ತೆಯಾಗಿ ಕೋಲಾಹಲವೆಬ್ಬಿಸಿದ್ದ. ಯಾರು ಎಷ್ಟು ಹುಡುಕಿದರೂ ಚಂದಣ್ಣನ ಪತ್ತೆಯಾಗಲಿಲ್ಲ.

ತಿಂಗಳೆರಡು ಕಳೆದರೂ ಚಂದಣ್ಣ ಭೂಮಿಯ ಮೇಲೆ ಇದ್ದಾನೊ ಇಲ್ಲವೊ ಎಂಬ ಸುಳಿವೂ ತಿಳಿಯಲಿಲ್ಲ.

ತಾಳಿ ಕಟ್ಟಿಸಿಕೊಂಡ ಹೆಣ್ಣು ಮೂಲೆಯಲ್ಲಿ ಕುಳಿತು ಕೊರಗತೊಡಗಿದಳು. ಮಗನ ಕೈಲಿ ತಾಳಿ ಕಟ್ಟಿಸಲು ಯತ್ನಿಸಿದ ತಂದೆ ಹಾಸಿಗೆ ಹಿಡಿದರು. ಹಾಸಿಗೆ ಹಿಡಿದವರು ಮತ್ತೆ ಮೇಲೇಳಲಿಲ್ಲ.

ತಂದೆ ತೀರಿಕೊಂಡರೂ ಚಂದಣ್ಣ ಹಳ್ಳಿಗೆ ಬಾರದೇ ಇರುವುದನ್ನು ಕಂಡು ಚಂದಣ್ಣ ಭೂಮಿಯ ಮೇಲೇ ಇಲ್ಲವೆಂದು ತೀರ್ಮಾನಿಸಿದರು ಆ ಹಳ್ಳಿಯವರು. ಚಂದಣ್ಣನ ಆಸ್ತಿಗೆ ಹಕ್ಕುದಾರರೇ ಇಲ್ಲದಂತಾದರು. ಪುಣ್ಯಕ್ಕೆ ಚಂದಣ್ಣನ ಹತ್ತಿರದ ಸಂಬಂಧಿಗಳೊಬ್ಬರು ಆಸ್ತಿಯ ಮೇಲ್ವಿಚಾರಣೆ ನೋಡಿಕೊಳ್ಳತೊಡಗಿದರು.

ಇತ್ತ ಹಳ್ಳಿಯನ್ನು ಬಿಟ್ಟು ಬಂದ ಚಂದಣ್ಣನ ಜೀವನದಲ್ಲಿ ಬಿರುಗಾಳಿ ಎದ್ದಿತ್ತು. ಹಳ್ಳಿ ಮತ್ತು ತನ್ನ ಜನರಿಂದ ಆದಷ್ಟು ದೂರವಾಗಿರಬೇಕೆಂದು ಹೊರಟ ಚಂದಣ್ಣನಿಗೆ ಎಲ್ಲಿಗೆ ಹೋಗುವುದು? ಹೇಗೆ ಜೀವಿಸುವುದು ಎಂಬುದೇ ತಿಳಿಯದಾಯಿತು.

ಅವರೆಗೂ ಚಂದಣ್ಣ ಹಳ್ಳಿಯನ್ನು ಬಿಟ್ಟು ಹೊರಗೆ ಹೋದವನಲ್ಲ. ಚಿಕ್ಕಂದಿನಲ್ಲಿ ಒಂದೆರಡು ಬಾರಿ ಶಹರಿಗೆ ಹೋದ ಜ್ಞಾಪಕ ಅಷ್ಟೆ. ಕೈಲಿದ್ದ ನಾಲ್ಕಾರು ಕಾಸು ಕಣ್ಣುಮುಚ್ಚಿ ತೆರೆಯುವುದರಲ್ಲಿ ಮುಗಿದಿತ್ತು. ಪಟ್ಟಣದಲ್ಲಿ ನಡೆಯುವ ಮೋಸ, ದಗಲ್‌ಬಾಜಿತನಕ್ಕೆ ಹೊಂದಿಕೊಳ್ಳುವುದು ಬಹಳ ಕಷ್ಟವಾಯಿತು. ಕೈಲಿ ಕಾಸಿಲ್ಲದಂತಾದಮೇಲೆ ಅಕೃತ್ಯಗಳಿಗೆ ಚಂದಣ್ಣ ಕೈಹಾಕಬೇಕಾಯಿತು. ಪುಂಡುಹುಡುಗರ ಗುಂಪಿನಲ್ಲಿ ಸೇರಿಕೊಂಡು ಜೇಬುಗಳ್ಳತನ ಮಾಡಿ ನಾಲ್ಕು ತಿಂಗಳು ಜೈಲುವಾಸವನ್ನೂ ಅನುಭವಿಸಿಬಂದನು.

ಜೈಲಿನಿಂದ ಹೊರಬಂದಮೇಲೆ ಚಂದಣ್ಣನಿಗೆ ಪಟ್ಟಣದ ಜೀವನ ಬೇಸರ ತಂದಿತು. ಹರಿಕಥೆ ಮಾಡುವ ದಾಸರೊಬ್ಬರ ಹಿಂದೆ ಬಿದ್ದು ಅವರ ಸೇವೆ-ಶುಶ್ರೂಷೆ ಮಾಡಿ ಊರೂರು ಅಲೆದನು. ಅದೂ ಬೇಸರವಾಗಿ ಗದಗಿನಲ್ಲಿ ಹೋಟೆಲ್ ಒಂದರ ಮಾಣಿಯಾದನು.

ಅಲ್ಲಿಂದ ಚಂದಣ್ಣನ ಅದೃಷ್ಟ ಸ್ವಲ್ಪ ಬದಲಿಸಿತು. ಚಂದಣ್ಣ ಮಾಣಿಯಾಗಿದ್ದ ಹೋಟೆಲ್ಲಿಗೆ ಪ್ರಸಿದ್ಧ ಗವಾಯಿಗಳೊಬ್ಬರು ಬರುತ್ತಿದ್ದರು. ಆ ಗವಾಯಿಗಳನ್ನು ಕಂಡರೆ ಹೋಟೆಲ್ ಮಾಲೀಕನಿಗೆ ಎಲ್ಲಿಲ್ಲದ ಗೌರವ. ಮಾಲೀಕನ ಹೆಂಡತಿ ಗವಾಯಿಗಳ ಅಚ್ಚುಮೆಚ್ಚಿನ ಶಿಷ್ಯೆ. ಅದರಿಂದಾಗಿ ಹೋಟೆಲ್ ಹಿಂಭಾಗದಲ್ಲೇ ಇದ್ದ ಮಾಲೀಕನ ಮನೆಯಲ್ಲಿ ಗಂಟೆಗಟ್ಟಲೆ ಗವಾಯಿಗಳ ತಾಲೀಮ್ ನಡೆಯುತ್ತಿತ್ತು. ಅಲ್ಲಿಗೆ ತಿಂಡಿ ವಗೈರೆಗಳನ್ನು ತೆಗೆದುಕೊಂಡು ಹೋಗಲು ಚಂದಣ್ಣ ನಿಯಮಿತನಾಗಿದ್ದನು. ಹೀಗಾಗಿ ಚಂದಣ್ಣನಿಗೆ ಗವಾಯಿಗಳ ಪರಿಚಯವಾಯಿತು. ಕ್ರಮೇಣ ಪರಿಚಯ ನಿಕಟವಾಗಿ, ಗಂಡುಮಕ್ಕಳನ್ನು ಕಾಣದ ಗವಾಯಿಗಳು ಚಂದಣ್ಣನನ್ನು ಪ್ರೀತಿಯಿಂದ ಕಾಣತೊಡಗಿದರು.

ಆಗಾಗ್ಗೆ ಚಂದಣ್ಣ ಗವಾಯಿಗಳ ಮನೆಗೂ ಹೋಗಿ ಬರುತ್ತಿದ್ದನು. ಗವಾಯಿಗಳಿಗೆ ಒಬ್ಬ ಮಗಳಿದ್ದಳು. ಅವಳ ರೂಪು–ಲಾವಣ್ಯ ಆ ಊರಿಗೇ ಪ್ರಸಿದ್ಧಿಯಾಗಿತ್ತು. ಅಲ್ಲದೆ ಅವಳು ನರ್ತನದಲ್ಲಿ ಹೆಚ್ಚಿನ ಅಭ್ಯಾಸಮಾಡಿಕೊಂಡು ಖ್ಯಾತಿ ಪಡೆದಿದ್ದಳು. ನಾಲ್ಕಾರು ಕಡೆ ಅವಳ ನರ್ತನ ಪ್ರದರ್ಶನ ನಡೆದು ಗದಗಿನ ನಾಗರಿಕರ ಮನವನ್ನು ಸೆಳೆದಿದ್ದಳು.

ಸ್ವಾಭಾವಿಕವಾಗಿಯೇ ಚಂದಣ್ಣನ ದೃಷ್ಟಿ ಗವಾಯಿಗಳ ಮಗಳ ಕಡೆ ಹರಿಯಿತು. ಅವನಿಗೇ ಅರಿವಿಲ್ಲದಂತೆ ಅವಳ ಚೆಲುವು ಅವನ ಮನವನ್ನು ಸೂರೆಗೊಂಡಿತು. ಆದರೆ ಎಲ್ಲಿಂದ ಎಲ್ಲಿಗೆ ಸಂಬಂಧ? ಗವಾಯಿಗಳ ಮಗಳೆಂದರೇನು? ಚಂದಣ್ಣನೆಂದರೇನು? ಗವಾಯಿಗಳು ಮನಸ್ಸು ಮಾಡಿದರೆ ಕೋಟ್ಯಾಧೀಶ್ವರನನ್ನು ಅಳಿಯನನ್ನಾಗಿ ತರಬಹುದಿತ್ತು.

ಇದನ್ನು ನೆನೆದಾಗಲೆಲ್ಲ ಚಂದಣ್ಣನ ಮನಸ್ಸು ಇಂಗು ತಿಂದ ಮಂಗನಂತಾಗುತ್ತಿತ್ತು. ಆಕಾಶದ ಚಂದ್ರನನ್ನು ಕಂಡು ಬೇಕೆಂದು ಅತ್ತ ಮಗುವಿನ ಸ್ಥಿತಿಯಾಯಿತು ಚಂದಣ್ಣನ ಆಗಿನ ಸ್ಥಿತಿ. ಆದರೂ ಚಂದಣ್ಣ ನಿರಾಶನಾಗಲಿಲ್ಲ. ಗವಾಯಿಗಳ ಮನೆಗೆ ಹೋಗಿ ಬರುವುದನ್ನು ನಿಲ್ಲಿಸಲಿಲ್ಲ.

ಸಾಮಾನ್ಯವಾಗಿ ಗವಾಯಿಗಳ ಮಗಳು ಕಮಲಾಬಾಯಿಯ ನರ್ತನ ಪ್ರದರ್ಶನ ಏರ್ಪಟ್ಟಾಗಲೆಲ್ಲ ಆಕೆಯನ್ನು ಕರೆದುಕೊಂಡು ಹೋಗಿ ಮತ್ತೆ ಅಲ್ಲಿಂದ ಕರೆದುತರುವುದು ಚಂದಣ್ಣನ ಕೆಲಸವಾಗಿತ್ತು. ಚಂದಣ್ಣನೇ ಗವಾಯಿಗಳ ದೃಷ್ಟಿಯಲ್ಲಿ ಅತ್ಯಂತ ನಂಬಿಕೆಯವನಾಗಿದ್ದನು.

ಒಮ್ಮೆ ನರ್ತನ ತೀರಿಸಿಕೊಂಡು ಟಾಂಗದಲ್ಲಿ ಮನೆಗೆ ಹಿಂತಿರುಗುತ್ತಿರುವಾಗ ಸರಿರಾತ್ರಿಯಾಗಿತ್ತು. ಕಮಲಬಾಯಿಯ ಪಕ್ಕದಲ್ಲೇ ಕುಳಿತ್ತಿದ್ದ ಚಂದಣ್ಣನಿಗೆ ಅಂದು ಎಲ್ಲಿಲ್ಲದ ಧೈರ್ಯ ಬಂದಿತ್ತು. ಮೆಲ್ಲಗೆ ಧೈರ್ಯಮಾಡಿ ಒಮ್ಮೆ ಚಂದಣ್ಣ ಕಮಲಾಬಾಯಿಯ ಕೈಹಿಡಿದು ಹಿಸುಕಿದನು. ಕಮಲಾಬಾಯಿ ಚಂದಣ್ಣನ ಹಿಡಿತಕ್ಕೆ ಕೊಸರಲಿಲ್ಲ. ಧೈರ್ಯಗೊಂಡ ಚಂದಣ್ಣ ಕಮಲಾಬಾಯಿಯನ್ನು ತನ್ನ ಹತ್ತಿರಕ್ಕೆ ಎಳೆದುಕೊಂಡನು. ಅಂದೇ ಚಂದಣ್ಣ – ಕಮಲಾಬಾಯಿಯರ ಮನಗಳು ಒಂದಾದವು.

ಆದರೆ ಇವರ ಪ್ರೇಮ ಬಹಳ ದಿನ ಗುಟ್ಟಾಗಿ ಉಳಿಯಲಿಲ್ಲ. ಒಂದು ದಿನ ರಟ್ಟಾಯಿತು. ಇಬ್ಬರೂ ಗವಾಯಿಗಳ ಕೈಗೆ ಸಿಕ್ಕಿಬಿದ್ದರು. ಚಂದಣ್ಣನ ಕೃತಘ್ನತೆಗೆ ನೊಂದ ಗವಾಯಿಗಳು ಅವನನ್ನು ಮನೆಗೆ ಬರದಂತೆ ಕಟ್ಟು ಮಾಡಿದರು. ಚಂದಣ್ಣನಿಗೆ ಅದು ಎರಡನೆಯ ಪೆಟ್ಟಾಯಿತು ಜೀವನದಲ್ಲಿ.

ಅಲ್ಲಿ ದೊಂಬರ ಲಕ್ಷ್ಮಿ ಕೈಕೊಟ್ಟಳು; ಇಲ್ಲಿ ಗವಾಯಿಗಳು ಕೈಕೊಟ್ಟರು. ಚಂದಣ್ಣನಿಗೆ ದಿಕ್ಕು ತೋಚದಾಯಿತು. ಗದಗನ್ನು ಬಿಟ್ಟು ಬಹುದೂರ ಹೋಗಬೇಕೆಂದು ಯೋಚಿಸಿದನು. ಕಮಲಾಬಾಯಿ ಇಲ್ಲದ ತನ್ನ ಜೀವನ ವ್ಯರ್ಥವೆಂದು

ಚಿಂತಿಸಿದನು. ಚಿಂತಿಸಿ ಚಿಂತಿಸಿ ಕೊನೆಗೆ ಆತ್ಮಹತ್ಯೆಗೆ ಯತ್ನಿಸಿದನು. ಆದರೆ ಯಾವುದೂ ಅವನಿಂದ ಸಾಧ್ಯವಾಗಲಿಲ್ಲ. ಅವನ ಮನದ ಚಿಂತೆ ಮಾತ್ರ ಭೂಮ್ಯಾಕಾಶ ಒಂದಾಗುವಂತೆ ಬೆಳೆಯುತ್ತಿತ್ತು.

ಒಮ್ಮೆ ಸಾಹಸಮಾಡಿ ಕದ್ದು ಕಮಲಾಬಾಯಿಯನ್ನು ಭೇಟಿಯಾಗಿ ತನ್ನ ನಿರ್ಮಲಪ್ರೇಮವನ್ನು ತೋಡಿಕೊಂಡನು. ಕಮಲಾಬಾಯಿಯದೂ ಅದೇ ಸ್ಥಿತಿಯಾಗಿತ್ತು. ಚಂದಣ್ಣನನ್ನು ಬಿಟ್ಟು ಅವಳು ಒಂದು ಕ್ಷಣವೂ ಇರಲಾರದಾಗಿದ್ದಳು. ಕಮಲಾಬಾಯಿ ತನಗೆ ತಾನೇ ಚಿಂತಿಸಿ ಚಿಂತಿಸಿ ಒಂದು ನಿರ್ಧಾರಕ್ಕೆ ಬಂದಿದ್ದಳು. ಅವಳೇ ಚಂದಣ್ಣನನ್ನು ಪುಸಲಾಯಿಸಿ ಗದಗಿನಿಂದ ತಾವಿಬ್ಬರೂ ಪಲಾಯನ ಕೀಳುವುದೆಂದು ಸೂಚಿಸಿದಳು. ವಿಧಿಯಿಲ್ಲದೆ ಕಮಲಾಬಾಯಿಯ ಏರ್ಪಾಟಿಗೆ ಚಂದಣ್ಣ ಒಪ್ಪಿದನು.

ತನ್ನ ನಿರ್ಧಾರದಂತೆ ಕಮಲಾಬಾಯಿ ಚಂದಣ್ಣನೊಂದಿಗೆ ಗದಗಿನಿಂದ ಕಾಲುಕಿತ್ತಳು. ಬುದ್ಧಿವಂತೆಯಾದ ಆಕೆ ಚಂದಣ್ಣನ ಹಿಂದೆ ಬರೀಕೈಲಿ ಬಂದಿರಲಿಲ್ಲ; ಸಾಕಷ್ಟು ಗಂಟನ್ನೂ ತಂದಿದ್ದಳು.

ಗದಗಿನಿಂದ ಹೊರಟ ಇಬ್ಬರೂ ಅಲ್ಲಿ ಇಲ್ಲಿ ಅಲೆದು ಕೊನೆಗೆ ದಾವಣಗೆರೆಯ ನಾಟಕದ ಕಂಪನಿಯೊಂದರಲ್ಲಿ ಸೇರಿಕೊಂಡರು. ನಾಟಕದ ಕಂಪನಿಯ ಮಾಲೀಕ ಕಮಲಾಬಾಯಿಯ ರೂಪಿಗೆ ಮರುಳಾಗಿ ಅವಳನ್ನು ಕಂಪನಿಗೆ ಸೇರಿಸಿಕೊಂಡಿದ್ದ. ಮುಖ್ಯಪಾತ್ರಗಳನ್ನೆಲ್ಲ ಕಮಲಾಬಾಯಿಗೆ ಮೀಸಲು ಮಾಡಿದ. ಚಂದಣ್ಣನಿಗೆ ಎಲ್ಲೋ ನೆಪಕ್ಕೆ ಒಂದೆರಡು ಚಿಲ್ಲರೆ ಪಾತ್ರಗಳನ್ನು ಕೊಟ್ಟಿದ್ದ.

ಕಮಲಾಬಾಯಿ ಕಂಪನಿಗೆ ಕಾಲಿಟ್ಟಮೇಲೆ ಮಾಲೀಕನ ದೆಸೆಯೂ ಖುಲಾಯಿಸಿತು. ವರಮಾನ ದ್ವಿಗುಣಗೊಂಡಿತು. ಜನ ಕಮಲಾಬಾಯಿಯ ನರ್ತನ—ಅಭಿನಯಕ್ಕೆ ಮರುಳಾದರು. ಕೆಲವೇ ದಿನಗಳಲ್ಲಿ ಕಮಲಾಬಾಯಿ ಪ್ರಸಿದ್ಧಳಾದಳು. ಅಂತಸ್ತು-ಗೌರವಗಳು ಹೆಚ್ಚಿದವು. ಆದರೆ ಚಂದಣ್ಣನಿಗೆ ನಾಟಕದ ಜೀವನ ಏನೇನೂ ಸರಿಬರಲಿಲ್ಲ. ಎಲ್ಲರ ಕಣ್ಣುಗಳು ಕಮಲಾಬಾಯಿಯ ಮೇಲಿವೆ ಎಂಬ ವಿಚಾರವನ್ನು ಚಂದಣ್ಣ ಕಂಪನಿಗೆ ಸೇರಿದ ಮೊದಲದಿನವೇ ಕಂಡುಕೊಂಡನು. ಅಲ್ಲದೆ ಮಾಲೀಕ ಅನಾವಶ್ಯಕವಾಗಿ ಕಮಲಳನ್ನು ಕೋಣೆಗೆ ಕರಸಿಕೊಂಡು ಹರಟೆ ಕೊಚ್ಚುವುದು ಚಂದಣ್ಣನಿಗೆ ಏನೇನೂ ಹಿಡಿಸಲಿಲ್ಲ. ಮಾಲೀಕನ ವರ್ತನೆಯ ಬಗ್ಗೆ ಕಮಲಾಬಾಯಿಯೂ ಬೇಸರಗೊಂಡಿದ್ದಳು. ಆದರೆ ಮಾಡುವುದೇನು? ವಿಧಿಯಿಲ್ಲದೆ ಸಹಿಸಬೇಕಾಗಿತ್ತು.

ಇದೇ ಸಮಯದಲ್ಲಿ ಕಮಲಳಿಗೆ ಮೂರು ತಿಂಗಳಾಗಿತ್ತು. ಮುಂದಿನ ದಿನಗಳನ್ನು ನೆನೆದು ಚಂದಣ್ಣ-ಕಮಲ ಇಬ್ಬರೂ ಆನಂದದಲ್ಲಿದ್ದರು. ಇನ್ನು ಕೆಲದಿನ ಕಳೆದಮೇಲೆ ನಾಟಕದ ಜೀವನದಿಂದ ದೂರವಿರಬೇಕೆಂದು ಕಮಲಾಬಾಯಿ ಲೆಕ್ಕಹಾಕುತ್ತಿದ್ದಳು.

ಈ ಮಧ್ಯೆ ಒಂದುದಿನ ನಾಟಕ ಮುಗಿದ ಮೇಲೆ ಮಾಲೀಕ ಕಮಲಾಬಾಯಿ

ಯನ್ನು ತನ್ನ ಕೋಣೆಗೆ ಕರೆಸಿಕೊಂಡನು. ತನ್ನ ಬಹುದಿನದ ಬಯಕೆಯನ್ನು ಅವಳ ಎದುರಿನಲ್ಲಿ ತೋಡಿಕೊಂಡನು. ಕಂಪನಿಯ ಆಸ್ತಿಯನ್ನೆಲ್ಲ ಅವಳ ಹೆಸರಿಗೆ ಬರೆಯುತ್ತೇನೆಂದು ಸೂಚಿಸಿದನು. ಹಣವನ್ನು ತೃಣವಾಗಿ ಕಂಡಿದ್ದ ಕಮಲಾಬಾಯಿ ಮಾಲೀಕನ ಯಾವ ಆಸೆಗೂ ಮಣಿಯದೆ ದಿಟ್ಟತನದಿಂದ ಹೊರಬಂದಳು. ಅಲ್ಲಿಂದ ಮತ್ತೆ ಅವಳು ನಾಟಕದಲ್ಲಿ ಪಾತ್ರವಹಿಸಲಿಲ್ಲ.

ಒಂದು ವಾರ ಕಳೆದಮೇಲೆ ಚಂದಣ್ಣ ಕಮಲಾಬಾಯಿ ಆ ಕಂಪನಿಯಿದ್ದ ಊರನ್ನೇ ತೊರೆದು ಹೊರಟರು. ಆದರೆ ಹೋಗುವುದು ಎಲ್ಲಿಗೆ? ಇಬ್ಬರೂ ಯೋಚಿಸಿ ಯೋಚಿಸಿ ಬೇಸತ್ತರು. ಕೊನೆಗೊಮ್ಮೆ ತನ್ನ ಸ್ವಂತ ಹಳ್ಳಿಗೇ ಹಿಂತಿರುಗುವುದೆಂದು ಚಂದಣ್ಣ ನಿರ್ಧಾರಕ್ಕೆ ಬಂದನು. ತನ್ನ ನಿರ್ಧಾರವನ್ನು ಕಮಲಾಬಾಯಿಗೂ ತಿಳಿಸಿದನು. ತನ್ನವರನ್ನೆಲ್ಲ ತೊರೆದು ಚಂದಣ್ಣನೇ ಸರ್ವಸ್ವವೆಂದು ಬಂದ ಕಮಲಾಬಾಯಿಗೆ ಚಂದಣ್ಣನ ಮಾತಿಗೆ ಪ್ರತಿಹೇಳುವ ಧೈರ್ಯವಿರಲಿಲ್ಲ. ಅವಳೂ ಕೂಡ ಹಳ್ಳಿಗೆ ಹಿಂತಿರುಗಿ ಒಂದು ಕಡೆ ನೆಲೆಯಾಗಿ ನಿಲ್ಲುವುದೇ ಸೂಕ್ತವೆಂದು ಸೂಚಿಸಿದಳು.

ಗರ್ಭಿಣಿ ಕಮಲಾಬಾಯಿಯೊಂದಿಗೆ ಚಂದಣ್ಣ ತನ್ನ ಹಳ್ಳಿಯನ್ನು ಪುನಃ ಪ್ರವೇಶಿಸಿದನು. ಐದು ವರುಷಗಳ ಅಜ್ಞಾತದಲ್ಲಿದ್ದ ಚಂದಣ್ಣನನ್ನು ಆಗಲೇ ಹಲವರು ಮರೆಯಹತ್ತಿದ್ದರು. ಹೀಗೆ ಏಕಾಏಕಿ ಹೆಣ್ಣೊಬ್ಬಳ ಸಂಗಡ ಚಂದಣ್ಣನ ಆಗಮನ ವಾದುದು ಇಡೀ ಹಳ್ಳಿಗೆ ಆಶ್ಚರ್ಯತಂದಿತು.

'ಚಂದಣ್ಣ ಯಾವಳನ್ನೋ ಕರೆದುತಂದಿದ್ದಾನೆ' ಎಂಬ ಪುಕಾರ್ ನಿಮಿಷೆರಡು ನಿಮಿಷಗಳಲ್ಲಿ ಇಡೀ ಹಳ್ಳಿಗೇ ಹಬ್ಬಿತು. ಎಲ್ಲರೂ ಒಂದಲ್ಲ ಒಂದು ನೆಪ ಹೂಡಿ ಚಂದಣ್ಣನ ಮನೆಗೆ ಬಂದು ಕಮಲಾಬಾಯಿಯನ್ನು ನೋಡುವವರೇ ಆದರು. ಆದರೆ ಚಂದಣ್ಣ ಮೊದಲ ಚಂದಣ್ಣನಾಗಿರಲಿಲ್ಲ; ಜನಗಳ ಅವಹೇಳನಕ್ಕೆ ಜಗ್ಗದವನಾಗಿದ್ದ.

ಚಂದಣ್ಣ ತನ್ನ ತಂದೆ ತನ್ನ ದುಃಖದಲ್ಲೇ ಮರಣ ಕಂಡದ್ದನ್ನು ಕೇಳಿ ಮರುಗಿದ. ನೋಡಿಕೊಳ್ಳುವವರಿಲ್ಲದೆ ಅಧ್ವಾನವಾಗಿದ್ದ ಆಸ್ತಿಯನ್ನೆಲ್ಲ ಸರಿಪಡಿಸಿದ. ಆಳು ಕಾಳುಗಳನ್ನು ಹಿಡಿದು ಹೊಲ ಗದ್ದೆಯಲ್ಲಿ ಬೆಳೆ ಇಡಿಸಿದ. ಯಾರೊಬ್ಬರ ತಂಟೆ-ತಾಪತ್ರಯಗಳಿಗೆ ಹೋಗದೆ ಚಂದಣ್ಣ ಹಳ್ಳಿಯಲ್ಲಿ ತನ್ನ ಜೀವನ ಸಾಗಿಸಿದ.

ಜನ ನಾಲ್ಕುದಿನ ಆಡಿಕೊಂಡು ತಮಗೆ ತಾವೆ ಸುಮ್ಮನಾದರು. ಚಂದಣ್ಣ ಆ ಹಳ್ಳಿಯಲ್ಲಿ ಹೋಗಿ ಬರುತ್ತಿದ್ದ ಮನೆಯೆಂದರೆ ನಮ್ಮದೊಂದೆ. ಅದರಲ್ಲೂ ನನ್ನ ಅಜ್ಜಿ ಎಂದರೆ ಅವನಿಗೆ ತನ್ನ ತಾಯಿಯನ್ನು ಕಂಡಷ್ಟು ಪ್ರೀತಿ. ನನ್ನ ಅಜ್ಜಿಯ ಬಳಿ ತನ್ನ ಇಡೀ ಕಥೆಯನ್ನೆಲ್ಲ ತೋಡಿಕೊಂಡಿದ್ದಾನೆ. ಅಜ್ಜಿಯ ಬಳಿಯೇ ಬೆಳೆದ ನನಗೆ ಚಂದಣ್ಣ ಹೊಸಬನಲ್ಲ; ಅವನ ಕಥೆ ತಿಳಿಯದೇ ಇಲ್ಲ.

ಕಮಲಾಬಾಯಿ-ಚಂದಣ್ಣರ ಜೋಡಿಯನ್ನು ಕಂಡು ಹಲವರು ಅಸೂಯೆ

ಪಟ್ಟರು. ಕೆಲವರು ಕುಚೋದ್ಯಮಾಡಿದರು. ಆದರಲ್ಲೂ ಕಮಲಾಬಾಯಿ ತಲೆಯ ತುಂಬ ಸೆರಗು ಹೊದ್ದು ಊರ ಹೊರಗಿನ ಸಿಹಿನೀರಿನ ಬಾವಿಗೆ ಹೊರಟರಂತೂ ಹಳ್ಳಿಯ ಮುಕ್ಕಗಳ ಮೈಮೇಲೆಲ್ಲ ಕಣ್ಣುಗಳು ಮೂಡುತ್ತಿದ್ದವು. ಕಮಲಾಬಾಯಿಯನ್ನು ಕಂಡು ಕೇಕರಿಸುವವರು; ಗೊಳ್ಳೆಂದು ನಗುವವರು; ವಯ್ಯಾರಿ ಹೊರಬಂದಳೆಂದು ಪಿಸುಗುಟ್ಟುವವರು; 'ಚಂದಣ್ಣನ ಚೆಲುವೆ ಒಳ್ಳೆ ಮಲ್ಲಿಗೆ ಬಳ್ಳಿ' ಎಂದು ಹೇಳಿ ತಮ್ಮ ರಸಿಕತೆಯನ್ನು ತೋರಿಸಿಕೊಳ್ಳುವವರು ಹೆಚ್ಚಾದರು. ಯಾವುದಕ್ಕೂ ಕಿವಿಗೊಡದೆ ಎಲ್ಲವನ್ನು ಶಾಂತರೀತಿಯಲ್ಲಿ ಎದುರಿಸಿ ಹಳ್ಳಿಯಲ್ಲಿ ಬಾಳ್ವೆ ನಡೆಸಿದವಳು ಎಂದರೆ ಕಮಲಾಬಾಯಿ.

ಚಂದಣ್ಣ ಹಳ್ಳಿಯಲ್ಲಿ ನೆಲೆಯಾಗಿ ನಿಂತಮೇಲೆ ಹಳ್ಳಿಗೆ ಒಂದು ಜೀವಕಳೆ ಬಂದಿತು. ಮೊದಮೊದಲು ಚಂದಣ್ಣನನ್ನು ಕಡೆಗಣ್ಣಿನಿಂದ ಕಂಡವರು—ಅಪಹ್ಯಾಸ್ಯ ಮಾಡಿದವರು ಬರುಬರುತ್ತ ತಮಗೆ ತಾವೇ ನಾಚಿದರು; ತಮ್ಮ ವರ್ತನೆ ಬಗ್ಗೆ ವ್ಯಾಕುಲಗೊಂಡರು.

ಇಷ್ಟಾದರೂ ಚಂದಣ್ಣ ಯಾರ ಬಗ್ಗೆಯೂ ಚಕಾರ ನುಡಿದವನಲ್ಲ; ಯಾರನ್ನೂ ನಂಬಿ ಹತ್ತಿರ ಸೇರಿಸಿದವನಲ್ಲ. ತಾನಾಯಿತು ತನ್ನ ಕೆಲಸವಾಯಿತು. ಹೀಗಾಗಿ ಹಳ್ಳಿಯೇ ಒಂದು—ಚಂದಣ್ಣನೇ ಒಂದಾಗಿ ಬಾಳಿದನು.

ಚಂದಣ್ಣನಿಂದ ಹಳ್ಳಿಗೆ ಬೇಕಾದಷ್ಟು ಉಪಕಾರವಾಗಿದೆ. ಹಳ್ಳಿಗೆ ರಾಗಿ ಮಿಲ್ ತಂದವನು ಚಂದಣ್ಣ. ಸರ್ಕಾರಿ ಅಧಿಕಾರಿಗಳು ಬಂದರೆ ಅವರ ಹಿಂದೆ ಮುಂದೆ ತಿರುಗಿ ಹಳ್ಳಿಗೆ ಅಗತ್ಯ ಆಗಬೇಕಾದ ರಸ್ತೆ ಮುಂತಾದ ಕಾಮಗಾರಿಕೆಗಳನ್ನು ನಡೆಸಲು ಕುಮ್ಮಕ್ ಕೊಟ್ಟವನು ಚಂದಣ್ಣ. ಶಿಥಿಲಗೊಂಡ ಕೆರೆಯನ್ನು ದುರಸ್ತು ಮಾಡಿಸಲು ಹೆಣಗಾಡಿದವನು ಚಂದಣ್ಣ.

ಹಳ್ಳಿ ಹುಟ್ಟಿದಾಗಿನಿಂದಲೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿರಲಿಲ್ಲ. ದಾಸರನ್ನು ಕರೆಸಿ ಹರಿಕಥೆ ಮಾಡಿಸುವುದು; ಬಯಲು ನಾಟಕಗಳನ್ನು ಆಡಿಸುವುದು; ಬೀರೇಶ್ವರನ ಜಾತ್ರೆಯನ್ನು ನಡೆಸುವುದು ಎಲ್ಲವೂ ಚಂದಣ್ಣನ ಪ್ರಯತ್ನದ ಫಲವೆಂದರೆ ತಪ್ಪಾಗಲಾರದು.

ಚಂದಣ್ಣ-ಕಮಲಾಬಾಯಿಯವರಿಗೆ ಮೂರು ಗಂಡು; ಒಂದು ಹೆಣ್ಣು ಆದವು. ಅವರ ಸಂಸಾರ ತುಂಬ ಚೆನ್ನಾಗಿಯೇ ನಡೆಯಿತು. ಕಮಲಾಬಾಯಿ ಓಡಿಬಂದವಳೇ ಆದರೂ ಅವಳ ನಡೆ-ನುಡಿಗಳು ತಾಳಿ ಕಟ್ಟಿಸಿಕೊಂಡು ಬಾಳುವ ಗರತಿಯರನ್ನೂ ಪ್ರಶ್ನಿಸುವಂಥವು! ಚಂದಣ್ಣನನ್ನು ಸರ್ವವಿಧದಲ್ಲೂ ಮೆಚ್ಚಿ ತನ್ನನ್ನು ತಾನೇ ಸಮರ್ಪಿಸಿಕೊಂಡವಳು ಕಮಲಾಬಾಯಿ. ಓಡಿ ಬಂದವಳೆಂಬ ಒಂದು ಮಾತು ಮರೆತರೆ ಕಮಲಾಬಾಯಿಯಲ್ಲಿ ಕಳಂಕ ಹುಡುಕುವುದು ಅಸಾಧ್ಯ.

ಅಷ್ಟು ನಿಷ್ಠೆಯಿಂದ ಬಾಳಿದ ನಮ್ಮ ಅಜ್ಜಿಯೇ ಕಮಲಾಬಾಯಿಯನ್ನು ಒಪ್ಪಿಕೊಂಡಿದ್ದಾಳೆ. ಅಜ್ಜಿ ಆಗಾಗ್ಗೆ ಹೇಳುತ್ತಿರುತ್ತಾಳೆ.

"ಹೆಂಗಸು ಎಂದರೆ ಕಮಲಾಬಾಯಿ. ಬೀದಿಯಲ್ಲಿ ಕತ್ತೆತ್ತಿ ನಡೆದಿದ್ದಾಳೆಯೆ? ಮುಂಬಾಗಿಲಲ್ಲಿ ಗಟ್ಟಿಯಾಗಿ ಕಾಲೂರಿ ನಿಂತಿದ್ದಾಳೆಯೇ? ಬಡಪಾಯಿ, ಅದೇನು ಮಂಕು ಕವಿದು ಚಂದಣ್ಣನ ಹಿಂದೆ ಓಡಿ ಬಂದಳೊ" ಎನ್ನುತ್ತಾಳೆ ಅಜ್ಜಿ.

ಚಂದಣ್ಣನ ಬಂಧುಗಳು ಅನೇಕರು ಕಮಲಾಬಾಯಿಯನ್ನು ತಮ್ಮ ಜಾತಿಗೆ ಸೇರಿಸಿಕೊಳ್ಳುವ ಸೂಚನೆ ಇತ್ತರು. ಆದರೆ ಚಂದಣ್ಣ–ಕಮಲಾಬಾಯಿ ಇಬ್ಬರೂ ಈ ಸೂಚನೆಗೆ ಒಪ್ಪದಾದರು.

"ಏನೊ, ಯಾವ ಜನ್ಮದ ಋಣಾನುಬಂಧವೊ ಇಬ್ಬರೂ ದೇಹದಿಂದ ಒಂದಾಗಿದ್ದೇವೆ. ಇನ್ನು ಜಾತಿಯಲ್ಲೂ ಒಂದಾಗಿ ಅವರ ಕುಲವನ್ನೇಕೆ ಕೆಡಿಸಲಿ" ಎಂಬ ವಾದ ಕಮಲಾಬಾಯಿಯದು.

"ಅವಳ ನಂಬಿಕೆ ಅವಳದು; ನನ್ನ ನಂಬಿಕೆ ನನ್ನದು. ಇದಕ್ಕೆ ಜಾತಿಯ ಸೋಗು ಏಕೆ? ನಾನು ಎಂದೋ ಜಾತಿಯನ್ನು ಬಿಟ್ಟಿದ್ದೇನೆ, ಇಂದೇಕೆ ಆ ಪ್ರಶ್ನೆ" ಎನ್ನುವ ವಾದ ಚಂದಣ್ಣನದು.

ಚಂದಣ್ಣ ಕಮಲಾಬಾಯಿಯೊಂದಿಗೆ ಸಂಸಾರ ಹೂಡಿದ ಮೇಲೆ ಒಬ್ಬ ಬಂಧುಗಳ ಹತ್ತಿರವೂ ಹೋದವನಲ್ಲ. ಯಾರ ಮನೆಯಲ್ಲೂ ನೀರು ಕುಡಿದವನಲ್ಲ. ಈ ಬಗ್ಗೆ ಯಾರಾದರೂ ಪ್ರಶ್ನಿಸಿದರೆ ಚಂದಣ್ಣನದು ಒಂದೇ ಉತ್ತರ.

"ನಾನು ಜಾತಿ ಕೆಟ್ಟವ; ಅವರ ಮನೆಗೆ ಹೋಗಿ ಅವರ ಮೇಲ್ಜಾತಿಯನ್ನು ಏಕೆ ಕೀಳುಮಾಡಲಿ" ಎನ್ನುತ್ತಿದ್ದ.

—ಚಂದಣ್ಣನ ಗುಣ ವಿಶೇಷಗಳಿಗೆ ನಾನೇ ಕಂಡ ಒಂದೆರಡು ನಿದರ್ಶನಗಳಿವೆ:

ಒಮ್ಮೆ ಹೀಗಾಯಿತು: ನಮ್ಮೂರಿನ ಈಗಿನ ಪಟೇಲರ ಮಗ ಬಸವ ತನ್ನ ತೋಟಕ್ಕೆ ಬರುತ್ತಿದ್ದ ಒಕ್ಕಲ ಮಕ್ಕಳಲ್ಲಿ ಒಬ್ಬಳಾದ ಸಿದ್ಧಿಯನ್ನು ಕೆಣಕಿದ. ಕೆಣಕಿದನೇನು ಕಣ್ಣೇ ಹಾಕಿದ. ಇದರ ಪರಿಣಾಮ ಒಳ್ಳೆಯದಾಗಲಿಲ್ಲ. ಸಿದ್ಧಿ ಎಲ್ಲರ ಬಾಯಿಗೂ ಬರುವಂತಾದಳು. ಬಸಿರುಹೊತ್ತ ಸಿದ್ಧಿಯನ್ನು ಎಲ್ಲರೂ ಶಪಿಸಿದರು. ತಮ್ಮ ಮಾನ ಮತ್ತು ಮಗನ ಮಾನ ಉಳಿಸಿಕೊಳ್ಳಲು ಪಟೇಲರು ಪಂಚಾಯಿತಿ ಸೇರಿಸಿದರು. ಪಂಚಾಯಿತಿಗೆ ಕುಳಿತವರೆಲ್ಲ ಸಿದ್ಧಿಯದೇ ತಪ್ಪೆಂದರು. ಸಿದ್ಧಿಯೇ ಪಟೇಲರ ಹುಡುಗನನ್ನು ಕೆಡಿಸಿದಂತೆ ವಾದಿಸಿದರು. ಸಿದ್ಧಿಯ ಮನೆತನಕ್ಕೆ ಗ್ರಾಮಸ್ಥರೆಲ್ಲರೂ ಬಹಿಷ್ಕಾರ ಹಾಕಬೇಕೆಂದರು.

ಇದನ್ನು ಕೇಳಿದ ಸಿದ್ಧಿಗೆ ಎದೆ ಒಡೆಯಿತು. ತನ್ನ ಪ್ರಾಣವನ್ನು ಇನ್ನು ಉಳಿಸಿಕೊಳ್ಳಬಾರದೆಂದು ಬಗೆದು ಹಾರಿಕೊಳ್ಳಲು ಊರ ಮುಂದಿನ ಬಾವಿಯ ಬಳಿಗೆ ಆ ರಾತ್ರಿ ನಡೆದು ಬಂದಳು. ಆಗತಾನೆ ತನ್ನ ಹೊಲದಕಡೆಯಿಂದ ಬರುತ್ತಿದ್ದ ಚಂದಣ್ಣ ಬಾವಿಯ ಬಳಿ ಸಿದ್ಧಿ ನಿಂತಿರುವುದನ್ನು ಕಂಡು ಚಕಿತನಾದನು. ಮಧ್ಯಾಹ್ನ ನಡೆದ ಪಂಚಾಯಿತಿಯೆಲ್ಲ ಚಂದ್ದಣ್ಣ ಕೇಳಿದ್ದನು. ಸಿದ್ಧಿ ಜೀವನದಲ್ಲಿ ಹತಾಶಳಾಗಿದ್ದಳೆಂದು ಬಗೆದು; ಅವಳನ್ನು ಗದರಿಸಿ, ಉಪಾಯಮಾಡಿ ಯಾರಿಗೂ ಕಾಣದಂತೆ ತನ್ನ ಮನೆಗೆ

ಕರೆದೊಯ್ದನು. ಕಮಲಾಬಾಯಿ ಸಿದ್ಧಿಯ ಸ್ಥಿತಿಗೆ ಮರುಗಿ ರಾತ್ರಿಯೆಲ್ಲ ಸಮಾಧಾನ ಹೇಳಿದಳು. ಬೆಳಗಾಗ ಹಳ್ಳಿಯಲ್ಲಿ ಎಲ್ಲರೂ ಸಿದ್ಧಿಯನ್ನು ಹುಡುಕತೊಡಗಿದರು.

ಇತ್ತ ಚಂದಣ್ಣ ಉಪಾಯದಿಂದ ಪಟೀಲರ ಮಗನನ್ನು ತನ್ನ ಮನೆಗೆ ಬರ ಮಾಡಿಕೊಂಡು ಮೂಲೆಯಲ್ಲಿ ಅಳುತ್ತಾ ಕುಳಿತಿದ್ದ ಸಿದ್ಧಿಯನ್ನು ತೋರಿಸಿ 'ಇವಳನ್ನು ಕೈಹಿಡಿದು ಅವಳ ಪ್ರಾಣ ಉಳಿಸುತ್ತಿಯೋ ಇಲ್ಲವೇ ಒದ್ದು ಇಲ್ಲೇ ಪ್ರಾಣ ತೆಗೆದು ಬಿಡಲೋ' ಎಂದು ಪಟೀಲರ ಮಗ ಬಸವನಿಗೆ ಹೇಳಿ ಚಂದಣ್ಣ ಗದಗಿನಿಂದ ತಂದಿದ್ದ ಹಳೆಯ 'ಬೆತ್ತ'ವೊಂದನ್ನು ಹಿಡಿದು ಬಾಗಿಲಿಗೆ ಅಡ್ಡ ನಿಂತನು.

ಚಂದಣ್ಣನ ರುದ್ರಾವತಾರಕ್ಕೆ ಹೆದರಿದ ಬಸವ "ನಾನೇನು ಮದುವೆಯಾಗು ವುದಿಲ್ಲ ಎಂದು ಹೇಳುವುದಿಲ್ಲ. ಆದರೆ ಅಪ್ಪ—ಅವ್ವ ಒಪ್ಪುತ್ತಿಲ್ಲ. ಸಿದ್ಧಿಯನ್ನು ಮದುವೆಯಾದರೆ ಆಸ್ತಿಯಲ್ಲಿ ಒಂದಂಗುಲ ಕೊಡುವುದಿಲ್ಲ ಎಂದು ಅಪ್ಪ ಹೇಳುತ್ತಾನೆ. ಇವಳನ್ನು ಮದುವೆಯಾಗಿ ಜೀವನ ಹೇಗೆ ಮಾಡಲಿ?" ಎಂದು ಅಳುತ್ತಾ ನಿಂತನು.

ಬಸವನ ಆಗಿನ ಸ್ಥಿತಿಯನ್ನು ನೋಡಿದ ಚಂದಣ್ಣ "ಥೂ! ಮುಟ್ಠಾಳ! ಅಪ್ಪನ ಆಸ್ತಿ ಹೋದರೆ ಹಾಳಾಗಲಿ. ನನ್ನ ಜಮೀನು ಕೊಡುತ್ತೇನೆ ಹೆದರಬೇಡ" ಎಂದು ಧೈರ್ಯ ಹೇಳಿ ಗುಟ್ಟಾಗಿ ಪುರೋಹಿತರನ್ನು ಕರೆಸಿ ಅವರಿಬ್ಬರಿಗೂ ಮದುವೆ ಮಾಡಿಸಿಯೇ ಬಿಟ್ಟನು. ತನ್ನ ಮಾತಿನಂತೆ ತನ್ನ ಜಮೀನಿನಲ್ಲಿ ಎರಡು ಎಕರೆ ಗದ್ದೆಯನ್ನು ಬರೆದುಕೊಟ್ಟನು.

ಸಿದ್ಧಿ ಬಸವರ ಮದುವೆ ಆದ ಮೇಲೆ ಗ್ರಾಮಸ್ಥರಿಗೆ ವಿಚಾರ ತಿಳಿಯಿತು. ವಿಚಾರ ತಿಳಿದ ಗ್ರಾಮಸ್ಥರಲ್ಲಿ ಯಾರೊಬ್ಬರೂ ತುಟಿಕ್ ಪಿಟಿಕ್ ಎನ್ನಲಿಲ್ಲ. ಪಟೇಲ ನಾಲ್ಕುದಿನ ಕಳೆದಮೇಲೆ ಸಿದ್ಧಿಯನ್ನು ಸೊಸೆಯಾಗಿ ಸ್ವೀಕರಿಸಿ ಮನೆ ತುಂಬಿಸಿ ಕೊಂಡನು.

ಇನ್ನೊಂದು ಬಾರಿ ಹೀಗಾಯಿತು:

ಕುರುಬರ ರಂಗ ತುಂಬ ಬಡವ. ಮನೆಯಲ್ಲಿ ಎಂಟು ಮಕ್ಕಳು–ಹೆಂಡತಿ–ವಯಸ್ಸಾದ ತಾಯಿ. ವ್ಯವಸಾಯ ಮಾಡಿ ತಿನ್ನಲು ಜಮೀನಿಲ್ಲ. ಅಲ್ಲಿ ಇಲ್ಲಿ ಕೂಲಿ ಮಾಡುವುದು; ಸಾಲುವುದಿಲ್ಲ. ಹೀಗಾಗಿ ಜೀವನ ಸಾಗಿಸಲು ರಾತ್ರಿವೇಳೆ ತೋಟ ಗಳಿಗೆ ನುಗ್ಗಿ ಅಡಕೆ ಕಾಯಿ, ತೆಂಗಿನಕಾಯಿ ಕದಿಯಲು ಪ್ರಾರಂಭಿಸಿದನು. ಒಂದು ರಾತ್ರಿ ಭರಮಪ್ಪನ ತೋಟದಲ್ಲಿ ತೆಂಗಿನಕಾಯಿ ಕೀಳುತ್ತಿರುವಾಗ ರಂಗ ಸಿಕ್ಕಿ ಬಿದ್ದನು. ಸಿಕ್ಕಿಬಿದ್ದ ರಂಗನನ್ನು ಬೆಳಕು ಹರಿಯುವವರೆಗೂ ಕದ್ದ ಕಾಯಿಸಮೇತ ಅದೇ ಮರಕ್ಕೆ ಕಟ್ಟಲಾಯಿತು. ಬೆಳಗಾಗ ಪಂಚಾಯಿತಿ ನಡೆದು ರಂಗ ಕಳ್ಳನೆಂದು ಊರಲ್ಲಿ ಡಂಗೂರ ಹಾಕಿಸಿ ಒಂದುನೂರು ರೂಪಾಯಿ ದಂಡವನ್ನು ಅವನ ಮೇಲೆ ಹೇರಿದರು. ದಂಡ ಕೊಡಲು ತಪ್ಪಿದರೆ ಬೆಳಗಾಗುವುದರೊಳಗೆ ಆ ಹಳ್ಳಿಯನ್ನು ಬಿಡಬೇಕೆಂದರು.

ಹೊಟ್ಟೆಗೆ ಹಿಟ್ಟಿಲ್ಲದೆ ಕದಿಯಲು ಹೋದ ರಂಗ ಇನ್ನು ದಂಡಕೊಡಲು ನೂರು

ರೂಪಾಯಿ ಎಲ್ಲಿ ತಂದಾನು? ರಂಗನ ಹೆಂಡತಿ ಹಳ್ಳಿಯಲ್ಲಿ ಎಲ್ಲರ ಕಾಲು ಕಟ್ಟಿದಳು, ಬೇಡಿದಳು ತನ್ನ ಗಂಡನನ್ನ ಬಿಡಿಸಿರೆಂದು. ಯಾರೂ ಮುಂದೆ ಬರಲಿಲ್ಲ ರಂಗನನ್ನು ಬಿಡಿಸಲು. ಸಂಜೆಯ ವೇಳೆಗೆ ರಂಗನ ಸಂಸಾರ ಕಂಗಾಲಾಗಿ ಕುಳಿತಿತು. ಸಣ್ಣಪುಟ್ಟ ರಂಗನ ಮಕ್ಕಳ ಗೋಳು ಗಗನವನ್ನು ಮುಟ್ಟತೊಡಗಿತು.

ಯಾರೂ ಯೋಚಿಸದಿದ್ದ ಚಂದಣ್ಣ ಸಂಜೆವೇಳೆಗೆ ರಂಗನನ್ನು ಕಟ್ಟಿಹಾಕಿದ್ದ ಸ್ಥಳಕ್ಕೆ ಬಂದು ನೂರು ರೂಪಾಯಿ ಪಂಚಾಯಿತಿದಾರರಿಗೆ ಕೊಟ್ಟು ರಂಗನನ್ನ ಬಿಡಿಸಿಕೊಂಡು ತನ್ನ ಮನೆಗೆ ಕರೆದುಕೊಂಡುಹೋದನು.

ಅಂದಿನಿಂದ ರಂಗ ಚಂದಣ್ಣನ ಮನೆಯಲ್ಲಿಯೇ ನಿಂತು ಚಂದಣ್ಣನ ಜಮೀನನ್ನು ನೋಡಿಕೊಳ್ಳತೊಡಗಿ, ತನ್ನ ಸಂಸಾರವನ್ನು ಸುಖವಾಗಿ ನಡೆಸ ತೊಡಗಿದನು.

—ಇಂಥ ಸಂಗತಿಗಳು ಚಂದಣ್ಣನ ಬಗ್ಗೆ ಹೇಳುತ್ತಾ ಹೋದರೆ ನೂರು ಆದಾವು.

ಚಂದಣ್ಣ ಕಮಲಾಬಾಯಿಯಲ್ಲಿ ಬಯಸಿದ್ದು ಕೇವಲ ಶಾರೀರಕ ಸೌಖ್ಯ. ಮಿಕ್ಕೆಲ್ಲದರಲ್ಲೂ ತನ್ನತನವನ್ನು ಕಾಪಾಡಿಕೊಂಡಿದ್ದ. ತನ್ನ ಊಟವನ್ನು ತಾನೇ ಮಾಡಿಕೊಂಡು ಮುವತ್ತು ವರುಷಕ್ಕೂ ಮೇಲ್ಪಟ್ಟು ಕಮಲಾಬಾಯಿಯೊಂದಿಗೆ ಸಂಸಾರ ನಡೆಸಿದ್ದಾನೆ ಎಂದರೆ ಯಾರೂ ನಂಬಲಾರರು. ಎಂಥ ರೋಗದಿಂದ ನರಳುತ್ತಿದ್ದರೂ ಕಮಲಾಬಾಯಿ ಮುಟ್ಟಿದ ನೀರು ಕುಡಿದಿಲ್ಲ ಎಂದರೆ ಎಲ್ಲರೂ ಆಶ್ಚರ್ಯಪಡುತ್ತಾರೆ. ಅಷ್ಟು ನಿಷ್ಠೆಯಿಂದ ತನ್ನತನವನ್ನು ಕಾಪಾಡಿಕೊಂಡು ಬಂದವ ಚಂದಣ್ಣ.

ಗಂಡು ಮಕ್ಕಳನ್ನು ಚೆನ್ನಾಗಿ ಓದಿಸಿದ್ದನು. ಅವರೆಲ್ಲರೂ ಸರ್ಕಾರಿ ಕೆಲಸ ದಲ್ಲಿದ್ದಾರೆ. ಇನ್ನು ಕೊನೆಯ ಮಗಳು ರತ್ನ. ಅವಳನ್ನೂ ಒಳ್ಳೆಯ ಕಡೆ ಕೊಟ್ಟು ಲಗ್ನಮಾಡಿದ್ದಾನೆಂದು ಕೇಳಿದ್ದೇನೆ.

ಆದರೆ ಚಂದಣ್ಣ ಒಂದು ದೊಡ್ಡ ಅನ್ಯಾಯ ಮಾಡಿದ್ದಾನೆ. ಅದೇನೆಂದರೆ, ತಾನೆ ತಾಳಿ ಕಟ್ಟಿದ ತನ್ನ ಸೋದರತ್ತೆಯ ಮಗಳು ಅದೇ ಊರಿನಲ್ಲಿ ತನ್ನ ಕಣ್ಣೆದುರಿಗೇ ಕೂಲಿಮಾಡಿ ಜೀವಿಸುತ್ತಿದ್ದರೂ ಅವಳಿಗೆ ಒಂದು ತುತ್ತು ಅನ್ನಹಾಕದೆ ಕಠೋರವಾಗಿ ವರ್ತಿಸಿದ್ದು. ಅದು ಏಕೆ ಆ ಹುಡುಗಿಯ ಬಗ್ಗೆ ಚಂದಣ್ಣನ ವರ್ತನೆ ಹೀಗಾಯಿತೊ ತಿಳಿಯದು.

ಅಂಥ ಚಂದಣ್ಣ ಹಾಸಿಗೆ ಹಿಡಿದು ಮಲಗಿದ್ದಾನೆ ಎಂದು ಅಜ್ಜಿ ಹೇಳಿದ ಮೇಲೆ ಹೋಗಿ ನೋಡಿ ಬರುವುದು ಒಳ್ಳೆಯದು ಎನ್ನಿಸಿತು. ಚಂದಣ್ಣನ ಮನೆಗೂ ನಮ್ಮ ಮನೆಗೂ ಒಂದು ಫರ್ಲಾಂಗ್ ದೂರ. ಆ ಕಗ್ಗತ್ತಲಲ್ಲಿ ಹೋಗುವುದಾದರೂ ಏನು? ಬೆಳಗ್ಗೆ ಹೋದರಾಯಿತು ಎಂದುಕೊಂಡೆ.

ಚಂದಣ್ಣನ ಯೋಚನೆಯಲ್ಲಿ ಹಾಸಿಗೆ ಬಿಟ್ಟು ಮೇಲೇಳಲೇ ಇಲ್ಲ. ಅಜ್ಜಿ ಊಟಕ್ಕೆ ಕರೆದು ಕರೆದು ಮೂಲೆಯಲ್ಲಿ ಅವಳೂ ನಿದ್ದೆಹೋದಳು. ನನಗೆ ಆ ರಾತ್ರಿ ಯಾವಾಗ ನಿದ್ರೆ ಬಂದಿತೊ ತಿಳಿಯದು.

—ಬೆಳಗಿನಜಾವದಲ್ಲಿ ಅಜ್ಜಿ ಕೂಗಿಕೊಂಡಳು.

'ಲೋ, ಪಾಯಿ, ಏಳೋ! ಚಂದಣ್ಣ ಹೊರಟು ಹೋದ್ನಂತೆ'

ಅಜ್ಜಿಯ ಮಾತು ಕೇಳಿ ದಿಗ್ಗನೆದ್ದು; ಮೈಮೇಲೆ ಷರಟು ಏರಿಸಿಕೊಂಡು ಚಂದಣ್ಣನ ಮನೆಕಡೆ ಹೊರಟೆ. ನಾನು ಹೋಗುವಲ್ಲಿ ಚಂದಣ್ಣನ ಜೀವ ಹಾರಿ ಹೋಗಿತ್ತು.

ನಾನು ಹಳ್ಳಿಗೆ ಬಂದ ಸುದ್ದಿ ಚಂದಣ್ಣನಿಗೆ ಯಾರೊ ಹೇಳಿದ್ದರಂತೆ. ಸಾಯುವ ಮುನ್ನ ಒಂದೆರಡು ಬಾರಿ ನನ್ನ ಮತ್ತು ಅಜ್ಜಿಯನ್ನು ನೆನಸಿಕೊಂಡನಂತೆ. ನಮ್ಮನ್ನು ಕಂಡಾಗ ಈ ಮಾತುಗಳನ್ನು ಹೇಳಿಕೊಂಡು ಕಮಲಾಬಾಯಿ ಗಳಗಳನೆ ಅತ್ತಳು.

ಸ್ವಲ್ಪ ಸಮಯದಲ್ಲೇ ಹಳ್ಳಿಗೆ ಹಳ್ಳಿಯೇ ಚಂದಣ್ಣನ ಮನೆ ಮುಂದೆ ನಿಂತಿತು. ಕೆಲವರು ಮಕ್ಕಳಿಗೆಲ್ಲ ಸುದ್ದಿಯನ್ನು ತಲುಪಿಸುವ ಪ್ರಯತ್ನದಲ್ಲಿ ತೊಡಗಿದರು.

ನೆರೆದ ಜನ ಚಂದಣ್ಣನ ಶವಸಂಸ್ಕಾರವನ್ನು ಹೇಗೆ ಮಾಡಬೇಕೆಂದು ಜಿಜ್ಞಾಸೆಗೆ ಒಳಗಾಯಿತು. ಅದು ಏನೇ ಇರಲಿ, ಅವನ ಬಾಳು ಹೇಗೇ ಸಾಗಿರಲಿ ಚಂದಣ್ಣನ ಜಾತಿಯಂತೆಯೇ ಅಪರಕ್ರಿಯೆಗಳು ನಡೆಯಬೇಕೆಂದು ತೀರ್ಮಾನಿಸಿದರು. ಕಮಲಾಬಾಯಿಯೂ ಅದನ್ನೇ ಸೂಚಿಸಿದಳು.

ಚಂದಣ್ಣನ ಬಂಧು–ಬಳಗ–ಸ್ನೇಹಿತರು–ಬೇಕಾದವರು ಬೇಡವಾದವರು ಹೀಗೆ ನೂರಾರು ಜನ ಅಲ್ಲಿ ಜಮಾಯಿಸಿದರು. ಸಾಯಂಕಾಲದ ವೇಳೆಗೆ ರತ್ನಳು ಬಂದಳು. ಅವಳ ಹಿಂದೆಯೇ ಗಂಡು ಮಕ್ಕಳೂ ಬಂದರು.

ಚಂದಣ್ಣನ ಶವವನ್ನು ಶ್ಮಶಾನಕ್ಕೆ ಒಯ್ಯುವಾಗ ಚಂದಣ್ಣನ ತಾಳಿ ಕಟ್ಟಿಸಿಕೊಂಡ ಹೆಂಡತಿಯನ್ನೂ ಯಾರೊ ಕರೆತಂದರು. ಶ್ಮಶಾನಯಾತ್ರೆ ಚೆನ್ನಾಗಿಯೇ ನಡೆಯಿತು. ತಾಳಿ ಕಟ್ಟಿಸಿಕೊಂಡ ಹೆಣ್ಣಿನ ಕೈಲಿದ್ದ ಬಳೆ, ಕೊರಳಲ್ಲಿದ್ದ ತಾಳಿ; ಹಣೆಯಲ್ಲಿದ್ದ ಕುಂಕುಮ ಅಳಿಸಿದರು. ಅವಳಿಗೊಂದು ಕೆಂಪುಸೀರೆ ಉಡಿಸಿದರು.

ಎಂಥ ವೈಚಿತ್ರ್ಯ! ತಾಳಿ ಕಟ್ಟಿಸಿಕೊಂಡವಳೊಬ್ಬಳು; ಸಂಸಾರ ನಡೆಸಿದವಳೊಬ್ಬಳು. ವಿಧವೆ ಎನ್ನಿಸಿಕೊಂಡ ಆ ಹೆಣ್ಣು ಜೀವನದಲ್ಲಿ ಸರಿಯಾಗಿ ಗಂಡನ ಮುಖವನ್ನೇ ನೋಡದವಳು.

ಕಮಲಾಬಾಯಿ ಮತ್ತು ಆಕೆಯ ಮಕ್ಕಳು ಶಶ್ಮಾನದಲ್ಲಿ ಒಂದು ಕಡೆ ಕುಳಿತ್ತಿದ್ದರು. ಆಕೆ ಹೀಗಾಗಬೇಕು ಹೀಗೇ ನಡೆಯಬೇಕು ಎಂದು ಒಂದು ಮಾತೂ ಆಡಲಿಲ್ಲ. ತನಗೆ ತಾನೆ ಕುಂಕುಮ ಅಳಿಸಿಕೊಂಡಳು. ಕೈಲಿದ್ದ ಬಳೆಗಳನ್ನು ಒಡೆದುಕೊಂಡಳು.

ಅಂತೂ ಚಂದಣ್ಣನ ಶವಸಂಸ್ಕಾರ ಮುಗಿಯಿತು. ನಾನೂ ರುದ್ರಭೂಮಿಗೆ ಹೋಗಿದ್ದೆ. ಚಂದಣ್ಣನನ್ನೂ ಮಣ್ಣಲ್ಲಿ ಹಾಕಿ ಬರುವಾಗ ಅಜ್ಜಿ ಆಗಾಗ್ಗೆ ಹೇಳುವ ಸತ್ಯವಾಕ್ಯವೊಂದು ನನ್ನ ತಲೆಯಲ್ಲಿ ಗುಂಯ್ ಗುಟ್ಟಿತು.

"ಸತ್ತವರ ಹಿಂದೆ ಯಾರೂ ಹೋಗುವುದಿಲ್ಲ; ಅವರವರ ಪಾಪ-ಪುಣ್ಯಗಳು ಅವರ ಬೆನ್ನಹಿಂದೆ ಹೋಗುತ್ತವೆ."

—ಅಂದು ಚಂದಣ್ಣನಾದರೂ ತನ್ನ ಹಿಂದೆ ಯಾರನ್ನು ಕರೆದುಕೊಂಡು ಹೋಗಿರಲಿಲ್ಲ. ಎಲ್ಲವನ್ನೂ ಇಲ್ಲಿಯೇ ಬಿಟ್ಟುಹೋಗಿದ್ದ, ಕಮಲಾಬಾಯಿಯನ್ನು ಕೂಡ.

—'ಉಮಾ-ಶಂಕರ'

ಕೌಸಲ್ಯಾ ವಿವಾಹ

(ವರದವಿಟ್ಠಲ ರಾಮಾಯಣ)

ಉಪೋದ್ಘಾತ

ರಾಮಾಯಣ ಕಥೆಯು ಇತಿಹಾಸಗಳಲ್ಲಿ ಅತ್ಯಂತ ಪ್ರಾಚೀನವಾದುದು. ಈ ಕಥೆ ಸಂಸ್ಕೃತ ಭಾಷೆಯಲ್ಲಿ ಮಾತ್ರವಲ್ಲದೆ ಸಾಮಾನ್ಯವಾಗಿ ಪ್ರಪಂಚದ ಎಲ್ಲ ಭಾಷೆಗಳಲ್ಲೂ ರೂಪುಗೊಂಡು ಎಲ್ಲೆಡೆಗಳಲ್ಲೂ ಹರಡಿದೆ. ಹೀಗೆ ಹರಡುವಾಗ ಅನೇಕ ಆವಾಪೋದ್ವಾಪಗಳಾಗಿ ಎಲ್ಲ ರಾಮಕೃತಿಗಳಲ್ಲೂ ರಾಮನಿಗೆ ಸಂಬಂಧಪಟ್ಟ ಕಥೆಯೇ ಇದ್ದರೂ ಒಂದನ್ನೊಂದು ಹೋಲದೆ ಕಥೆಯಲ್ಲಿ ಅನೇಕ ಮಾರ್ಪಾಡುಗಳು ಕಂಡುಬರುತ್ತವೆ. ರಾಮಾಯಣಕೃತಿ ಶತಕೋಟಿ ಸಂಖ್ಯೆಯಲ್ಲಿದೆ ಎಂದಮೇಲೆ ಕಥೆಯ ಮಹತ್ವ ಎಷ್ಟರದು ಎಂದು ವ್ಯಕ್ತಪಡುತ್ತದೆ. ಸಂಸ್ಕೃತ ಭಾಷೆಯಲ್ಲೇ ಅನೇಕ ರಾಮಾಯಣಗಳಿವೆ. ಇವುಗಳಲ್ಲೆಲ್ಲ ವಾಲ್ಮೀಕಿ ಮಹರ್ಷಿಯಿಂದ ರಚಿತವಾದ ಕೃತಿಯೇ ಅತ್ಯಂತ ಪ್ರಚಲಿತವಾದುದು.

ಸಂಸ್ಕೃತ ಭಾಷೆಯಲ್ಲಿ ವಿಪುಲವಾಗಿರುವ ರಾಮಕಥಾ ಸಾಹಿತ್ಯವನ್ನವಲಂಬಿಸಿ ಕನ್ನಡನಾಡಿನ ಕವಿಗಳು ಕನ್ನಡ ಭಾಷೆಯಲ್ಲೂ ಅನೇಕ ರಾಮಕಥೆಗಳನ್ನು ರಚಿಸಿದ್ದಾರೆ. ಈ ಸಮುದಾಯದಲ್ಲಿ ಕವಿಚರಿತ್ರೆಕಾರರು ಹೆಸರಿಸಿರುವ ವರದ ವಿಟ್ಠಲ ರಾಮಾಯಣ (ಕೌಸಲ್ಯಾ ವಿವಾಹ)ವೂ ಒಂದು.

ವರದವಿಟ್ಠಲ ರಾಮಾಯಣ

ಈ ಕೃತಿಯನ್ನು ರಚಿಸಿದವನು ಯಾರೆಂಬುದು ಗ್ರಂಥದಿಂದ ವ್ಯಕ್ತವಾಗಿ ತಿಳಿದುಬರುವುದಿಲ್ಲ. ಆದರೂ ೧ನೆಯ ಸಂಧಿಯ ೭ನೆಯ ಪದ್ಯದಲ್ಲಿ 'ಸ್ಮರನಯ್ಯ ಸಾಕ್ಷಾದ್ವರದವಿಟ್ಠಲ ಕರ್ತೃವೀ ಕೃತಿಗೆ' ಎಂದಿರುವುದಲ್ಲದೆ ವರದವಿಟ್ಠಲನ ಅಂಕಿತವು ೧ನೆಯ ಸಂಧಿಯ ೭, ೮, ೬೫ನೆಯ ಪದ್ಯಗಳಲ್ಲೂ, ಎರಡನೆಯ ಸಂಧಿಯ ೪೯, ೫೦, ೫೧, ೫೭ನೆಯ ಪದ್ಯಗಳಲ್ಲೂ ಕಂಡುಬರುವುದರಿಂದ 'ವರದವಿಟ್ಠಲನೆ' ಇದರ ಕರ್ತೃ ಎಂದು ಊಹಿಸಬಹುದು.

ಓಲೆಪ್ರತಿಯ ಆದಿಯಲ್ಲಿ 'ವಾಲ್ಮೀಕಿ ರಾಮಾಯಣ ಬರವುದಕೆ ಶುಭಮಸ್ತು' ಎಂದಿದ್ದರೂ ಗ್ರಂಥದಲ್ಲಿ ವಾಲ್ಮೀಕಿಯ ಹೆಸರು ಬರದೆ 'ವರದವಿಟ್ಠಲನೆ ಕರ್ತೃ' ಎಂದಿರುವುದರಿಂದ ವಾಲ್ಮೀಕಿಯ ಹೆಸರನ್ನು ಬಿಟ್ಟು ವರದವಿಟ್ಠಲನ ಹೆಸರನ್ನೇ ಈ ಕೃತಿಗೆ ಕೊಟ್ಟಿದೆ. ಈ ಕಥಾಭಾಗಕ್ಕೆ ವಾಲ್ಮೀಕಿವಿರಚಿತ ಸಂಸ್ಕೃತ ಆನಂದ ರಾಮಾಯಣವು ಆಕರ ಗ್ರಂಥವಾದುದರಿಂದ ಪ್ರತಿಕಾರರು ಇದಕ್ಕೂ ವಾಲ್ಮೀಕಿ ರಾಮಾಯಣವೆಂದೇ ಹೆಸರನ್ನು ಗ್ರಂಥದ ಆದಿಯಲ್ಲಿ ಬರೆದಿರಬಹುದು.

ಈ ಕವಿಚರಿತ್ರಕಾರರು ಕವಿಯ ವಿಚಾರದಲ್ಲಿ "? ವಿಟ್ಠಲ. ೧೭೫೧— ಈತನು ವರದವಿಟ್ಠಲ ರಾಮಾಯಣವನ್ನು ಬರೆದಿದ್ದಾನೆ. ಗ್ರಂಥದಲ್ಲಿ ಕವಿಯ ಹೆಸರು ಹೇಳಿಲ್ಲ. ಆದರೂ ಕೆಲವು ಸಂದರ್ಭಗಳಿಂದ ಅವನ ಹೆಸರು ವರದವಿಟ್ಠಲ ಅಥವಾ ವಿಟ್ಠಲ ಎಂದಿರಬಹುದೆಂದು ತೋರುತ್ತದೆ. ಇವನು ಬ್ರಾಹ್ಮಣ ಕವಿ. 'ವಾಲಗಳ್ಳಿ ವರದವಿಟ್ಠಲ ಪಾಲಿಸುಗೆ ಮತಿಯ' ಎಂದು ವಾಲಗಳ್ಳಿಯ ದೇವರನ್ನು ಸ್ತುತಿಸುವುದರಿಂದ ಕವಿ ಆ ಊರಿನವನಾಗಿರಬಹುದು. ಈ ಗ್ರಂಥವನ್ನು ಶಕ ೧೬೭೪ನೆಯ ಭಾವ ವರ್ಷದಲ್ಲಿ ಎಂದರೆ ೧೭೫೧ರಲ್ಲಿ ಬರೆದಂತೆ ಹೇಳುತ್ತಾನೆ"[1] ಎಂದು ಅಭಿಪ್ರಾಯಪಟ್ಟಿರುತ್ತಾರೆ.[2]

ಆದರೆ ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಹಸ್ತಲಿಖಿತ ಪುಸ್ತಕಗಳ ಭಂಡಾರದಲ್ಲಿರುವ ಕೆ. ೫೩೮ನೆಯ ಕ್ರಮಾಂಕದ ಓಲೆಯ ಪ್ರತಿಯಲ್ಲಿ ಕವಿ ಚರಿತ್ರಕಾರರು ತಿಳಿಸಿರುವ ಕಾಲನಿರ್ಣಯಕವಾದ ವಿಷಯವು ಇರುವುದಿಲ್ಲ. ಮದ್ರಾಸ್ ಸರ್ಕಾರದ ಪ್ರಾಚ್ಯ ಪುಸ್ತಕಗಳ ಭಂಡಾರದಿಂದ ಮೈಸೂರಿನ ಪ್ರಾಚ್ಯ

---

1 ಕರ್ಣಾಟಕ ಕವಿಚರಿತೆ, ಭಾಗ, III, ಪುಟ ೧೧೧, ೧೧೨.

2 ಕರ್ಣಾಟಕ ಯೂನಿವರ್ಸಿಟಿಯ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟನಿಂದ ಪ್ರಕಟಿತವಾಗಿರುವ ಡಿಸ್ಕ್ರಿಪ್ಟಿವ್ ಕ್ಯಾಟಲಾಗಿನ ನಾಲ್ಕನೇ ಸಂಪುಟ ಪುಟ ೬೬ ನಂಬರು ೩೫ರಲ್ಲಿ ಈ ಕೃತಿಯ ವಿವರಗಳಿವೆ. ಅದರ ಒಕ್ಕಣೆ ಈ ರೀತಿ ಇದೆ "ಹೆಸರು—ಕೌಸಲ್ಯಾಪರಿಣಯ. ಕರ್ತೃ—ವಾಲಗಳ್ಳಿಯ ವರದವಿಟ್ಠಲ. ಕಥಾವಸ್ತು—ದಶರಥ ಕೌಸಲ್ಯೆಯರ ವಿವಾಹ. ಇದರಲ್ಲಿರುವ ಸಂಧಿಗಳು ೨. ಪದ್ಯ ಸಂಖ್ಯೆ ೧೧೯. Points: ಎಸ್ಸೆನ್ಸ್ ವಿಭಾಗದಲ್ಲಿ "This work has not been noticed in Karnataka Kavicharite Volumes. But on page 465 of Volume III mention is made of a prose work under the same title as written by K. Ramaswamy Aiyangar" ಎಂದು ತಿಳಿಸಿರುವುದಲ್ಲದೆ ೩೬ನೇ ನಂಬರು ರಾಮಾಯಣ ಮತ್ತು ೩೭ನೇ ನಂಬರಿನ ಮೂಲಕಾಸುರನ ಕಾಳಗ ಈ ಎರಡು ಗ್ರಂಥಗಳಿಗೂ ವರದವಿಟ್ಠಲನೆ ಕರ್ತೃ ಎಂದೂ ತಿಳಿಸಿರುತ್ತಾರೆ. ಆದರೆ ಈ ವಿಚಾರದಲ್ಲಿ ಕೆಲವಂಶಗಳು ಸರಿಯಾಗಿರುವಂತೆ ಕಂಡುಬರುತ್ತಿಲ್ಲ. ಕವಿಚರಿತಕಾರರು ಈ ಕೌಸಲ್ಯಾ ವಿವಾಹದ ಕಥೆಯೊಡನೆ ಬತ್ತಲೇಶ್ವರ ರಾಮಾಯಣ ಮತ್ತು ಮೂಲಕಾಸುರನ ಕಾಳಗ ಇವೆರಡನ್ನೂ ಸೇರಿಸಿ ಒಟ್ಟಿಗೆ ಒಂದೇ ಗ್ರಂಥವೆಂದು ಭಾವಿಸಿ ಅದನ್ನು 'ವರದವಿಟ್ಠಲ ರಾಮಾಯಣ' ಎಂಬ ಹೆಸರಿನಿಂದ ಉಲ್ಲೇಖಿಸಿದ್ದಾರೆ. ಇದಲ್ಲದೆ ಕ್ಯಾಟಲಾಗಿನಲ್ಲಿ ತಿಳಿಸಿರುವ ೩೬ನೇ ನಂಬರಿನಲ್ಲಿರುವ ರಾಮಾಯಣಕ್ಕೆ ಕರ್ತೃ ವರದವಿಟ್ಠಲನಲ್ಲ; ಬತ್ತಲೇಶ್ವರ. ಇದನ್ನು ಪ್ರಬುದ್ಧ ಕರ್ಣಾಟಕ ಸಂಪುಟ ೪೨ ಸಂಚಿಕೆ ೨ರಲ್ಲಿ ಸ್ಪಷ್ಟಪಡಿಸಿದೆ. ೩೭ನೇ ನಂಬರಿನ ಮೂಲಕಾಸುರನ ಕಾಳಗವನ್ನು ರಚಿಸಿದವನೂ ವರದವಿಟ್ಠಲನಲ್ಲ; ಬತ್ತಲೇಶ್ವರನೇ ಇರಬಹುದೆಂದು ಪ್ರಕೃತ ಲೇಖನದಲ್ಲಿ ವಿಮರ್ಶಿಸಿದೆ. ಒಟ್ಟಿನಲ್ಲಿ ಈ ಕ್ಯಾಟಲಾಗಿನಲ್ಲಿ ತಿಳಿಸಿರುವಂತೆ ಮುಖ್ಯವಾಗಿ ಗ್ರಂಥಾದಿಯಲ್ಲಿ 'ಕೌಸಲ್ಯಾ ವಿವಾಹ ಬರುವುದಕ್ಕೆ ಶುಭಮಸ್ತು' ಎಂದಿರುವುದರಿಂದ ಈ ಗ್ರಂಥಕ್ಕೆ 'ಕೌಸಲ್ಯಾ ವಿವಾಹ' ಎಂದೆ ನಾಮಕರಣ ಮಾಡಿದೆ.

ವಿದ್ಯಾಸಂಶೋಧನಾಲಯದ ಪುಸ್ತಕ ಭಂಡಾರಕ್ಕೆ ಇತ್ತೀಚೆಗೆ ಬಂದಿರುವ ಕೆ. ಎ. ೪೭೭ನೇ ಕ್ರಮಾಂಕದ ಕಾಗದದ ಪ್ರತಿಯಲ್ಲಿ,

[1] "ಸ್ವಸ್ತಿಶ್ರೀಮಚ್ಛಾಲಿವಾಹನ
ವಿಸ್ತರದಲಾಳಿದವನೆಂಬೀ
ವತ್ಸರವು ಸಾವಿರದ ಮೇಲಱುನೂಱು ಚೌಸಪ್ತ
ಮತ್ತೆ ಕಳೆಯಲು ಭಾವ ವತ್ಸರ
ದುತ್ತರೋತ್ತರ ಜ್ಯೇಷ್ಠಮಾಸ ಸಿ
ತತ್ರಯೋದಶಿಯಿಂದುವಾರದಿಮುಗಿದುದೀ ಕೃತಿಯು"

೨–೫೩

ಎಂದಿದೆ. ಇದರಂತೆ ಕೃತಿಯು ಮುಗಿದ ದಿವಸ ಶಾಲಿವಾಹನಶಕೆ '೧೬೭೪ನೆಯ ಭಾವವತ್ಸರದ ಜ್ಯೇಷ್ಠಮಾಸದ ಶುಕ್ಲ ತ್ರಯೋದಶೀ ಸೋಮವಾರ' ಎಂದು ಸ್ಪಷ್ಟ ಪಡುತ್ತದೆ. ಇದು ಗ್ರಂಥರಚನಾಸಮಾಪ್ತಿಕಾಲವೋ ? ಅಥವಾ ಪ್ರತಿಕಾರನು ಪ್ರತಿಮಾಡಿ ಮುಗಿಸಿದ ಕಾಲವೋ ? ಎನ್ನುವುದು ವ್ಯಕ್ತವಾಗಿಲ್ಲ. ಇದೇ ಗ್ರಂಥ ರಚನಾಸಮಾಪ್ತಿಕಾಲ ಎಂದು ಒಪ್ಪಿಕೊಂಡರೆ ಕವಿಯು ಶಾಲಿವಾಹನಶಕೆ ೧೬೭೪ರಲ್ಲಿ ಇದ್ದವನೆಂದು ಹೇಳಬಹುದಾಗಿದೆ. ಇದನ್ನೆ ಪ್ರತಿಕಾರನ ಕಾಲವೆಂದರೆ ಇದಕ್ಕಿಂತಲೂ ಮೊದಲೇ ಕವಿಯ ಕಾಲವಾಗುತ್ತದೆ. ಒಟ್ಟಿನಲ್ಲಿ ಕವಿಯ ಕಾಲ ವನ್ನು ಖಚಿತವಾಗಿ ತಿಳಿಸುವ ಸಾಮುಗ್ರಿಗಳಿಲ್ಲದಿರುವುದರಿಂದ ಕವಿ ಹದಿನೇಳನೆಯ ಶತಮಾನದಲ್ಲಿದ್ದವನೆಂದು ಸಾಮಾನ್ಯವಾಗಿ ಗ್ರಂಥಾವಲೋಕನದಿಂದ ಊಹಿಸ ಬಹುದು.

ಪದ್ಯದಲ್ಲಿ ತಿಳಿಸಿರುವಂತೆ ಭಾವ ವರ್ಷದ ಜ್ಯೇಷ್ಠಶುಕ್ಲ ತ್ರಯೋದಶಿಯು ತಾ|| ೩–೬–೧೭೫೪ನೇ ಸೋಮವಾರ ಆಗುತ್ತದೆ. ಆದರೆ ಇದು ಶಕವರ್ಷ ಗಣನೆ ಯಂತೆ ೧೬೭೬ನೇ ವರ್ಷವಾಗುತ್ತದೆ. ಪದ್ಯದಲ್ಲಿರುವುದು ೧೬೭೪ ಎಂದು. ಇದು ಭಾವ ವರ್ಷವಾಗದೆ ಆಂಗೀರಸ ಸಂವತ್ಸರವಾಗುವುದರಿಂದ ಶಕವರ್ಷಕ್ಕೂ ಸಂವತ್ಸರದ ಹೆಸರಿಗೂ ಹೊಂದುವುದಿಲ್ಲವೆಂಬುದು ಎಫಿಮರೀಸಿನಿಂದ ತಿಳಿದುಬರು ತ್ತದೆ. ಶಕವರ್ಷಗಣನೆಯಲ್ಲಿ ಕಂಡುಬರುವ ವ್ಯತ್ಯಾಸವೇ ಇದಕ್ಕೆ ಕಾರಣವಿರ ಬಹುದು. ಶಕವರ್ಷಗಣನೆಯು ಎರಡು ಬಗೆ. ಗತವರ್ಷಗಳನ್ನು ಲೆಕ್ಕಮಾಡುವುದು ಒಂದು; ನಡೆಯುತ್ತಿರುವ ವರ್ಷ ಸಂಖ್ಯೆಯಿಂದ ಗಣನೆ ಮಾಡುವುದು ಮತ್ತೊಂದು. ಇದಲ್ಲದೆ ಕರ್ಣಾಟಕ ಪ್ರಾಂತದ ಉತ್ತರ ಭಾಗದಲ್ಲಿ ಶಕವರ್ಷ ಸಂಖ್ಯೆಯಲ್ಲಿ ಒಂದು ಕಡಿಮೆಯಾಗಿರುವುದು ಪ್ರಚಲಿತವಾಗಿದೆ. ಇದರಂತೆಯೇ ಇತ್ತೀಚೆಗೆ ಭಾರತ

---

[1] ಈ ಪದ್ಯ ಓಲೆ ಪ್ರತಿಯಲ್ಲಿ ಇಲ್ಲದಿರುವುದರಿಂದ ಇದು ಪ್ರತಿಕಾರನ ಪದ್ಯವೆಂಬ ಶಂಕೆಗೆ ಕಾರಣವಾಗಿದೆ. ಧಾರವಾಡದ ಪ್ರತಿಯಲ್ಲೂ ಈ ಪದ್ಯವಿಲ್ಲ.

ಸರ್ಕಾರದವರೂ ಶಕವರ್ಷವನ್ನು ಗಣನೆಗೆ ತೆಗೆದುಕೊಂಡಿರುತ್ತಾರೆ. ಇದರಂತೆ 'ಸಾವಿರದ ಮೇಲಱುನೂಱು ಚೌಸಪ್ತ' ಎಂದರೆ, ನಮ್ಮ ದೇಶದ ಗಣನೆಯಂತೆ ೧೬೭೫ನೆಯ ಶಕವರ್ಷ ಎಂದಾಗುತ್ತದೆ. ಇದು ಭಾವಸಂವತ್ಸರವಾಗುವುದರಿಂದ ಪದ್ಯದಲ್ಲಿ ತಿಳಿಸಿರುವ ಕಾಲ ತಾ|| ೩-೬-೧೭೫೪ಳ ಆಗುತ್ತದೆ.

ಮದ್ರಾಸಿನಿಂದ ಬಂದಿರುವ ಈ ಹಸ್ತಲಿಖಿತ ಪ್ರತಿಯ ಆದಿಯಲ್ಲಿ 'Copied by V. Krishna Murthy from the Manuscript belonging to Pandit H. Shesha Iyengar' ಎಂದು ಬರೆದಿದೆ. ಇದರಿಂದ ಮದ್ರಾಸಿನ ಪ್ರತಿಯ ಕಾಲ ಸುಮಾರು ೧೯೩೦ರ ಸಮೀಪದಲ್ಲಿರಬಹುದೆಂದು ಹೇಳಬಹುದು.

ಈ ಪ್ರತಿಯಲ್ಲೇ ಗ್ರಂಥಾರಂಭಕ್ಕೆ ಮೊದಲು "ಶಾಲಿವಾಹನ ಶಕವರುಷ....ನೆ ಸಲುವ ವಿರೋಧಿಕೃತುಸಂವತ್ಸರದ ಚೈತ್ರ ಬಹುಳ ೭ಲ್ಲು ವಾಲ್ಮೀಕಿರಾಮಾಯಣ ಬರೆವುದಕ್ಕೆ ಪ್ರಾರಂಭಿಸಿದ್ದು" ಎಂದಿದ್ದು, ಕೊನೆಯಲ್ಲಿ ಸಂಧಿ ೫೫ ಕಂ ಪದ ೩೩೮೭ ಕಂ ಮಂಗಳ ಮಹಾಶ್ರೀ ವಿರೋಧಿಕೃತುಸಂವತ್ಸರ ಆಶ್ವೀಜ ಬ ೧೩ಲ್ಲು ಸವುಮ್ಯವಾರ ಸೂರ್ಯ ಉದಯವಾದ ಘ. ೭ಕ್ಕೆ ಬರದು ಮುಗಿಸಿದ ವಾಲ್ಮೀಕಿ ರಾಮಾಯಣ ಪುಸ್ತಕಕ್ಕೆ ಶುಭಮಸ್ತು. ಈ ಪುಸ್ತಕ ಬರಸಿದವರು ಸೊರಬ ತಾಲ್ಲೂಕು ಜಂಬೆಹಳ್ಳಿ ಚನ್ನಬಸಪ್ಪ ಗವುಡರ ಮಗ ಹಲಗಪ್ಪ ಗವುಡರು. ಬರದಾತ ಬಿಳಿಗಿ ತಾಲ್ಲೂಕು ಹಿರ್ರೈ ಐವತ್ತಿಳಿ ಮಾಗಣಿ ಅಳವಳಿ ಗ್ರಾಮದ ಸಂಕಬಂದ ಲಿಂಗಪ್ಪನ ಮಗ ರಾಮಯ. ಇದಕ್ಕೆ ಕಾಣಿಕೆ ಕೊಟ್ಟದ್ದು ಗ "‾ಗೆ ಶುಭಮಸ್ತು" ಎಂದಿದೆ. 'ವಿರೋಧಿಕೃತ್' ಎಂಬ ಸಂವತ್ಸರವು ಹದಿನೇಳನೆಯ ಶತಮಾನದಿಂದ ಈಚೆಗೆ ೧೬೧೧, ೧೬೭೧, ೧೭೩೧, ೧೭೯೧, ೧೮೫೧, ೧೯೧೧ ಈ ಇಸವಿಗಳಲ್ಲಿ ಬರುತ್ತದೆ. ಇದರಲ್ಲಿ ೧೬೧೧ನೆಯ ಇಸ್ವಿ ಅಕ್ಟೋಬರ್ ಮಾಹೆ ೨೩ನೇ ತಾರೀಕಿನ ದಿವಸ 'ವಿರೋಧಿಕೃತ್ ಸಂವತ್ಸರದ ಆಶ್ವಯುಜ ಬಹುಳ ತ್ರಯೋದಶೀ ಬುಧ (ಸೌಮ್ಯ)ವಾರವಾಗುತ್ತದೆ. ಇದನ್ನು ಬಿಟ್ಟರೆ ೧೮೫೧ನೇ ಇಸ್ವಿ ಅಕ್ಟೋಬರ್ ಮಾಹೆ ೨೨ನೇ ತಾರೀಕು ಬುಧ(ಸೌಮ್ಯ)ವಾರವಾಗುತ್ತದೆ. ಉಳಿದ ಮೂರು[1] ವಿರೋಧಿಕೃತ್ ವರ್ಷಗಳ ಆಶ್ವಯುಜ ಬಹುಳ ತ್ರಯೋದಶಿಯು ಬುಧವಾರವಾಗುವುದಿಲ್ಲ. ಗ್ರಂಥಮಧ್ಯದಲ್ಲಿ ೧೬೧೧ಕ್ಕಿಂತ ಈಚಿನದಾದ ೧೭೫೪ನೇ ವರ್ಷದ ಉಲ್ಲೇಖವಿರುವುದರಿಂದ ಮದ್ರಾಸ್ ಪ್ರತಿಗೆ ಮೂಲಭೂತವಾದ[2] ಓಲೆಪ್ರತಿಯನ್ನು ಬರೆದು ಮುಗಿಸಿದ ಕಾಲ ೧೮೫೧ನೆಯ ಅಕ್ಟೋಬರ್ ಮಾಹೆ ೨೨ನೆಯ ತಾರೀಕು ಬುಧವಾರ ಎಂದು ನಿಷ್ಕರ್ಷಿಸಬಹುದಾಗಿದೆ.

---

[1] ವಿರೋಧಿಕೃತ್ ಸಂವತ್ಸರ ಆಶ್ವಯುಜ ಬಹುಳ ತ್ರಯೋದಶೀ ೧೭೯೧ರಲ್ಲಿ ಮಂಗಳವಾರ, ೧೭೩೧ರಲ್ಲಿ ಭಾನುವಾರ, ೧೬೭೧ರಲ್ಲಿ ಶುಕ್ರವಾರ ಆಗುತ್ತದೆ.

[2] ತಮ್ಮಲ್ಲಿದ್ದದ್ದು ಓಲೆಪ್ರತಿಯೆಂದು ಶ್ರೀಮಾನ್ ಪಂಡಿತ್ ಹೆಚ್. ಶೇಷಯ್ಯಂಗಾರ್ಯರು ತಿಳಿಸಿರುತ್ತಾರೆ.

ಕೆ. ೫೩೮ನೆಯ ಕ್ರಮಾಂಕದ ಓಲೆಪ್ರತಿಯಲ್ಲಿ ಈ ಕಾಲಬೋಧಕ ಪದ್ಯವಿಲ್ಲದಿರುವುದರಿಂದ ೧೬೭೫ ಎನ್ನುವುದು ಪ್ರತಿಕಾರನ ಕಾಲವಿದ್ದಿರಬಹುದು ಎಂಬುದನ್ನು ಪುಷ್ಟೀಕರಿಸುತ್ತದೆ. ಹೇಗಾದರೂ ಕವಿಯು ೧೭೫೪ನೆಯ ವರ್ಷಕ್ಕಿಂತ ಪ್ರಾಚೀನನೆಂದು ಹೇಳಲು ಯಾವ ವಿರೋಧವೂ ಕಂಡುಬರುವುದಿಲ್ಲ.

ಕೃತಿ ವಿಚಾರ

ಇದು ಭಾಮಿನೀಷಟ್ಪದೀ ಛಂದಸ್ಸಿನಲ್ಲಿ ರಚಿತವಾಗಿದೆ. ಕವಿಚರಿತ್ರಕಾರರ ಅಭಿಪ್ರಾಯದಂತೆ "ಇದರಲ್ಲಿ ೫೬ ಸಂಧಿ ೩೩೮೭ ಪದ್ಯಗಳಿವೆ.[1] ಕೋಸಲದೇಶದ ಕುಶಲನೃಪನ ಮಗಳನ್ನು ದಶರಥನಿಗೆ ನಿಶ್ಚಯಿಸಿರಲು ರಾವಣನು ಅವಳನ್ನು ಅಪಹರಿಸಿ ಸಮುದ್ರದಲ್ಲಿ ಇಟ್ಟಿದ್ದನು. ಆದರೂ ದೈವಯೋಗದಿಂದ ದಶರಥನಿಗೂ ಅವಳಿಗೂ ಸಮಾಗಮವಾಗಿ ಮದುವೆಯಾಗುವುದರಿಂದ[1] ರಾಮಾಯಣ ಕಥೆಯು ಪ್ರಾರಂಭವಾಗಿ [2]ರಾವಣನ ಮಗನಾದ ಮೂಲಕಾಸುರನು ನಾರದನಿಂದ ಚೋದಿತನಾಗಿ ವಿಭೀಷಣನನ್ನು ಜಯಿಸಿ ಅಯೋಧ್ಯೆಗೆ ಹೋಗಿ ರಾಮಲಕ್ಷ್ಮಣರನ್ನು ಜಯಿಸಿ ರಾಮಪುತ್ರನಾದ ಕುಶನಿಂದ ಸಂಹರಿಸಲ್ಪಟ್ಟ ಕಥಾಭಾಗದಿಂದ ಕೃತಿ[2] ಮುಕ್ತಾಯಗೊಂಡಿದೆ." ಇದಲ್ಲದೆ ಅವರು ಈ ಗ್ರಂಥದಿಂದ "ಸೀತಾವಿಯೋಗ ಅಶೋಕವನ ಭಂಗ, ರಾಮಯುದ್ಧ, ಊಟ, ವಿಷ್ಣುಸ್ತುತಿ" ಈ ಶೀರ್ಷಿಕೆಗಳಲ್ಲಿ ಆರು ಪದ್ಯಗಳನ್ನೂ ಉದಾಹರಿಸಿರುತ್ತಾರೆ. ಆದರೆ ಈ ರಾಮಾಯಣ ಕೃತಿಯ ಪರಿಮಾಣ ೫೬ ಸಂಧಿ ೩೩೮೭ ಪದ್ಯಗಳು ಎನ್ನುವುದು ವಿಮರ್ಶೆಗೆ ಎಡೆ ಕೊಟ್ಟಿದೆ.

ಕವಿಚರಿತ್ರಕಾರರು ತಿಳಿಸಿರುವ ಈ ಅಭಿಪ್ರಾಯಕ್ಕೆ ಮದ್ರಾಸಿನ ಪ್ರತಿ ಅಥವಾ ಅದರ ಮೂಲಮಾತೃಕೆ ಆಧಾರವಾಗಿರಬಹುದೆಂದು ಮದ್ರಾಸಿನ ಪ್ರತಿಯ ಅವಲೋಕನದಿಂದ ಸ್ಪಷ್ಟಪಡುತ್ತದೆ.

ಈ ಪ್ರತಿಯಲ್ಲಿ ಕಂಡುಬರುವ ಕಥೆಯನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದು. (i) ಕೌಸಲ್ಯಾ ವಿವಾಹದ ಕಥೆ, (ii) ಶ್ರೀರಾಮಜನನದಿಂದ ರಾಮಪಟ್ಟಾಭಿಷೇಕದವರೆಗಿನ ಕಥೆ, (iii) ರಾವಣನ ಪುತ್ರನಾದ ಮೂಲಕಾಸುರನನ್ನು ರಾಮಪುತ್ರನಾದ ಕುಶನು ಯುದ್ಧಮಾಡಿ ಕೊಂದ ಕಥೆ.

ಇವುಗಳಲ್ಲಿ ಕೊನೆಯದಾದ ಮೂಲಕಾಸುರನ ಕಾಳಗವನ್ನು 'ಮೂಲಕ ರಾಮಾಯಣ' ಎಂಬ ಹೆಸರಿನಿಂದ ಪ್ರತ್ಯೇಕವಾಗಿ ಕವಿಚರಿತೆ ಭಾಗ ೩ ಪುಟ ೨೮೭ರಲ್ಲಿ ಕೊಟ್ಟು ಅದರ ಕಾಲವನ್ನು ಸು. ೧೬೦೦ ಎಂದು ತಿಳಿಸಿರುವರಲ್ಲದೆ ಅದು

---

1 ಈ ಕಥಾಭಾಗ ಎರಡು ಸಂಧಿಗಳಲ್ಲಿದೆ. ಇದಿಷ್ಟು ಭಾಗ ಮಾತ್ರ ವರದವಿಟ್ಠಲ ರಾಮಾಯಣವೆಂದು ಹೇಳುವುದು ಸಾಧುವಾಗಿ ಕಂಡುಬರುತ್ತದೆ. ಈ ಕೃತಿಯ ಹೆಸರು ಕೌಸಲ್ಯಾ ವಿವಾಹವೆಂದು ಧಾರವಾಡದ ಡಿಸ್ಕ್ರಿಪ್ಟಿವ್ ಕ್ಯಾಟಲಾಗಿನಿಂದ ಸ್ಪಷ್ಟಪಡುತ್ತದೆ.

೨ ಈ ಕಥಾಭಾಗ ಆರು ಸಂಧಿಗಳಲ್ಲಿದೆ. ಇದೇ ಮೂಲಕರಾಮಾಯಣದ ಕಥೆ.

ಭಾಮಿನೀಷಟ್ಪದಿ ಛಂದಸ್ಸಿನಲ್ಲಿರುವುದೆಂದೂ ಅವರಲ್ಲಿ ೬ ಸಂಧಿಗಳಿರುವುದೆಂದೂ ತಿಳಿಸಿ ಒಂದು ಪದ್ಯವನ್ನು ಉದಾಹರಿಸಿರುತ್ತಾರೆ.

ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ 'ಮೂಲಕ ರಾಮಾಯಣ' ಎಂಬ ಹೆಸರಿನ ಕೆ. ಬಿ. ೯೯೧ ನೆಯ ನಂಬರಿನ ಪ್ರತಿ ಇದೆ. ಆದರೆ ಈ ಗ್ರಂಥ ಭಾಗಕ್ಕೂ ವರದವಿಟ್ಠಲ ರಾಮಾಯಣವೆಂದು ಕರೆದಿರುವ ಕೃತಿಯ ಕೊನೆಯ ಆರು ಸಂಧಿಗಳಲ್ಲಿರುವ ಪದ್ಯಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಈ ಸನ್ನಿವೇಶದಲ್ಲಿ ಈ ಕಥಾಭಾಗವನ್ನು ಪ್ರತ್ಯೇಕವಾಗಿ ಮೂಲಕ ರಾಮಾಯಣವೆಂದು ಕರೆಯಬೇಕೇ? ಅಥವಾ ವರದವಿಟ್ಠಲ ರಾಮಾಯಣವೆಂದು ಹೇಳಬೇಕೆ? ಎಂಬ ಸಂಶಯ ಅಂಕುರಿಸುತ್ತದೆ.

ಹೀಗೆಯೇ ಈ ವರದವಿಟ್ಠಲ ರಾಮಾಯಣ ಕೃತಿಯಲ್ಲಿ ರಾಮಕಥಾ ರೂಪವಾದ ಎರಡನೆಯ ಭಾಗವನ್ನೇ[1] ಬತ್ತಲೇಶ್ವರ ರಾಮಾಯಣವೆಂಬ ಹೆಸರಿನಿಂದ ಕವಿಚರಿತ್ರಕಾರರು ಪ್ರತ್ಯೇಕವಾಗಿ ಉಲ್ಲೇಖಿಸಿರುತ್ತಾರೆ. ಇದರಂತೆಯೆ ಈ ಕಥಾಭಾಗ ಮಾತ್ರ ಇರುವ ಪ್ರತಿಗಳೂ ದೊರೆಯುತ್ತವೆ. ಇದರಿಂದ ಈ ಕಥಾಭಾಗವನ್ನು ಪ್ರತ್ಯೇಕವಾಗಿ ಬತ್ತಲೇಶ್ವರ ರಾಮಾಯಣವೆಂಬ ಹೆಸರಿನಿಂದ ಕರೆಯಬೇಕೆ? ಅಥವಾ ವರದವಿಟ್ಠಲ ರಾಮಾಯಣವೆಂದು ಕರೆಯಬೇಕೆ? ಎಂಬ ಸಂಶಯ ಉದ್ಭವಿಸುತ್ತದೆ.

ಇನ್ನು ಉಳಿದಿರುವ ಭಾಗ ಮೊದಲನೆಯ ಎರಡು ಸಂಧಿಗಳು ಮಾತ್ರ. ಇದರಲ್ಲಿ ಕೌಸಲ್ಯಾ ವಿವಾಹದ ಕಥೆ ಇದೆ. ಪ್ರಕೃತ ಎರಡು ಮೂರನೆಯ ಭಾಗಗಳು ಪ್ರತ್ಯೇಕವಾಗಿ ಉಪಲಬ್ಧವಿರುವುದರಿಂದ ಈ ಎರಡು ಸಂಧಿಗಳನ್ನು ಮಾತ್ರ ವರದವಿಟ್ಠಲ ರಾಮಾಯಣವೆಂದು ಕರೆಯಬೇಕೆ? ಅಥವಾ ಸಮಗ್ರಕೃತಿಯನ್ನೇ ಆ ಹೆಸರಿನಿಂದ ಕರೆಯಬೇಕೆ? ಎಂಬ ಸಂಶಯ ಮೂಡುತ್ತದೆ.

[2]ಈ ಸಂದರ್ಭದಲ್ಲಿ ಉಪಲಬ್ಧವಿರುವ ಕೆಲವು ಪ್ರಮಾಣಗಳಿಂದ ವರದವಿಟ್ಠಲ ರಾಮಾಯಣದ ಗ್ರಂಥ ಪ್ರಮಾಣವನ್ನು ಕೌಸಲ್ಯಾ ವಿವಾಹರೂಪವಾದ ಎರಡು ಸಂಧಿಗಳಷ್ಟು ಮಾತ್ರ ಎಂದು ಸ್ಥಿರೀಕರಿಸಬಹುದು.

ಈ ಮೂರು ಕಥಾಭಾಗಗಳ ಕೃತಿಗಳು ಹೆಚ್ಚು ಪ್ರಚಾರದಲ್ಲಿರುವುದು ಸಹ್ಯಾದ್ರಿಯ ಸುತ್ತಮುತ್ತ ಎಂಬುದನ್ನು ನಮಗೆ ದೊರೆತಿರುವ ಮಾತೃಕೆಗಳು ಸ್ಪಷ್ಟಪಡಿಸುತ್ತವೆ. ಆ ಪ್ರದೇಶಗಳಲ್ಲೇ ಅಧಿಕ ಪ್ರಚಾರದಲ್ಲಿರುವ ಸಂಸ್ಕೃತದ (ವಾಲ್ಮೀಕಿ ವಿರಚಿತ) ಆನಂದರಾಮಾಯಣವು ಇದಕ್ಕೆ ಆಕರವಿರಬಹುದು.

---

1 ಈ ರಾಮಾಯಣದ ವಿಚಾರವಾಗಿ ಪ್ರಬುದ್ಧ ಕರ್ಣಾಟಕದ ಸಂ. ೪೨ ಎರಡನೆ ಸಂಚಿಕೆಯಲ್ಲಿ ಲೇಖನ ಬಂದಿದೆ.

2 ಧಾರವಾಡ ಕನ್ನಡ ರೀಸರ್ಚ್ ಇನ್‌ಸ್ಟಿಟ್ಯೂಟಿನ ಕ್ಯಾಟಲಾಗಿನಲ್ಲೂ ಒಂದೇ ಕಟ್ಟಿನಲ್ಲಿರುವ ಈ ಮೂರು ಕೃತಿಗಳನ್ನು ಪ್ರತ್ಯೇಕ ಗ್ರಂಥಗಳನ್ನಾಗಿ ಬೇರ್ಪಡಿಸಿರುತ್ತಾರೆ. ಈ ಮೂರು ಕೃತಿಗಳಿಗೂ ವರದವಿಟ್ಠಲನೇ ಕರ್ತೃ ಎಂದು ಬರೆದಿರುವುದು ವಿಮರ್ಶಾರ್ಹ.

ಲೇಖನಕಾರರು ಈ ಕನ್ನಡ ರಾಮಾಯಣಗಳ ಆದಿಯಲ್ಲಿ 'ವಾಲ್ಮೀಕಿ ರಾಮಾಯಣ ಬರೆವುದಕ್ಕೆ ಶುಭಮಸ್ತು' ಎಂದು ಬರೆದಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಬತ್ತಲೇಶ್ವರ ರಾವಮಾಯಣದಲ್ಲಿ ಬತ್ತಲೇಶ್ವರ ಅಂಕಿತವಿರುವಂತೆ ಮೂಲಕ ರಾಮಾಯಣದಲ್ಲೂ ಪ್ರತಿ ಸಂಧಿಯ ಕೊನೆಯ ಪದ್ಯದಲ್ಲೂ 'ಬತ್ತಲೇಶ್ವರ' ಎಂಬುದಕ್ಕೆ ಪರ್ಯಾಯಗಳಾದ 'ನಿರ್ವಾಣಲಿಂಗ' 'ನಿರ್ವಾಣನಾಯಕ' 'ನಿರ್ವಾಣನಾಥ' ಎಂಬ ಈ ಹೆಸರುಗಳು ಕಂಡುಬರುವುದರಿಂದ ಇದನ್ನೂ ಬತ್ತಲೇಶ್ವರನ ಕೃತಿಯೇ ಎಂದು ಸಮರ್ಥಿಸಬಹುದು.

ಈ ಗ್ರಂಥದ ಆದಿಯಲ್ಲಿ ಯಾವ ಮಂಗಳ ಪದ್ಯವೂ ಇಲ್ಲದೆ ನೇರವಾಗಿ ಗ್ರಂಥವು ಪ್ರಾರಂಭವಾಗಿರುವುದರಿಂದ ಬತ್ತಲೇಶ್ವರನು ರಾಮಪಟ್ಟಾಭಿಷೇಕಾಂತವಾದ ಪ್ರಚಲಿತ ರಾಮಾಯಣ ಕಥಾಭಾಗವನ್ನು ರಚಿಸಿದ ಬಳಿಕ ಕೆಲವು ಅಭಿಮಾನಿಗಳ ಪ್ರೇರಣೆಯಂತೆ, ಮೂಲಕಾಸುರನ ಕಾಳಗರೂಪವಾದ ಈ ಕೃತಿಯನ್ನೂ ಇದರಂತೆಯೇ[1] 'ರುಂಡಭೈರವನ ಕಾಳಗ'ವೆಂಬ ಮತ್ತೊಂದು ಕೃತಿಯನ್ನೂ ರಚಿಸಿರುವನೆಂದು ಕೃತಿಗಳ ವಿಮರ್ಶೆಯಿಂದ ಹೇಳಬಹುದು. ಕಾಲಕ್ರಮದಲ್ಲಿ ಏಕಕರ್ತೃಕವಾದ ಇವನ್ನು ಒಂದೇ ಕಟ್ಟಿನಲ್ಲಿ ಬರೆದಿಟ್ಟಿರುವುದರಿಂದ 'ಇವೆಲ್ಲಾ ಒಂದೇ ಕೃತಿ' ಎಂದು ಹೇಳುವಂತಾಗಿದೆ. ಒಂದೇ ಕಡೆ ಬರೆದಿದ್ದರೂ ಇವಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಸಂಧಿಸಂಖ್ಯೆಯನ್ನು ಕೊಟ್ಟಿರುವುದರಿಂದ ಇವು ಗ್ರಂಥಕ್ಕೆ ಒಳಪಡದ ಪ್ರಕರಣಗಳೆಂದು ಸ್ಪಷ್ಟಪಡುತ್ತದೆ.

ಈ ರಾಮಾಯಣ ಕಾವ್ಯದ ಶ್ರೋತೃವರ್ಗಕ್ಕೆ ಇದರಲ್ಲಿ ರಾಮಜನನಕ್ಕೂ ಪೂರ್ವಭಾವಿಯಾದ ದಶರಥ-ಕೌಸಲ್ಯೆಯರ ವಿವಾಹರೂಪ ಕಥಾಭಾಗವಿಲ್ಲದಿರುವುದರಿಂದ ಈ ರಾಮಾಯಣ ಕಥೆ ಅಪೂರ್ಣವಾದಂತೆ ಭಾಸವಾಗಿರಬಹುದು. ಆಗ ವಿಟ್ಠಲನೆಂಬ ಮತ್ತೋರ್ವ ಈ ಭಾಗವನ್ನು ರಚಿಸಿ ಅದನ್ನು ಈ ರಾಮಾಯಣದ ಕಥೆಯೊಡನೆ ಸೇರಿಸಿರುವನೆಂದು ಊಹಿಸಬಹುದು. ಈ ಅಭಿಪ್ರಾಯಕ್ಕೆ ಈ ಕೆಳಗೆ ಉದಹರಿಸಿರುವ ಕೆಲವು ಕಾರಣಗಳು ಪೋಷಕಗಳಾಗಿವೆ.

೧. ಕೌಸಲ್ಯಾವಿವಾಹದ ಕಥೆ ಇಲ್ಲದೆ ರಾಮಜನನದಿಂದ ಪ್ರಾರಂಭವಾಗುವ ವಾಲ್ಮೀಕಿ ರಾಮಾಯಣ ಎಂಬ ಹೆಸರಿನಿಂದ ಕೂಡಿದ ಬತ್ತಲೇಶ್ವರ ರಾಮಾಯಣದ ಪ್ರತಿಗಳು ದೊರೆತಿರುವುದು.

೨. ವಿಟ್ಠಲ ರಾಮಾಯಣದ ಆದಿಯಲ್ಲಿ ಸರಸ್ವತಿಯ ಸ್ತುತಿ ಇದ್ದರೂ ಮತ್ತೆ ಬತ್ತಲೇಶ್ವರ ರಾಮಾಯಣದ ಆದಿಯಲ್ಲೂ ಸರಸ್ವತಿಯನ್ನು ಸ್ತುತಿಸುವ ಪ್ರತ್ಯೇಕವಾದ ಪದ್ಯವಿರುವುದು.

---

[1] ಈ ರಾಮಾಯಣದ ಪ್ರತಿಗಳಲ್ಲಿಯೇ ಈ ಕಥಾಭಾಗವು ಪ್ರತ್ಯೇಕವಾಗಿ ಇದೆ.

೩. ವಿಟ್ಠಲ ರಾಮಾಯಣದ ಆದಿಯಲ್ಲಿ ಮಂಗಳ ಪದ್ಯಗಳಿದ್ದರೂ ಮತ್ತೆ ಬತ್ತಲೇಶ್ವರ ರಾಮಾಯಣದಲ್ಲಿ ಪ್ರತ್ಯೇಕವಾದ ಮಂಗಳ ಪದ್ಯಗಳಿರುವುದು.

೪. ಮಂಗಳ ಪದ್ಯಗಳಲ್ಲೂ ಸರಸ್ವತಿಯನ್ನು ಬಿಟ್ಟು ಉಳಿದ ದೇವತೆಗಳು ಭಿನ್ನ ವಾಗಿದ್ದು ವರ್ಣನಾಕ್ರಮವೂ ಭಿನ್ನವಾಗಿರುವುದು.

೫. ವರದವಿಟ್ಠಲನ ಅಂಕಿತ ಮತ್ತು ಮಧುಕೇಶ್ವರ ಸ್ಮರಣೆಯು ಬತ್ತಲೇಶ್ವರ ರಾಮಾಯಣದಲ್ಲಿ ಎಲ್ಲೂ ಕಂಡುಬರದಿರುವುದು.

೬. [1]ವರದವಿಟ್ಠಲ ರಾಮಾಯಣದಲ್ಲಿ ಎರಡನೆಯ ಸಂಧಿಯ ಕೊನೆಯಲ್ಲೇ ಗ್ರಂಥ ಮುಗಿದ ಕಾಲವನ್ನು ತಿಳಿಸುವ ಪದ್ಯವಿರುವುದು.

೭. ಕೌಸಲ್ಯಾ ವಿವಾಹದ ಕಥೆ ಮುಗಿದಮೇಲೆ ಗ್ರಂಥಾಂತ್ಯದಲ್ಲಿ ಇರಬೇಕಾದ ಫಲಶ್ರುತಿ ಇದ್ದು ಮತ್ತೆ ಬತ್ತಲೇಶ್ವರ ರಾಮಾಯಣದ ಕೊನೆಯಲ್ಲೂ ಪ್ರತ್ಯೇಕವಾದ ಫಲಶ್ರುತಿ ಇರುವುದು.

೮. ಗ್ರಂಥರಚನಾ ಶೈಲಿಯಲ್ಲಿ ವ್ಯತ್ಯಾಸ ಕಂಡುಬರುವುದು.

ಈ ಎಲ್ಲ ಕಾರಣಗಳಿಂದ ಕೌಸಲ್ಯಾ ವಿವಾಹರೂಪವಾದ ಈ ಭಾಗವನ್ನು ಪ್ರತ್ಯೇಕ ಕೃತಿಯೆಂದೇ ಭಾವಿಸಬೇಕಾಗುತ್ತದೆ. ಆದರೆ ಇದರಲ್ಲಿ ರಾಮನ ವಿಚಾರವೇ ಇಲ್ಲದಿರುವುದರಿಂದ ಇಷ್ಟನ್ನೇ 'ರಾಮಾಯಣ' ಎಂಬ ಹೆಸರಿನಿಂದ ಹೇಗೆ ಕರೆಯುವುದು ? ಎಂಬ ಸಂಶಯ ಅಂಕುರಿಸಬಹುದು. ಇದು ವಾಲ್ಮೀಕಿ ಕರ್ತೃಕ ಆನಂದರಾಮಾಯಣಕಥೆಯ ಒಂದು ಭಾಗವಾದುದರಿಂದ ಇದನ್ನು ರಾಮಾಯಣ ವೆಂದೇ ಕರೆದಿದೆ. ಅಂತೆಯೇ ರಾಮನ ಜನನಕ್ಕೆ ಕಾರಣಭೂತರಾದ ಅವನ ತಂದೆ ತಾಯಿಗಳ ವೈವಾಹಿಕ ವಿಚಾರವನ್ನು ಹೇಳುವುದು, ಅದರಲ್ಲೂ ರಾವಣನು ತನ್ನ ವೈರಿಯಾದ ರಾಮನು ಹುಟ್ಟುವನೆಂದು ವಿವಾಹಕ್ಕೆ ವಿಘ್ನವನ್ನು ತಂದೊಡ್ಡುವ ಕಥೆ ರಾಮನಿಗೆ ಸಂಬಂಧಿಸಿದುದೇ ಎಂಬ ಅಭಿಪ್ರಾಯದಿಂದ ಇದನ್ನು ರಾಮಾಯಣವೆಂದು ಕರೆಯಲು ಯಾವ ತೊಡಕೂ ಇಲ್ಲ. ಇದನ್ನು ರಾಮಕಥೆ ಯೊಡನೆ ಓದುವುದಕ್ಕಾಗಿಯೇ ಕವಿ ರಚಿಸಿರುವುದು. ಇಷ್ಟುಮಾತ್ರ ಪ್ರತ್ಯೇಕವಾಗಿ ಓದಬೇಕೆನ್ನುವ ಅಭಿಪ್ರಾಯ ಕವಿಗೆ ಇದ್ದಿರಲಾರದು. ಈ ಕೌಸಲ್ಯಾವಿವಾಹದ ಕಥೆಯನ್ನು ರಚಿಸಿದವನು ವಿಟ್ಠಲನೆಂದು ಗ್ರಂಥದಲ್ಲಿ ಸ್ಪಷ್ಟವಾಗಿ ತಿಳಿಸಿರುವುದರಿಂದ ವಿಟ್ಠಲಭಕ್ತನಾದ ವಿಟ್ಠಲನೇ ಇದರ ಕರ್ತೃ. ಆದುದರಿಂದ ಈ ಕೃತಿಯನ್ನು ವಿಟ್ಠಲ ರಾಮಾಯಣವೆಂದು ಕರೆದಿದೆ. ಕವಿಯು ವಾಲಗಳ್ಳಿಯ ವರದವಿಟ್ಠಲನನ್ನು ಸ್ಮರಿಸಿರುವುದರಿಂದ ಆತನು ಆ ಊರಿನವನಾಗಿರಬಹುದು. ಗ್ರಂಥದ ಆದಿಯಲ್ಲಿ ಮಧುಕೇಶ್ವರ, ದುರ್ಗಿ, ಸರಸ್ವತಿಯರನ್ನೂ ಸ್ತುತಿಸಿದ್ದಾನೆ. ಈ ಕವಿ ಬ್ರಾಹ್ಮಣ

[1] ಇದು ಒಂದು ಪ್ರತಿಯಲ್ಲಿ ಮಾತ್ರ ಇದೆ.

ನೆಂದು ಕವಿಚರಿತ್ರಕಾರರು ಅಭಿಪ್ರಾಯಪಟ್ಟಿರುತ್ತಾರೆ. ಇದರಲ್ಲಿ ದಶರಥ ಕೌಸಲ್ಯೆಯರ ವಿವಾಹದ ವಿಚಾರವನ್ನು ನಾರದರಿಂದ ತಿಳಿದ ರಾವಣನು ಇದರಿಂದ ತನ್ನನ್ನು ಕೊಲ್ಲುವ ರಾಮನು ಜನಿಸುವನೆಂದು ಅದಕ್ಕೆ ಪ್ರತೀಕಾರರೂಪವಾಗಿ ಅವರ ವಿವಾಹವಾಗದಂತೆ ಪ್ರಯತ್ನಿಸಿದರೂ ಕೊನೆಗೆ ದೈವೇಚ್ಛೆಯಂತೆ ವಿವಾಹ ಜರುಗುವ ಕಥಾಭಾಗ ವಿವೃತವಾಗಿದೆ: ಕವಿತಾರಚನೆ ಉತ್ತಮ ಮಟ್ಟದ್ದಲ್ಲದಿದ್ದರೂ ಮಧ್ಯಮ ವರ್ಗಕ್ಕೆ ಸೇರಿದ್ದಾಗಿದೆ.

ಈ ಎರಡು ಸಂಧಿಗಳನ್ನು ಎರಡು ಪ್ರತಿಗಳ ಸಹಾಯದಿಂದ ಸಂಪಾದಿಸಲಾಗಿದೆ. ೧. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕೆ. ೫೩ನೆಯ ಕ್ರಮಾಂಕದ ಓಲೆ. ೨. ಮದ್ರಾಸ್ ಗೌರ್ನಮೆಂಟ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿಯಿಂದ ಮೈಸೂರು ಪ್ರಾಚ್ಯ ವಿದ್ಯಾಸಂಶೋಧನಾ ಸಂಸ್ಥೆಗೆ ಬಂದಿರುವ ಕೆ. ಎ. ೪೭೭ನೆಯ ಕ್ರಮಾಂಕದ ಕಾಗದದ ಪ್ರತಿ. ಇದರಲ್ಲಿ ಓಲೆ ಪ್ರತಿಗೆ (ಕ) ಎಂದೂ, ಕಾಗದದ ಪ್ರತಿಗೆ (ಗ) ಎಂದೂ ನಾಮಕರಣ ಮಾಡಿದೆ. (ಗ) ಪ್ರತಿಯ ಪಾಠಗಳು ಸ್ವಲ್ಪ ಶುದ್ಧವಾಗಿರುವುದಲ್ಲದೆ ಕೆಲವು ಹೆಚ್ಚು ಪದ್ಯಗಳೂ ಇವೆ. ಅವನ್ನು ಅಲ್ಲಲ್ಲೆ ಸೂಚಿಸಿದೆ. ದೊರೆತಿರುವ ಪ್ರತಿಗಳಲ್ಲಿ ಶಕಟರೇಫದ ಬಳಕೆ ಇಲ್ಲದಿದ್ದರೂ ಅದನ್ನು ಇಲ್ಲಿ ಗುರುತಿಸಿದೆ.

ಕವಿಚರಿತೆಕಾರರು ಉದಾಹರಿಸಿರುವ ಪದ್ಯಗಳೆಲ್ಲ ಬತ್ತಲೇಶ್ವರ ರಾಮಾಯಣದಲ್ಲಿ ಕಂಡುಬರುತ್ತವೆ. ಕೌಸಲ್ಯಾ ವಿವಾಹಕ್ಕೆ ಸಂಬಂಧಿಸಿದ [1]೧೨೪ ಪದ್ಯಗಳಲ್ಲಿ ಯಾವ ಪದ್ಯವನ್ನೂ ಅವರು ಉದಾಹರಿಸಿಲ್ಲ.

ಒಟ್ಟಿನಲ್ಲಿ ವರದವಿಟ್ಠಲ ರಾಮಾಯಣ, ಬತ್ತಲೇಶ್ವರ ರಾಮಾಯಣ, ಮೂಲಕ ರಾಮಾಯಣ ಈ ಮೂರೂ ಪ್ರತ್ಯೇಕ ಕೃತಿಗಳಾಗಿದ್ದರೂ ಒಂದಾಗಿ ರಾಮಾಯಣದ ಪೂರ್ಣ ಕಥೆಯನ್ನು ಒಂದೆಡೆಯಲ್ಲಿ ಒಟ್ಟುಗೂಡಿಸಿದೆ.

[1] ಧಾರವಾಡದ ಡಿಸ್ಕ್ರಿಪ್ಟಿವ್ ಕ್ಯಾಟಲಾಗಿನಲ್ಲಿ ತಿಳಿಸಿರುವಂತೆ ಇದರಲ್ಲಿ ೧೧೯ ಪದ್ಯಗಳಿವೆ.

ವಿಟ್ಠಲ ವಿರಚಿತ

ವರದವಿಟ್ಠಲ ರಾಮಾಯಣ

[ಕೌ ಸ ಲ್ಯಾ ವಿ ವಾ ಹ]

ಸಂಧಿ ೧

ಸೂಚನೆ : ಕುಶಲಭೂಪನ ಮಗಳ ನಿಶೆಯೊ[1]ಳು[1]
ದಶಶಿರನು [2]ಪಿಡಿ[2]ತಂದು [[3]ಉದಧಿ[3]]ಯ
ಬ[4]ಸಿ[4]ಱೊಳಿಡೆ ವಿಧಿವಶ[5]ದೊಳಾ[5]ದುದು ಮದುವೆ ದಶರಥಗೆ

ಸುರಪತಿಗೆ ಜನಿಸಿದನ ಕಂದನ
[6]ಅ[6]ರಸಿಯವ್ವೆಯ ಬೆನ್ನ ಬಂದನ
[7]ಅ[7]ಳಿಯ ಬಿಗಿದನ ತಾಯ ಸವತಿಯೊ[8][ಳುದಿ]ಸಿದನ[8] ಸುತನ
ಹಿರಿದು ಸಲಹಿದಗುದಿಸಿದಾತನ
ಕರದಲವಚಿಯೆ [9]ಪೋ[9]ದನಣ್ಣನ
ಶಿರವನರಿದನ ಸ[10]ಖನ[10] ಹಿರಿಯ ಕುಮಾರಗೆಱಗುವೆನು ೧

ಹರಿಯನೇರ್ದನ ಹರಿಯೊಳಿರ್ದನ
ಹರಿಯ ಚರಣದಿ ಮೆಟ್ಟಿ ಬಿಟ್ಟನ
ಹರಿಯ ಕೊಂದನ ಹರಿಯ ಕಾಯ್ದನ ಹರಿಯ ಕಟ್ಟಿದನ
ಹರಿಯ ಮಗಳನು ಕೂಡಿದಾತನ
ಹರಿಯ ಮೇಲೊಱಗಿಪ್ಪ ದೇವನ
ಚರಣಕೆಱಗುವೆ ವರದವಿಟ್ಠಲ ಸಲಹುಗನವರತ ೨

ಕರದೊಳೊಪ್ಪುವ ಶೂಲ ಡಮರುಗ
ಕೊರಳೊಳಸ್ಥಿಯ ಹಾರ ರುಂಡಾ
ಭರಣ ಮಣಿವಾವುಗಳ ಕಂಕಣ ಕರ್ಣಕುಂಡಲದ
ಸಿರಿ ಜಡೆಯವೋಲ್ ಮೆಱೆವ ಮೃಗಧರ
ಕರ ಕಪಾಲದ ಕರಿಯ ಚರ್ಮಾಂ
ಬರದ ಮಧುಕೇಶ್ವರನೆ ಪಾಲಿಸುಗೊಲಿದು ಸನ್ಮತಿಯ ೩

---

[1] ಳ್ (ग) [2] ಪರಿ (क) [3] [ವಾರ್ಧಿ] ಸೂ.ಪಾ. [4] ಸು (क) [5] ದಲಾ (ग) [6] ಲ (क) [7] ಹ (क) [8] ಳ್ ಜನಿಸಿದನ (क) ಳ್ ಜನಿಸಿಥರೆ (ग) [9] ಯಿರಿ (क) [10] ಕಲ (ग).

ಅರಳುಗಂಗಳ [1]ಕುರು[1]ಳ ಕೊಂಕಿನ
ಸಿರಿ ಮುಡಿಯ ಥಳಥಳಿಪ ದಂತ[2]ದ[2]
[3]ಸ್ಫುರಿ[ಸು]ವರುಣಾ[3]ಧರದ ನಳಿದೋಳುಗಳ ಕಂಕಣದ
ಚರಣದಂದುಗೆ ಗೆಜ್ಜೆ ನೂಪುರ
ನಿಱುವಿಡಿದ ಪೊಂಬಟ್ಟೆ [4][ಹ]ರಿವರ[4]
ಸ್ಥಿರ ನಿವಾಸಿ[5]ನಿ[5] ದುರ್ಗೆ ಪಾಲಿಸು [6]ಕೃ[6]ತಿಗೆ ಮಂಗಲವ ೪

ಅಳಿಗುರುಳಿಗಳವಟ್ಟ ಮಲ್ಲಿಗೆ
ಹೊಳವ ಮೂಗುತಿ ಕರ್ಣಪತ್ರವು
ತೊಳಪ ರಾಕ[7]ಡಿ [ಕೊ][7]ಪ್ಪು ಬಾವುಲಿ ಗಳದ ಹಾರಗಳು
ಘಲಿಕು ಘಲಿಕೆಂದೆನುತ ಚರಣದ
[8]ಲು[8]ಲಿವ ಪೊಂಗೆಜ್ಜೆಗಳ ಪಟ್ಟಾ
ವಳಿಯ ಪುಸ್ತಕಕರದ ಶಾರದೆಯಿಾಗೆ ಸನ್ಮತಿಯ ೫

ಬಾಲಕರ ನುಡಿ[9]ಯನ್ನು[9] ಕೇಳಲು
ಹಾಲುಸಕ್ಕರೆಯುಂಡ ತೆಱನದು
ಬಾಲಪ್ರಾಯದ ಸತಿಯರೊಳು ಮನ ನಚ್ಚುವಂದದಲಿ
ಕೇಳಿ ಬುಧರೀ ಕೃತಿಯಲವ[10]ಗುಣ
ಪಾಲಿಸಿದರದ[10] ತಿದ್ದಿ ತೋರ್ದ ಪಿ
ಶಾಲ ಮತಿಗಳಿಗೆಱಗಿ ಮುದದಲಿ ಕೃತಿಯ ಪೇಳುವೆನು ೬

ಬಯ್ಯಲಾಗದು ಬಲ್ಲ ಕವಿಗಳು
ಸ[11]ಯ್ಸಲೆಂದೆಂ[11]ಬುದನು ನೋಡದೆ
ಹುಯ್ಯಲಿಕ್ಕುವ [12]ಕಕ್ಕುಲಿ[12]ಯ ನಾನಱಿಯೆ ಪರಮೇಷ್ಠಿ
ಅಯ್ಯನಿಂದಾನೊಱವೆನಿತರದ
ದೆಯ್ವವನು ನಾ ಬಲ್ಲೆನೇ ಸ್ಮರ
ನಯ್ಯ ಸಾಕ್ಷಾದ್ವರದ ವಿಟ್ಠಲ ಕರ್ತೃವೀ ಕೃತಿಗೆ ೭

---

1 ಕೊರ (ಕ) 2 ವ (ಗ) 3 ಸ್ಫುರಿತ ವರುಣಾ (ಕ) ರು...(ಗ) 4 ಕರಿವರ (ಕ) ಕರಿಚರ್ಮಾಂಬರನ (ಗ) 5 ಯೆ (ಗ) 6 ಮ (ಗ) 7 ಡಿಕ (ಕ) ಟಿಕ (ಗ) 8 ಉ (ಗ) 9 ಯೆಂದು (ಕ) 10 ಣವ ಪಾಲಿಸಿರಲದ (ಕ) 11 ಯಿಸಲ್ಲೆಂ (ಗ) 12 ಕುಕವಿ (ಗ).

ನೀಲಮೇಘನಿಭಾಂಗ ಕಾಂತಿಯ
ಸಾಲಮಣಿ ಕೇಯೂರ ಕುಂಡಲ
[1]ಫಾಲದೊಪ್ಪುವ ಮಕುಟ[1]ತಿಲಕ ವಿಶಾಲ ನಾಸಿಕದ
ಸಾಲದ್ವಾದಶನಾಮ ತ್ರಿಸರದ
ಮೇಲೆ ಕೌಸ್ತುಭಹಾರ ಕೊರಳಿನ
ವಾಲಗಳ್ಳಿಯ ವರದವಿಟ್ಠಲ ಪಾಲಿಸುಗೆ [2]ಮತಿಯ[2] ೮

ಸೂತ ಕೇಳೈ ಮಿತ್ರವಂಶದ
ಭೂತಳೇಶ್ವರ ರಘುವಿನರಸಿಗೆ
ಜಾತನಾದಜಸುತನು ದಶರಥರಾ[3]ಯ[3]ಗರಸಿಯನು
ಪ್ರೀತಿಯಿಂ ಕೋಸಲನು ಕೊಡುತಿರ
ಲೇತಕಾ ರಾವಣನು ವಿಘ್ನಕೆ
ಹೇತುವಾದನು ಕರುಣಿಸೆಂ[4]ದೆಱಗಿದುದು[4] ಮುನಿನಿಕರ ೯

ಕೇ[5]ಳು[5] ಶೌನಕ ಮುಖ್ಯ ಮುನಿಕುಲ
ಮೌಳಿ ವೇದವ್ಯಾಸ ಹರುಷದಿ
ಪೇಳಿದನು ಶುಕಯೋಗಿಗೊಂದಿನ [6]ಶುಕನು[6] ಮನವೊಲಿದು
ಪೇಳಿದನುಯೆನಗದನು ಪಶುಪತಿ
ಕೇಳಿಸಿದನರ್ಧಾಂಗಿ[7]ಗದ ನೀಂ[7]
ಕೇಳಿ ಹೇಳುವೆನೆಂದು ಆ[8]ತ್ಮಾ[8]ರಾಮನನು ನೆನೆದ ೧೦

ಹರುಷ ಮಿಗಿಲಾ ಶೌನಕಾದ್ಯರು
ಕರವ ಮುಗಿದೇ[9]ಕಾಂತ ಚಿತ್ತದೊ
ಳು[9]ಱುಮಹಾಖ್ಯಾನವನು ಕೇಳುತ್ತಿರ್ದ[10]ರೊ[10]ಲವಿನಲಿ
ಅರೆ ನಿಮಿಷ ವ್ಯೆಮಱೆದು ಹೃದಯ[11]ದಿ[11]
ಹರಿಹರ ಬ್ರಹ್ಮಾದಿ ದೇವರ
[12]ಸ್ಮರಿಸಿ ಮನದೊಳು[12] ಪುಣ್ಯಕಥೆಯನು ಪೊರೆದನನುನಯದಿ ೧೧

---

1 ಲೋಲ ನೊಸಲೊಳು ಮುಟ್ಟ (ಕ) 2 ನಮ್ಮ (ಕ) 3 ಜ (ಕ) 4 ದುದು ನಾಗ (ಕ) 5 ಳಿ (ಕ) 6 ಸುಖದಿ (ಕ) 7 ಗಿದ ನೀವ್ (ಗ) 8 ತಾಯ್ (ಕ) 9 ಕಾಗ್ರ ಚಿತ್ತದಿ ಬ (ಕ) 10 ನೊ (ಕ) 11 ದೊಳು (ಕಗ) 12 ನೆನಸಿ ಮನದೊಳಾ (ಕ).

ಅವಧರಿಸಿ ಮುನಿನಿಕರ ಕೋಸಲ
ದವನಿಪತಿಯಾತ್ಮಜೆಯನೀವೊಡೆ
ರವಿಕುಲದಲುದುಭವಿಸಿದಜಸುತ[1]ಗಿತ್ತೊಡ[1]ಹುದೆಂದು
ದಿವಿಜಮುನಿಯುಪದೇಶದಿಂ[2] [ಲಿಖಿ
ತವನು ಬರೆಸಿದನದನು ಮುದದಿಂ][2]
ಜವದೆ ತಂದನು ದೂತನೊರ್ವನಯೋಧ್ಯಪುರವರಕೆ ೧೨

ಬರ ಬರಲು ನೆಱೆ[3] ಕಾಣಬಂದುದು
ಪುರದ ಬಹಿ[3]ರು[3]ದ್ಯಾನ ವೀಥಿ[4]ಯ[4]
ಮೆಱೆ[3][5]ಯುವ[5]ಗಣಿತ ಹರ್ಮ್ಯವಗಣಿತ ಸಾಲು[6]ಸೌ[6]ಧಗಳ
ಕರಿಯ ಶಾಲೆಗಳಶ್ವಮಂದಿರ
ದುರುತರದ ಹಾರುವರ ಕೇರಿಗ
ಳಿರದೆ ಕಳಿಕಳಿದೈದಿ ಬರುತಿರೆ ಕಂಡ[7]ನಿ[7]ದಿರಿನಲಿ ೧೩

ಸಾಲು ಸಾಲಿಂ ತೋ[8]ರ್ಕೆ[8]ವಡೆದ ವಿ
ಶಾಲಮಾದಂಗಡಿಯ ತೆನೆಗ[9]ಳು[9]
ಜಾಳದೊತ್ತೊತ್ತೆಯಲಿ [10]ವೈ[10]ಶ್ಯರ ನಟ[11][ರ][11] ಹಾಸ್ಯ[12][ಗ]ರ[12]
ಆಲಯಂಗಳು ಪಾತಕರ ಮನೆ
ಸೂಳೆಗೇರಿಯು ಸದನ ದಾಸಿಯು
ಮಾಲೆಗಾಱರ ಗೃಹವು ಶಿವನಿಹ ನಿಳೆಯ[13]ವೆ[13]ಣ್ದೆಸೆಯ ೧೪

ಬರ ಬರಲು ಕಾಣಿಸಿತು ಮುಂದ
ಕ್ಕರರೆ ಕಂಗಳ ಹಬ್ಬವೆಂಬಂ
ತರಿಗಗೋಚರವ[14]ಗಸೆ ಕೊತ್ತಳದಾಳುವೇರಿಗಳ[14]
ಮುರಿ ಮುರಿದು ನೋಡುತ್ತ ಕೋಟೆಯ
ಸಿರಿಗೆ ಸೊಗ[15]ಸುತ[15] ಯಕ್ಷನಳಕಾ
ಪುರಿಗೆ ಮಿಗಿಲೆಂದೆನುತ ಪೊಗಳುತ್ತೈದೆ ಸಂಭ್ರಮದಿ ೧೫

---

1 ನಿತ್ತೊಡ (ಕ), ಗಿತ್ತೊರ (ಗ) 2 ದವೆ ಬರಸಿದನು ಲಿಖಿತವನು (ಕಗ) 3 ರೋ (ಕಗ) 4 ಯೊಳ್ (ಕಗ) 5 ವ (ಕ) 6 ರತ್ನದ ರತುನ ಸೌ (ಗ) 7 ರಿ (ಗ) 8 ಕೆ (ಗ) 9 ಳ (ಗ) 10 ವೇ(ಕ) 11 ನ (ಕಗ) 12 ದರ (ಕ) ದಲಿ (ಗ) 13 ದೆ (ಗ) 14 ಗುಡಿ ತೊತ್ತೆಗಳಾದ ಕೇರಿಗಳು (ಕ) 15 ಯಿಸುತ್ತಾ (ಕ) ಯಿಸುತ (ಗ).

ಚಂದ್ರಕಾಂತ[1]ದ[1] ಬಿಗಿದ ನೆಲಗ
ಟ್ಟಿಂದ್ರನೀಲದ ಕಂಬ ಮಾಣಿಕ
ದಿಂದ ರಚಿಸಿದ ಬಾಗಿಲೊಜ್ರದ [2]ಪಟ್ಟಹಲಗೆಗಳ[2]
ಅಂದವಡೆದಿಹ [3]ಸೌಧ[3] ಪವಳಗ
ಳಿಂದ ರಚಿಸಿದ ಮಾಳಿಗೆಯ ನಲ
ವಿಂದ ನೋಡುತ ಬಂದು ಹೊಕ್ಕನು ರಾಜಮಂದಿರವ ೧೬

ಸಂದಣಿಸಿ ಕುಳ್ಳಿ[4]ರ್ದ[4] ಸಭೆಯೊಳು
ಬಂದನಚ್ಚರಿಗಳನು ನೋಡುತ
[5]ಮ[5]ಂದಿಗಳ ಮಾ[6]ವುತ[6]ರ ಗಾಯಕ[7]ರಿಂ[7]ದಲೆಸದಿರಲು
ಇಂದ್ರನೈಶ್ವರ್ಯಕ್ಕೆ ಮಿಗಿಲೆನು
ತಂದು ವಾಸನಿಸುತ್ತ ಸಭೆಯಲಿ
ಮುಂದಿರಿಸಿ ಪತ್ರಿಕೆಯ ಪಾವುಡವಿತ್ತು ಶರಣೆಂದ ೧೭

ಯಾವ ದೇಶವು ನಿನಗೆ ಯಿದನಿ
ನ್ನಾವ ಕಳುಹಿದ[8]ನೆನುತ[8] ಕಾರಣ
ಭಾವವಿದು ಹೊಸಪರಿ[9]ಯು[9] ಪೇಳಿಂ[10]ದ[10]ರಸ ಬೆಸಗೊಂಡ
ದೇವರವಧರಿಸುವುದು[11]ಕೋಸಲ[11]
ಭೂವರನು ಕಳುಹಿದನು ಕಂಸಲಿ
ದೇವಿಯರ ನಿಮಗೀವೆನೆನುತಾ ದೇವಮುನಿ ಪೇಳೆ ೧೮

ಚರನ ವಾಕ್ಯವ ಕೇಳಿ ಮನ್ನಿಸಿ
[12]ತ್ವ[12]ರಿಸಿ ಲಿಖಿತವನಿತ್ತನೋದಿದ
ಕರಣಿಕನು ನೆಱೆ ಕೇಳ್ ಮಹೀಪತಿ ಲಿಖಿತದರ್ಥವನು
ಸರಸಿ[13]ರುಹ[13] ಬಾಂಧವರ ವಂಶದ
ಲರಸು ದಶರಥ ಚಕ್ರವರ್ತಿಗೆ
ಹರುಷದಿಂ ಕೋಸಲನು ಕಳುಹಿದ ಪತ್ರಿಕೆಯ ಹದನ ೧೯

---

[1] ದಿ (ಗ) [2] ಪಚ್ಚೆಜಂತಗಳ (ಕ) [3] ಸವುಪ (ಕ) [4] ರಲು (ಗ) [5] ವಂ (ಗ) [6] ಗಥ (ಗ) [7] ದಿಂ (ಕ) [8] ನೇನು (ಗ) [9] ಯ (ಕ) [10] ದೆನುತ (ಕ) [11] ಕೌಸಲಾ (ಗ) [12] ಕ (ಗ) [13] ಜ (ಗ).

ಸ್ವಸ್ತಿ ಶ್ರೀಮದ್ರಾಜರಾಜ ಗ
ಭಸ್ತಿವಂಶದ ದಶರಥಂಗೆಯು
ಪ್ರಸ್ತುತದಿ ಕಳುಹಿಸಿದ ಕೋಸಲನೃಪತಿಯೊಸಗೆಯನು
ವಿಸ್ತರಿಸಿಕೊಂಡಿಹೆನು ಪುತ್ರಿಯ
ನಿತ್ತೆ ನಿನಗಿಂದಿನಲಿ ಲಗ್ನವ
ನುತ್ತರೋತ್ತರವಾಗಿ [1]ನೋದಿ[1]ಸಿ ಪತ್ರಿಕೆಯ ಬರಸಿ ೨೦

ಚರನನಟ್ಟುವುದೆನಲು ಹರುಷದಿ
ಕರಸಿ ಭೂಸುರ[2]ಮುಖದಿ[2] ಲಗ್ನವ
ನಿರದೆ ಶೋಧಿಸಿಕೊಡಲು ಬರೆಸಿದನಾಗ ಪತ್ರಿಕೆಯ
[3]ಕರಸಿ[3] ಚಾರರ[4]ನಟ್ಟಿ ಹರುಷದಿ
ಬ[4]ರುತ ಪಯಣದ ಮೇಲೆ ಪಯಣ[5]ವ[5]
ಭರದಿ ಬಂದರಮನೆಯ ಹೊಕ್ಕವರಿತ್ತರಾ ಪತ್ರಿಕೆಯ ೨೧

ಚರರ ಮನ್ನಿಸಿ ಕೇಳಿ ಕುಶಲವ
ನರಸ ಪತ್ರಿಕೆ ಪಾವುಡವನಾ
ದರದಿ ಕೊಂಡನು ಲೇಖ[6]ನ[6]ಜ್ಞರ ಮೊಗವನೀಕ್ಷಿಸಲು
ಬರಸಿದಾ ಪತ್ರಿಕೆಯ ಕರದೊಳು
ಧರಿಸಿ ವಾಚಿಸುತಿರಲು ಕರಣಿಕ
[7]ನಿ[7]ರದೆ ಚಿತ್ತೈಸರಸ ದಶರಥ ಬರದ ಬಿನ್ನಪವ ೨೨

ಗಂಡುಗಲಿ ಭೇರುಂಡ ಕದನೋ
ದ್ದಂಡ ಕೋಸಲಮಂಡಲೇಶ್ವರ
ಚಂಡವಿಕ್ರಮ ಕುಶಲ ಭೂಪಗೆ [8]ಪ್ರತಿ[8]ಲಿಖಿತವಿತ್ತ
ಗಂಡ ಗಂಡರ ಗಂಡನೆನಿಸುವ
ಹಿಂಡುರಾಯರ ತಂಡದಲೆಗಳ
ದಿಂಡುದರಿದರಿಖಂಡ[9]ಕೋದಂಡನನು[9] ದಶರಥನು ೨೩

---

[1] ಶೋಧಿ (ಗ) [2] ರನ್ನು (ಕ) [3] ಭರದಿ (ಕ) [4] ಲಟ್ಟಿರವರೈತ (ಗ) [5] ದ (ಗ) [6] ನವನ (ಗ) [7] ರಿ (ಗ) [8] ಪ್ರೀತಿಯ (ಕ) [9] ಗದಿತೋದ್ದಂಡ (ಗ).

[1]ಸೋಯಿ[1]ಸಿಯೆ ಲಗ್ನವನು ಭೂಸುರ
[2]ರಾ[2]ಯ್ದು ಕೊಟ್ಟರು ಬ[3]ರೆ[3]ದ ಲಿಖಿತದೊ
ಳಯ್ದು ಮೂಱನೇ ದಿನಕೆ ಬಹೆ [4]ನೀವ್[4] ಸಿದ್ಧವಾಗಿಹುದು
ಪಾಯದಳಸಹ ಬಂದು ಲಗ್ನವ
ನಾಯತದಿ ಕೈಕೊಂಬೆನೆನು[5]ತತಿ
ಪ್ರೀಯದಿಂ ಬರೆದಿ[5]ರ್ದ ಪ್ರತಿಲಿಖಿತವನು ಲಾಲಿಪುದು ೨೪

ಬರೆಸಿದಾವೊಕ್ಕಣೆಯ ಲಾಲಿಸಿ
ಹರುಷ ಮಾನಸನಾಗಿ ತನ್ನಯ
ಪುರವ ಶೃಂಗಾರಿಸಲು ನೇಮವ ಮಂತ್ರಿಗಳಿಗಿತ್ತ
ಕರಸಿ ಚಿ[6]ತ್ರಿ[6]ಕ ಬಣ್ಣಗಾಱ[7]ರ[7]
ವಿರಚಿಸಲು ವೈವಾಹಮಂಟಪ
ಸ್ಮರನ ಕೇಳೀಗೃಹದವೋಲ್ ಕಣ್ಮನವ ಮೋಹಿಸಿತು ೨೫

ಕುರುಜು ಮೇರುವೆ ಗೋಪುರಂಗಳು
ಥರಥರದ ಬೀದಿಗಳ ಸಾರಣೆ
ಯಿರದೆ ಕಟ್ಟಿತು ಮಕರದಂಬುಲ [8]ತಳಿರ[8] ತೋರಣವು
ಪುರವು ಶೃಂಗರವಾಗೆ ಲಗ್ನ[9]ಕೆ
ಯಿ[9]ರಲು ದಿನವೆಂಟಾಗ ಬಂದುದು
ಹಿರಿಯದೊಂದಪಮೃತ್ಯು ಶೌನಕ ಕೇಳು ಕೌತುಕವ ೨೬

ರಾವಣಾಸುರನಿರುವ ಲಂಕೆಗೆ
ದೇವ[10]ಋಷಿ[10] ನಾರದನು ಬಂದೊಡೆ
ದೇವ ವೈರಿ[11]ಯು ಯೆ[11]ದ್ದು ಪದಕಮಲಕ್ಕೆ ಪೊಡಮಟ್ಟು
ಭಾವಭಕುತಿಗಳಿಂದ ಚರಣವ
ನೋವಿ ತೊಳೆದಾ ತೀರ್ಥವನು ಶಿರ
[12]ಕೋವಿ[12]ತಳೆದನು ಧನ್ಯ ತಾನೆಂದೆನುತ ರಾವಣನು ೨೭

---

[1] ಶೋಧಿ (ಕ) [2] ಹೊ (ಕ) [3] ಬಿರು (ಗ) [4] ನೀ (ಕ) [5] ತಾ ಪ್ರೀತಿಯಿಂ ಬರೆದಿ (ಕ) ತತಿಪ್ರೀಯದಿಂ ಕಳುಹಿ (ಗೆ) [6] ತ್ರ (ಗ) [7] ರು (ಗ) [8] ಥಳಿಗೆ (ಕ) [9] ಕ್ಕಿ (ಗ) [10] ಮುನಿ (ಗ) [11] ಗಳೆ (ಗ) [12] ಕೊಯ್ದು (ಕ).

ದಿವಿಜಮುನಿಯಡಿಗಳಿಗೆ ಮಧುಪ
ರ್ಕವನು ಮಾಡಿಯೆ ಸಿಂಹಪೀಠದೊ
ಳವರ ಕುಳ್ಳಿರಿಸಿದನು ಬಿನ್ನಹ ಮಾಡಿದನು ಹದನ
ಶಿವನ ಭವನವನಜನ ತ[1]ಶ್ರಿತ್ರ[1]
ಭವನವನು ಯಿಂದ್ರಾದಿ ದೇವರ
[2]ಭುವನ[2] ಸಂಚಾರ [[3]ಕರು[3]] ಕಂಡಾಶ್ಚರ್ಯವೇನುಂಟು ೨೮

ಎಂದೊಡಾ ಮುನಿವರನು ಪೇಳಿದ
ನಿಂದು ಕೇಳಾದೊಡೆಯು ವ್ಯಗಜಳ
ದಂದ[4]ವೀ ಸಂಸಾರವೀ ಜಗಜ[4]ನಿತ[5]ದಿ[5]ದಿರಿನಲಿ
ತಂದೆ ತಾಯ್ ಗುರು ನಂಟರಿಷ್ಟರು
ಬಂಧುಬಳಗವು ಸತಿಸುತರು ಕ
ಣ್ಮುಂದೆ ಪೋಗುತ್ತಿರಲು ಜೀವವ ತಡೆವರಾರುಂಟು ೨೯

ಆದರದಿ ಕೇಳಿದೆನು ಸತ್ಕಥೆ
ಯೋ[6]ದದಿ[6]ರು ಮುನಿನಾಥ ಮತ್ತೇ
ನಾದರುಂಟೇ ಕಂಡುದೆಂದನು ಮೇದಿನಿಯ ಮೇಲೆ
ವೇದಸನ್ಮತ ವಾಕ್ಯ ನಿನ್ನದು
ಭೂದಿವಿಜ ವಂದಿತನೆ ಪೇಳೆನ
ಲಾ [7]ದಶಗ್ರೀ[7]ವಂಗೆ [8]ಪೇಳಿ [ದ][8] ಶಿವನ ಪೂಜೆಯಲಿ ೩೦

ಮಮತೆಯುಳ್ಳವ ನಿನಗೆ ದಿವಿಜರು
ತಮತಮಗೆ ಸ್ನೇಹಿತರು ರಕ್ಕ[9]ಸ
ರಿಮ[ನು[9]] ಕಿಂಕರ ಬೊಮ್ಮ ಜೋಯಿಸ ಶಿವನು ಹರಸುವನು
ಸಮನದಾರೈ ನಿನಗೆನಲು ತಾ
ನಮಿಸಿ ಮುನಿಯಂಘ್ರಿಯಲಿ ಬಿನ್ನಹ
ವಮರಮುನಿ [10]ಪೇಳಿದನು[10] ಸಂಶಯವಿಲ್ಲ ನಿಮ್ಮಡಿಯ ೩೧

---

[1] ತ್ರಿಕ (ಗ) [2] ಭವನವನು (ಕ) [3] ವನು (ಕಗ) [4] ಸಂಸಾರ ವಿಶ್ವಂಜನ (ಕ) [5] ವಿ (ಗ) [6] ದಿಡ (ಗ) [7] ಡನಿ (ಕ) [8] ಕೇಳ್ನೀ (ಗ) [9] ಸರು ಯಮ (ಕ) ಸರಮಮ (ಗ) [10] ಪೇಳ್ ನೀನು (ಗ).

ದಯದಲಿಹೆನಿನ್ನಬರ ಪೇಳ್ವೈ
ಭಯಗಳುಂಟೇ ಮುಂದೆ[1]ಯೆನುತಲೆ[1]
ವಯಿರ ಬೀಜವ ಬಿತ್ತಿ ಬೆಳ[2]ಸಿ[2]ದ ಪರಿಯ ಕೇಳೆಂದ
ಅಯೋಧ್ಯಾಪುರ[3]ದ[3]ರಸು ದಶರಥ
ಪ್ರಿಯ[4]ದಿ ಕೋಸಲದರಸು[4] ಸುತೆಯ [5]ಸು[5]
[6]ವಯಿವಹಾ[6]ಗುವ್ವು[7]ದೆ[7]ಂಟು ದಿವಸಕ್ಕೆಂದು ಮುನಿ ನುಡಿದ ೩೨

ಎಂದೊಡಾ ನಾರದನ ವಾಕ್ಯ
ಕ್ಕಂದು ಹಾಸ್ಯವ ಮಾಡಿ ಮತ್ತೇ
ನಿಂದು ಪೇಳ್ವೈ ಮದುವೆ ಮಂಗಲ್ಯಗಳು ಯೇನುಂಟು
ಎಂದುದೇನ್ನೈ ಮುನಿಪ ನಿಮ್ಮಡಿ
ಗಿಂದು ಬಿನ್ನೈಸಿ[8]ದರೆ ಕೇಳ್ವೆನು[8]
ಒಂದು ಕಥೆಯನು ಸಾರು ಬಿಜಯಂಗೆಯ್ಯಿ ನೀವೆಂದ ೩೩

ದನುಜ ಪೇಳಿದ ನುಡಿಗೆ ಕೋಪದಿ
ಮುನಿಪನೆಂದನು ಕಾಣಬಹುದಿದ
ಕೊನೆಯ[9]ನ[9]ಱಿಯಲು ಬಹುದು ಯೆನ್ನಯ ಮಾ[10]ತ[10] ಮಱೆಯದಿರು
ಎನಲು ಗರ ಹೊಡೆದಂತೆ ರಾವಣ
ವಿನಯದಲಿ ಕೇಳಿದನು ಋಷಿವರ
ಕನ[11]ಲ[11]ದಿನಗಱುಹುವುದು ಮುಂದಣ ರಾಜಕಾರಿಯವ ೩೪

ಮರುಳುದಾನವ ಕೇಳು ನೀನರೆ
ಮರು[12]ಳ [ನ]ಂ[12]ತಾಡುವರೆ ಹಾಸ್ಯ[13]ವ[13]
ಹರಿಯು ಜನಿಸುವನವರ ಗರ್ಭದಿ ಮನುಜರೂಪಿನಲಿ
ಧರೆಯ ಭಾರವನಿಳುಹ[14]ಲಂ[14]ತವ
ತರಿಸುವನು ರಾಮಾಭಿಧಾನದಿ
ಮಱೆಯದಿರು ನೀ[15]ನಿ[15]ದನು ವಂಶಕೆ ಮೃತ್ಯು ಕಡೆಗವನು ೩೫

---

1 ಯನಲಿಕೆ (ಗ) 2 ಗಿ (ಗ) 3 ವ (ಕ) 4 ದಿಂ ಕೋಸಲನು (ಕ ಗ) 5 ನು (ಕ ಗ) 6 ವೈವಾಹವಾ (ಕ ಗ) 7 ನೆಂ (ಗ) 8 ದುವೆ ಕಥೆಯನು (ಕ) 9 ಲ (ಗ) 10 ತು (ಕ) 11 ಲಿ (ಗ) 12 ಳಂ (ಕ) ಳರಂ (ಗ) 13 ದ (ಕ) 14 ಲಿಂ (ಗ) 15 ನ (ಗ).

*ಧರ್ಮವಱಿಯದವಂಗೆ ಪೇಳ್ವುದು
ಧರ್ಮವೇ ಹೇಳೆಂದು ಮುನಿವರ
ಸುಮ್ಮನಾಡಿದೆಯೆಂದು ನುಡಿದನು ಧರ್ಮ ಚಹಡಿಯನು
ತಮ್ಮ ವಂಶಕೆ ಕೇಡು ಯೆಂಬುದ
ಕರ್ಮರಾಯನು ಕೇಳಿ ರೋಷದಿ
ಘಮ್ಮನೆದ್ದೆಡಬಲವನೀಕ್ಷಿಸಲೇಳೆ ರಾಕ್ಷಸರು ೩೬

ಕಡೆಯ ಕಾಲದ ಸಿಡಿಲಿನಂದದಿ
ಘುಡುಘುಡಿಸುತುರಿಯುಗುಳೆ ಕಂ[1]ಗಳ[1]
ನುಡಿದನೆಲವೋ ಕುಶಲಸುತೆಯನು ಪಿಡಿದು ತಾರದಿರೆ
ಕಡಿವೆನೆನುತವೆ ಚಂದ್ರಹಾಸವ
ಜಡಿಯೆ ನಡನಡಗುತ್ತ ಮಂತ್ರಿಯು
ಪಡೆಸಹಿತ ಪೊಱಮಡಲು ನಭ[2]ಕಂದ[2]ಡರೆ ಮುನಿನಾಥ ೩೭

ಕತ್ತಲೆಯವೊತ್ತಿನಲಿ ನಡೆದು ಪ್ರ
ಹಸ್ತ ಕೋಸಲ ಭೂಪ ನಗರಿಯ
ಹತ್ತುಸಾವಿರ ಬಲ[3]ದಿ[3] ಕೋಟೆಯ ಸುತ್ತುವಳಯದಲಿ
ಮುತ್ತಿಗೆಯನಿಕ್ಕಿದರು ದೈತ್ಯರು
ಹತ್ತಿದರು ಲಗ್ಗೆಯನು ಕುಶಲನ
ಪುತ್ರಿಯನು ಹಿಡಿತಂದು ನಿಶಿಯೊಳು ಲಂಕೆಯನು ಪೊಕ್ಕು ೩೮

ಮಂದಮತಿ ರಾ[4]ವಣ[4]ನಿಗಱುಹಲು
ಸಂದುಕದ ಪೆಟ್ಟಿಗೆಯೊಳೀಕೆ[5]ಗೆ[4]
ಕಂದ ಫಲ ಜಲ[6]ವಿ[6]ಕ್ಕಿ ಕುಳ್ಳಿರಿಸೆಂದು ನೇಮಿ[7]ಸಲು[7]
ಎಂದ ಮಾತಿಂಗಸುರನಾಯಕ
ವೃಂದ ಕ್ಷಿಪ್ರದಿ ದೈತ್ಯನಿದಿರೊಳು
ತಂದು ಮಂದಾಸನ[8]ವ[8]ನಿಳುಹಲು ಕರಸಿ ವರುಣನನು ೩೯

---

* ಈ ಪದ್ಯ 'ಕ' ಪ್ರತಿಯಲ್ಲಿಲ್ಲ.

1 ಡರು (ಗ) 2 .ಕ (ಕ) 3 ವ (ಕ) 4 ಕ್ಷಸ (ಕ) 5 ಯ (ಗ) 6 ನಿ (ಕ) 7 ಸಿದ (ಗ) 8 ವರು (ಕ).

ಪೆಟ್ಟಿಗೆಯ ಕೊಟ್ಟೊಡೆಯು ವರುಣನು
ಯಿಟ್ಟುಕೊಂಬುದಸಾಧ್ಯವೆನುತವ
ಕೊಟ್ಟನೈ ಕರೆದೊಂದು ಮತ್ಸ್ಯನ ಕೈಯಲದ[1]ದವನು[1]
ಇಟ್ಟುಕೊಂಡಣಲೊಳಗೆಯಿರಲದ
[2]ನಟ್ಟಲೊಂ[2]ದು ತಿಮಿಂಗಿಲನು ಬಲು
ಸಿಟ್ಟನಿಂದಾ ಪೆಟ್ಟಿಗೆಯ ನಡುಬೆಟ್ಟದೊಳ್[3]ಗಿಟ್ಟ[3] ೪೦

ಸಂದುಕವು ವೊಡೆದಡೆಯು ರಾವಣ
ಕೊಂದು ಕೂಗುವನೆನುತ ಕು[4]ಹರದೊ
ಳಂ[4]ದು [5]ಬಚ್ಚಿ[5]ಟ್ಟಾಗ ಬಂದನು ಯುದ್ಧಕನುವಾಗಿ
ಧಂಧಳಂ ಧಳ ಧುಂಮುಧುಳುಧುಳು
[6]ಕೆಂ[6]ದು ಹಳಚಿದರೇನ ಹೇಳುವೆ
ನೊಂದಕೊಂದಕೆ ಬಾ[7]ಯಿ[7] ಬೆನ್ನು ಗ[8]ಳುದರ ಪುಚ್ಛ[8]ದಲಿ ೪೧

[9]ಹೊಡೆಹೊ[9]ಡೆದು ನಡುಮಡುವಿನುದಕದಿ
ಜಡಿ ಜಡಿವುತಡಿಮೇಲಕೇಳುತ
ಬಡಿ ಬಡಿದು ತಳಮಳಲನೆಬ್ಬಿಸಿ ಕಡಲ ಕಲಕುತ್ತ
ಕಡಿ ಕಡಿದು ಕಂಡವನು ಕಚ್ಚು
ತ್ತೊಡನೊಡನೆ ಬಿಡದಡಸಿ ಹೋರಲು
ಸಿಡಿವ ಸೀರ್ವನಿ ಸೇಡುಗೊಳಿಸಿತು ಬಿಡದೆ ನಿರ್ಜರರ ೪೨

ಅಂಬು[10]ಧಿ[10]ಯೊಳೀಪರಿಯ ಕಾದ
[11]ಲ್ಕಂ[11]ಬರದಿ ರಾವಣನು ಬಲಸಹ
ತುಂಬಿ ಪುಷ್ಪಕದೊಳಗೆ ಬರುತಿರಲಂದಯೋಧ್ಯಕ್ಕೆ
ಶಂಭುಸಖಪಿತ[12]ನಿತ್ತ[12] ಬಲಸಹ
ಕುಂಭಿನಿಯ ಪಥವಿಡಿದು ಪೋಗಲು
ಸಂಭ್ರಮಕೆ ದಿನವಿ[13]ಲ್ಲ ಕ[13]ರೆಸಾ ಜವದಿ ಭೈತ್ರವನು ೪೩

---

1 ತದನು (ಗ) 2 ನೆಟ್ಟನೊಂ (ಕ) 3 ಟ್ಟು (ಕ) 4 ಪ್ಪರ ಕೊಳಲಂ (ಕ) 5 ಬಿ (ಕ)
6 ಳೆಂ (ಗ) 7 ಯ (ಕ) 8 ಳದರಪೃಚ್ಛ (ಕ) ಳುದರ ಪುಟ್ಟ (ಗ) 9 ವೊಡಮೊ (ಗ)
10 ನಿಧಿ (ಕ) 11 ಲು ಅಂ (ಕ) 12 ಗಿ (ಗ) 13 ಲಾವ (ಕ).

ಎಂದ ಮಾತಿಂಗಾ ಸುಮಂತ್ರನು
ತಂದು ಭೈತ್ರವ ನಿ[1]ಲಿಸಲ[1]ಡರಿದ
ನಂದು ತುಂಬಿದ ಸಾಮ ಬೇಹವರೊಡನೆ ದಶರಥನು
ಬಂದ ನಾಲುಕು ಪಾರ ಮಧ್ಯದೊ
ಳಂ[2]ದ[2]ಯೋಧ್ಯಾಪುರಕೆ ಬ[3]ಹ[3] ಖಳ
ವೃಂದ[4]ದಧಿ[4]ನಾಯಕ[5]ನು[5] ಕಂ[6]ಡನು[6] ಕಡಲ ಮಧ್ಯದೊಳು ೪೪

ಬ[7]ರುತಿ[7]ರಲು ಕಾಣುತ್ತಲಟ್ಟಿದ
ಚರನ ಕ್ಷಿಪ್ರದೊಳಾತ ಭೈತ್ರದ
ಹೊಱಗೆ ಬಂದಾರೆಂದು ಕೇಳಿದ ಮಱಸಿ ವೇಷವನು
ಹರುಷದಿಂದಾ [8]ದೂತ[8]ಗೊರೆದನು
ಸರಸಿಜಾಂಬಕಿ ಕಂಸಲೆಯ ನಾ
[9]ನಿರದೆ ವೈ[9]ವಾಹಕ್ಕೆ ತೆರಳು[10]ವೆ[10]ನರಸ ದಶರಥನು ೪೫

ತಾನಯೋಧ್ಯಾಪುರಕಧೀಶ್ವರ
ನೀನದಾರೆಂದೆನಲು ಕಪಟ[11]ದಿ[11]
ದಾನವನು ನೆಜಿ ನುಡಿದ ನಿನ್ನಯ ಸೇ[12]ನೆ[12]ಗನುವಾಗಿ
ತಾನು ಬಂದೆನೆನು[13]ತ್ತು[13]ಸುರಿದನು
ದಾನವೇಶ್ವರನೆಡೆಗೆ ದಶರಥ
ಮಾನವೇಶ್ವರ ಜೇಯ ಪೋಗುತ್ತಿ[14]ಹನು ಕೋ[14]ಸಲಕೆ ೪೬

ಭ[15]ಳ[15]ರೆ ಭಾಪುರೆ ಬಂದ ತನ್ನಯ
ಕುಲಕುಠಾರ[16]ನು[16] ಇವನು ಸಿಕ್ಕಿದ
ಕೊ[17]ಲಲು ಧರ್ಮವೆ ಮಱೆಯ[17] ಪೊಕ್ಕನ ಪುಲ್ಲ [18]ಕ[18]ಚ್ಚಿದನ
ಜಲವ ಪೊಕ್ಕನ ಹುತ್ತ[19]ನೇ[19]ರ್ದನ
ಬಲವಿಹೀನನ ಬೆನ್ನ ತೆತ್ತನ
ಕೊಲುವುದನುಚಿತ[20]ವೆಂದು[20] ಕಳುಹಿದನೊರ್ವ ರಕ್ಕಸಿಯ ೪೭

---

1 ಲಸಿದಲ್ಲನ (ಕ) 2 ದು (ಕ) 3 ರೆ (ಕ) 4 ದಲಿ (ಕ) 5 ನು (ಗ) 6 ಡುದು (ಕ) 7 ರಬ (ಕ) 8 ಡುತ್ತ (ಕ) 9 ಬಿಡದೆ ವಿ (ಕ) 10 ವ (ಕ) 11 ಡ (ಕ) 12 ವೆ (ಕ) 13 ತ್ತ (ಕ) 14 ರಲು ಕೋ (ಗ) 15 ಲ (ಕ) 16 ನೆ (ಕ) 17 ಲುವ ಧರ್ಮವ ಮನೆಯ (ಕ) 18 ನೆ (ಕ) 19 ಸಾ (ಕ) 20 ವೆನುತ (ಕ).

ಹಗರಣವನೇನೆಂಬೆನಾಕೆಯ
ಮೊಗವೊ ಮುಂಗಾರ್ಮುಗಿಲೊ ವದನವೊ
ಹಗೆಯವೆ[1]ನಬಹುದೆ[1]ರಡು ತೋಳ್ಗಳು ತಾಳ ಮರಗಳೆನೆ
ದೃಗುಯುಗಂಗಳೊಳೊಗುವ ಕಾರ್ಬೊಗೆ
ಬಿಗಿದ ಪುರ್ಬಿನ ಬಿಟ್ಟ ಕೇಶ[2]ದ[2]
[3]ನಗಕೆ ಕಾಲ್ಗಳು ಪುಟ್ಟಿತೆಂಬಂತಾಕೆ[3] ಬಾಯ್ದೆಱೆ[3]ಯೆ ೪೮

ಹಿಡಿದು ಜಗವನು ನುಂ[4]ಗಲ್ಯೆ[4]ತಹ
ಕಡುಭಯಂಕರ ಮಾರಿಯೆಂಬಂ
ತಡಿಯಿಡಲು ತಗ್ಗಿದುದು ಮೇದಿನಿ ನಾವೆಯಂತಾಗೆ
ಹಿಡಿದಡಸಿ ಛೈತ್ರವನು ನುಂಗಲು
ಕಡುಭಯಂಕರ ರೂ[5]ಪ ಬಂದ[5]ದ
[6]ಸಿ[6]ಡಿಯೆ ದಶರಥ ಕಡಿ[7]ದನಾ ಕರಯುಗವ[7] ಖಂಡಯದಿ ೪೯

ನೂರ್ಮಡಿಯ ಸತ್ವದಲಿ ರಕ್ಕಸಿ
ಘೋರ್ವೊಱೆ[3]ವುತಂಬರಕೆ ಲಂಘಿಸಿ
ಘೂರ್ಮಿಸುತ ಬಾಯ್ದೆಱೆ[3]ದು ಛೈತ್ರವ ನುಂಗಲೈತರಲು
ಮಾರ್ಮಲದ ರಕ್ಕಸಿಯು ಕಾಣು
ತ್ತಾರ್ಭಟಿಸಿ ಕಣೆಯಿಂದ ಕಡಿಯಲು
ಫೆರ್ಮರವು ಬೀಳ್ವಂತೆ ಬಿದ್ದುದು ರಕ್ಕಸಿಯ ಶಿರವು ೫೦

ಬಿದ್ದು ಭರದೊಳಗದ್ದಿತಬ್ಧಿ[8]ಯು[8]
ಶಬ್ದದೋಱಲು ಸತ್ಯಲೋಕಕೆ
ಹೊದ್ದಿದಾ ದಶರಥನ [9]ಛೈತ್ರದೊಳಿದ್ದವರು ಮುಳುಗೆ
ಅದ್ದಿದನು[9] ದಶರಥನು ಶರಧಿಯ
ಲದ್ದಿ ಮೇಲಕೆಯೆದ್ದು [10]ಸ್ಮೈರಿಸಿ[10]
ತಿದ್ದಿ[11]ತೀದಿನ[11] ರಘುವಿನನ್ವಯ ಹಠ ಮಹಾದೇವ ೫೧

---

1 ನೆನೆ (ಕ) 2 ವ (ಗ) 3 ಘನತೆ ಕಾಲುಳ ಪುಡಿತೆಯೆಂಬಂತಾಗಿ (ಕ) 4 ಗುತ್ತೈ (ಕ) 5 ರೂಪು ಬಂದು (ಕ) 6 ಪಿ (ಕ) 7 ಯೆ (ಕ) 8 ಯೊಳ್ (ಕ) 9 ವಳದ್ದು ಮರುಗೊಳಿಸಿ ಅದ್ದಿದಾ (ಕ) 10 ಸ್ಮರಿಸಿದ (ಗ) 11 ತಿಂದಿನಲಿ (ಗ)

ವೀರ ರಘುವಿನ ಕುಲವು ಮುಳುಗಿತು
ನೀರಿ[1]ನೊಳಗಿಂ[1]ದಿನಲಿ ಶಿವ ರಘು
[2]ವೀರ ರಾಘವ ರಕ್ಷಿಸಾನತ[2] ಬಂಧು [3]ದ[3]ಯಸಿಂಧು
ಕ್ರೂರದಾನವ[4]ರೆ[4]ನ್ನನೀ ಪರಿ
ಗಾಜುಗೆಡಿಸಿದ[5]ರಿಂ[5]ದು ಬಿದ್ದುದು
ದೂಜು ನಿನಗೆಲೆ ದೇವ ಮುರಹರ ಕಾಯಬೇಕೆಂದ ೫೨

ಅಂಬುಧಿಯ ಕಡಗೋಲ ಪೊತ್ತನ
ಮುಂಬಿನಲಿ ನಿಲಲಾಜಿದೆಚ್ಚನ
ನಂಬಿದಾತನ ಕೊಲಲು ಬಗೆದನ ಪಿತನ ಭಕ್ಷಿಪನ
ತಿಂಬವನ ಮೇಲಡರಿ ಚರಿಸುವ
ಅಂಬಕತ್ರಯಸಖನೆ ನಿನ್ನ[6]ನು[6]
ನಂಬಿದೆನು ರಘುವೀರ ರಾಘವ ರಾಮ ಶ್ರೀರಾಮ ೫೩

ಜಲನಿಧಿಯ ಮಧ್ಯದೊಳು ದಶರಥ
ಮುಳುಗುತೇಳು[7]ತಲಿರಲಿಕಾಕ್ಷಣ
ಬಳಿಯ[7] ಬಂದೊಣ[8]ವೃಕ್ಷ[8] ಸೇರಿದುದಾಗ ಕರತಳಕೆ
ಬಳಲುತಿರ್ಪನ ಬಳಿಗೆ ಬರಲದು
ಮುಳುಗದಂದದಿ ಪಿಡಿದು ಮೆಲ್ಲನೆ
ಭಲರೆ ಭಕ್ತರ ಬಂಧುವೆಂಬುದ ಕಂಡೆನಿಂದಿನಲಿ ೫೪

ನೀಡಿ ಕರ[9]ದಲಿ[9] ಪಿಡಿದು ನೆಗ[10]ಹಲ್[10]
ಕೋಡುಗಲ್ಲಿನ ಕುಹರಕೊಯ್ಯಲು
ನೋಡುತಾ ದಶರಥನು [11]ಮೆಲ್ಲನೆ[11]ಯೇಜಿ ಕುಳ್ಳಿರುತ
ಮಾಡಿದನೆ ವಿಧಿಯಿನಿ[12]ತ ಶುಭ[12]ದೊಳು
ಕೇಡನೀ ಪರಿಯಲ್ಲಿ ಶಿವಶಿವ
ಆಡಿಕೊಂಬರ ಗಾದೆಯಾದುದು ಹೇಳಲೇನದನು ೫೫

---

1 ನಲಿ ನಿಂ (ಕ) 2 ನಾಥ ರಕ್ಷಿಸನಾಥ (ಕ) 3 ಜ (ಗ) 4 ನೆ (ಕ) 5 ನಿಂ (ಕ) 6 ಯ (ಕ) 7 ತ್ತಿರಲು ದಶರಥಕಾಣ (ಕ) 8 ಮರನ (ಕ) 9 ವನು (ಕ) 10 ದೊ (ಕ) 11 ಮೇಲಕೆ (ಕ) 12 ತು ಸುಖ (ಕ)

*ಮಂಗಳದ [1]ಒಸಗೆ[1]ಯಲಿ ಸುರಿದುದು
ಇಂಗಳದ ಮಳೆಯದುವೆ ಮದುವೆಯ
ರಂಗಮಂಟಪವಾಯಿತಂ[2]ಬುಧಿ ಮಧ್ಯವರಮನೆಯು[2]
ಕಂಗಳಿಂ[3]ಗತಿ ಚೆಲುವ[3] ಚಪ್ಪರ
ಶೃಂಗರವನೇನೆಂಬೆನೈ ಶ್ರೀ
ರಂಗಧಾಮನೆ ಬಲ್ಲ ಕೋಸಲನಗರಿಯಿದು ತನಗೆ ೫೬

ರಾಯ ದಶರಥ ನುಡಿದ[4]ಡದನಬು[4]
ಜಾಯತಾಂಬಕಿ ಕೇಳಿ ಕೋಸಲ
ರಾಯನೆಂಬೀ ವಾಕ್ಯ ಶ್ರವಣಕೆ ಬಿದ್ದ ಮಾತ್ರದಲಿ
ಸಾಯಸಂಬಡುತಿಪ್ಪನಾರೆಂ
ದಾಯತದಿ ಕೇಳುವೆನು ಬಂದು[5]ದ[5]
ಪಾಯವೆಂತವಗೆನುತ ಮೆಲ್ಲನೆ ಮಾತನಾಡಿಸಲು ೫೭

ಏನಿದಚ್ಚರಿಯೆನುತ ತಿರುಗಲು
ಸಾನುರಾಗ[6]ದ[6] ನುಡಿಯ ಕೇಳುತ
ನೀನದಾರೆಂದೆನುತ ಪಿಡಿಯಲು ಪೆಟ್ಟಿಗೆಯ ಬೀಗ
ತಾನೆ ಬಯಲಾಯ್ತಾಗ ಮುಚ್ಚಳ
ಮಾನವೇಶ್ವರ ತೆಗದು ಕಂಡನು
ಮಾನಿನಿಯ ನುಡಿಸಿದನು ಮೆಲ್ಲನೆ ಮಧುರ ವಚನದಲಿ ೫೮

ತಂದೆ ತಾಯಾರೆಂದು ಪೇಳರ
ವಿಂದಲೋಚನೆಯಬುಧಿಮಧ್ಯಕೆ
ಸಂದುಕದಿ ತಂದಿಟ್ಟನಾವನು ಬಂದ ಬವಣೆಯನು
ಇಂದು ಯೆನ್ನೊಳು ಪೇಳು ಕೇಳುವೆ
ಸಂ[7]ದ ಕಥನವ[7]ನೆನಲು [8]ಕೌಸಲ[8]
ನಂದನೆಯು ಪೇಳಿದಳು ಕರ್ಣಾಮೃತವ ಕೌತುಕವ ೫೯

---

[1] ಮದುವೆ (ಕ) [2] ಭೋಧಿ ಮಧ್ಯದರಮನೆಯು (ಗ) [3] ದಾ (ಕ) [4] ವಚನಭು (ಕ) [5] ದು (ಕ) [6] ದಿ (ಕ) [7] ದು ಕದಲವ (ಕ) [8] ಕುಶಲನ (ಗ)

ಕೋಸಲೇಶನು ಸುತೆಯ ಪ್ರೇಮದಿ
ಕೌಸಲೆಯು ಯೆಂದಿಟ್ಟ ಹೆಸರನು
ಸಾಸಿಗರನಜಸುತ್ತಲಿರೆ ತನ್ನೀಯಬೇಕೆಂದು
ಆ ಸಮಯದಲಿ ಬಂದು ನಾರದ
ನೇಸಜನ್ವಯತಿಲಕ ದಶರಥ
ಪಾಸಟಿಯು ನಂದನೆಗೆಯೆನಲದ ಕೇಳಿ ಕೈಕೊಂ[1]ಡ[1] ೬೦

ದೂತ ಮುಖದಿಂದೆನ್ನ ಯೋಧ್ಯದ
ಭೂತಳೇ[2]ಶಂಗೀವೆನೆನುತವೆ[2]
ತಾತ ಶೃಂಗರಿಸಿರಲು ಪುರವನು ದೈತ್ಯ ರಾವಣನು
ಘಾತಕದಿ ಪಿಡಿತಂದು ನಿಶೆಯೊಳ
ಗಾತ ವರುಣನ ಕರದೊಳೀಯೆ ಪ್ರ
ಚೇತ ಮತ್ಸ್ಯನ ಕರೆದು ಕೊಡಲವ ತನ್ನ ಬಾಯೊಳಗೆ ೬೧

ಆದರದೊಳಿಟ್ಟಿರ[3]ಲಿಕಾತನೊಳ್
ಕಾದ ಕರೆಯ ತಿಮಿಂಗಿಲನು ತಂ
ದೀ ದುರಾಗ್ರಹದೊಳಗೆ ಬಿಟ್ಟಿರೆ[3] ಭಾಗ್ಯ ತನ್ನುವನು
ಭೇದಿಸದೆ ಬಿಡನೆನ್ನ [4]ರಾವಣ[4]
ನೈದುವನು ತಾನೇವೆನಿಲ್ಲಿಗೆ
ನೀ ದಯಾಂಬುಧಿ ಬಂದೆ ಹೆಸರೇನಾರು ಹೆತ್ತವರು ೬೨

ಆರು ನಿನ್ನಯ ಕುಲವದಾವುದು
ವೀರ ಪೇಳೆನಲೆಂದ ದಶರಥ
ಭೂರಮಣ ತಾನೀಗಲಜಸುತ ಮಿತ್ರಕುಲವೆನಗೆ
ನೀರೆ ಕೇಳಾ ನಿನ್ನ ಮದುವೆಗೆ
ನೀರ ಮೇಲ್ ಬರುತಿರಲು ಛೈತ್ರವ
ನೊರ್ವ ರಕ್ಕಸಿ ಮಗುಚಿ ಕೆಡಹಲು ಮುಳುಗಿ ಬಲವೆಲ್ಲ ೬೩

---

[1] ಡು (ಗ) [2] ಳೇಶ್ವರಗೀಯಬೇಕೆನೆ (ಕ) [3] ಲು ಮತ್ತಾಕಾಶದೊಳ್ ಮದಕರಿ ತಿಮಿಂಗಿಲ ಧುರಕಾಗ ಕರೆಯಲು ಬಿಟ್ಟುತಾಗಲಿ (ಕ) [4] ದಶಶಿರ (ಕ)

ವೀರರಾಘವನೆಂಬ ಸ್ಮರಣೆಯು
ಸೇರಿಸಿತು ತಂ[1]ದೆನ್ನ ನಿಲ್ಲಿಗ[1]
ದಾರು ಕೊ[2]ಲ್ವರು[2] ಶಿವನ ಕರುಣಕಟಾಕ್ಷವಿರುತಿರಲು
ಪಾರಬುದ ವಶವಿದನು ವಿಾಜುವ
ರಾರಳವು ಕೇಳಬಲೆ ಯೆನುತ ಸ
ರೋ[3]ರುಹಾಂ[3]ಬಕಿಯೊಡನೆ ನುಡಿದನು ವೀರ ದಶರಥನು ೬೪

ಅಂತರದ ಘಟವಾಯ್ತು ಪೆಟ್ಟಿಗೆ
ಮಂತ್ರ[4]ವೀಶ್ವ[4]ರ ವಚನ ವಿಬುಧರು
ಸಂತಸದಲರಳ್ಮಾಲೆ[5]ಯಿ[5]ತ್ತರು ಶೋಭನವ [6]ಪಾ[6]ಡಿ
ಚಿಂತೆಯನು ಕಡೆಗೊತ್ತಿ ಭೂಪ[7]ನಿ
ಗಂತು[7] ಕಮಲದ ಸರವ[8]ನಿಕ್ಕಲು[8]
ಕಂತು ಸನ್ನಿಭ ಕುಳಿತನಾ ಸಂದುಕದ ಮಧ್ಯದಲಿ ೬೫

ಪರಮಭಕ್ತರ ಬಂಧು ಮಧುಕೇ
ಶ್ವರನ ಸಖನಾ ವರದ ವಿ[9]ಠಲನ[9]
ಚರಣವನೆ ಭಜಿಸುತ್ತಲಿಹರೆಂದೆಂಬ ಸಮಯದಲಿ
ಭರದಲೊಗೆದೆಂಟೆಂಟು ಪದಗಳು
ಸರಸಿಜಾಂಬಕಿಯರಳಮಾಲೆಯ
ನರಸ ದಶರಥಗಿಕ್ಕಲಾದುದು ಮೊದಲಸಂಧಿಯೊಳು ೬೬

ಅಂತು ಸಂಧಿ ೧ಕ್ಕಂ ಪದ ೬೬ಕ್ಕಂ ಮಂಗಳ ಮಹಾಶ್ರೀ

ಸಂ: ಎಸ್. ಎನ್. ಕೃಷ್ಣಜೋಯಿಸ್

(ಸಶೇಷ)

[1] ದಿಲ್ಲಯೆನ್ನನ (ಕ) [2] ಲುವವ (ಗ) [3] ಜತಾಂ (ಕ) [4] ವಿರ್ವ (ಕ) [5] ವಿ (ಕ) [6] ಹಾ (ಕ) [7] ದಿಗಂತ (ಕ) [8] ಶಿಕ್ಕಲ್ (ಕ) [9] ಟ್ಠಲ (ಕ)

ಕೋಸಲೇಶನು ಸುತೆಯ ಪ್ರೇಮದಿ
ಕೌಸಲೆಯು ಯೆಂದಿಟ್ಟ ಹೆಸರನು
ಸಾಸಿಗರನಱಸುತ್ತಲಿರೆ ತನ್ನೀಯಬೇಕೆಂದು
ಆ ಸಮಯದಲಿ ಬಂದು ನಾರದ
ನೇಸಱನ್ವಯತಿಲಕ ದಶರಥ
ಪಾಸಟಿಯು ನಂದನೆಗೆಯೆನಲದ ಕೇಳಿ ಕೈಕೊಂ[1]ಡ[1] ೬೦

ದೂತ ಮುಖದಿಂದೆನ್ನ ಯೋಧ್ಯದ
ಭೂತಳೇ[2]ಶಂಗೀವೆನೆನುತವೆ[2]
ತಾತ ಶೃಂಗರಿಸಿರಲು ಪುರವನು ದೈತ್ಯ ರಾವಣನು
ಘಾತಕದಿ ಪಿಡಿತಂದು ನಿಶೆಯೊಳ
ಗಾತ ವರುಣನ ಕರದೊಳೀಯೆ ಪ್ರ
ಚೇತ ಮತ್ಸ್ಯನ ಕರೆದು ಕೊಡಲವ ತನ್ನ ಬಾಯೊಳಗೆ ೬೧

ಆದರದೊಳಿಟ್ಟಿರ[3]ಲಿಕಾತನೊಳ್
ಕಾದ ಕರೆಯ ತಿಮಿಂಗಿಲನು ತಂ
ದೀ ದುರಾಗ್ರಹದೊಳಗೆ ಬಿಟ್ಟಿರೆ[3] ಭಾಗ್ಯ ತನ್ನುವನು
ಭೇದಿಸದೆ ಬಿಡನೆನ್ನ [4]ರಾವಣ[4]
ನೈದುವನು ತಾನೇವೆನಿಲ್ಲಿಗೆ
ನೀ ದಯಾಂಬುಧಿ ಬಂದೆ ಹೆಸರೇನಾರು ಹೆತ್ತವರು ೬೨

ಆರು ನಿನ್ನಯ ಕುಲವದಾವುದು
ವೀರ ಪೇಳೆನಲೆಂದ ದಶರಥ
ಭೂರಮಣ ತಾನೀಗಲಜಸುತ ಮಿತ್ರಕುಲವೆನಗೆ
ನೀರೆ ಕೇಳಾ ನಿನ್ನ ಮದುವೆಗೆ
ನೀರ ಮೇಲ್ ಬರುತಿರಲು ಭೈತ್ರವ
ನೊರ್ವ ರಕ್ಕಸಿ ಮಗುಚಿ ಕೆಡಹಲು ಮುಳುಗಿ ಬಲವೆಲ್ಲ ೬೩

---

[1] ಡು (ಗ) [2] ಳೇಶ್ವರಗೀಯಬೇಕೆನೆ (ಕ) [3] ಲು ಮತ್ತಾಕಾಶದೊಳ್ ಮದಕರಿ ತಿಮಿಂಗಿಲ ಧುರಕಾಗ ಕರೆಯಲು ಬಿಟ್ಟುತಾಗಲಿ (ಕ) [4] ದಶಶಿರ (ಕ)

ವೀರರಾಘವನೆಂಬ ಸ್ಮರಣೆಯು
ಸೇರಿಸಿತು ತಂ[1]ದೆನ್ನ ನಿಲ್ಲಿಗ[1]
ದಾರು ಕೊ[2]ಲ್ವರು[2] ಶಿವನ ಕರುಣಕಟಾಕ್ಷವಿರುತಿರಲು
ಪಾರಬುದ ವಶವಿದನು ವಿಾಱುವ
ರಾರಳವು ಕೇಳಬಲೆ ಯೆನುತ ಸ
ರೋ[3]ರುಹಾಂ[3]ಬಕಿಯೊಡನೆ ನುಡಿದನು ವೀರ ದಶರಥನು ೬೪

ಅಂತರದ ಪಟವಾಯ್ತು ಪೆಟ್ಟಿಗೆ
ಮಂತ್ರ[4]ವೀಶ್ವ[4]ರ ವಚನ ವಿಬುಧರು
ಸಂತಸದಲರಳ್ಮಾಲೆ[5]ಯಿ[5]ತ್ತರು ಶೋಭನವ [6]ಪಾ[6]ಡಿ
ಚಿಂತೆಯನು ಕಡೆಗೊತ್ತಿ ಭೂಪ[7]ನಿ
ಗಂತು[7] ಕಮಲದ ಸರವ[8]ನಿಕ್ಕಲು[8]
ಕಂತು ಸನ್ನಿಭ ಕುಳಿತನಾ ಸಂದುಕದ ಮಧ್ಯದಲಿ ೬೫

ಪರಮಭಕ್ತರ ಬಂಧು ಮಧುಕೇ
ಶ್ವರನ ಸಖನಾ ವರದ ವಿ[9]ಠಲನ[9]
ಚರಣವನೆ ಭಜಿಸುತ್ತಲಿಹರೆಂದೆಂಬ ಸಮಯದಲಿ
ಭರದಲೊಗೆದೆಂಟೆಂಟು ಪದಗಳು
ಸರಸಿಜಾಂಬಕಿಯರಳಮಾಲೆಯ
ನರಸ ದಶರಥಗಿಕ್ಕಲಾದುದು ಮೊದಲಸಂಧಿಯೊಳು ೬೬

ಅಂತು ಸಂಧಿ ೧ಕ್ಕಂ ಪದ ೬೬ಕ್ಕಂ ಮಂಗಳ ಮಹಾಶ್ರೀ

ಸಂ: ಎಸ್. ಎನ್. ಕೃಷ್ಣಜೋಯಿಸ್

(ಸಶೇಷ)

[1] ದಿಲ್ಲಯೆನ್ನನ (ಕ) [2] ಉವವ (ಗ) [3] ಜತಾಂ (ಕ) [4] ವಿರ್ವ (ಕ) [5] ವಿ (ಕ) [6] ಹಾ (ಕ) [7] ದಿಗಂತ (ಕ) [8] ಶಿಕ್ಕಲ್ (ಕ) [9] ಟ್ಠಲ (ಕ)

ಕಮ್ಮಟದ ಕಿಡಿಗಳು

ಕೌಳರು—ಒಂದು ವಿವೇಚನೆ

ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಬ್ರಹ್ಮಶಿವನ "ಸಮಯ ಪರೀಕ್ಷೆ"ಯ ಒಂದು ಪದ್ಯದ ಅಚ್ಚಾಗಿರುವ ಪಾಠ ಹೀಗಿದೆ—

ಸೌರಂ ಕಾಳೋತ್ತರಮೆಂ
ಬಾರಾಧನೆಗಳೊಳಮಖಿಳ ವೇದಸ್ಮೃತಿ ತ
ತ್ಪ್ರಾಣಮೆನಿಪ್ಪವಱೊಳ್
ಸಾರಮನಿಂಬಾಗಿ ನೆಱೆಯೆ ನಿರುತಂ ಬಲ್ಲಂ ||[1]

ತಾನು ಸೌರ, 'ಕಾಳೋತ್ತರ' ಎಂಬ ಆರಾಧನೆಗಳನ್ನೂ (Cults), ವೇದಸ್ಮೃತಿ ಪುರಾಣಗಳ ಸಾರವನ್ನೂ ಚೆನ್ನಾಗಿ ಬಲ್ಲವನೆಂದು ಕವಿಯ ಹೇಳಿಕೆ. ಕರ್ಣಾಟಕದಲ್ಲಿ ಸೂರ್ಯೋಪಾಸಕರಾದ ಸೌರರು ಇದ್ದರೆಂಬುದಕ್ಕೆ ಇದೇ ಕವಿಯ ಇತರ ಹೇಳಿಕೆಗಳೂ,[2] ಶಾಸನಗಳೂ ಆಧಾರಗಳನ್ನೊದಗಿಸುತ್ತವೆ.[3] 'ಕಾಳೋತ್ತರ'ರು ಯಾರು ? ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಧರ್ಮವು ಪ್ರಬಲಿಸುವ ಮುನ್ನ ಕರ್ಣಾಟಕದಲ್ಲಿ 'ಕಾಳಾಮುಖ'ರೆಂಬ ಶೈವರು ಬಹು ಪ್ರಬಲರಾಗಿದ್ದರು. 'ಕಾಳಾಮುಖ'ರೂ 'ಕಾಳೋತ್ತರ'ರೂ ಒಂದೇ ಎಂದು ಭಾವಿಸುವುದು ಅಷ್ಟು ಉಚಿತವಲ್ಲ.

ಬ್ರಹ್ಮಶಿವನ "ಸಮಯ ಪರೀಕ್ಷೆ" ಕನ್ನಡ ಸಾಹಿತ್ಯದಲ್ಲೇ ಒಂದು ವಿಶಿಷ್ಟ ಕೃತಿ. ತನ್ನ ಸಮಕಾಲೀನವಾದ ಸಮಯ ಅಥವಾ ಮತಗಳನ್ನು ಹಿಕ್ಕಿ ನೋಡುವುದು (ಆದ್ದರಿಂದಲೇ ಗ್ರಂಥಕ್ಕೆ 'ಸಮಯ ಪರೀಕ್ಷೆ' ಎಂಬ ಹೆಸರು), ಅವುಗಳಲ್ಲಿ ಒಂದಾದ ಜೈನಧರ್ಮದ ಶ್ರೇಷ್ಠತೆಯನ್ನು ಸ್ಥಾಪಿಸುವುದು—ಇದೇ ಅವನ ಗ್ರಂಥದ ಮುಖ್ಯೋದ್ದೇಶ ("ಪರಸಮಯಿಗಳಂ ಮುದದಿಂ ಪಥಕ್ಕೆ

---

1. ಸಮಯ ಪರೀಕ್ಷೆ (ಸಂ. ಬಿ. ಎಸ್. ಕುಲಕರ್ಣಿ), ೧.೫೮.

2. ಅದೇ, ೮. ೧೬೪–೧೬೯. ಒಂದೇ ಮನೆಯಲ್ಲಿ ಗಂಡ, ಹೆಂಡತಿ ಮತ್ತು ಮಕ್ಕಳುಗಳು ಶೈವ, ಜೈನ, ಸೌರ ಮುಂತಾದ ಭಿನ್ನ ಭಿನ್ನ ಮತಗಳನ್ನನುಸರಿಸುತ್ತಿದ್ದ ವಿಷಯವನ್ನು ಬ್ರಹ್ಮಶಿವನು ಒಂದೆಡೆ ಹೇಳಿದ್ದಾನೆ—"ಪೆಂಡತಿ ಮಾಹೇಶ್ವರಿ ಗಡ | ಗಂಡಂ ಜೈನಂ ಗಡವನ ಮಕ್ಕಳ್ಗಡ ಮಾ | ರ್ತಂಡಂಗೆ ಭಕ್ತರೆನಿಪಾ ಭಂಡಂಗುತ್ತಮದ ಜೈನವೆಸರೆಂತೆಸೆಗುಂ" (೪.೧೨೫). ಈ ಅಂಶವನ್ನು ಅವನ ಸಮಕಾಲೀನರ ಹೇಳಿಕೆಗಳೂ ಪೋಷಿಸುತ್ತವೆ.

3. ಸೂರ್ಯನಿಗೆ ಮೀಸಲಾದ ದೇವಸ್ಥಾನಗಳ ಹೆಸರುಗಳನ್ನು ಹೇಳುವ ಈ ಶಾಸನಗಳನ್ನು ನೋಡಿ—Bombay Karnatak Inscriptions, I. i., 37, 946 A. D; Epigraphia Carnatica, IV Gu. 79, 1009 A.D. ಇತ್ಯಾದಿ.

ತರಲಾರ್ಪುದು ಸಮಯ ಪರೀಕ್ಷೆಯೆಂಬುದಿಂತೀ। ಕಾವ್ಯಂ"—೧.೬೧). ತನ್ನ ಸಮಕಾಲೀನ ಧಾರ್ಮಿಕ ಪ್ರಪಂಚದಲ್ಲಿ ಬ್ರಹ್ಮಶಿವನು ಪಡೆದಿದ್ದ ಅನುಭವವು ವೈವಿಧ್ಯಮಯವೂ ವಿಪುಲವೂ ಆಗಿದ್ದಿತು. ಅವನು ಆರಂಭದಲ್ಲಿ ಜೈನನಾಗಿದ್ದು ಯಾವುದೋ ಕಾರಣದಿಂದ ಶೈವಧರ್ಮವನ್ನಂಗೀಕರಿಸಿ ಅದರಲ್ಲಿ ಒಳ್ಪುಗಾಣದೆ ಮತ್ತೆ ಜೈನಧರ್ಮವನ್ನಂಗೀಕರಿಸಿದ್ದನು.[4] ಅವನಿಗೆ ಅನೇಕ ಮತಗಳ ಸಾಕ್ಷಾತ್ತಾದ ಪರಿಚಯವಿದ್ದುದರಿಂದ ಅವನ ಕೃತಿಯು ಹನ್ನೆರಡನೇ ಶತಮಾನದ ಸಾಮಾಜಿಕ–ಧಾರ್ಮಿಕ ಪರಿಸ್ಥಿತಿಗೆ ಒಂದು ಅತ್ಯುತ್ತಮ ಕನ್ನಡಿಯಾಗಿದೆ.

ಅವನ ಸಮಕಾಲೀನವಾಗಿದ್ದ ಮತಗಳಲ್ಲಿ ಕೌಳಮತವೂ ಒಂದು. ಬ್ರಹ್ಮಶಿವನ ಉಗ್ರವಾದ ಖಂಡನೆಗೆ ಗುರಿಯಾಗಿವೆ ಈ ಮತ ಮತ್ತು ಇದರ ಗುರುಗಳು. ಈ ಮತದ ಸಾಕ್ಷಾತ್ತಾದ ಪರಿಚಯವಿದ್ದಿತು ಕವಿಗೆ (ಮುಂದೆ ನೋಡಿ). ಅವನು ಕೊಡುವ ಕೌಳರ ಚಿತ್ರ ಈ ರೀತಿ ಇದೆ. ಬ್ರಹ್ಮ, ರುದ್ರ, ವಿಷ್ಣು ಮುಂತಾದವರು ಚಂಡಿ ಅಥವಾ ದುರ್ಗೆಯ ಪಾದಾರಾಧಕರೆಂದು ಕೌಳರು ನಂಬಿದ್ದರು.[5] ಇವರು ಸಾಧನೆಯ ಹೆಸರಿನಲ್ಲಿ ಮಾಂಸಾಹಾರವನ್ನೂ ಮದ್ಯಪಾನವನ್ನೂ ಮಾಡುತ್ತಿದ್ದರು.[6] ಮದ್ಯಪಾನ ಮಾಂಸಾಹಾರಗಳಿಂದ ಒದಗುವ ಸುಖವೇ ಅವರಿಗೆ ಮೋಕ್ಷ.[7] ಇವರು ಇತ್ತ ಲಿಂಗವನ್ನು ಪೂಜಿಸಿ ಅತ್ತ ಕುರಿಯನ್ನು ಬಲಿಗಾಗಿ ತನ್ನಿ ಎನ್ನುತ್ತಾರೆ; ಇತ್ತ ಹೋಮವನ್ನು ಮಾಡುವರು, ಅತ್ತ ಸುಂಟಿಗೆಯನ್ನು ಕಾಸುವರು[8] (೧೪.೮೯). ಹೀಗೆ ಬ್ರಹ್ಮಶಿವನು ಕೊಡುವ ಚಿತ್ರವು ಭಯಾನಕವಾಗಿದೆ. ಅವನ ಪ್ರಕಾರ ಕೌಳರದು ಅತಿಮಾರ್ಗಿಕವಾದ ವಾಮಾಚರಣೆಗಳಿಂದ ಕೂಡಿದ್ದ ಒಂದು ಪಂಥವಾಗಿದ್ದಿತು.

ಇತರ ಆಕರಗಳೂ ಬ್ರಹ್ಮಶಿವನ ನಿರೂಪಣೆಯನ್ನೇ ಸಮರ್ಥಿಸುತ್ತವೆ. ಪ್ರಭಾಸಕ್ಷೇತ್ರದ ಅಧಿದೇವತೆಯು ಬಲ ಮತ್ತು ಅತಿಬಲರೆಂಬ ರಾಕ್ಷಸರನ್ನೂ

---

4. ಪರಿದರ್ತ್ಥಿ ಮುನ್ನ ಮಾಹೇ | ಶ್ವರದೊಳ್ತನಗದಱೊಳೊಳ್ಪುಗಾಣದೆ ನೆಗಳ್ದೀ |
ಪರಮ ಜಿನಧರ್ಮದೊಳಪೊ | ಕ್ಕು ರಾಗಿಪಂ ಸುಕವಿ ಪಂಪರಾಜನ ಮೊಮ್ಮಂ ॥
(೧.೫೯)

5. "ಮುರಹರ ಸರಸಿಜಭವ ರು|ದ್ರ ನುಮೀಶ್ವರನುಂ ಸದಾಶಿವಂ ಬೆರಸಿಂತ |
ಯ್ವರುಮೊಂದಿರ್ಪರ್ಚಂಡಿಯ | ಚರಣಂಗಳ ಮೊದಲೊಳೆಂದು ಕೌಳರ್ ಪೇಳ್ವರ್
(೮.೧೧೭)

6. "....ಈಗ ಕೌಳಾಚಾರ್ಯರ್ ಸೇವಿಪರೆಂದೊಡೆ ಮದ್ಯಮನೇವೊಗಳ್ವುದೊ ದೂಷಿಸಲ್ಕೆ ಸಲ್ಲದನೆಂಬರ್." (೧೪.೫೬)

7. "....ತಿಂಬ ಕುಡಿದ ಬಸನಮೆ ಗಡ ಕೌಳರ ದೀಕ್ಷಿತಂಗೆ ಗಹನಮೆ ಮೋಕ್ಷಂ"
(೧೪.೭೭)

8. ಸುಂಟಿಗೆ ಎಂದರೆ ಮಾಂಸವನ್ನು ಸುಡುವಿಕೆ ಎಂದೂ ಸುಟ್ಟ ಮಾಂಸ ಎಂದೂ ಅರ್ಥ.

ಅವರ ಸೈನ್ಯವನ್ನೂ ನಾಶಪಡಿಸಿದಾಗ ಕೆಲವರು ತಪ್ಪಿಸಿಕೊಂಡು ಹೋಗಿ ಮದ್ಯ, ಮಾಂಸ, ಸ್ತ್ರೀ ಪ್ರಿಯರಾದ ಕೌಲರಾದರೆಂದು "ಸ್ಕಂದ ಪುರಾಣ"ದ ಪ್ರಭಾಸ ಖಂಡದಲ್ಲಿ ಹೇಳಿದೆ.[9] ರಾಜಶೇಖರನ (ಸು. ೯೦೦) ಕರ್ಪೂರ ಮಂಜರಿಯಲ್ಲಿ ಕಾಣಿಸಿಕೊಳ್ಳುವ ಭೈರವಾನಂದನೆಂಬ ಮಂತ್ರವಾದಿಯು ತಾವು ಕೌಲಮತಾನುಯಾಯಿಗಳೆಂದೂ ಮದ್ಯವನ್ನು ಕುಡಿದು ವಿಷಯ ಸುಖವನ್ನನುಭವಿಸುತ್ತ ಮೋಕ್ಷವನ್ನು ಸಮಾಪಿಸುವುದಾಗಿಯೂ ಹೇಳಿಕೊಳ್ಳುತ್ತಾನೆ.[10] ಹತ್ತನೇ ಶತಮಾನದ ಸೋಮದೇವನು ತನ್ನ ಯಶಸ್ತಿಲಕ ಚಂಪುವಿನಲ್ಲಿ ಕೌಲಾಚಾರ್ಯರನ್ನು ಹೆಸರಿಸಿದ್ದಾನೆ. ಪೇಯ ಅಪೇಯ, ಭಕ್ಷ್ಯ ಅಭಕ್ಷ್ಯಗಳೆಂಬ ಭೇದವಿಲ್ಲದೆ ಎಲ್ಲವನ್ನೂ ನಿಶ್ಶಂಕೆಯಿಂದ ಸ್ವೀಕರಿಸುವರೆಂದು ಅವನ ಹೇಳಿಕೆ.[11] ಸೋಮದೇವನು ಕನ್ನಡಿಗನೆಂಬ ಅಂಶವನ್ನು ಗಮನಿಸಿದರೆ ಕರ್ಣಾಟಕದಲ್ಲಿ ಕೌಲರು ಇದ್ದರೆಂಬುದಕ್ಕೆ ಅವನ ಹೇಳಿಕೆಯು ಮತ್ತೊಂದು ಆಧಾರವಾಗುತ್ತದೆ. ಚನ್ನಬಸವಣ್ಣನವರು ತಮ್ಮ ವಚನವೊಂದರಲ್ಲಿ ಕೌಳರನ್ನು ಖಂಡಿಸಿದ್ದಾರೆ—"....ಶೈವ ಸೈವೆರಗಾದ, ಪಾಶುಪತಿ ಪಥವರಿಯ, ಕಾಳಾಮುಖಿ ಕಂಗೆಟ್ಟ, ಮಹಾವ್ರತಿ ಮದವೇರಿದ, ಸನ್ಯಾಸಿ ಪಾಷಂಡಿಯಾದ, ಕೌಲಿ ಮರುಳಾಗಿ ಹೋದ. ಈ ಆರು ಭಕ್ತಿಸ್ಥಲಕ್ಕೆ ಸಲ್ಲವು ಕೇಳಿರಣ್ಣಾ...."[12]

---

9. K. K. Handiqui : Yaśastilaka and Indian Culture, p. 355.

10. ಕರ್ಪೂರ ಮಂಜರಿ, ೧.೨೨–

ಮಂತಾಣ ತಂತಾಣ ಣ ಕಿಂ ಪಿ ಜಾಣೇ ಝಾಣಂ ಚ ಣೋ ಕಿಂ ಪಿ ಗುರುಪ್ಪಸಾ ಆ |
ಮಜ್ಜಂ ಪಿಆಮೋ ಮಹಿಲಂ ರಮಾಮೋ ಮೋಕ್ಖಂ ಚ ಜಾಮೋ ಕುಲಮಗ್ಗಲಗ್ಗಾ||
[ಮಂತ್ರೋ ನ ತಂತ್ರಂ ನ ಚ ಕಿಮಪಿ ಧ್ಯಾನಂ ಜ್ಞಾನಂ ಚ ನೋ ಕಿಮಪಿ ಗುರುಪ್ರಸಾದಾತ್
ಮದ್ಯಂ ಪಿಬಾಮೋ ಮಹಿಲಾಂ ರಮಯಾಮೋ ಮೋಕ್ಷಂ ಚ ಯಾಮಃ ಕುಲಮಾರ್ಗಲಗ್ನಾಃ ||]

11. K. K. Handiqui : Yaśastilaka and Indian Culture, p. 204.

12. ಎಂ. ಆರ್. ಶ್ರೀನಿವಾಸಮೂರ್ತಿ: ವಚನಧರ್ಮಸಾರ (೧೯೪೬), ಪು. ೩. ಈ ವಚನಕ್ಕೆ ಪಾಠಾಂತರಗಳಿವೆ ಎಂದು ಅಡಿ ಟಿಪ್ಪಣಿಯಲ್ಲಿ ಶ್ರೀ ಎಂ. ಆರ್. ಶ್ರೀ. ಅವರು ಹೇಳುತ್ತಾರೆ. ಡಾ|| ಫ. ಗು. ಹಳಕಟ್ಟಿಯವರ ಸಂಸ್ಕರಣದಲ್ಲಿ 'ಕೌಲಿ ಮರುಳಾಗಿ ಹೋದ' ಎಂಬ ಕಡೆ 'ಜೋಗಿ ಧೀರ ತಿರುಗುತಿರ್ದ' ಎಂದಿದೆ (ಶ್ರೀ ಚನ್ನಬಸವೇಶ್ವರನ ವಚನಗಳು, ೧೯೩೨, ಪು. ೩೩); ಶ್ರೀ ಅನ್ನದಾನಯ್ಯ ಪುರಾಣಿಕರು ಸಂಪಾದಿಸಿರುವ 'ಚೆನ್ನಬಸವ ಸಾಹಿತ್ಯ' ದಲ್ಲಿ 'ಕಾಪಾಲಿ ಮರುಳಾಗಿ ತಿರುಗಿದ' ಎಂದಿದೆ (ಚನ್ನಬಸವ ಸಾಹಿತ್ಯ–ಪು. ೧೭೬). ವಚನದಲ್ಲಿ 'ಮಹಾವ್ರತಿ' (=ಕಾಪಾಲಿಕ) ಎಂಬ ಹೆಸರಾಗಲೇ ಬಂದಿರುವುದರಿಂದ 'ಕಾಪಾಲಿ ಮರುಳಾಗಿ ತಿರುಗಿದ' ಎಂಬ ಪಾಠವನ್ನು ನಾವು ಬಿಟ್ಟುಬಿಡಬಹುದು. ಡಾ|| ಫ. ಗು. ಹ. ಅವರ ಸಂಸ್ಕರಣದ 'ಜೋಗಿ' ಎಂಬುದು 'ಕೌಲಿ'ಯನ್ನೇ ಸೂಚಿಸುವ ಸಾಧ್ಯತೆ ಇದೆ. ಇಲ್ಲಿ ಅಕ್ಕಮಹಾದೇವಿಯ 'ಯೋಗಿಗೆ ಯೋಗಿಣಿಯಾಯಿತ್ತು ಮಾಯೆ' ಎಂಬ ಉಕ್ತಿಯು ನೆನಪಿಗೆ ಬರುತ್ತದೆ (ಡಾ|| ಫ. ಗು. ಹ. ಅವರ ಮಹಾದೇವಿಯಕ್ಕನ ವಚನಗಳು, ೧೯೩೪, ಪು. ೫). ಕೌಲರು ಸ್ತ್ರೀಸಂಗಿಗಳು ಎಂಬುದನ್ನಾಗಲೇ ಹಿಂದೆಯೇ ನೋಡಿದ್ದೇವೆ. 'ಜೋಗಿ' (ಯೋಗಿ)ಯೂ 'ಕೌಲಿ'ಯೂ ಒಂದೇ ಇರಬಹುದು ಎಂಬುದು ಕೇವಲ ಊಹೆ ಮಾತ್ರ.

ಕೌಳರು ಕರ್ಣಾಟಕದಲ್ಲಿದ್ದರೆಂಬುದಕ್ಕೆ ಇದೂ ಒಂದು ಆಧಾರ. ನಮಗೆ ತಿಳಿದ ಮಟ್ಟಿಗೆ ಕೌಳರ ಉಲ್ಲೇಖವು ಯಾವ ಶಾಸನದಲ್ಲಿಯೂ ಬಂದಿಲ್ಲ.

ಕೌಳರು ಶಾಕ್ತರು ಅಥವಾ ಶಕ್ತಿಯ ಆರಾಧಕರು. ಕೌಲಸಿದ್ಧಾಂತದ ಮೂಲಪ್ರವರ್ತಕ ಪಾಶುಪತಗುರುವಾದ ವಿಶ್ವರೂಪನ ಶಿಷ್ಯ ಅಲ್ಲಟ ಅಥವಾ ಭಾವರಕ್ತ.[13] ಕೌಳರಲ್ಲಿ ಎರಡು ಬಗೆ—ಪೂರ್ವ ಕೌಳರು ಮತ್ತು ಉತ್ತರ ಕೌಳರು. ಇಬ್ಬರೂ ತ್ರಿಪುರಸುಂದರಿಯ ಆರಾಧಕರೇ. ಪೂರ್ವ ಕೌಳರು ಒಂಬತ್ತು ಸ್ತ್ರೀ ಯೋನಿಗಳ ಚಿತ್ರದ ಮಧ್ಯೆ ಬರೆದ ಸ್ತ್ರೀ ಯೋನಿಯ ಚಿತ್ರವನ್ನು-ಇಷ್ಟೂ ಸೇರಿ ಶ್ರೀಚಕ್ರವೆಂದು ಕರೆಯಿಸಿಕೊಳ್ಳುತ್ತದೆ—ಪೂಜಿಸುವರು. ಚಿತ್ರವನ್ನು ಭೂರ್ಜಪತ್ರದ ಮೇಲೋ, ರೇಷ್ಮೆ ವಸ್ತ್ರದಮೇಲೋ, ಚಿನ್ನದ ತಗಡಿನ ಮೇಲೋ ಬರೆದಿರಬಹುದು. ಉತ್ತರ ಕೌಳರಾದರೋ ಸುಂದರಳಾದ ಸ್ತ್ರೀಯ ಯೋನಿಯನ್ನೇ ಆರಾಧಿಸುವರು. ಇಬ್ಬರೂ ತಮ್ಮ ಆರಾಧ್ಯದೇವತೆಗೆ ಮದ್ಯ, ಮತ್ಸ್ಯ, ಮಾಂಸ ಇತ್ಯಾದಿಗಳನ್ನು ಅರ್ಪಿಸಿ ತಾವೂ ಸ್ವೀಕರಿಸುತ್ತಾರೆ. ಪೂರ್ವ ಕೌಳಕ್ಕಿಂತ ಉತ್ತರ ಕೌಳವು ಹೆಚ್ಚು ಬೀಭತ್ಸವಾದುದು.[14]

ಈ ಲೇಖನದ ಆರಂಭದಲ್ಲಿ ಉದ್ಧರಿಸಿರುವ ಪದ್ಯದಲ್ಲಿನ 'ಕಾಳೋತ್ತರ'[15] ಎಂಬುದು ನ್ಯಾಯವಾಗಿ 'ಕೌಳೋತ್ತರ' (=ಉತ್ತರ ಕೌಳ) ಎಂದಿರಬೇಕು. ಆ ಪದ್ಯದ ಪೂರ್ವಾರ್ಧದ ಪಾಠ ಹೀಗಿರಬೇಕೆಂದು ಕಾಣುತ್ತದೆ:—

ಸೌರಂ ಕೌಳೋತ್ತರಮೆಂ
ಬಾರಾಧನೆಗಳೊಳಮಖಿಳ ವೇದಸ್ಮೃತಿ ತ ||
....

[13] V. S. Pathak: Some Obscure Ṣaiva Cults as known from Inscriptions (Indian Historical quarterly, xxxv, p. 131.)

[14] ವಿವರಗಳಿಗೆ, ನೋಡಿ—R. G. Bhandarkar: Vaisṇavism, Ṣaivism and Minor Religious Systems, p. 209 (Collected works, IV); ಸೌಂದರ್ಯಲಹರೀ, ಜಕ್ಕಣಾಮಾತ್ಯನ ಕನ್ನಡ ಟೀಕೆ ಸಹಿತ (ಸಂ. ವಿದ್ವಾನ್ ಸು. ನಾರಾಯಣ ಶಾಸ್ತ್ರೀ), ಪು. ೫೯. ಕೌಳಯಾಮಳಾದಿಗಳು ಹಿಂಸಾ, ಮೈಥುನ ಮುಂತಾದ ನಿಷಿದ್ಧ ಕರ್ಮಗಳನ್ನು ಹೇಳುವ ಶಾಸ್ತ್ರಗಳನ್ನವಲಂಬಿಸಿವೆಯೆಂದು ನಿಜಗುಣಶಿವಯೋಗಿಗಳ ಹೇಳಿಕೆ (ವಿವೇಕ ಚಿಂತಾಮಣಿ, ೧೮೯೦, ಪು. ೯).

[15] ನಾವು ನೋಡಿದ ಪ್ರತಿಗಳಲ್ಲೆಲ್ಲ 'ಕಾಳೋತ್ತರ' ಎಂದೇ ಇದೆ (ಮೈಸೂರು ಓರಿಯಂಟಲ್ ಲೈಬ್ರರಿಯ K. B. 72 ಮತ್ತು K. B. 73 ಇವೆರಡರಲ್ಲಿ ಒಂದು ಇನ್ನೊಂದರ ಪ್ರತಿ. K. B. 73ರಲ್ಲಿ ಹುಂಬಚದ ಪ್ರತಿಯ ಪಾಠಾಂತರಗಳನ್ನು ಗುರುತಿಸಿದೆ). ಇಷ್ಟು ಪ್ರತಿಗಳನ್ನೂ ಸಮಯ ಪರೀಕ್ಷೆಯ ಸಂಪಾದಕರು ಬಳಸಿಕೊಂಡಿದ್ದಾರೆ. ಎಲ್ಲ ಪ್ರತಿಗಳಲ್ಲೂ ಕಂಡುಬರುವ 'ಕಾಳೋತ್ತರ' ಎಂಬ ಪಾಠವನ್ನು ತಿದ್ದುವ ಕೆಲಸಕ್ಕೆ ಕೈಹಾಕದಿರುವುದು ಸಹಜವೇ ಆಗಿದೆ.

ಬ್ರಹ್ಮಶಿವನು ಬಹುಶಃ ಕಂಡದ್ದು, ಉಗ್ರವಾಗಿ ಟೀಕಿಸಿರುವುದು ಉತ್ತರ ಕೌಳರನ್ನೇ ಎಂದು ಭಾವಿಸಬಹುದು.

ಅದೇ "ಸಮಯ ಪರೀಕ್ಷೆ"ಯ ೪. ೧೩ನೇ ಪದ್ಯದ ನಾಲ್ಕನೆಯ ಪಾದದ ಕೊನೆಯಲ್ಲಿ ಬರುವ 'ಕಾಳಂ' ಎಂಬುದಕ್ಕೆ 'ಕೌಳಂ' ಎಂಬ ಪಾಠಾಂತರವಿದೆ.[16] ಬಹುಶಃ 'ಕೌಳಂ' ಎಂಬುದೇ ಮೂಲಪಾಠ. 'ಕಾಳಂ' ಎಂಬುದಕ್ಕೆ ಸರಿಯಾಗಿ ಅರ್ಥೈಸುವುದು ಕಷ್ಟ. ಅದು ಕಾಳಾಮುಖಶೈವರನ್ನು ಸೂಚಿಸಬಹುದು ಎಂಬ ಆಕ್ಷೇಪಣೆಗೆ ಅವಕಾಶವಿದೆ. ಬ್ರಹ್ಮಶಿವನು ತನ್ನ ಗ್ರಂಥದಲ್ಲಿ ಕಾಳಾಮುಖರನ್ನು ಹೆಸರಿಸಿದ್ದಾನೆ.[17] ಅಲ್ಲಿ ಅವನು ಕಾಳಾಮುಖ, ಕಾಪಾಲಿಕ, ಪಾಶುಪತ ಮತ್ತು ಶೈವರನ್ನು ಹೆಸರಿಸಿ ಅವರಲ್ಲಿ ಒಬ್ಬನಾದ 'ಮಹಾಬ್ರತಿಗೊರವ'ನು ಮಾತ್ರ 'ರುದ್ರ ಮಾರ್ಗ'ದಲ್ಲಿ ನಡೆಯುವನೆಂದು ಹೇಳುತ್ತಾನೆ. ರುದ್ರಮಾರ್ಗದಲ್ಲಿ ನಡೆಯುವ ವ್ಯಕ್ತಿ ಕಾಪಾಲಿ ಎಂಬುದರಲ್ಲಿ ಸಂದೇಹವಿಲ್ಲ. 'ಮಹಾವ್ರತಿ' ಎಂದರೆ ಕಾಪಾಲಿಕ ಎಂದರ್ಥ.[18] ಬ್ರಹ್ಮಶಿವನ ಪ್ರಕಾರ ಕಾಳಾಮುಖರದು 'ರುದ್ರಮಾರ್ಗ'ವಲ್ಲ, ಸಾತ್ವಿಕ

---

16 ಎಕ್ಕಲದೇವಿಗೆ ಮಾಮಾ | ಲಕ್ಕನಿಗಂ ಬನದ ಬಳರಿಗಂ ಮೈಲಾರಂ
ಗಳ್ಕದೆ ಜಾತ್ರೆಯ ಮಾಳ್ಪಂ | ಮೊಕ್ಕಳಗಂ ಜೈನನಲ್ಲನಾತಂ* ಕಾಳಂ* || (೪.೧೩)
(* * ಕೌಳಂ)

ನಾವು ಮೇಲೆ ನಿರ್ದೇಶಿಸಿದ ಪ್ರತಿಗಳಲ್ಲೆಲ್ಲ 'ಕೌಳಂ' ಎಂದೇ ಇದೆ.

17 ಕ್ರಮದಿಂ ವರ್ತಿಸುವಾ ಕಾ | ಳಮುಖಾಖ್ಯ ಕಪಾಳಿ ಪಾಶುಪತ ಶೈವರೊಳೋ |
ರ್ವ ಮಹಾಬ್ರತಿಗೊರವಂ ರು | ದ್ರ ಮಾರ್ಗದಿಂ ನಡೆವರು (ನು)ಳಿದ ಮೂವರ್
ನಡೆಯರ್ || (೧೪-೫೦)

18. Journal of the Bombay Branch of the Royal Asiatic Society, XIV, p. 26—ಏಳನೇ ಶತಮಾನದ ಚಾಳುಕ್ಯರ ಈ ತಾಮ್ರಪಟದಲ್ಲಿ ಕಾಪಾಲೇಶ್ವರನ ಗುಗ್ಗುಲ ಪೂಜೆ ಇತ್ಯಾದಿಗಳಿಗೂ ಆ ದೇವಸ್ಥಾನದಲ್ಲಿ ಪಾಸಿಸುತ್ತಿದ್ದ 'ಮಹಾವ್ರತಿ'ಗಳ ಉಪಭೋಗಕ್ಕೂ ದತ್ತಿಗಳನ್ನು ಕೊಟ್ಟ ವಿಷಯವಿದೆ. 'ಮಹಾವ್ರತಿ'ಗಳೆಂದರೆ ಕಾಪಾಲಿಕರು ಎಂಬುದು ಸ್ಪಷ್ಟ.

ಕಾಪಾಲಿಕರು ಕರ್ಣಾಟಕದಲ್ಲಿದ್ದರೆಂಬುದಕ್ಕೆ ಇನ್ನೂ ಹಲವು ಆಧಾರಗಳಿವೆ. ಕಾಪಾಲಿಕರ ಕೆಲವು ಆಚರಣೆಗಳನ್ನು ಅಲ್ಲಮ ಖಂಡಿಸಿದ್ದಾನೆ (ಅಲ್ಲಮನ ವಚನ ಚಂದ್ರಿಕೆ, ಸಂ. ಎಲ್. ಬಸವರಾಜು, ಪು. ೧೫೮). ಕ್ರಿ. ಶ. ೧೧೪೮ರ ಒಂದು ಶಾಸನದಲ್ಲಿ 'ಮಹಾವ್ರತಿ'ಗಳ ಉಲ್ಲೇಖವಿದೆ. (Karnatak Inscriptions, I, 24). 'ಕಾವಾಳಿಗ ಭಟಾರ'ಎಂಬ ಸನ್ಯಾಸಿಯ ಹೆಸರು ಒಂದು ಶಾಸನದಲ್ಲಿದೆ (Epigraphia Carnatica, XI. cd. 24, c. 500 A. D). ಇದನ್ನು ಸಂಸ್ಕೃತಕ್ಕೆ ತಿರುಗಿಸಿದರೆ 'ಕಾಪಾಲಿಕ ಭಟ್ಟಾರಕ' ಎಂದಾಗುತ್ತದೆ.

ಕೌಲರಂತೆಯೇ ಕಾಪಾಲಿಕರದೂ ವಾಮಾಚಾರದ ಪಂಥವೇ. ತಲೆಯ ಬುರುಡೆಯಲ್ಲಿ ಆಹಾರವನ್ನು ಸ್ವೀಕರಿಸುವುದು, ನರಕಪಾಲಗಳನ್ನೂ ಅಸ್ಥಿಗಳನ್ನೂ ಧರಿಸುವುದು—ಇವು ಕಾಪಾಲಿಕರ ಚಿಹ್ನೆಗಳಲ್ಲಿ ಕೆಲವು. ಅವರು ಅರ್ಚಿಸುವುದು ಕಾಪಾಲಿಕನಾದ ಶಿವನನ್ನು. ಹೀಗೆ ಕೌಲರು ಶಾಕ್ತರಾದರೆ ಕಾಪಾಲಿಕರು ಶೈವರು.

ಮಾರ್ಗ. ಈ ಅಭಿಪ್ರಾಯವನ್ನು ಕಾವ್ಯಾಧಾರಗಳೂ, ಶಾಸನಾಧಾರಗಳೂ ಪೋಷಿಸುತ್ತವೆ. (ಇದರ ವಿವರಣೆ ಇಲ್ಲಿ ಅನಗತ್ಯ.) ಬ್ರಹ್ಮಶಿವನು ಕೌಳಿಗುರುಗಳನ್ನು ಖಂಡಿಸಿದಷ್ಟು ಉಗ್ರವಾಗಿ ಕಾಳಾಮುಖರನ್ನು ಖಂಡಿಸಿಲ್ಲ. ಆದ್ದರಿಂದ ಬೇರೆ ಬೇರೆ ಕ್ಷುದ್ರ ದೇವತೆಗಳಿಗೆ ಜಾತ್ರೆಯನ್ನು ಮಾಡುವ ಜೈನನನ್ನು ನಿಂದಿಸುವಾಗ, ಅಂತಹ ಜೈನನು ನಿಜವಾದ ಜೈನನಲ್ಲ, 'ಕೌಳ'ನೇ ಸರಿ ಎಂದು ನಿಂದಿಸುವುದರಲ್ಲಿ ಔಚಿತ್ಯವಿದೆ; ತಪ್ಪು ಮಾರ್ಗದಲ್ಲಿ ನಡೆಯುತ್ತಿರುವ ಜೈನರನ್ನು ಕೌಳರಿಗೆ ಹೋಲಿಸದಿದ್ದರೆ ಹರಿತವಾದ ನಾಲಗೆಯುಳ್ಳ ಬ್ರಹ್ಮಶಿವನಿಗೆ ಸಮಾಧಾನವಾದರೂ ಹೇಗೆ ಬಂದೀತು?

ಇಲ್ಲಿಯವರೆಗೆ ನಾವು ಕೌಳರನ್ನು ನೋಡಿದ್ದು ಕೌಳೇತರರ ಖಂಡನೆಯ ದೃಷ್ಟಿಯಿಂದ. ಅವರ ಪ್ರಕಾರ ಕೌಳರು ಹೀನಾಭ್ಯಾಸಗಳ, ಸ್ವಚ್ಛಂದವೃತ್ತಿಯ ಭೋಗಾಪೇಕ್ಷಿಗಳು; ಅವರಿಗೆ ಹಿರಿಯ ಆದರ್ಶವೇನೂ ಇಲ್ಲ. ಇದು ಕೌಳಮತದ ಒಂದು ಮುಖವಾಯಿತು. ಈ ಮುಖವನ್ನು ದರ್ಶಿಸಿದ ನಮಗೆ ದಿಗ್ಭ್ರಮೆಯಾಗುತ್ತದೆ, "ಇದೇನು! ಧರ್ಮದ ಹೆಸರಿನಲ್ಲಿ ಈ ಅತ್ಯಾಚಾರ, ಅನಾಚಾರಗಳು" ಎಂದು. ಪುಣ್ಯವಶಾತ್ ಕೌಳಮತಕ್ಕೆ ಇನ್ನೊಂದು ಮುಖವಿದೆ. ಅದನ್ನು ದರ್ಶಿಸದಿದ್ದರೆ ಕೌಳಮತಕ್ಕೂ ನೂರಾರು ತಂತ್ರಗ್ರಂಥಗಳಿಗೂ ಅಪಚಾರವನ್ನು ಎಸಗಿದಂತಾಗುತ್ತದೆ. ಕೌಲಯೋಗಿಗಳನ್ನು ಎಲ್ಲರೂ ಹಾಸ್ಯಮಾಡುತ್ತಾರೆ, ನಿಂದಿಸುತ್ತಾರೆ, ದೂರವಿಡುತ್ತಾರೆ ಎಂಬ ಅಂಶವನ್ನು ಕೌಲತಂತ್ರಗಳೇ ಗಮನಿಸಿವೆ.[19] ಅದರ ಜೊತೆಗೆ ಕೌಲಸಾಧನೆಯು ಸಾಮಾನ್ಯನಿಗಲ್ಲವೆಂದೂ, ಅದು ಕತ್ತಿಯ ಮೊನೆಯ ಮೇಲೆ ನಡೆಯುವುದಕ್ಕಿಂತ ಕಠಿನವೆಂದೂ ಹೇಳುತ್ತವೆ.[20] ಕುಲಾರ್ಣವ ತಂತ್ರದ ಪ್ರಕಾರ ವೈದಿಕಾಚಾರ, ವೈಷ್ಣವಾಚಾರ, ಶೈವಾಚಾರ, ದಕ್ಷಿಣಾಚಾರ, ವಾಮಾಚಾರ ಮತ್ತು ಸಿದ್ಧಾಂತಾಚಾರಗಳಿಗಿಂತ ಕುಲಾಚಾರವು ಶ್ರೇಷ್ಠ.[21] ಕೌಲೋಪಾಸನೆಯ ಗುರಿ 'ಬ್ರಹ್ಮಸಾಯುಜ್ಯ'. ಇದನ್ನು ಪಡೆಯಲು ತಂತ್ರೋಕ್ತ ಮಾರ್ಗವೇ ಶ್ರೇಷ್ಠ. ಯಾವನು ಸಂಯಮಿಯೂ ಶುದ್ಧಹೃದಯನೂ ಶಾಸ್ತ್ರಜ್ಞನೂ ಆಗಿರುವನೋ ಅವನೇ ಕೌಲನಾಗಲು ಅರ್ಹ. ಕೌಲಪೂಜೆಗೆ ಅತ್ಯವಶ್ಯವಾಗಿ ಐದು ವಸ್ತುಗಳು ('ಪಂಚತತ್ವ'ಗಳು) ಬೇಕು—ಮದ್ಯ, ಮಾಂಸ, ಮತ್ಸ್ಯ, ಮುದ್ರಾ, ಮೈಥುನ. ಮತ್ಸ್ಯ, ಮಾಂಸ, ಮದ್ಯಗಳನ್ನು ಪೂಜೆಯ ಸಮಯದಲ್ಲಿ ಸಾಧಕನು ದೇವಿಗೆ ಅರ್ಪಿಸಿ ತಾನೂ ಸ್ವೀಕರಿಸುವನು. ಸ್ತ್ರೀಯೊಬ್ಬಳು—ಅವಳು ಸಾಧಕನ ಹೆಂಡತಿಯೇ ಆಗಿರಬೇಕೆಂದು ಮಹಾರ್ಣವತಂತ್ರವು ವಿಧಿಸುತ್ತದೆ—ಉಪಾಸನೆಯ ಸಮಯದಲ್ಲಿ 'ದೇವಿ'ಯ ಸ್ಥಾನದಲ್ಲಿ ಕುಳಿತಿರುತ್ತಾಳೆ. ಹೀಗೆ ಭೋಗವಸ್ತುಗಳ

19 ಕುಲಾರ್ಣವತಂತ್ರ (ಮುನ್ನುಡಿ. ಆರ್ಥರ್ ಅವಲೋನ್), ಪು. ೭.

20 ಕುಲಚೂಡಾಮಣಿತಂತ್ರ (ಮುನ್ನುಡಿ. ಎ. ಕೆ. ಮೈತ್ರ), ಪು. ೩.

21 ಅದೇ, ಪು, ೨.

ಮಧ್ಯೆ ಸಾಧನೆ ನಡೆಯುವುದಲ್ಲಾ, ಮದ್ಯ, ಮಾಂಸ, ಸ್ತ್ರೀ ಇತ್ಯಾದಿಗಳು ವ್ಯಕ್ತಿಯ ಅಧಃಪತನಕ್ಕೆ ಕಾರಣವಾಗುವುದಿಲ್ಲವೇ—ಎಂದು ಆಕ್ಷೇಪಣೆ ಎತ್ತಿದರೆ ಅದಕ್ಕೆ ತಂತ್ರಗಳು ಹೀಗೆ ಉತ್ತರ ಕೊಡುತ್ತವೆ. ವಿಷಕ್ಕೆ ವಿಷವೇ ಔಷಧ. ಆದರೆ ಔಷಧರೂಪವಾಗಿ ವಿಷವನ್ನು ಕೊಡುವ ವೈದ್ಯನು ಮಾತ್ರ ಎಚ್ಚರದಿಂದಿರಬೇಕು. ಹಾಗೆಯೇ ಅಧಃಪತನಕ್ಕೆ ಕಾರಣವಾಗುವ ವಸ್ತುಗಳೇ ಅಧಃಪತನವನ್ನು ತಡೆಯಲು ಸಾಧಕನನ್ನು ಮೇಲೆತ್ತಲು ಸಹಾಯಕವಾಗುತ್ತವೆ. ಸಾಧಕನ ಗುರುವು ಮಾತ್ರ ಮಹಾಪ್ರಾಜ್ಞನಿರಬೇಕು.[22] ಸಾಮಾನ್ಯವಾಗಿ ಭೋಗವಿದ್ದೆಡೆ ಯೋಗವಿಲ್ಲ, ಯೋಗವಿದ್ದೆಡೆ ಭೋಗವಿಲ್ಲ. ಆದರೆ ಕೌಲರು ಎರಡನ್ನೂ ಅನುಭವಿಸುತ್ತಾರೆ.[23] ಪ್ರಸಿದ್ಧ ತಂತ್ರವೊಂದು 'ವೀರ'ನನ್ನು ಹೀಗೆ ವಿವರಿಸುತ್ತದೆ—"ಜಿತೇಂದ್ರಿಯಃ ಸತ್ಯವಾದೀ ನಿತ್ಯಾನುಷ್ಠಾನತತ್ಪರಃ ಕಾಮಾದಿ ಬಲಿದಾನಶ್ಚ ಸ ವೀರ ಇತಿ ಗೀಯತೇ." ಆದ್ದರಿಂದ ಕೌಲೋಪಾಸಕನಾಗಲು ಅಸಾಮಾನ್ಯವಾದ ಸಂಯಮವು ಅಗತ್ಯ. ಈ ಮಾರ್ಗವು ಅಪಾಯಗಳಿಂದ ತುಂಬಿದ್ದೆಂದೂ ಸಾಮಾನ್ಯರಿಗೆ ('ಪಶು') ಇದು ಅಲ್ಲವೆಂದೂ ತಂತ್ರಗಳು ಒತ್ತಿ ಹೇಳುತ್ತವೆ. ಕೌಲರಲ್ಲಿ ಜಾತಿಭೇದವಿಲ್ಲ. ಯಾರು ಬೇಕಾದರೂ ಸಾಧಕರಾಗಬಹುದು.[24]

ಪ್ರಾಚೀನ ಕರ್ಣಾಟಕದಲ್ಲಿ ಕೌಲಮಾರ್ಗದಲ್ಲಿ ನಡೆಯುತ್ತಿದ್ದ ಕೆಲವು ಸಾಧಕರು ಅದರ ನಿಜವಾದ ಮರ್ಮವನ್ನರಿಯದೆಯೋ ಅಥವಾ ಸಂಯಮಿಗಳಾಗದೆ ಇದ್ದುದರಿಂದಲೋ ಬೀಭತ್ಸ ಕೃತ್ಯಗಳಲ್ಲಿಯೇ ತೃಪ್ತರಾಗಿದ್ದಿರಲೂ ಸಾಧ್ಯ; ಅಥವಾ ಹೊರಗೆ ನಿಂತು ನೋಡಿದ ಕೌಲೇತರರಿಗೆ ಕೌಲರ ಔಪಾಸನ ಮಾರ್ಗವು ಮಾತ್ರ ಪ್ರಧಾನವಾಗಿ ಕಂಡುಬಂದು ಅವರಲ್ಲಿ ಜುಗುಪ್ಸೆಯನ್ನು ಹುಟ್ಟಿಸಿರಲೂ ಸಾಧ್ಯ. ಕೌಲಮತದ ಮಾರ್ಗವೇನೇ ಇರಲಿ, ಉದ್ದೇಶವು ಮಾತ್ರ ಮಹೋನ್ನತವಾದುದೆಂಬುದನ್ನು ನಾವು ಮರೆಯಬಾರದು. ಕಳೆದ ಶತಮಾನದಲ್ಲಿ ತಾನೆ ಶ್ರೀರಾಮಕೃಷ್ಣ ಪರಮಹಂಸರು ತಂತ್ರೋಕ್ತವಾದ ಮಾರ್ಗದಲ್ಲಿ ನಡೆದು ಸಿದ್ಧಿಯನ್ನು ಪಡೆದ ವಿಷಯವು ಸುಪ್ರಸಿದ್ಧವಾದುದಾಗಿದೆ.[25]

—ಎಂ. ಚಿದಾನಂದಮೂರ್ತಿ

---

[22] Tantra of the Great Liberation—'ಮಹಾನಿರ್ವಾಣತಂತ್ರ' (ಮುನ್ನುಡಿ. ಆರ್ಥರ್ ಅವಲೋನ್), ಪು. *c* xvi.

[23] ಅದೇ, ಪು. ೫೦.

[24] Authur Avalon: Introduction to Tantrasāstra, p. 75.

[25] ನೋಡಿ–ಶ್ರೀ ರಾಮಕೃಷ್ಣಲೀಲಾ ಪ್ರಸಂಗ (ಅನು. ಸ್ವಾಮಿ ಪ್ರಣವೇಶಾನಂದಜೀ)

‘ ಸೂಕ್ತಿಸುಧಾರ್ಣವ’ದ ಒಂದು ಪದ್ಯ

ಮಲ್ಲಿಕಾರ್ಜುನ ಕವೀಶ್ವರನ “ ಸೂಕ್ತಿಸುಧಾರ್ಣ”ವ ಸಂಕಲನ ಗ್ರಂಥದ ಚಂದ್ರೋದಯ ವರ್ಣನೆಯ ಅಧ್ಯಾಯದಲ್ಲಿ ಒಂದು ಪದ್ಯ ಹೀಗಿದೆ:—

> ಅನುವಿಪ ತಾಯ ಮನ್ನಿಸುವ ತಂದೆಯ ಕಾಯ್ಪಿನೊಳಿಕ್ಕೆಗುಟ್ಟುವ
> ಕ್ಕನ ಪದಪೆತ್ತಿ ಬೈವ ಕಿಱುದಂಗಿಯ ಕಣ್ಣೊಳೆ ಕೀಱಿ ಕಲ್ಪಿಪ
> ಣ್ಣನ ಬಿಯವಿಲ್ಲದವ್ವಳಿಪ ತಮ್ಮನ ನೆತ್ತಿಗೆ ಮೆಯ್ಯನೊಡ್ಡಿ ನಿ
> ನ್ನನೆ ಪಿಡಿದಿರ್ದ ನಲ್ಮೆಗಿದು ತಕ್ಕುದೆ ನಲ್ಮೆಗೆ ದೋಷಮಾಗದೇ ॥
>
> (ಪುಟ ೧೯೪, ಪದ್ಯ ೩೪೯)

“ ಸೂಕ್ತಿ ಸುಧಾರ್ಣ”ವದ ಸಂಪಾದಕರು ಈ ಪದ್ಯ ಯಾವ ಕವಿಯ, ಯಾವ ಗ್ರಂಥಕ್ಕೆ ಸೇರಿದುದೆಂಬುದನ್ನು ತಿಳಿಸಿಲ್ಲ.

ಪದ್ಯದ ಅರ್ಥ ಅಷ್ಟು ಸ್ಫುಟವಾಗಿಲ್ಲವಾದರೂ ಪ್ರಣಯಿಗಳ ಆಟ-ಕೂಟಗಳ ವರ್ಣನೆಯ ಸಂನಿವೇಶಕ್ಕೆ ಸೇರಿರುವ ಪದ್ಯವಿದೆಂದು ಊಹಿಸಬಹುದು. ಯಾವುದೋ ತಪ್ಪುಮಾಡಿದ ಪ್ರಿಯ (ಪ್ರಿಯೆ?)ನನ್ನು ‘ ಹೀಗೆ ತಪ್ಪುಮಾಡುವುದು ಸರಿಯೆ ? ’ ಎಂಬ ಪ್ರಶ್ನೆಯೊಡನೆ ಪದ್ಯ ಮುಗಿದಿದೆ. ವಿರೋಧಿಸುವ (ಅನುವಿಪ) ತಾಯಿ, ಕ್ಷಮಿಸುವ ತಂದೆ, ಕೋಪದಿಂದ ಎತ್ತಿಕುಟ್ಟುವ ಅಕ್ಕ, ವಿಲಾಸವನ್ನು ಎತ್ತಿ ನಿಂದಿಸುವ ಚಿಕ್ಕತಂಗಿ, ಕಣ್ಣಿನಿಂದಲೇ ರೇಗಿ ಕಲಿಸುವ ಅಣ್ಣ, ವೆಚ್ಚವಿಲ್ಲದೆ ಅಪ್ಪಳಿಸುವ ತಮ್ಮ–ಇವರ ನೆತ್ತಿಗಾಗಿ (?) ಮೈಯ್ಯೊಡ್ಡಿ ನಿನ್ನನ್ನೇ ಹಿಡಿದಿದ್ದ ನನ್ನ ಪ್ರೀತಿಗೆ ಇದು ಉಚಿತವೇ ? ನಲ್ಮೆಗೆ ಇದು ದೋಷವಾಗದೇ ?–ಎಂಬುದು ಪದ್ಯದ ಸಾರ. ಇಲ್ಲಿನ ಅರ್ಥದ ಅಸ್ಪಷ್ಟತೆಗೆ....“ ಬಿಯವಿಲ್ಲದವ್ವಳಿಪ ತಮ್ಮನ ನೆತ್ತಿಗೆ ಮೆಯ್ಯನೊಡ್ಡಿ....” ಎಂಬ ಸಾಲು ಕಾರಣವಾಗಿದೆ.

ಆದರೆ ವಾಸ್ತವವಾಗಿ ಇದು ಪೊನ್ನನ ಪದ್ಯ. ಅವನ “ಶಾಂತಿನಾಥಪುರಾಣ” ದಲ್ಲಿ ಈ ಪದ್ಯವಿದೆ (೮–೧೦೫). “ ಪೆಱತೊಂದು ತಾಣದೊಳವಚಱಮಾದ ಪಟಿವೇಟದಿನಿಲ್ಲದ ದೋಷಮನಿ(ಲ್ಲ)ಟ್ಟಲ್ಲಣಿಗೆ ಮುಳಿಸಂ ಮುಳಿದೊಲ್ಲದೆ ಪೋಪನ ನೆರಡಿಲ್ಲದೆ ನಲ್ಲಳ್ ಪಿಡಿದು ನಿಂದು,

> ಅನುವಿಪ ತಾಯ **ಬಾರಿಸುವ** ತಂದೆಯ ಕಾಯ್ಪಿನೊಳಿಕ್ಕೆಗುಟ್ಟುವ
> ಕ್ಕನ ಪಡಪೆತ್ತಿ ಬಯ್ವ ಕಿಱುದಂಗೆಯ ಕಣ್ಣೊಳೆ ಕೀಱಿ ಕಲ್ಪಿಪ
> ಣ್ಣನ **ಬಿಯಕಿಲ್ಲದವ್ವ**ಳಿಪ ತಮ್ಮನ **ತೀನಿಗೆ** ಮೆಯ್ಯನೊಡ್ಡಿ ನಿ
> ನ್ನನೆ ಪಿಡಿದೆನ್ನ ನಲ್ಮೆಗಿದೆ ತಕ್ಕುದೆ ನಲ್ಮೆಗೆ ದೋಷಮಾಗದೇ ॥

ಎಂದು ತನ್ನ ಸದ್ಭಾವಮನೆ ನುಡಿದು ಕಣ್ಣನೀರ ಕಾಟ್ಪುರದಿನೊಳಗುಮಾಡಿ ನಿಱಿಸಿದಳ್–”

[ಮದ್ರಾಸ್ ಮುದ್ರಣ, ಪುಟ ೧೭೮.]

ಈಗ "ಸೂಕ್ತಿಸುಧಾರ್ಣವ"ದಲ್ಲಿ ಉದಾಹರಿಸಿರುವ ಪದ್ಯಕ್ಕೂ ಇದಕ್ಕೂ ಹೋಲಿಸಿ ನೋಡಿದರೆ ಎರಡಕ್ಕೂ ಇರುವ ವ್ಯತ್ಯಾಸಗಳು ಸ್ಪಷ್ಟವಾಗುತ್ತವೆ, ಮತ್ತು ಪದ್ಯದ ಅರ್ಥ ಹೆಚ್ಚು ಸ್ಪಷ್ಟವಾಗಿ ಸಂದೇಹದ ಕತ್ತಲೆ ಮಾಯವಾಗುತ್ತದೆ. (ಆ ಸೂಳೆಗೇರಿಯಲ್ಲಿ ಒಂದು ಕಡೆ) ಜುಗುಪ್ಸೆಗೊಂಡ (ಅವಚಱು) ಹಳೆಯ ರತಿಕೂಟದಲ್ಲಿ ಇಲ್ಲದ ದೋಷವನ್ನು ಇಟ್ಟು ಕೂಟಕ್ಕೆ ಮುಳಿಸು ತೋರಿ, ಬೇಡವೆಂದು ನಿರಾಕರಿಸಿ ಹೋಗುವವನನ್ನು ಏಕಭಾವದಿಂದ ನಲ್ಲಳು ಹಿಡಿದು ನಿಲ್ಲಿಸಿಕೊಂಡು, 'ಆತಂಕಪಡಿಸುವ ತಾಯಿ, ಅಡ್ಡಿಪಡಿಸುವ ತಂದೆ, ಕೋಪದಿಂದ ಎತ್ತಿಹಾಕುವ ಅಕ್ಕ, ಒನಪನ್ನು ಎತ್ತಿ ನಿಂದಿಸುವ ಚಿಕ್ಕತಂಗಿ, ಕಣ್ಣಿನಿಂದಲೇ ರೇಗಿ ಕಲಿಸುವ ಅಣ್ಣ, ವೆಚ್ಚಕ್ಕೆ ಇಲ್ಲದೆ ರೇಗಿ ಬೀಳುವ ತಮ್ಮ, ಇವರೆಲ್ಲರ ಕಡಿತಕ್ಕಾಗಿ ನನ್ನ ದೇಹವನ್ನೊಡ್ಡಿ ನಿನ್ನನ್ನೇ ಅವಲಂಬಿಸಿಹ ನನ್ನ ಪ್ರಣಯಕ್ಕೆ ಈಗ ನೀನು ಬಿಟ್ಟುಹೋಗುತ್ತಿರುವುದು ಸರಿಯೆ ? ಪ್ರೀತಿಯ ರೀತಿಗೆ ಇದು ದೋಷವಾಗುವುದಿಲ್ಲವೆ ?'–ಎಂದು ತನ್ನ ಸದ್ಭಾವವನ್ನು ನುಡಿದು ಕಣ್ಣೀರ ಪ್ರವಾಹದಿಂದ ಅವನನ್ನು ಒಪ್ಪಿಸಿ ನಿಲ್ಲಿಸಿದಳು.

'ಅನುವಿಪ' ಎಂಬ ಪದ ಸ್ವಾರಸ್ಯವಾಗಿದೆ. 'ಇಸು' ಪ್ರತ್ಯಯದಿಂದ ಕೂಡಿದ 'ಅನುವಿಸು' ಎಂಬ ಪದವೇ 'ಅನುವಿಪ' ಪದಕ್ಕೆ ಮೂಲಧಾತು. ಕೇಶಿರಾಜನು ಕೊಟ್ಟಿರುವ ಧಾತುಪ್ರಕರಣದಲ್ಲಿ 'ಅನುವಿಸು' ಪದವಿಲ್ಲ; ಇಂಥ ಇನ್ನೂ ಹಲವು ಪದಗಳು ಅಲ್ಲಿಲ್ಲ. ಅಸಮಗ್ರವಾದ ಆ ಪಟ್ಟಿಯಲ್ಲಿ ಈ ಪದವನ್ನೂ ಸೇರಿಸಿಕೊಳ್ಳಬೇಕು. 'ಅನುವಿಸು' ಪದದ ಭೂತಕಾಲ ಸೂಚಕ ಪದವೇ 'ಅನುವಿಪ'ವಾದರೂ, ಇದರ ಅರ್ಥ ಅಷ್ಟು ಖಚಿತವಾಗಿ ತಿಳಿದಿಲ್ಲ. ಪಂಪನ 'ಆದಿಪುರಾಣ'ದಲ್ಲಿ ೯–೧೦೬, ೧೨–೪೧ರಲ್ಲೂ ; 'ವಿಕ್ರಮಾರ್ಜುನ ವಿಜಯ'ದಲ್ಲಿ, ೪–೧೦೩, ೪–೧೦೬ರಲ್ಲೂ 'ಅನುವಿಸು' ಪದದ ಪ್ರಯೋಗವನ್ನು ಕಾಣಬಹುದು. 'ಪಂಪರಾಮಾಯಣ' (೫–೧೩೩)ವೇ ಮೊದಲಾದ ಇತರ ಕಾವ್ಯಗಳಲ್ಲೂ ಕ್ವಚಿತ್ತಾಗಿ 'ಅನುವಿಸು' ಪದದ ಪ್ರಯೋಗ ಸಿಗುತ್ತದೆ. ಆದರೆ ಇಲ್ಲೆಲ್ಲಾ ಒಂದಕ್ಕೊಂದು ವಿರುದ್ಧಾರ್ಥವೇ ಕಾಣುವುದರಿಂದ ಈ ಪದಕ್ಕೆ ಎರಡಕ್ಕಿಂತಲೂ ಹೆಚ್ಚು ಅರ್ಥವಿದ್ದಂತೆ ಕಾಣುತ್ತದೆ; ಉದಾಹರಣೆಗೆ, 'ಅನುಸರಿಸು, ಅನುಕರಿಸು, ವಿರೋಧಿಸು, ವಿನಯದಿಂದ ಬೇಡು' ಇತ್ಯಾದಿ. ಆದುದರಿಂದ ಪೊನ್ನನ ಪದ್ಯದಲ್ಲಿ ಸದ್ಯಕ್ಕೆ, 'ಅನುವಿಪ' ಪದಕ್ಕೆ "ವಿರೋಧಿಸುವ, ಅಡ್ಡಿ–ಆತಂಕಪಡಿಸುವ" ಎಂಬ ಸಂದರ್ಭಕ್ಕೆ ಹೊಂದಿಕೊಳ್ಳುವ ಅರ್ಥವನ್ನು ಇಟ್ಟುಕೊಳ್ಳಬಹುದು. ಅಲ್ಲದೆ ಪದ್ಯದ ತುಂಬ ವಿರೋಧಾರ್ಥದ ಪದಗಳೇ ಬಂದಿವೆ.

'ತೀನಿಗೆ' ಎಂಬ ಪದವೂ ವಿಚಾರಣೀಯವಾಗಿದೆ. 'ತೀನ್' ಎಂಬ ಪದ ಧಾತು. ಪಂಪಭಾರತದ ೨–೮೧, ೧೦–೪೨, ೧೨–೧೩೫ರಲ್ಲಿ 'ತೀನ್' ಪದದ ಪ್ರಯೋಗವನ್ನು ಕಾಣಬಹುದು. ಇದಕ್ಕೆ ಚತುರ್ಥಿಯ 'ಗೆ' ಪ್ರತ್ಯಯ ಹಚ್ಚಿ 'ತೀನಿಗೆ' ಪದವನ್ನು ಪೊನ್ನನು ಪ್ರಯೋಗಿಸಿದ್ದಾನೆ. ಆದರೆ ಸಾಮಾನ್ಯವಾಗಿ

ಕಾವ್ಯಾವಲೋಕನ

ಮಹಿಳೆಯರ ಅಲಂಕಾರ: ಲೇಖಕರು: ಶ್ರೀಮತಿ ಶಾಂತಾದೇವಿ ಮಾಳವಾಡ; ಪ್ರಕಾಶಕರು: ಜಿ. ಕೆ. ಅಂಡ್ ಬ್ರದರ್ಸ್, ಬಸವನಗುಡಿ, ಬೆಂಗಳೂರು ೪; ಕಿರೀಟ ಅಷ್ಟದಳ; ಪುಟ ೧೧೯; ಬೆಲೆ: ರೂ. ೩.

ಮಹಿಳೆಯರ ಅಲಂಕಾರ ಎಂಬ ಗ್ರಂಥವು ಸ್ತ್ರೀಯರ ವಸ್ತ್ರಾಭರಣಗಳ ಸಿಂಗರವನ್ನೂ, ಕೇಶಾಲಂಕಾರವನ್ನೂ ಕುರಿತ ಗ್ರಂಥ. ಈ ದಿಸೆಯಲ್ಲಿ ಬಂದ, ಬರುತ್ತಿರುವ ಲೇಖನಗಳನ್ನು ಬಿಟ್ಟರೆ ತಕ್ಕಮಟ್ಟಿಗೆ ವಿಸ್ತಾರವಾಗಿ ರಚಿತವಾದ ಗ್ರಂಥ ಕನ್ನಡದಲ್ಲಿ ಇದೇ ಮೊದಲು. ಸಿಂಗರದಾಸೆ ಹೆಂಗಸರಿಗೆ ಮಿಗಿಲು ಎಂಬ ಮಾತಿನಂತೆ ಶ್ರೀಮತಿ ಶಾಂತಾದೇವಿಯವರು ತುಂಬ ಉತ್ಸಾಹದಿಂದ ನಾನಾ ಬಗೆಯ ಅಲಂಕಾರಗಳನ್ನು ವರ್ಣಿಸಿ ವರ್ಣಿಸಿ ತಣಿಯುದಿದ್ದಾರೆ.

ಕೇಶಾಲಂಕಾರ, ಆಭರಣಗಳ ಅಂದ ಮತ್ತು ಸೀರೆಯ ಸೊಬಗು ಎಂಬುದಾಗಿ ಲೇಖಕಿಯರು ಗ್ರಂಥದಲ್ಲಿ ಮೂರು ಮುಖ್ಯ ವಿಭಾಗಗಳನ್ನು ಮಾಡಿಕೊಂಡಿದ್ದಾರೆ.

ಕನ್ನಡ ನಾಡಿನ ಶಿಲ್ಪಕಲೆಯನ್ನೂ ಅಜಂತಾದ ಭಿತ್ತಿ ಚಿತ್ರಗಳನ್ನೂ ಆಭರಣಗಳು ಮತ್ತು ಅಲಂಕಾರಗಳ ದೃಷ್ಟಿಯಿಂದ ವೀಕ್ಷಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ, ಜಾನಪದ ಗೀತೆಗಳಲ್ಲಿ ಬರುವ ವರ್ಣನೆಗಳನ್ನು ಈ ಕಲಾಕೃತಿಗಳೊಡನೆ ಹೋಲಿಸಿ ಸಮನ್ವಯಿಸುವ ಯತ್ನ ಮಾಡಿದ್ದಾರೆ. ಹಲವು ಆಧಾರಗ್ರಂಥಗಳನ್ನು ಅಭ್ಯಸಿಸಿ ತಮ್ಮ ಲೋಕಾನುಭವವನ್ನು ಮೇಳೈಸಿ ಐತಿಹಾಸಿಕ ದೃಷ್ಟಿಯಿಂದ ಅಲಂಕಾರಗಳ ವಿಕಾಸ ಮತ್ತು ಮಾರ್ಪಾಡುಗಳನ್ನು ಚರ್ಚಿಸಿದ್ದಾರೆ. ಶ್ರೀಮತಿ ಶಾಂತಾದೇವಿಯವರ ಈ ಎಲ್ಲ ಶ್ಲಾಘ್ಯವಾದ ಪ್ರಯತ್ನಗಳಿಂದಾಗಿ ಗ್ರಂಥ ಹೆಚ್ಚು ಆಳವೂ, ಮೌಲ್ಯವುಳ್ಳದ್ದೂ ಮತ್ತು ಉಪಯುಕ್ತವೂ ಆಗಿ ಪರಿಣಮಿಸಿದೆ.

ಕೇಶಾಲಂಕಾರಗಳನ್ನು ಕುರಿತ ವಿಭಾಗದಲ್ಲಿ ಕಾವ್ಯಗಳ ವರ್ಣನೆಯನ್ನೂ ಶಿಲ್ಪಕೃತಿಗಳಲ್ಲಿ ವ್ಯಕ್ತವಾಗುವ ಮಾದರಿಯನ್ನೂ ಹೊಂದಿಸುವ ಪ್ರಯತ್ನಮಾಡಿ ಒಟ್ಟಿನಲ್ಲಿ ಜಯಶೀಲರಾಗಿದ್ದಾರೆ. ಅವುಗಳನ್ನು ಮಾಡಿಕೊಳ್ಳುವ ವಿಧಾನವನ್ನೂ ವರ್ಣಿಸಿ ಅಂದವಾದ ಚಿತ್ರಗಳೊಡನೆ ಪ್ರಚಾರಮಾಡುವ ಅವರ ಯತ್ನ ಮೆಚ್ಚುವಂತಹುದು. ಆದರೆ ಈ ಅಧ್ಯಾಯದ ಹದಿಮೂರನೆಯ ಪುಟದಲ್ಲಿ ಅವರು ಕಾಣಿಸಿರುವ ಮೂರು ಸ್ಥೂಲ ವಿಭಾಗಗಳನ್ನು ವಿವರವಾಗಿ ಬಿಡಿಸಬಹುದಾಗಿತ್ತು. ಅಲ್ಲದೆ ಕಾವ್ಯಗಳ ಪಂಕ್ತಿಗಳಿಗೆ ಆಕರವನ್ನು ಸೂಚಿಸಿದ್ದರೆ ಗ್ರಂಥ ಹೆಚ್ಚು ವಿಶದವಾಗುತ್ತಿದ್ದಿತು.

ಆಭರಣಗಳನ್ನು ಕುರಿತ ಅಧ್ಯಾಯ ವಿವರಪೂರ್ಣವಾಗಿದೆ. ಅಲ್ಲಿನ ನಾನಾ ಆಭರಣಗಳ ಪರಿಚಯ ಚಿತ್ರದ ಸಹಾಯವಿಲ್ಲದೆ ಇಂದಿನ ಮಹಿಳೆಯರಿಗೆ ಆಗುವುದೇ

ಭಾಗವತಗ್ರಂಥದಲ್ಲಿಯೂ ಇದೆ. ಅಲ್ಲಿ ಬ್ರಹ್ಮ–ರುದ್ರ–ನಾರಾಯಣರು ರಜಸ್ತಮೋ ಸತ್ವಗುಣರೆಂಬುದನ್ನು ಸ್ಥಾಪಿಸಿ, ವಿಷ್ಣುಪಾರಮ್ಯವನ್ನು ನೆಲೆಗೊಳಿಸುವಂತಿದೆ. ಆದರೆ ಇಲ್ಲಿ ಅಂತಹ ಗುಣ ತಾರತಮ್ಯದ ಅನುಶೀಲನವಿಲ್ಲ. ಭೃಗು ಇತರ ಋಷಿಗಳ ಅಪೇಕ್ಷೆಯಂತೆ ತ್ರಿಮೂರ್ತಿಗಳನ್ನು ಪರೀಕ್ಷಿಸುವನು. ಬ್ರಹ್ಮನು ವಾಗ್ದೇವಿಯೊಡನೆ ಸರಸಸಲ್ಲಾಪದಲ್ಲಿದ್ದು ತಾನು ಬಂದುದನ್ನರಿಯದೆ–ಮನ್ನಿಸದೆ, ಇದ್ದುದರಿಂದ ಸಿಟ್ಟಾಗಿ "ಧರಣಿಯೊಳ್ ಪೂಜಾರ್ಹನಾಗದಿರು" ಎಂದು ಶಪಿಸುವನು. ಆ ಮೇಲೆ ಶಿವನನ್ನು ಕಾಣಲು ಕೈಲಾಸಕ್ಕೆ ತೆರಳಿದಾಗ "ಗಿರಿಜೆಯೊಡಗೂಡಿರುವ ಶಿವದರ್ಶನ ವಾಗದೈ" ಎಂದು ನಂದಿಕೇಶ್ವರನು ತಿಳಿಸಲು ಕೋಪಗೊಂಡು ಭೃಗುಮುನಿ ಆತನಿಗೆ ಅಂಗಪೂಜೆಯಿಲ್ಲದಂತಾಗಿ ಲಿಂಗಪೂಜೆ ಚಿರವಾಗಲೆಂದು ಶಪಿಸುವನು. ಮುಂದೆ ಅವನು ವೈಕುಂಠಕ್ಕೆ ಬಂದಾಗ, ಲಕ್ಷ್ಮಿಯೊಡನೆ ಸಂಭಾಷಣೆಯಲ್ಲಿದ್ದ ವಿಷ್ಣುವಿಗಾಗಿ ಕಾದು, ಸಾಕಾಗಿ, ತನ್ನ ಪಾದಾಕ್ಷಿಯಿಂದ ಆತನ ಎದೆಯನ್ನು ನೋಡುವನು. ಆಗ ವಿದ್ಯುತ್ಸಂಚರಿಸಿದಂತಾಗಲು, ವಿಷ್ಣು ಎದ್ದು ಬಂದು ಮಣಿದು, ಭೃಗುವನ್ನು ಸತ್ಕರಿಸಿ, ಆತನಿಗೆ ತಿಳಿಯದಂತೆ ಪಾದಾಕ್ಷಿಯನ್ನು ಕೀಳುವನು. ಭೃಗು "ದೇವ, ಧರಣಿಯೊಳ್ ನೀನಿರ್ದು ನಿತ್ಯ ಸೇವಾನಂದಮಂ ಭಕ್ತಸಂದಣಿಗೆ ಕುಡವೇಳ್ಕುಂ" ಎನಲು, ವಿಷ್ಣು ಅದಕ್ಕೊಪ್ಪುವನು. ಲಕ್ಷ್ಮೀದೇವಿ "ಪದ್ಮಾವತಿ" ಎಂಬ ಹೆಸರಿಂದ ಭೂಪುತ್ರಿಯಾಗಿ ಆಕಾಶರಾಜನಿಂದ ಪೋಷಿತಳಾಗಬೇಕೆಂದೂ ಯಶೋದಾದೇವಿ "ಬಕುಳಮಾಲೆ" ಎಂಬ ತಪಸ್ವಿನಿಯಾಗಬೇಕೆಂದೂ ತಾನು "ಶ್ರೀನಿವಾಸ" ಎಂಬ ಹೆಸರನ್ನು ತಾಳಿ ಶೇಷಾದ್ರಿಯಲ್ಲಿರಬೇಕೆಂದೂ ಸಂಕಲ್ಪಿಸುವನು. ಅದರಂತೆ ಶ್ರೀನಿವಾಸನು ಭೂಮಿಗೆ ಬಂದು ಶೇಷಗಿರಿಯ ಹುತ್ತವೊಂದರಲ್ಲಿರಲು, ಬ್ರಹ್ಮ–ಶಿವರು ಹಸು–ಕರುಗಳಾಗಿ ಹುತ್ತಕ್ಕೆ ಹಾಲು ಸುರಿಸುವರು. ಹಸುವಿನ ಒಡೆಯನಾದ ಚೋಳರಾಜನು ತನ್ನ ರಮನೆಯಲ್ಲಿ ಹಾಲೀಯದೆ ಹುತ್ತದಲ್ಲಿ ಹಾಲು ಸುರಿಸುವ ಆ ಹಸುವನ್ನು ವಧಿಸಲು ಆಜ್ಞಾಪಿಸುವನು. ಶ್ರೀನಿವಾಸನು ಆ ಆಘಾತವನ್ನು ತಪ್ಪಿಸಿ, ಚೋಳನನ್ನು ಶಪಿಸುವನು. ಆ ಮೇಲೆ ಬಕುಳೆಯೊಡನೆ ವಾಸಿಸುವನು.

ಇತ್ತ ಪದ್ಮಾವತಿ ವನವಿಹಾರದಲ್ಲಿರಲು, ನಾರದನು ವೃದ್ಧವಿಪ್ರಾಕಾರದಲ್ಲಿ ಬಂದು ಸಾಮುದ್ರಿಕ ಶಾಸ್ತ್ರದಿಂದ ಆಕೆ ಶ್ರೀನಿವಾಸನ ಮಡದಿಯಾಗುವಳೆಂದು ಹೇಳುವನು. ಶ್ರೀನಿವಾಸನ ಇಚ್ಛೆಯಂತೆ ಬಕುಳೆ ಕನ್ಯಾನಿಷ್ಕರ್ಷೆಗೆ ಹೊರಡುವಳು. ಶ್ರೀನಿವಾಸನು ಕೊರವಂಜಿಯಾಗಿ ಪದ್ಮಾವತಿಗೆ ಕಣಿ ಹೇಳಿ ಆಕೆಯನ್ನು ಹರ್ಷಗೊಳಿಸುವಳು. ಮುಂದೆ ಇವರ ವಿವಾಹವೇರ್ಪಡುವುದು. ಶ್ರೀನಿವಾಸನು ಪದ್ಮಾವತಿಗೆ ಹೃದಯದಲ್ಲಿ ಆಸರೆಯಿತ್ತು, ವೇಂಕಟಾದ್ರಿಯಲ್ಲಿ ಸ್ಥಿರವಾಗಿ, ಭಕ್ತರನ್ನು ಸಲಹುತ್ತಿರುವನು.

ಈ ಶ್ರೀನಿವಾಸ ಲೀಲೆಯನ್ನು ನೈಮಿಷಾರಣ್ಯದಲ್ಲಿ ಸೂತಪುರಾಣಿಕನು ಶೌನ

ಕಾದಿಗಳಿಗೆ ಹೇಳುವಂತೆ ತಿಳಿಸಲಾಗಿದೆ. ತ್ರಿಮೂರ್ತಿಗಳು ಭೃಗುವನ್ನು ತಿರಸ್ಕಾರದಿಂದ ಕಂಡರೆಂಬುದನ್ನು, ಅವರು ತಂತಮ್ಮ ಕರ್ತವ್ಯಗಳಲ್ಲಿ ಲೀನರಾಗಿದ್ದುದರಿಂದ ಕಾಣಲಾರದಾದರೆಂದೂ ವಿಷ್ಣುವಿನ ಎದೆಗೆ ಒದೆದನೆಂಬುದನ್ನು ವ್ಯತ್ಯಾಸಗೊಳಿಸಿ, ಭೃಗು ತನ್ನ ಪಾದಾಕ್ಷಿಯಿಂದ ನೋಡಿದನೆಂದೂ ಪತಿಯ ಮೇಲಿನ ಸಿಟ್ಟಿನಿಂಥ ಲಕ್ಷ್ಮಿ ತೊಲಗಿದಳೆಂಬುದನ್ನು, ಆಕೆ ತನ್ನ ಪತಿಯ ಕಾರ್ಯಗಳಲ್ಲಿ ಸಹಭಾಗಿನಿಯಾಗುವುದಕ್ಕಾಗಿ ಭೂಪುತ್ರಿಯಾದಳೆಂದೂ ಮಾರ್ಪಡಿಸಿರುವುದು ಕಾಣುತ್ತದೆ. ಈ ಮಾರ್ಪಾಡಿನಿಂದ ಕಥೆಗಾಗಲೀ ಕಥಾಪಾತ್ರಗಳಿಗಾಗಲೀ ಕಳೆ ಬಂದಿದೆ ಎನ್ನಲಾಗುವುದಿಲ್ಲ. ರಸ ಭಾವ ವರ್ಣನಗಳು ಶಿಥಿಲವಾಗಿ ಕಾವ್ಯರಮಣೀಯತೆ ಕಡಮೆಯಾಗಿದೆಯೆನ್ನಬಹುದು. ಆದರೂ ಕಥಾವಸ್ತುವಿನ ಮಾರ್ಪಾಡಿನಲ್ಲಿ ಕವಿಗಿರುವ ಸ್ವಾತಂತ್ರ್ಯವನ್ನು ಅಲ್ಲಗಳೆಯಲಾಗುವುದಿಲ್ಲ. ಕಾಳಿದಾಸ, ಮಾಘರಂತಹ ಸಂಸ್ಕೃತ ಕವಿಗಳೂ ಪಂಪ, ರನ್ನ, ರಾಘವಾಂಕ, ಆಂಡಯ್ಯ ಮುಂತಾದ ಕನ್ನಡ ಕವಿಗಳೂ ಕಥೆಯನ್ನು ಚಮತ್ಕಾರದಿಂದ ಮಾರ್ಪಡಿಸಿ, ವಿಸ್ತರಿಸಿ, ಕಾವ್ಯನಿರ್ಮಾಣದಲ್ಲಿ ಕೃತಕೃತ್ಯರಾಗಿರುವುದು ಈ ದಿಶೆಯಲ್ಲಿ ಮುಂಬರಿವವರಿಗೆ ದಾರಿಗಂಬವೇ ಆಗಿದೆ.

ಈ ಕೃತಿಯನ್ನೋದಿದಾಗ ಕಾಣುವುದು ಕವಿಗಿರುವ ಅಕೃತಕ ಕವಿತಾ ಶಕ್ತಿ ಮತ್ತು ಅದಕೊಪ್ಪುವ ಶಬ್ದಸಂಪತ್ತು. ದ್ವಿತೀಯಾಕ್ಷರ ಪ್ರಾಸವು ಪದಗಳ ಸಹಜಗತಿಯೊಡಗೂಡಿ ಬಂದಿದೆ. ಪ್ರಾಸಕ್ಕಾಗಿ ಪದಗಳನ್ನು ಹುಡುಕಿ ತಂದಿಟ್ಟಂತಿಲ್ಲ. ನಿರೂಪಣ ಕ್ರಮವು ಸರಳ, ಆಖ್ಯಾನ ರೂಪಕ, ಸಂಭಾಷಣ ಪೂರ್ವಕ. ಕಾವ್ಯವು ಕಥಾ ಪ್ರಧಾನವಾಗಿದ್ದು ವರ್ಣನೆ, ರಸ ಭಾವಪೋಷಣೆಗಳು ಇದ್ದರೂ ಗೌಣವಾಗಿವೆ. ಕೃತಿಯ ಕೊನೆಯ ಭಾಗಗಳು ರಮ್ಯತೆಯಲ್ಲಿ ಉತ್ಕರ್ಷ ಹೊಂದಿವೆ. ಶ್ರೀನಿವಾಸನ ಕೊರವಂಜಿ ಪಾತ್ರ ಸಾರಸ್ಯವಾಗಿದೆ. ಕೊರವಂಜಿಯ ಸ್ವರೂಪ ಕಥನವಿದು :—

ಚೀರ ವಸ್ತ್ರವ ಧರಿಸಿ ತುರುಬನೊಂದಂ ರಚಿಸಿ
ನೀರೇಜಭವನ ಶಿಶುಗೈದು, ಬೆನ್ನಿಗೆ ಕಟ್ಟಿ
ತೋರ ಗುಂಜಿಯ ಸರಗಳಂ ಧರಿಸಿ, ಕಂಗಳಿಗೆ ಕಾಡಿಗೆಯ ಹಚ್ಚಿ ಮುದದಿಂ ||
(೬-೨೪)

ಕದಪು ಕರ ಪಾದಗಳಿಗರಿಶಿನವ ಲೇಪಿಸುತೆ
ಮುದದಿ ನೊಸಲಿಂಗೆ ಕುಂಕುಮದ ಪೆಬ್ಬೊಟ್ಟಿಟ್ಟು
ಬಿದಿರ ಕುಕ್ಕೆಯೊಳೆಲ್ಲ ಧಾನ್ಯಗಳನಿಟ್ಟು ಮಸ್ತಕದ ಮೇಲದನು ಪೊತ್ತು
ಕದಪಿನಿಕ್ಕೆಲದೊಳಗೆ ತಾಂಬೂಲಮಂ ತುರುಕು
ತಧರಮಂ ತಜ್ಜಲವನಾಂತ ರಸನೆಯೊಳೊರಸಿ
ಪದಗಳಿಗೆ ಮೆಟ್ಟೆಟ್ಟು ಯಷ್ಟಿಯಂ ಕೈಲಿಟ್ಟು ಪೊರಮಟ್ಟಳಾ ಕೊರವಿತಿ (೬–೨೫).

ಕೊರವಂಜಿ ತನ್ನ ಗುಣಸ್ತುತಿಯನ್ನು ಮಾಡಿಕೊಂಡುದು ಹೀಗೆ:—

ನಡೆದುದಂ ನಡೆಯುತಿರ್ಪುದನಂತೆ ಮುಂದೇನು
ನಡೆವುದೆಂಬುದ ಪೇಳ್ವೆ, ರುಜೆಗೌಷಧವ ಕೊಡುವೆ
ಬಿಡಿಸುವೆಂ ಭೂತ ಪೈಶಾಚ ಭೀತಿಯನೆಲ್ಲ ಮನದಿಚ್ಛೆಗಳ ಪೇಳುವೆಂ ॥
ಕೊಡಿಸುವೆಂ ಕಳೆದ ವಸ್ತುವನೆಲ್ಲ, ಸಂತೋಷ
ಪಡಿಸುವೆಂ ಶೋಕಪೀಡೆಯನಾಂತರೆಲ್ಲರಂ
ನುಡಿಸುವೆಂ ಮೂಕರಂ, ಸಾಮುದ್ರಿಕಾ ಶಾಸ್ತ್ರಗಳ ನಾನು ಪೇಳ್ವೆನೆಂದಳ್ ॥
(೬-೨೭)

ಹೀಗೆ ಕೊರವಂಜಿ ಪದ್ಮಾವತಿಗೆ ಭವಿಷ್ಯವನ್ನು ಹೇಳಿ, ಆಕೆಯನ್ನು ಆಲಿಂಗಿಸುವತನಕ ಈ ಕಾವ್ಯಭಾಗವು ರಮ್ಯ ನಾಟಕ ದೃಶ್ಯದಂತೆ ಕಣ್ಣಿಗೆ ಕಟ್ಟುತ್ತಿದೆ.

ಶ್ರೀ ವೇಂಕಟಾದ್ರೀಶನು ಬರುವನೆಂಬ ಸಂಭ್ರಮದ ಸಡಗರದಲ್ಲಿದ್ದ ಮಡದಿಯರ ವಿಭ್ರಮದ ವರ್ಣನಾಕ್ರಮವು ಸ್ಥೂಲವಾಗಿ ಪೂರ್ವಕವಿಗಳ ಅನುಕರಣೆ ಅಥವಾ ಅನುಸರಣೆ ಆಗಿದ್ದರೂ ಸಾರವತ್ತಾಗಿದೆ. ಶ್ರೀನಿವಾಸ ದೇವರ ವಿವಾಹಾನಂತರ ನಡೆದ ಮೃಷ್ಟಾನ್ನ ಭೋಜನದ ವರ್ಣನಾಪದ್ಯಗಳಲ್ಲಿ ಎರಡನ್ನಿಲ್ಲಿ ಕೊಡಲಾಗುವುದು. ಇದರಲ್ಲಿ ಪದ್ಯರೂಪವಾಗಿ ಬಂದ ಅಭಿವರ್ಣನೆ ಮನವನ್ನು ಸೆಳೆದು, ರಸನೇಂದ್ರಿಯದ ಪರೋಕ್ಷ ರಸಾನುಭವವನ್ನು ಮಾಡುವುದು :—

ಈರೆರಡು ಕಾರದುಪ್ಪಿನಕಾಯಿ ಸೀಕರಣೆ
ಈರೈದು ವಿಧ ತೊವ್ವೆಯೀರಾರು ವಿಧ ಗೊಜ್ಜು
ಈರೆಂಟು ವಿಧ ಪಲ್ಯ ವಿವಿಧ ಕೋಸಂಬರಿಗಳೀರೆಂಟು ವಿಧದೆಣ್ಣೆಗಾಯ್ ॥
ಮೂರೆರಡು ವಿಧದ ಸಂಡಿಗೆ ಕೂಟು ಹುಳಿಗಳಾ
ಕಾರದೊಳ್ ಪೂರ್ಣಶಶಿಯಂತೆಸೆವ ಹಪ್ಪಳಗ
ಳಾರು ವಿಧಮಿಂತಿರಲ್ ತಿಳಿಸಾರು ಸವಿದು ಚಪ್ಪರಿಸಿದರು ರುಚಿಯರಿತವರ್ ॥
(೯-೫೩)

ಕ್ಷೀರಾನ್ನ ಶಾಲ್ಯಾನ್ನ ಚಿತ್ರಾನ್ನ ತಕ್ರಾನ್ನ
ಹೂರಣದ ಕಡುಬು ಗುಂಜಾಲಾಡು ಪೊಬ್ಬಟ್ಟು
ಗಾರಿಗೆ ಚಿರೋಟಿ ಹೂರಿಗೆ ಪೇಣಿ ಮಂಡಿಗೆಗಳ ಪರಿಮಿತ ಭಕ್ಷ್ಯಂಗಳುಂ ॥
ಸಾರತರ ಪಾಯಸಗಳೇಲಾ ಲವಂಗ ಕ
ರ್ಪೂರ ಕೇಸರಿ ಸುವಾಸನೆಯ ಚೆಲ್ಲುತಲಿರಲ
ಪಾರ ಸಂತಸದಿ ಭೋಜನಗೈದು ಬೀಗಿದರು ತೇಗಿದರು ಸಕಲಜನರು ॥
(೯-೫೪)

ಹೀಗೆ ಈ ಕೃತಿಯ ವಸ್ತುವಿನ್ಯಾಸ, ಪಾತ್ರಸ್ವಭಾವ, ವರ್ಣನಾವಿಶೇಷಗಳನ್ನು ಅವಲೋಕಿಸುವುದರೊಡನೆ ಭಾಷೆ, ಪದಪ್ರಯೋಗ, ಕವಿಗಿರುವ ಲಾಕ್ಷಣಿಕಾನುಭವ–ಮುಂತಾದುವನ್ನೂ ಲಕ್ಷಿಸಬೇಕಾಗುತ್ತದೆ. ಆಗ ಕೆಲವು ವ್ಯಾಕರಣ ದೋಷಗಳು ಕಣ್ಣಿಗೆ ಅಡ್ಡಗಟ್ಟುತ್ತಿವೆ. ತವಮೊಗ, ಶಿಖಿವಿಂಡು, ಪೂವರ್ಷ, ರಾಜಮಡದಿ, ಒಕ್ಕಂಠ, ಜ್ಞಾನಸಸಿ–ಮುಂತಾದ ಅರಿಸಮಾಸ ಪದಗಳನ್ನು ಕಡಮೆ

ಮಾಡಿದ್ದರೆ ಶೋಭೆ ಹೆಚ್ಚುತ್ತಿತ್ತು. ನಮೋನಾರಾಯಣಾಯಂ (೧-೩೯, ೬೨), ಸಾನಂದಾಯಂ (೧-೫೮)-ಇಲ್ಲಿ ಸಂಸ್ಕೃತದ ಅಕಾರಾಂತ ಪುಲ್ಲಿಂಗದ ಚತುರ್ಥ್ಯೇಕ ವಚನದಲ್ಲಿ ಹೀಗೆ ಕೊನೆಗೆ ಅನುಸ್ವಾರ ಬಂದುದು ತಪ್ಪು. ಇದೇ ರೀತಿ 'ಸೃಷ್ಟಿ ಕರ್ತಾಯಂ (೧-೨೭)' ಎಂಬುದೂ ವಿಭಕ್ತಿ ದೋಷಯುತ. ಮನಾಭೀಷ್ಟ (೧-೪೫, ೯-೬೩)-ಇದನ್ನು 'ಮನೋಽಭೀಷ್ಟ' ಎಂದು ಶುದ್ಧಗೊಳಿಸಬೇಕು. ಇರ್ಪರುಂ (೯-೧೧)-ಇಲ್ಲಿ ಅನುಸ್ವಾರಕ್ಕೆ ಔಚಿತ್ಯವಿಲ್ಲ. ಪುಟ ೧೧೭, ಪದ್ಯ ೧೧, ಪಾದ ೬-ಇಲ್ಲಿ ಛಂದಸ್ಸು ಕೆಟ್ಟಿದೆ; ಮುದ್ರಣ ದೋಷವಾಗಿರಬಹುದು. ಕಾವ್ಯಾರಂಭದ ಮಂಗಲ ಪದ್ಯದಲ್ಲಿ "ಶ್ರೀ ವನಿತೆಯರವಿಂದ ವದನ ಮಿತ್ರಂ" ಎಂಬಲ್ಲಿ ಸೂರ್ಯಾರ್ಥಕವಾಗಿರುವ 'ಮಿತ್ರ' ಶಬ್ದವನ್ನು 'ವದನ'ಕ್ಕೆ ಹೊಂದಿಸದೆ, 'ಅರವಿಂದ'ಕ್ಕೆ ಹೊಂದಿಸಿದ್ದರೆ, ಚೆನ್ನಾಗಿತ್ತು-"ಶ್ರೀವನಿತೆಯಾಸ್ಯಾರವಿಂದ ಮಿತ್ರಂ" ಎಂಬ ತಿದ್ದುಪಡಿ ಒಳ್ಳೆಯದು.

ಷಟ್ಪದೀ ಪದ್ಯರಚನೆಗೊಪ್ಪುವ ನಡುಗನ್ನಡವೇ ಇದರಲ್ಲಿ ಪ್ರಧಾನವಾಗಿದ್ದರೂ ಕವಿಗೆ ಹಳಗನ್ನಡದ ಮೇಲಿರುವ ಒಲವಿನ ತೋರಿಕೆಯಾಗಿ ಹಲವು ಹಳಗನ್ನಡದ ರೂಪದ ಶಬ್ದಗಳೂ ಅನುಸ್ವಾರಾಂತ ವ್ಯಂಜನಾಂತ ಪದಗಳೂ ಬಳಕೆಗೊಂಡಿವೆ. ಷಟ್ಪದೀ ಪದ್ಯದ ಪದಗತಿ ಇದರಿಂದೆ ಸ್ವಲ್ಪ ಕುಂಟುವ ಎಡೆಗಳೂ ಇವೆ. ರಾಗ ಬದ್ಧವಾದ ಕಾವ್ಯವಾಚನಕ್ಕೆ ಈ ವ್ಯಂಜನಾಂತ ಪದಗಳು ಸ್ವಲ್ಪ ತೊಡಕೆನಿಸ ಬಹುದು. ಕನಿಷ್ಠಪಕ್ಷಕ್ಕೆ ಪದ್ಯಾಂತ ಪದವಾದರೂ ಅನುಸ್ವಾರಾಂತ-ವ್ಯಂಜನಾಂತ ವಾಗಿಲ್ಲದಿದ್ದರೆ ಒಪ್ಪುತ್ತಿತ್ತು. ಕೃತಿಕರ್ತರಿಗೆ ಮೊದಲು ಇದು ಹೊಳೆದಿದ್ದರೆ ಅವನ್ನು ಷಟ್ಪದೀ ಭಾಷೆಗೊಪ್ಪುವಂತೆ ಸ್ವರಾಂತಗೊಳಿಸುವುದೇನೂ ಕಷ್ಟವಾಗುತ್ತಿರಲಿಲ್ಲ. ಉದಾ:-ಪೇಳಿದೆಂ-ಹೇಳ್ದೆನು, ಮುದದಿಂ-ಮುದದಿ, ನಡೆದುದಂ-ನಡೆದುದನು, ನಾನು ಪೇಳ್ವೆನೆಂದಳ್-ಪೇಳ್ವೆನಾನೆಂದಳು, ತೀರ್ಥಂಗಳೊಳ್-ತೀರ್ಥಗಳಲಿ, ಕಾವ್ಯಂ ಗಳಂ-ಕಾವ್ಯಗಳನ್ನು, ಹರಿನಾಮಮಂ-ಹರಿನಾಮವ. ಇತ್ಯಾದಿ.

ಅಂತು ಇದುವರೆಗೆ ಪುರಾಣದ ಕಥನವಾಗಿ ಹರಿದಾಸರ ಕೀರ್ತನದ ಕಥೆಯಾಗಿ ಹೆಂಗಸರ ಶೋಭಾನೆಯಾಗಿ ಜಾನಪದ ಗೀತವಾಗಿ ಮೆರೆಯುತ್ತಿದ್ದು, ಕಾವ್ಯಕ್ಷೇತ್ರದಲ್ಲಿ ಅಪ್ರಸಿದ್ಧವಾಗಿದ್ದ ಈ "ಶ್ರೀನಿವಾಸ ಲೀಲೆ"ಯನ್ನು ಕವಿತಾಸ್ರೋತಕ್ಕೆ ವಾರ್ಧಿ ಯೆನಿಸುವ ವಾರ್ಧಿಕ ಷಟ್ಪದಿಯಲ್ಲಿ ರಚಿಸಿ, ಕನ್ನಡಿಗರಿಗೆ ಶ್ರೀ ವೇಂಕಟೇಶ್ವರ ದೇವರ ಅನುಗ್ರಹದ ಪುಣ್ಯಫಲವನ್ನು ಒದಗಿಸಿ ಕೊಟ್ಟ ಕವಿಗಳೂ ಕಾವ್ಯದ ಪ್ರಕಾಶಕರೂ ಅಭಿನಂದನೀಯರು; ಆಸ್ತಿಕರ ಆದರಕ್ಕೆ ಆಶ್ರಯರು.

—ಟಿ. ಕೇಶವಭಟ್ಟ

ಪಾಶ್ಚಾತ್ಯ ರಾಜಕೀಯ ತತ್ವಶಾಸ್ತ್ರ : ಲೇಖಕರು : ಶ್ರೀ ಎಚ್. ಕೃಷ್ಣರಾವ್, ಎಂ.ಎ.; ಪ್ರಕಾಶಕರು : "ಪ್ರಸಾರಾಂಗ", ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೨ ; ಕಿರೀಟ ಅಷ್ಟದಳ ; ಪು. ix+೬೫೭ ; ಬೆಲೆ : ಸಾಧಾರಣ ಪ್ರತಿ ರೂ. ೧೦-೬೦ ; ಉತ್ತಮ ಪ್ರತಿ ರೂ. ೧೧-೬೦.

ಈ ವಿಮರ್ಶಕನಿಗೆ ತಿಳಿದಂತೆ, ಪಾಶ್ಚಾತ್ಯ ರಾಜಕೀಯ ತತ್ವಶಾಸ್ತ್ರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಮೊಟ್ಟಮೊದಲನೆಯ ಕನ್ನಡ ಗ್ರಂಥವಿದು. ಇದರಲ್ಲಿ, ಸಾಕ್ರಟೀಸ್, ಪ್ಲೇಟೋ ಮತ್ತು ಅರಿಸ್ಟಾಟಿಲ್ ಅವರಿಂದ ಮೊದಲ್ಗೊಂಡು, ದೈವ ಪರಪ್ರಭುತ್ವಕ್ಕೆ (Theocracy) ಸಂಬಂಧಿಸಿದಂತೆ ಮಧ್ಯಯುಗದ ರಾಜಕೀಯ ವಿಚಾರ, ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿನ ಫ್ರಾನ್ಸ್ ದೇಶದ ರಾಜ್ಯ ಪುನರುಜ್ಜೀವನ ಮತ್ತು ನವೋದಯಗಳು ಮತ್ತು ಆಧುನಿಕ ಕಾಲದವರೆಗಿನ ವಿಷಯಗಳು ಅಡಕವಾಗಿರುತ್ತವೆ. ಈ ಕೃತಿ ಬೇರೆ ಬೇರೆ ರಾಜಕೀಯ ತತ್ವಗಳ ಪ್ರತಿಪಾದಕರು ವ್ಯಕ್ತಪಡಿಸಿರುವ ಪಾಶ್ಚಾತ್ಯ ರಾಜಕೀಯ ವಿಚಾರದ ಪ್ರಮುಖ ಭಾವನೆಗಳನ್ನು ಸಮಗ್ರವಾಗಿಯೂ, ಖಚಿತವಾಗಿಯೂ, ಸ್ಪಷ್ಟವಾಗಿಯೂ ನಿರೂಪಿಸುತ್ತದೆ. ಮಾನವನ ಸ್ವಾತಂತ್ರ್ಯ, ಸಾಮಾಜಿಕ ವ್ಯವಸ್ಥೆ ಮತ್ತು ಉನ್ನತ ಮೌಲ್ಯಗಳಿಗಾಗಿ ಆತನು ನಡೆಸಿದ ಸಂತತವಾದ ಹೋರಾಟಗಳನ್ನು ಕುರಿತು ಹಿರಿಯ ವಿಚಾರಶೀಲರು ವ್ಯಕ್ತಪಡಿಸಿರುವ ಅಭಿಪ್ರಾಯಗಳಲ್ಲಿ ಈ ಗ್ರಂಥಕರ್ತೃಗಳಿಗಿರುವ ಜೀವಂತವಾದ ಆಸಕ್ತಿಯ ಮೂಲಕ ಅವರ ಶೈಲಿ ಉತ್ಸಾಹಪೂರ್ಣವಾಗಿ ತೋರಿಬರುತ್ತದೆ.

ಹಿತಕರವಾದ ಪ್ರಜಾಪ್ರಭುತ್ವದ ತತ್ವಗಳನ್ನು ಬೆಳೆಸಬೇಕೆಂದೂ, ಮುಂದಾಳುಗಳೂ, ಸಂಸ್ಕೃತಿ ಸಂಪನ್ನರೂ ಆದ ಪ್ರಜೆಗಳು ಮತ್ತು ನಾಗರಿಕರಿಗೆ ಒಳ್ಳೆಯ ಸರ್ಕಾರ ಹಾಗೂ ಪ್ರಜಾಪ್ರಭುತ್ವಗಳ ನಿಯಮಗಳಲ್ಲಿ ಶಿಕ್ಷಣವೀಯಬೇಕೆಂದೂ ನಮ್ಮ ದೇಶದವರು ಘನೋದ್ದೇಶದಿಂದ ಸಂಕಲ್ಪಿಸಿರುವ ಈ ಸುಸಮಯದಲ್ಲಿ ಮೊಟ್ಟಮೊದಲನೆಯದಾದ ಈ ಕನ್ನಡ ಗ್ರಂಥದ ಪ್ರಕಟನೆ ಮಹತ್ವಪೂರ್ಣವಾದ ಪಾತ್ರವನ್ನು ವಹಿಸಬಲ್ಲುದು. ಇಂಗ್ಲಿಷನ್ನು ತಿಳಿಯದ ಜನತೆಗೆ, ಆಧುನಿಕ ರಾಜಕೀಯ ಮತ್ತು ಸಾಮಾಜಿಕ ವಿಚಾರಗಳನ್ನು ಅರಿಯಲು ಈ ಕೃತಿ ಅವಕಾಶವನ್ನು ಕಲ್ಪಿಸಿಕೊಡಬಲ್ಲುದು.

ಲೇಖಕರು, ಪಾಶ್ಚಾತ್ಯ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳಿಗೆ ಸಮಾನ ಕನ್ನಡ ಶಬ್ದಗಳನ್ನು ಹೊಂದಿಸಲು ವಿಶೇಷ ಗಮನವಿತ್ತು ಅಪಾರ ಪರಿಶ್ರಮವನ್ನು ವ್ಯಕ್ತಪಡಿಸಿರುತ್ತಾರೆ. ಪ್ರಾಧ್ಯಾಪಕರ ಈ ಪ್ರಯತ್ನದಿಂದ, ಸಾಮಾಜಿಕ ಒಪ್ಪಂದ(Social contract), ಸಾರ್ವಜನಿಕ ಇಚ್ಛೆ (General will), ಆದರ್ಶವಾದ (Idealism), ವಸ್ತುಸತ್ತಾವಾದ (Realism), ಉಪಯುಕ್ತತಾವಾದ, ಪ್ರಯೋಜಕತಾವಾದ (Utilitarianism), ಚಾರಿತ್ರಕ ದ್ರವ್ಯವಸ್ತುವತಾವಾದ (Historical materialism), ಹಕ್ಕುಗಳು (Rights), ಸಮಷ್ಟಿವಾದ (Socialism), ಸಮತಾವಾದ (Communism), ಏಕನಾಯಕ ಸರ್ವಾಧಿಕಾರತ್ವ (Authoritarianism)—ಇವೇ ಮೊದಲಾದ ಕನ್ನಡ ಶಬ್ದಗಳು ಇಂಗ್ಲಿಷಿನಿಂದ ತರ್ಜುಮೆಯಾಗಿ ಬಂದಿವೆ. ಮೊಟ್ಟಮೊದಲಿನವರ ಪ್ರಯತ್ನ ಯಾವಾಗಲೂ

ಪ್ರಯಾಸದಾಯಕವಾದುದು. ಆದರೆ, ಆ ತರುವಾಯ ಬರುವವರಿಗೆ ಅದರಿಂದ ದಾರಿ ಸುಗಮವಾಗುತ್ತದೆ.

ಆಧುನಿಕ ಕಾಲದಲ್ಲಿ ರಾಜಕೀಯ ವಿಚಾರವು ಹಾಬ್ಸ್, ಎಂಬಾತನಿಂದ ಹೊಸದಾಗಿ ಮೊದಲಾಗುತ್ತದೆ. ಲಾಕೆ, ರೂಸೋ, ಹೆಗೆಲ್, ಕ್ಯಾಂಟ್, ಕಾರ್ಲ್ ಮಾರ್ಕ್ಸ್, ಲಾಸ್ಕಿ ಮತ್ತು ಇತರರ ಮೂಲಕ, ಅದು ಮೂಲಭೂತವಾದ ಹಕ್ಕುಗಳ ಭದ್ರತೆ ಮತ್ತು ಅದರ ಪರಿಮಿತಿಗೆ ಒಳಪಟ್ಟ ಸರ್ಕಾರದಿಂದ ಸಾಮಾಜಿಕ ವ್ಯವಸ್ಥೆಯನ್ನು ಸಾಧಿಸಲು ಆಧುನಿಕ ಮಾನವನು ನಡೆಸುತ್ತಿರುವ ಹೋರಾಟವನ್ನು ಚಿತ್ರಿಸುತ್ತದೆ. ಈ ಹೋರಾಟದ ಏರಿಳಿತಗಳು ಇಂದು ನಮಗೆ ತುಂಬ ನೀತಿಪ್ರದವಾದವು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮನಗಾಣುವಂತೆ ಅನುಕೂಲವಾದ ವಾತಾವರಣವನ್ನು ಕಲ್ಪಿಸುವುದಕ್ಕೆ ಅತ್ಯಗತ್ಯವೂ ಹೌದು.

ಈ ಕೆಲಸವನ್ನು ದೇಶದ ಎಲ್ಲ ಭಾಷೆಗಳಲ್ಲಿಯೂ ಮಾಡಬೇಕಾಗಿದೆ. ಕನ್ನಡಕ್ಕೆ ಈ ಕೃತಿ ಅತ್ಯಂತ ಪ್ರಶಂಸನೀಯವಾದುದೇ ಸರಿ.

ಭಾಷೆ ತಿಳಿಯಾಗಿಯೂ ಶಕ್ತಿಯುಕ್ತವಾಗಿಯೂ ಇದೆ. ಶೈಲಿಯಾದರೋ ಹಿತವಾಗಿ, ಹೇಳಬೇಕೆಂದಿರುವ ವಿಷಯಗಳಿಗೆ ತಕ್ಕಂತಿದೆ.

ಪರಿಪಕ್ವವಾದ ಅನುಭವಶಾಲಿಗಳೂ, ಹೊಚ್ಚ ಹೊಸತಾದ ವಿಷಯಗಳನ್ನು ಬಲ್ಲವರೂ ಆದ ಇಂಥ ಲೇಖಕರ ಕೈಯಲ್ಲಿ, ಆಧುನಿಕ ಸಮಾಜ ವಿಜ್ಞಾನವನ್ನು ತಕ್ಕಂತೆ ನಿರೂಪಿಸಲು, ಕನ್ನಡ ಭಾಷೆ ಸಮರ್ಥವಾಗಿದೆಯೆನ್ನುವುದಕ್ಕೆ ಈ ಕೃತಿಯೇ ಸಾಕ್ಷಿ.

ಈ ಗ್ರಂಥವು ಅನೇಕ ಕಾಲ ಒಂದು ಪ್ರಮಾಣ ಗ್ರಂಥವಾಗಿರಬಲ್ಲುದು.

ತರುಣ ವಿದ್ಯಾರ್ಥಿಗಳ ಪೀಳಿಗೆಗೆ ಮೇಲಿಂದ ಮೇಲೆ ಇಂಗ್ಲಿಷಿನಲ್ಲಿ ಪಾಠ ಹೇಳಿ, ವಿಷಯದಲ್ಲಿ ಪರಿಪಕ್ವತೆಯನ್ನೂ, ಪ್ರಭುತ್ವವನ್ನೂ ಗಳಿಸಿರುವ ಹಿರಿಯ ಅಧ್ಯಾಪಕರೊಬ್ಬರಿಂದ ಇಂಥ ಕೃತಿಯನ್ನು ಬರೆಸಿ ಪ್ರಕಟಿಸಿರುವುದಕ್ಕಾಗಿ ವಿಶ್ವವಿದ್ಯಾನಿಲಯದವರನ್ನು ಅಭಿನಂದಿಸಬೇಕಾಗಿದೆ.

—ಎಂ. ಎ. ವೆಂಕಟರಾವ್

ವಸ್ತುಕೋಶ

ದೇಶಭಾಷಾಮಾಧ್ಯಮ

[ಆಂಧ್ರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಡಾ|| ಸಿ. ಆರ್. ರೆಡ್ಡಿಯವರು ೧೯೨೮ರಲ್ಲಿ ಮಾಡಿದ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣದಿಂದ.]

ಪ್ರಾಂತೀಯ ಭಾವನೆಯ ಜೀವಾಳವೇನೆಂದರೆ, ಸಾಧ್ಯವಾದ ಮಟ್ಟಿಗೆ ದೇಶಭಾಷೆಯ ಮೂಲಕ ಶಿಕ್ಷಣ ಕೊಡುವುದು—ಎಂದು ಹೇಳುವ ಸಾಹಸ ಮಾಡುತ್ತೇನೆ. (ಆದರೆ ಈ ಸಾಹಸದಲ್ಲಿ ನನಗೆ ಸಾಕಷ್ಟು ಅಂಜಿಕೆ ಮತ್ತು ಉದ್ವೇಗ ಉಂಟು.) ಅಂತರರಾಷ್ಟ್ರೀಯ ಆದರ್ಶದ ಮಹತ್ವವನ್ನು ನಾನು ಅಲ್ಲಗಳೆಯುವುದಿಲ್ಲ. ಅದು ಈ ವಿಷಯದಲ್ಲಿ ಅಸಾಧ್ಯವೆಂದು ತಳ್ಳಿಹಾಕುತ್ತೇನೆ; ಏಕೆಂದರೆ, ಜಾಗತಿಕ ಭಾಷೆಯೊಂದು ಇನ್ನೂ ಹುಟ್ಟಿಲ್ಲ. ನಾವು ಮೊದಲು ಒಂದು ರಾಷ್ಟ್ರವಾಗಬೇಕು ಮತ್ತು ಸಮಾನವಾಗಿ ಆಲೋಚನೆ, ಸಂಸ್ಕೃತಿಗಳ ಲೋಕ-ವಿನಿಮಯಗಳಲ್ಲಿ ಪಾಲ್ಗೊಳ್ಳಬೇಕು—ಎಂಬುದು ಅಂತರರಾಷ್ಟ್ರೀಯ ಆದರ್ಶದ ಕಲ್ಪನೆ. ಆದ್ದರಿಂದ, ಅಂತರರಾಷ್ಟ್ರೀಯ ಮತ್ತು ಪ್ರಾಂತೀಯ ಭಾವನೆಗಳು ಕನ್ನಡ ಮಾಧ್ಯಮವನ್ನೊಳಗೊಳ್ಳುತ್ತವೆ.

ಮೈಸೂರು ಈ ವಿಷಯದಲ್ಲಿ ಬಹಳ ಅದೃಷ್ಟಶಾಲಿ; ಈ ಅದೃಷ್ಟ, ಪ್ರಾಂತಗಳು ಭಾಷಾತಳಹದಿಯ ಮೇಲೆ ಪುನರ್ರಚಿತವಾಗುವತನಕ ಬ್ರಿಟಿಷ್ ಇಂಡಿಯಾದಲ್ಲಿ ಸಾಧ್ಯವಲ್ಲ. ಮೈಸೂರು ಬಹುಮಟ್ಟಿಗೆ ಏಕಭಾಷೆಯುಳ್ಳದ್ದು; ಏಕೆಂದರೆ, ನಮ್ಮ ಪೂರ್ವಜಿಲ್ಲೆಗಳಲ್ಲಿರುವ ತೆಲುಗು ಕನ್ನಡದ ಅವಳಿ ಸೋದರಿ; ಎರಡರ ಲಕ್ಷಣಗಳೂ ಅಭಿನ್ನ. ಅಲ್ಲದೆ, ಜನತೆಯ ಭಾಷೆಯಿಂದ ಬೇರೆಯಾದ ಆಡಳಿತ ಭಾಷೆಯೊಂದರ ಅಗತ್ಯವಿಲ್ಲ. ಆದರೆ ಈ ವಿಷಯದಲ್ಲಿ ನಮಗೆ ಆತ್ಮವಿಶ್ವಾಸದ ಕೊರತೆಯಿದೆ. ಒಂದು ವಿದೇಶೀಯ ಮಾಧ್ಯಮದ ಬದಲು ಸಹಜವಾದ ಮಾಧ್ಯಮವನ್ನು ಬಳಸುವುದರಿಂದ ಜ್ಞಾನವನ್ನು ಸಂಪಾದಿಸುವುದು ಮತ್ತು ಹರಡುವುದು ಹೆಚ್ಚು ಸುಲಭವೆಂದು ನಾವೆಲ್ಲ ತಾತ್ವಿಕವಾಗಿ ಒಪ್ಪುತ್ತೇವೆ. ಆದರೆ, ನಮ್ಮ ಶಿಕ್ಷಣದಕ್ಷತೆಯ ಬಗ್ಗೆ ಇತರರಿಗಿರುವ ಗೌರವಭಾವನೆ ಎಲ್ಲಿ ಏರುಪೇರಾದೀತೊ ಎಂದು ನಾವು ಹೆದರುತ್ತೇವೆ. ಯೂರೋಪಿನ ಸಿದ್ಧಪಡಿಸಿದ ಉಡುಪನ್ನು ಎರವಲು ಪಡೆದುಕೊಳ್ಳುವುದು ಸುಲಭವಾಗಿ ಕಾಣುತ್ತದೆ; ನಾವಾಗಿಯೇ ವಸ್ತ್ರ ತಯಾರಿಸುವುದು ಅಷ್ಟೇ ಕಠಿಣವಾಗಿ ಕಾಣುತ್ತದೆ. ಬೆಳೆಯುತ್ತಿರುವ ವಸ್ತುಸ್ಥಿತಿಯನ್ನು ಕಾಣುವ ಕಲ್ಪನಾಶಕ್ತಿ ನಮಗಿಲ್ಲವೆಂದು ತೋರುತ್ತದೆ. ನಮ್ಮ ಡಿಗ್ರಿಗಳಿಗೆ ಸಂಭವಿಸಬಹುದಾದ ನಷ್ಟ ನಮ್ಮನ್ನು ಕಾಡುತ್ತಿದೆ. ಸಂಶೋಧನೆ ಹಾಗೂ ಸ್ವತಂತ್ರ ಕಾರ್ಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅವು ಇಂಗ್ಲಿಷ್ ಅಥವಾ

ಫ್ರೆಂಚ್‌ನಲ್ಲಿ ಎಷ್ಟು ಸೊಗಸಾಗಿ ನಿರೂಪಣೆಗೊಳ್ಳುತ್ತವೆ ಎಂಬುದನ್ನು ಅವುಗಳ ಮೌಲ್ಯ ಅವಲಂಬಿಸಿರುತ್ತದೆ ಎಂದು ಯಾರೂ ವಾದಿಸುವುದಿಲ್ಲ; ನಮ್ಮ ವಿಶ್ವವಿದ್ಯಾನಿಲಯಗಳು ಸಾಕಷ್ಟು ಪ್ರಮಾಣದ ಉನ್ನತಕಾರ್ಯವನ್ನು ಮುಂದಿಟ್ಟಾಗ, ತನ್ಮೂಲಕ ಅವು ಪಡೆಯುವ ಪ್ರತಿಷ್ಠೆ ಅವು ಕೊಡುವ ಎಲ್ಲ ಡಿಗ್ರಿಗಳಿಗೂ ವ್ಯಾಪಿಸುತ್ತದೆ. ಆದರೆ ದೇಶಭಾಷಾ ಮಾಧ್ಯಮದ ತತ್ತ್ವವನ್ನು ಕುರಿತು ನಾನು ಹೆಚ್ಚು ಹೇಳಬಯಸುವುದಿಲ್ಲ; ರೇಖಾಮಾತ್ರವಾಗಿ ಅದನ್ನಿಲ್ಲಿ ಚರ್ಚಿಸಿದ್ದೇನೆ. ಒಂದೇ ಒಂದು ವಿಚಾರವನ್ನು ಮತ್ತೆ ಹೇಳಬಹುದು. ದೇಶಭಾಷಾಮಾಧ್ಯಮ ಇಂಗ್ಲಿಷಿನ ಮಟ್ಟದಲ್ಲಿ ಇಳಿತಾಯವನ್ನುಂಟುಮಾಡಬೇಕಾಗಿಲ್ಲ ಮತ್ತು ಇಂಗ್ಲಿಷನ್ನು ಒಂದು ಭಾಷೆಯಾಗಿ ಸಮರ್ಪಕ ರೀತಿಯಲ್ಲಿ ಅಭ್ಯಾಸಮಾಡಲು ಎಲ್ಲ ಎಚ್ಚರಿಕೆಯನ್ನೂ ವಹಿಸಬೇಕು. ಇದೊಂದು ಎಚ್ಚರಿಕೆಯನ್ನಿಟ್ಟುಕೊಂಡು, ದೇಶಭಾಷಾ ಮಾಧ್ಯಮವನ್ನು ಸಾಧ್ಯವಾದಷ್ಟು ಪರಮಾವಧಿ ಪ್ರಮಾಣದಲ್ಲಿ ಈ ಕೂಡಲೆ ಏಕೆ ಜಾರಿಗೆ ತರಬಾರದು? ಮೆಟ್ರಿಕ್ಯುಲೇಷ‌ನ್ ಮಟ್ಟದವರೆಗೆ ಎಲ್ಲ ವಿಷಯಗಳನ್ನೂ—ಇಂಗ್ಲಿಷ್ ಮತ್ತು ಗಣಿತ ವಿನಾ—ದೇಶಭಾಷೆಯಲ್ಲೇ ಕಲಿಸಬೇಕೆಂಬುದು ಕಲ್ಕತ್ತ ವಿಶ್ವವಿದ್ಯಾನಿಲಯ ನಿಯೋಗದ ಅಭಿಪ್ರಾಯವಾಗಿತ್ತು; ಆ ಸಲಹೆಯನ್ನು ಸರ್ವತ್ರ ಅನುಸರಿಸಲಾಯಿತೆಂದು ನಂಬುತ್ತೇನೆ. ಅಲ್ಲಿಂದೀಚೆಗೆ ದೇಶಭಾಷೆಗಳು ಸಾಕಷ್ಟು ಪ್ರಗತಿ ಸಾಧಿಸಿವೆ; ಇಂಟರ್‌ಮಿಡಿಯಟ್ ಘಟ್ಟದಲ್ಲಿ ಯಾವ ವಿಷಯಗಳನ್ನು ದೇಶಭಾಷೆಯಲ್ಲಿ ಕಲಿಸಬಹುದು ಎಂಬುದನ್ನು ನಿರ್ಧರಿಸುವುದು ಒಂದು ತಜ್ಞ ಮಂಡಲಿಯ ಶಕ್ತಿಗೆ ಮೀರಿದ್ದಾಗಬಾರದು. ಘಟ್ಟಘಟ್ಟವಾಗಿ ದೇಶಭಾಷಾ ಮಾಧ್ಯಮವನ್ನು ತರುವುದರ ಬದಲು, ವಿಷಯದ ಆಧಾರದ ಮೇಲೆ ನಾವು ದೇಶಭಾಷಾ ಮಾಧ್ಯಮವನ್ನು ಆರಂಭಿಸಬಹುದಲ್ಲವೆ? ಉದಾಹರಣೆಗೆ, ಕನಿಷ್ಠ ಮಟ್ಟದಿಂದ ಹಿಡಿದು ಬಿ. ಎ. ಅಥವಾ ಎಂ. ಎ. ಮಟ್ಟಗಳವರೆಗೆ ಭಾರತೀಯ ಚರಿತ್ರೆಯನ್ನು ಕನ್ನಡದಲ್ಲಿ ಹೇಳಿಕೊಡುವುದು ಸಾಧ್ಯವಿಲ್ಲವೆ?

ಪಠ್ಯಪುಸ್ತಕಗಳ ಕೊರತೆ ನಿಸ್ಸಂದೇಹವಾಗಿ ಒಂದು ತೊಂದರೆ; ಆದರೆ ವ್ಯಕ್ತಿಗಳು ಪುಸ್ತಕಗಳಿಗಿಂತ ಮುಖ್ಯ. ಸಮರ್ಪಕವಾದ ಉಪನ್ಯಾಸಗಳು ಬರುವುದಾದಲ್ಲಿ, ಪುಸ್ತಕಗಳು ತಾವಾಗಿ ಹಿಂಬಾಲಿಸುತ್ತವೆ. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್‌ನ ಪ್ರಾಧ್ಯಾಪಕರಿಗೆ ಅನೇಕ ಯೂರೋಪಿಯನ್ ಭಾಷೆಗಳ ಜ್ಞಾನವಿದೆ ಮತ್ತು ತಮ್ಮ ವ್ಯಾಸಂಗಮಾರ್ಗಕ್ಕೆ ಸಂದಿರುವ ಜಾಗತಿಕ ಕಾಣಿಕೆಗಳ ಮೇಲೆ ಅವರು ತಮ್ಮ ಉಪನ್ಯಾಸಗಳನ್ನು ಆಧರಿಸಲು ಶಕ್ತರು. ಇದೇ ರೀತಿಯಲ್ಲಿ, ವಿಶ್ವವಿದ್ಯಾನಿಲಯದ ಘಟ್ಟಗಳಲ್ಲಿ ಕನ್ನಡದಲ್ಲಿ ಉಪನ್ಯಾಸ ಮಾಡುವವರಿಗೆ ಇಂಗ್ಲಿಷಿನ ಮತ್ತು ಇನ್ನಾವುದಾದರೊಂದು ಭಾಷೆಯ ಸಮರ್ಪಕ ತಿಳಿವಳಿಕೆ ಇರುವುದು ಅಗತ್ಯವಾಗಬಹುದು; ಇದರಿಂದ, ಆ ಭಾಷೆಗಳಲ್ಲಿ ರಚಿತವಾಗಿರುವ ಅಧಿಕೃತ ಗ್ರಂಥಗಳ ಸಹಾಯ ಲಾಭ ಪಡೆದುಕೊಳ್ಳುವುದು ಅವರಿಗೆ ಶಕ್ಯವಾಗುತ್ತದೆ.

ಮನಸ್ಸೆನ್ನುವುದು, ಪೋಷಿಸಿ ಬೆಳೆಸಬೇಕಾದ ಒಂದು ಶಕ್ತಿಯೇ ಹೊರತು ಯಾಂತ್ರಿಕವಾಗಿ ಭರ್ತಿ ಮಾಡಬೇಕಾದ ಶೂನ್ಯವಲ್ಲ—ಎಂಬ ದೃಷ್ಟಿಯನ್ನಿಟ್ಟುಕೊಂಡು ಪಾಶ್ಚಾತ್ಯ ಮಹಾ ವಿಶ್ವವಿದ್ಯಾನಿಲಯಗಳಲ್ಲಿ ಪ್ರಚುರವಾಗಿರುವ ಶಿಕ್ಷಣ ವಿಧಾನಗಳು ಮುಂದುವರಿಯುತ್ತವೆ. ಸಾಮರ್ಥ್ಯದ ಬೆಳವಣಿಗೆ ಹಾಗೂ ಜ್ಞಾನಾರ್ಜನೆ ಅವುಗಳ ಕೇಂದ್ರಲಕ್ಷ್ಯ; ಒಂದು ಭಾಷೆಯ ಪರಿಣತಿಯಲ್ಲ.

ಇವು ನನ್ನ ವೈಯಕ್ತಿಕ ಅಭಿಪ್ರಾಯಗಳು; ವಿರುದ್ಧವಾದಗಳು ಬರುವುದಾದರೆ, ಇವುಗಳನ್ನು ಬದಲಿಸುವುದು ನನ್ನ ಕರ್ತವ್ಯವಾಗುತ್ತದೆ.


—ಅನುವಾದ: ಸಿ. ಪಿ. ಕೆ.

ಸಂಪಾದಕೀಯ

ಹೊಸ ಉಪಕುಲಪತಿಗಳು

ಸರದಾರ್ ಕಾವಲಂ ಮಾಧವ ಫಣಿಕ್ಕರ್ ಅವರು ಇಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕವಾಗಿದ್ದಾರೆ. ಪ್ರಾಧ್ಯಾಪಕ ರಾಗಿ, ಸಂಸ್ಥಾನವೊಂದರ ಪ್ರಧಾನ ಮಂತ್ರಿಗಳಾಗಿ, ಚೀಣಾ, ಫ್ರಾನ್ಸ್, ಈಜಿಪ್ಟ್ ಗಳಲ್ಲಿ ಭಾರತದ ರಾಯಭಾರಿಯಾಗಿ, ಹಾಗೂ ಕಾಶ್ಮೀರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ–ವಿವಿಧ ಕ್ಷೇತ್ರಗಳಲ್ಲಿ ಬೇರೆ ಬೇರೆ ಅಧಿಕಾರಗಳಲ್ಲಿ ಇದ್ದು ಯಶಸ್ವಿಯಾಗಿರುವ ಎಪ್ಪತ್ತರ ಈ ವಿಚಾರವಂತ ಪರಿಣತ ಕಾರ್ಯಪಟುವನ್ನು ನಾವು ಈ ನಮ್ಮ ಸರಸ್ವತೀಪೀಠದ ಉನ್ನತಾಧಿಕಾರಕ್ಕೆ ಸಂತೋಷದಿಂದ ಸ್ವಾಗತಿಸುತ್ತೇವೆ. ಸ್ವತಃ ಕವಿಯಾಗಿ ಸಾರಸ್ವತ ಲೋಕವಿದರೂ ದಿಟ್ಟತನದ ನಿಶಿತ ವಿಚಾರವಂತರೂ ಆಗಿರುವ ಇವರು ಇತಿಹಾಸ ವಿದ್ವಾಂಸರಾಗಿ ಭಾರತೀಯ ಹಾಗೂ ಅಂತರ್ ರಾಷ್ಟ್ರೀಯ ಭೂತ ವರ್ತಮಾನ ಸ್ಥಿತಿಗತಿಗಳನ್ನು ತಿಳಿದುಕೊಂಡಿರುವುದು ಮಾತ್ರ ವಲ್ಲದೆ ರಾಜನೀತಿವಿದರಾಗಿ, ವಿದ್ಯಾಭ್ಯಾಸ ವಿಚಾರಗಳಲ್ಲಿ ವಿಶಿಷ್ಟ ನಿಲವುಳ್ಳವರಾಗಿ ಪ್ರಸಿದ್ಧರಾಗಿದ್ದಾರೆ. ಭಾರತೀಯ ಸಮಾಜದ ವಿಭಿನ್ನ ಸಮಸ್ಯೆಗಳ ಮೂಲಜಾಲ ಗಳೇನು, ಕಾಲಕಾಲಾನುಕ್ರಮದಿಂದ ಬೆಳೆದು ಹದಗೊಂಡು ಬಂದಿರುವ ರೂಢ ಮೂಲವಾದ ಮೌಢ್ಯಶೂಲಗಳೇನು ಎಂಬುದನ್ನು ಖಚಿತವಾಗಿ ಕಂಡುಕೊಂಡು ನಿರ್ಭೀತವಾಗಿ ಖಂಡಿಸಿರುವಂತೆಯೆ, ನಮ್ಮ ಮೂಲ ಆರ್ಷೇಯ ಧರ್ಮದ ಪುನರು ತ್ಥಾನದ ವಿಷಯದಲ್ಲಿ ಶ್ರದ್ಧೆ ಕಳಕಳಿಯನ್ನು ಇವರು ತಮ್ಮ ಬರೆಹಗಳಲ್ಲಿ ಉಪನ್ಯಾಸಗಳಲ್ಲಿ ತೋರ್ಪಡಿಸಿದ್ದಾರೆ. ಇಂದಿನ ಪ್ರಜಾಪ್ರಭುತ್ವ ಹಾಗೂ ವಿಜ್ಞಾನ ಗಳು ಸಾರ್ವತ್ರಿಕವಾಗಿ ತಂದುಕೊಟ್ಟಿರುವ ವ್ಯಕ್ತಿ-ವಿಚಾರ ಸ್ವಾತಂತ್ರ್ಯಗಳು ಭಾರತೀಯ ಸಮಾಜದ ರೂಪ ಸ್ವರೂಪಗಳನ್ನು ಹೇಗೆ ಪರಿವರ್ತನಗೊಳಿಸುತ್ತಿವೆ ಎಂಬುದನ್ನು ಸ್ಪಷ್ಟವಾಗಿ ಕಂಡುಕೊಂಡಿರುವ ಈ ವಿಚಾರವಂತ ಇತಿಹಾಸಜ್ಞ, ಕವಿ, ಆ ವಿಚಾರ ವಾಗಿ ನಾನಾ ಕಾರಣಗಳಿಂದಾಗಿ ನಿರಾಶೆಗೊಂಡು ಕೆರಳಿರುವವರ ಧೋರಣೆಯನ್ನು ಕಂಡು ಅಲ್ಲಗಳೆದಿರುವುದು ಮಾತ್ರವಲ್ಲದೆ, ನಾಡಿನ ಜನಾಂಗದ ಸಾಮೂಹಿಕ ಅಭಿವೃದ್ಧಿಯ ವಿಚಾರದಲ್ಲಿ ಆಶಾವಂತರಾಗಿದ್ದಾರೆ.

ವಿದೇಶದಲ್ಲಿ ಉನ್ನತವ್ಯಾಸಂಗ ನಡೆಸಿ ಆಳರಸರ ಕಾಲದಲ್ಲಿ ವಿಶೇಷಾಧಿಕಾರ ದಲ್ಲಿದ್ದ ಒಬ್ಬ ಪ್ರತಿಷ್ಠಿತವ್ಯಕ್ತಿ ರಾಷ್ಟ್ರೀಯ ಯುಗಕ್ಕೆ ಹೊಂದಿಕೊಂಡಿರುವುದು ಅಷ್ಟೇನೂ ಸಾಮಾನ್ಯವಲ್ಲ. ಅಂತರ್‌ರಾಷ್ಟ್ರೀಯ ವಲಯಗಳಲ್ಲಿ ವ್ಯವಹರಿಸಿದ ಒಬ್ಬ ಗೌರವಾನ್ವಿತ ವ್ಯಕ್ತಿ ರಾಷ್ಟ್ರೀಯ ವಿಚಾರಗಳನ್ನೆ ಗಮನಿಸುತ್ತ ಪ್ರಾದೇಶಿಕ ವಿಷಯಗಳನ್ನಾಗಲಿ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಯನ್ನಾಗಲಿ ಯೋಚಿಸದಿರು ವುದು ಸಾಮಾನ್ಯ. ಸರದಾರ್ ಫಣಿಕ್ಕರ್ ಅವರು ಆ ಅಂಶಗಳಲ್ಲಿ ವಿಶಿಷ್ಟವಾಗಿದ್ದಾರೆ.



ಸರದಾರ್ ಕೆ. ಎಂ. ಫಣಿಕ್ಕರ್ ಅವರು

ಭಾಷೆಗಳ ಆಧಾರದ ಮೇಲೆ ಪ್ರಾಂತಗಳನ್ನು ರಚಿಸುವುದು ದೇಶ ಛಿದ್ರಕವಾಗುತ್ತದೆಯೆಂದು ಅತಿ ರಾಷ್ಟ್ರೀಯವಾದಿಗಳೂ ಬ್ರಿಟಿಷ್ ಪರಂಪರೆಯಲ್ಲಿ ಬೆಳೆದುಬಂದ ಅರಾಷ್ಟ್ರೀಯರೂ ವಾದಿಸುತ್ತಿದ್ದ ಆ ಕಾಲದಲ್ಲಿ ಭಾಷಾಮೂಲವಾದ ಪ್ರಾಂತಗಳಾಗಿಯೆ ದೇಶವನ್ನು ಪುನರ್ವಿಂಗಡಿಸುವುದು ಕ್ಷೇಮಕರವೆಂದೂ, ಅದಕ್ಕೆ ಭಿನ್ನವಾದ ಯಾವ ವಿಧಾನವೂ ಅಸಹಜವೂ ವಿಗತಿಕಾರಿಯೂ ಇತಿಹಾಸ ವಿರುದ್ಧವೂ ಆದುದೆಂದು ಉಗ್ರವಾಗಿ ಪ್ರತಿಪಾದಿಸಿ ಹಾಗೆಯೆ ನೆರವೇರಿಸಿದ ಇವರ ರಾಷ್ಟ್ರೀಯ ಪ್ರಜ್ಞೆ ಇತಿಹಾಸ ಮೂಲವಾದದ್ದು.

"I frankly confess that I am a believer in regionalism for I feel that in a nation of India's size, population and historical tradition, it is only on a healthy regionalism that a genuine national unity can be built up. This is especially so in the case of democracies where popular representation must necessarily emphasise regional interests. In an autocracy or a dictatorship it is possible to silence the voice of local interests, but in societies where people are free, and political power is vested in elected representatives, national unity can grow only on the basis of reconciliation between regionalism and national interests . . . . National interests must, of course, come first and the unity and the security of the nation must be over-riding considerations. No one denies that, but the interests of the regions are also matters of national concern. It is necessary to emphasise that even in very small states, the sense of national unity develops only on the basis of just acceptence of local interests and considerations. "Distributive justice" or fairness to every part, Aristotle declared, is the basis of good Government. The idea, therefore, that regionalism is something which we should eschew seems to be more a slogan of the vested interests of favoured areas than a national requirment."[1]

ಭಾಷಾಪ್ರಾಂತರಚನೆ ಮತ್ತು ರಾಷ್ಟ್ರೀಯತೆ ಪರಸ್ಪರ ವಿರುದ್ಧ ತತ್ತ್ವಗಳಲ್ಲ ಎಂಬುದನ್ನು ಇಷ್ಟು ಸ್ಪಷ್ಟವಾಗಿ ಪ್ರತಿಪಾದಿಸಿದ ಇವರು ಪ್ರಾದೇಶಿಕ ಭಾಷೆಗಳ ಏಳಿಗೆಯನ್ನು ಕುರಿತು ಮತ್ತೂ ಸಕಾರಣವಾಗಿ ವಿಚಾರಿಸಿದ್ದಾರೆ: "I may in this connection also say a few words about the bugbear of our politicians—what some of them call 'linguism.' *I proclaim myself unashamedly a believer, an upholder, an advocate of the great national languages of this country.* Pride in one's mother tongue, a

passionate desire to improve it, to glory in its beauty and to work for its development are the duties of every educated man. No Government, however powerful armed with every conceivable resource, has anywhere been able to weaken the loyalties to one's mother tongue . . . . . and no one outside India, except in the autocrotic states of the past, considered the growth of regional languages as being dangerous to national unity . . . . . The nation-state, with a single language, a single religion and consisting of what was claimed to be a single ethnic group, *is a discarded conception of the past.*"[2]

ರಾಷ್ಟ್ರೀಯ ಪ್ರಜ್ಞೆಗೆ ಪ್ರಾದೇಶಿಕ ಪ್ರಜ್ಞೆಯಾಗಲಿ ಮಾತೃಭಾಷಾ ಪ್ರೀತಿಯಾಗಲಿ ಮಾರಕವಾಗುವ ಬದಲು ತಾರಕವಾಗುತ್ತವೆ ಎಂಬುದನ್ನೂ, ಹಾಗಲ್ಲದೆ ವಿಪರೀತವಾಗಿ ಭಾವಿಸುವುದು ಭೂತಗತ ಮನೋಭಾವವೆಂಬುದನ್ನೂ ಇಷ್ಟು ಸ್ಪಷ್ಟವಾಗಿ ದಿಟ್ಟತನದಿಂದ ಅಧಿಕಾರಯುತವಾಗಿ ಪ್ರತಿಪಾದಿಸಿದ ಸರದಾರ್ ಅವರು ವಿಶ್ವವಿದ್ಯಾನಿಲಯ ವ್ಯಾಸಂಗಕ್ರಮದಲ್ಲಿ ಪ್ರಾದೇಶಿಕ ಭಾಷೆಯ ಸ್ಥಾನಮಾನವೇನೆಂಬುದನ್ನೂ ಅತ್ಯಂತ ಪ್ರಗತಿದಾಯಕವಾಗಿ ತರ್ಕಬದ್ಧವಾಗಿ ವಿವರಿಸಿದ್ದಾರೆ.

"The idea advocated by some leaders of the past generation that English could and should continue as our common language is based on their refusal to accept the facts of democracy. The British, after a hundred years of effort, were able to educate only a microscopic minority in English and if that minority is to be entrusted with political power, English may well continue to be our common language of political discussion. But our constitution based on adult franchise is already throwing up leaders who do not come from the limited class of the English educated elite. In the years to come, this tendency, will clearly increase as political power will go progressively into the hands of those who do not come from the English educated classes.

"Even to-day a fair proportion of the members of the state legislatures cannot discuss problems effectively in English and it is only natural to expect that as time passes, the majority, in the legislatures will be familier only with Indian languages. In the circumstances, while everyone will agree to the necessity of an intellectual elite continuing to study English for scientific and cultural purposes, a language which takes so many years to learn and master and is unrelated to our major cultures cannot be a

common language in India, which in our circumstances to-day can only be Hindi. *True the position of Hindi will only be that of a language of communication and not a dominant national language setting the tone of other languages in the country as English was in heyday of its influence.* The love of regional language should not blind us to the necesity of a common language." [3]

ರಾಷ್ಟ್ರದ ದೃಷ್ಟಿಯಲ್ಲಿ ಪ್ರಾದೇಶಿಕ ಭಾಷೆಗಳ ಸ್ಥಾನಮಾನಗಳೇನಿರಬೇಕು, ಇಂಗ್ಲಿಷ್ ಹಿಂದಿಗಳ ಅಧಿಕಾರವ್ಯಾಪ್ತಿ ಎಷ್ಟಿರಬೇಕು ಎಂಬುದನ್ನು ಇಷ್ಟು ಸ್ಪಷ್ಟವಾಗಿ ತಿಳಿದಿರುವಂತೆಯೆ, ವಿಶ್ವವಿದ್ಯಾನಿಲಯದ ಇನ್ನು ಮುಂದಿನ ವ್ಯಾಸಂಗ ಕ್ರಮದಲ್ಲಿ ಇಂಗ್ಲಿಷಿಗೆ ಈಗಿರುವ ಸ್ಥಾನವೆ ಇರಬಾರದು ಎಂಬುದನ್ನೂ, ಅದಿಲ್ಲದಿದ್ದರೆ ವಿದ್ಯಾಭ್ಯಾಸದ ಮಟ್ಟ ತಗ್ಗುತ್ತದೆ ಎನ್ನುವ ಕೂಗು ವಿವೇಕರಹಿತವಾದುದು ಎಂಬುದನ್ನೂ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ.

"ವಿಶ್ವವಿದ್ಯಾನಿಲಯಗಳು ಹೆಚ್ಚಾದರೆ ಮತ್ತು ಶೀಘ್ರವಾದರೆ ಮಟ್ಟಗಳು ಇಳಿದು ಹೋಗುತ್ತವೆಂದು ಹೇಳುವ ಜನ ಯಾವಾಗಲೂ ಇರುತ್ತಾರೆ. ಶೈಕ್ಷಣಿಕ ಮಟ್ಟಗಳು ಇಳಿಯುತ್ತಿವೆ ಮತ್ತು ಹಳೆಯ ವಿಶ್ವವಿದ್ಯಾನಿಲಯಗಳು ಕೂಡ ಹಿಂದಿದ್ದಂತೆ ಇಲ್ಲ ಎನ್ನುವುದು ವಾಸ್ತವವಾಗಿ ಭಾರತದಲ್ಲಿ ಒಂದು ಜನಪ್ರಿಯ ಘೋಷವಾಕ್ಯವಾಗಿದೆ. ಇದು ನಿಜವೆ? ಮಟ್ಟಗಳಲ್ಲಿ ಇಳಿತಾಯವಾಗಿದೆಯೆ? ನನಗೇನೊ ಅದರಲ್ಲಿ ತುಂಬ ಸಂದೇಹ. ಹೌದು, ಎರಡು ವಿಷಯಗಳಲ್ಲಿ ಮಟ್ಟದ ಇಳಿತಾಯ ಕಂಡುಬರುತ್ತದೆ: ಇಂಗ್ಲಿಷಿನ ಅಧ್ಯಯನದಲ್ಲಿ ಮತ್ತು ಬ್ರಿಟಿಷ್ ಹಾಗೂ ಯೂರೋಪಿಯನ್ ಚರಿತ್ರೆಯ ವ್ಯಾಸಂಗದಲ್ಲಿ! ಈ ಎರಡರಲ್ಲಿ ಯಾವುದಕ್ಕೂ ನಾನು ವಿಷಾದಿಸುವುದಿಲ್ಲ! ಅವು ಸಹಜ ಮತ್ತು ನ್ಯಾಯಬದ್ಧ ಎಂದೆ ಬಗೆಯುತ್ತೇನೆ. ವಿಶ್ವವಿದ್ಯಾನಿಲಯದ ತರಗತಿಗಳಿಗೆ ಹೋಗುವವರೆಲ್ಲ ಇಂಗ್ಲಿಷಿನ ಉನ್ನತ ಮಟ್ಟಕ್ಕೇರಬೇಕೆಂಬ ಭಾವನೆ ವಸಾಹತುಶಾಹಿಕಾಲದ ಸಿದ್ಧಾಂತಗಳಲ್ಲೊಂದಾಗಿತ್ತು. ಇಂದು ಪ್ರಜ್ಞೆಯುಳ್ಳ ಯಾವನೂ ಇಂತಹ ವಾದವನ್ನು ಮಂಡಿಸುವುದಿಲ್ಲ. ಭಾರತದಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ನಾವು ವ್ಯಾಸಂಗಮಾಡುವುದು ಈಗಲೂ ಆವಶ್ಯಕವಾದರೂ, ಅದರಲ್ಲಿ ಪರಿಣತಿ ಗಳಿಸಬೇಕಾದವರ ಸಂಖ್ಯೆ ಅತ್ಯಲ್ಪ. ಬ್ರಿಟಿಷರ ಕಾಲದಲ್ಲಿ ಅದು ಭಿನ್ನವಾಗಿತ್ತು. ಲಿಖಿತ ಇಂಗ್ಲಿಷಿನ ಮಟ್ಟವೇ ವಿದ್ಯಾಭ್ಯಾಸದ ಅಳತೆಗೋಲಾಗಿತ್ತು. ಇದರ ಪರಿಣಾಮವೇನು? ನೂರುವರ್ಷಗಳ ನಿರಂತರ ಪ್ರಯತ್ನಗಳ ತರುವಾಯ, ನಾಗರಿಕ ಮಧ್ಯಮವರ್ಗಗಳಿಗೆ ಸೇರಿದ ಅಲ್ಪಸಂಖ್ಯಾತರಿಗೆ ಮಾತ್ರ ಇಂಗ್ಲಿಷ್ ಶಿಕ್ಷಣ ನೀಡಲು ಬ್ರಿಟಿಷರು ಸಮರ್ಥರಾದರು. ಜನತಾಶಿಕ್ಷಣದ ವಿಷಯಕ್ಕೆ ಬಂದರೆ, ಸುಮಾರು ದಶಲಕ್ಷ ಮಂದಿ ತರುಣರು ಪ್ರತಿ

1, 2, 3. ೨೦-೧೨-೧೯೬೧ರಲ್ಲಿ ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಘಟಿಕೋತ್ಸವ ಭಾಷಣದಿಂದ.

ವರ್ಷವೂ ಕಾಲೇಜುಗಳಿಗೆ ಸೇರುವಾಗ ಸಾಮಾನ್ಯ ಇಂಗ್ಲಿಷಿನ ಮಟ್ಟ ಇಳಿದು ಹೋಗುವುದು ಸ್ಪಷ್ಟ.

"ಆದರೆ ಭಾರತೀಯ ಇತಿಹಾಸ, ಅರ್ಥಶಾಸ್ತ್ರ, ಗಣಿತ ಮತ್ತು ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರಗಳಂತಹ ಮುಖ್ಯ ವಿಷಯಗಳು— ಇವುಗಳ ಮಟ್ಟಗಳಲ್ಲಿ ಇಳಿತಾಯವಾಗಿದೆಯೆ? ಹಾಗಾಗುವುದಕ್ಕೆ ಬದಲು, ಈ ವಿಷಯಗಳ ಬೋಧನೆಯಲ್ಲಿ ಮತ್ತು ಮಟ್ಟಗಳಲ್ಲಿ ಗಮನಾರ್ಹವಾದ ಪ್ರಗತಿಯಾಗಿರುವುದು ಸ್ಪಷ್ಟ. ಇಂಗ್ಲಿಷಿನ ಉಚ್ಚಾರಣೆಯನ್ನು ಅಥವಾ ಅದರ ಲೇಖನ ಸೌಲಭ್ಯವನ್ನು ಯಾರ ನಿರ್ಣಯಗಳು ಈಗಲೂ ಅವಲಂಬಿಸಿವೆಯೊ ಅಂತಹ ಜನರಿಂದ ಮಟ್ಟಗಳ ಇಳಿತಾಯವನ್ನು ಕುರಿತ ಈ ಮಾತೆಲ್ಲ ಬರುತ್ತದೆ."[4]

ಇದು ಸರದಾರ್ ಫಣಿಕ್ಕರ್ ಅವರ ದೃಢವಾದ ವಿಶಿಷ್ಟವಾದ ವಿಚಾರಾತ್ಮಕವಾದ ನಿಲವು. ವಿದೇಶದಲ್ಲಿ ವಿಶೇಷ ವ್ಯಾಸಂಗವನ್ನು ನಡೆಸಿ, ವಿದೇಶಗಳಲ್ಲಿ ಅನೇಕ ವರ್ಷ ಉನ್ನತಾಧಿಕಾರದಲ್ಲಿದ್ದು, ಬ್ರಿಟಿಷರ ಕಾಲದ ಆಳರಸರ ರಾಜ್ಯಗಳಲ್ಲಿ ವರಿಷ್ಠಾಧಿಕಾರದಲ್ಲಿದ್ದೂ ಈ ಇತಿಹಾಸಜ್ಞ ವಿಚಾರವಂತ ಪ್ರಾಧ್ಯಾಪಕ ಕವಿ ಭಾರತೀಯ ಆವಶ್ಯಕತೆಯನ್ನು ಸ್ಥಿತಿಗತಿಗಳನ್ನು ಅತ್ಯಂತ ಪ್ರಗಲ್ಭವಾಗಿ ಅರಿತಿದ್ದಾರೆ. ಅದರ ಪರಿಣಾಮವಾಗಿಯೆ ಇವರು ಮೊದಲು ಅಪ್ಪಟ ಭಾರತೀಯರು—ರಾಷ್ಟ್ರೀಯ ಪ್ರಾದೇಶಿಕ ಸಾಮರಸ್ಯ ಭಾವವಿರುವ—ಭಾರತೀಯರು; ಆಮೇಲೆ ಅಂತರ್ ರಾಷ್ಟ್ರೀಯರು. ಇತಿಹಾಸ ಪ್ರಜ್ಞೆಯುಳ್ಳ ಇವರು ನಮ್ಮ ವಿಶ್ವವಿದ್ಯಾನಿಲಯವನ್ನು ಸತ್ಪಥದಲ್ಲಿ ಮುನ್ನಡೆಸುತ್ತಾರೆಂದು ನಾವು ದೃಢವಾಗಿ ನಂಬುತ್ತೇವೆ, ಹಾಗೆಂದು ಹಾರೈಸುತ್ತೇವೆ. ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನಮಾನಗಳು ಇನ್ನು ಮುಂದೆ ಅತಿಶಯಗೊಳ್ಳುತ್ತವೆಂದು, ಕನ್ನಡ ಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗಿ ಉಳಿಯುವುದಿಲ್ಲವೆಂದೂ ಭಾವಿಸುತ್ತೇವೆ. ಡಾ॥ ಕೆ. ವಿ. ಪುಟ್ಟಪ್ಪನವರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಂದು ನಡೆಸಿದ ಕನ್ನಡ ಮಾಧ್ಯಮದ ಪ್ರಥಮ ಪ್ರಯೋಗ ಇವರ ಕಾಲದಲ್ಲಿ ಬೃಹದ್ರೂಪದಲ್ಲಿ ಯಶಸ್ವಿಯಾಗುತ್ತದೆಂದು ಆಶಿಸುತ್ತೇವೆ.

ಜೀವನ ಮತ್ತು ಕೃತಿಗಳು

ಹುಟ್ಟು: ೩-೬-೧೮೯೫; ಕೇರಳ ರಾಜ್ಯದ ಕಾವಲಂ;

ವಿದ್ಯಾಭ್ಯಾಸ: ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಮತ್ತು ಮಿಡಲ್ ಟೆಂಪಲ್, ಲಂಡನ್;

ಕಾರ್ಯಕ್ಷೇತ್ರ: ಇತಿಹಾಸ ಪ್ರಾಧ್ಯಾಪಕ, ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ, ೧೯೧೯–೨೨; ಬಿಕನಿರ್ ಸಂಸ್ಥಾನದ ಪ್ರಧಾನ ಮಂತ್ರಿ; ವಿಶ್ವಸಂಸ್ಥೆಯ

4. ೧೯೬೨ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಘಟಿಕೋತ್ಸವ ಭಾಷಣದಿಂದ.

ಮಹಾಧಿವೇಶನದಲ್ಲಿ ಭಾರತವನ್ನು ಪ್ರತಿನಿಧಿಸಿದರು; ಚೀನಾ, ಈಜಿಪ್ಟ್, ಫ್ರಾನ್ಸ್‌ಗಳಲ್ಲಿ ಭಾರತದ ರಾಯಭಾರಿಯಾಗಿದ್ದರು; ರಾಜ್ಯ ಪುನರ್‌ವಿಂಗಡಣ ಸಮಿತಿಯ ಸದಸ್ಯರಾಗಿದ್ದರು; ಸಾಹಿತ್ಯ ಅಕಾಡೆಮಿ ಸದಸ್ಯರು; ಕೇರಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು;

ಗ್ರಂಥರಚನೆ: ೫೮ ಗ್ರಂಥಗಳನ್ನು ಪ್ರಕಟಿಸಿದ್ದಾರೆ; ಮಲಯಾಳ ಗ್ರಂಥಗಳು: ಕವಿತಾತತ್ತ್ವನಿರೂಪಣಂ (ವಿಮರ್ಶೆ) ೧೯೩೩; ಚಿಂತಾತರಂಗಿಣಿ (ಕವಿತೆ) ೧೯೩೫; ಮಂಡೋದರಿ (ನಾಟಕ) ೧೯೪೦; ಕೇರಳಸಿಂಹಂ (ಕಾದಂಬರಿ) ೧೯೪೨; ಆತ್ಮಕಥಾ (ಆತ್ಮಕಥೆ) ೧೯೫೨; ಇಂಗ್ಲಿಷ್ ಗ್ರಂಥಗಳು: Indian States and the Goverment of India, 1927; A Survey of Indian History, 1947; Asia and Western Dominance, 1952; Geographical factors in the History of India, 1952; Hinduism at Cross Roads 1955, Etc.

ಕಾವ್ಯನಾಮ: ಕೇರಳಪುತ್ರ, ಚಾಣಕ್ಯ.

ಬೀಳ್ಕೊಡಿಗೆ

ಮಹಮದ್ ರಹಮತ್ತುಲ್ಲಾ ಐ.ಎ.ಎಸ್. ಅವರು ನಮ್ಮ ವಿಶ್ವವಿದ್ಯಾನಿಲಯದ ಹಂಗಾಮಿ ಉಪಕುಲಪತಿಗಳಾಗಿ ಯಶಸ್ವಿಯಾಗಿ ಅಧಿಕಾರ ನಿರ್ವಹಿಸಿ ಈಗ ತಮ್ಮ ಪೂರ್ವಸ್ಥಾನಕ್ಕೆ ತೆರಳಿದ್ದಾರೆ. ವಿದ್ಯಾಇಲಾಖೆಯ ಮುಖ್ಯ ಕಾರ್ಯದರ್ಶಿಗಳಾಗಿ ವಿದ್ಯಾಸಮಸ್ಯೆಗಳ ಅನುಭವವನ್ನು ಗಳಿಸಿದ್ದ ಈ ಅಧಿಕಾರಿಗಳು ತಮ್ಮ ಕಾರ್ಯಾವಧಿ ಬಹುಮಿತವೂ ಅನಿಶ್ಚಿತವೂ ಆಗಿದ್ದರೂ ನಮ್ಮ ವಿಶ್ವವಿದ್ಯಾನಿಲಯದ ದೈನಂದಿನ ಹಾಗೂ ದೀರ್ಘಕಾಲಿಕ ಕಾರ್ಯಗಳನ್ನು ಆತ್ಮೀಯತೆಯಿಂದ ನಡೆಸಿದರು. ತಮ್ಮ ಅಧಿಕಾರದ ಅಲ್ಪಾವಧಿಯಲ್ಲಿ ಅವರು ತಮ್ಮ ಸೌಜನ್ಯಶೀಲವಾದ ಕಾರ್ಯದಕ್ಷತೆಯನ್ನು ತೋರಿದರು. ಮತ್ತೊಂದು ಕಾರ್ಯರಂಗಕ್ಕೆ ತೆರಳಿರುವ ಶ್ರೀಯುತರು ಮತ್ತೂ ಯಶೋವಂತರಾಗಿ ಕಾರ್ಯಶೀಲರಾಗಲೆಂದು ಹಾರೈಸುತ್ತ ಅವರನ್ನು ಬೀಳ್ಕೊಡುತ್ತೇವೆ.

ಸಂಯುಕ್ತ ಸಂಚಿಕೆ

ಈವರೆಗೆ "ಪ್ರಬುದ್ಧ ಕರ್ಣಾಟಕ"ದ ವಿಜ್ಞಾನದ ವಿಭಾಗವನ್ನು, ವರ್ಷದಲ್ಲಿ ಎರಡು ವಿಶೇಷಾಂಕಗಳ ರೂಪದಲ್ಲಿ ಪ್ರಕಟಿಸುತ್ತಿದ್ದುದು ಸರಿಯಷ್ಟೆ. ಈ ವ್ಯವಸ್ಥೆ ಹಲವಾರು ರೀತಿಗಳಲ್ಲಿ ತುಂಬ ಉಪಯುಕ್ತವಾಗಿತ್ತು. ಪ್ರತಿಯೊಂದು ಸಂಚಿಕೆಯೊಡನೆಯೂ ಒಂದು ವಿಜ್ಞಾನದ ವಿಶೇಷಾಂಕವನ್ನು ಪ್ರಕಟಿಸಿದ್ದರೂ ಈ ಕಾರ್ಯದಿಂದ ಏನೂ ನಷ್ಟವಾಗುತ್ತಿರಲಿಲ್ಲ. ಆದರೆ, ಅದಕ್ಕೆ ಬದಲಾಗಿ ಈಗಿನ ತುರ್ತು ಪರಿಸ್ಥಿತಿಯಿಂದ ಇದ್ದ ಎರಡು ವಿಶೇಷಾಂಕಗಳನ್ನೂ ಸಾಹಿತ್ಯ ವಿಭಾಗದೊಂದಿಗೆ ಕೂಡಿಸಿ ಪ್ರಕಟಿಸುವ ಅಗತ್ಯ ಒದಗಿಬಂದಿದೆ. ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಕೆಲವು ಸೌಲಭ್ಯಗಳು ದೊರೆಯುವುದರಿಂದ, ಸಂಪಾದಕ ಮಂಡಲಿಯ ತೀರ್ಮಾನದ

ಮೇರೆಗೆ ಈ ಸಂಚಿಕೆಯಿಂದಲೇ ಈ ಏರ್ಪಾಡನ್ನು ಜಾರಿಗೆ ತಂದಿದೆ. ಆದರೂ ವಿಜ್ಞಾನದ ವಿಭಾಗವನ್ನು ಪ್ರತ್ಯೇಕವಾಗಿ ಮುಂದುವರಿಸುವುದರಿಂದ ವಾಚಕರಿಗೆ ಇದರಿಂದ ಹೆಚ್ಚು ಅನಾನುಕೂಲವಾಗದೆಂದು ನಂಬಿರುತ್ತೇವೆ. ಈವರೆಗೆ ಎರಡು ಸಂಚಿಕೆಗಳ ಜೊತೆಯಲ್ಲಿ ಮಾತ್ರವೇ ಬರುತ್ತಿದ್ದ ಈ ವಿಭಾಗವನ್ನು, ಸಾಕಷ್ಟು ಒಳ್ಳೆಯ ಲೇಖನಗಳು ದೊರೆತರೆ, ನಾಲ್ಕು ಸಂಚಿಕೆಗಳ ಜೊತೆಯಲ್ಲಿಯೂ ಪ್ರಕಟಿಸ ಬೇಕೆಂದು ಉದ್ದೇಶಿಸಿದ್ದೇವೆ. ವಿಜ್ಞಾನವನ್ನು ಅಧ್ಯಯನ ಮಾಡಿರುವ ವಿದ್ವಾಂಸರು ನಮ್ಮ ಈ ಆಸೆ ನೆರವೇರುವಂತೆ ಉಪಯುಕ್ತವಾದ ಲೇಖನಗಳನ್ನು ಕನ್ನಡದಲ್ಲಿ ಬರೆದು ಕಳುಹಿಸಿಕೊಡಬೇಕಾಗಿ ಈ ಮೂಲಕ ಕೋರುತ್ತೇವೆ.

ಭಿನ್ನಾಭಿಪ್ರಾಯಗಳ ಪ್ರಕಟನೆ

"ಪ್ರಬುದ್ಧ ಕರ್ಣಾಟಕ"ದಲ್ಲಿ ಪ್ರಕಟವಾಗುವ ಲೇಖನಗಳನ್ನೂ ವಿಮರ್ಶೆ ಗಳನ್ನೂ ಕುರಿತು ಕೆಲವು ಸಂದರ್ಭಗಳಲ್ಲಿ ವಿದ್ವಾಂಸರು ತಮ್ಮ ಭಿನ್ನಾಭಿಪ್ರಾಯ ಗಳನ್ನು ಸೂಚಿಸಿ ಲೇಖನಗಳನ್ನು ಬರೆದು ಕಳುಹಿಸಿಕೊಡುತ್ತಿರುವುದು ತುಂಬ ಸ್ವಾಗತಾರ್ಹವಾದ ವಿಷಯ. ಹಾಗೆ ಬಂದ ಭಿನ್ನಾಭಿಪ್ರಾಯಗಳನ್ನು ನಾವು ಮೂಲ ಲೇಖಕರಿಗೆ ಕಳುಹಿಸಿಕೊಟ್ಟು ಅವರಿಂದ ಬಂದ ಉತ್ತರದೊಂದಿಗೆ ಪ್ರಕಟಿಸ ಬೇಕೆಂದು ಆಲೋಚಿಸಿರುತ್ತೇವೆ. ಆದ್ದರಿಂದ ಭಿನ್ನಾಭಿಪ್ರಾಯಗಳ ಪ್ರಕಟನೆಗೆ ಸ್ವಲ್ಪ ವಿಳಂಬವಾಗಬಹುದು. ವಿದ್ವಾಂಸರು ಈ ಬಗ್ಗೆ ಅನ್ಯಥಾ ಭಾವಿಸಬಾರದಾಗಿ ವಿನಂತಿ. ಹೀಗೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಅಭಿಪ್ರಾಯ ಭೇದವನ್ನು ಬಿಟ್ಟು, ಬೇರೆ ಯಾವ ರೀತಿಯಲ್ಲಾದರೂ ವ್ಯಕ್ತಿನಿಂದೆಯಾಗಲಿ, ಇಲ್ಲದ ಸಲ್ಲದ ಅವಹೇಳನೆಯಾಗಲಿ ಕಂಡುಬಂದರೆ ಅಂಥ ಬರೆಹಗಳನ್ನು ಪ್ರಕಟಿಸಲು "ಪ್ರಬುದ್ಧ ಕರ್ಣಾಟಕ"ದಲ್ಲಿ ಅವಕಾಶವಿಲ್ಲವೆಂದು ನಮ್ರವಾಗಿ ತಿಳಿಸಬಯಸು ತ್ತೇವೆ. ಪಾಂಡಿತ್ಯ ಕ್ಷೇತ್ರದಲ್ಲಿ ದೃಷ್ಟಿಭೇದಗಳಿರುವುದು ಅನಿವಾರ್ಯ ; ಅವುಗಳನ್ನು ಮಥನಿಸಿ ವಿಚಾರಮಾಡಬೇಕಾದುದು ಅಗತ್ಯ. ಈ ಕೆಲಸ ಸೌಜನ್ಯದಿಂದಲೂ ಸೌಹಾರ್ದದಿಂದಲೂ ನಡೆಯಬೇಕಾಗಿದೆ. ಉಭಯ ವಿದ್ವಾಂಸರ ಅಭಿಪ್ರಾಯ ಗಳಿಗೂ ಮನ್ನಣೆ ನೀಡಬೇಕಾದುದು ಸಂಪಾದಕರ ಧರ್ಮವಾದ್ದರಿಂದ, ವಿದ್ವಾಂಸರು ಈ ಬಗ್ಗೆ ನಮ್ಮೊಂದಿಗೆ ಸಹಕರಿಸಬೇಕಾಗಿ ವಿನಂತಿ.

ವಿಜ್ಞಾನ ವಿಭಾಗ

ವಿಷಯಸೂಚಿಕೆ

ಪ್ರಬುದ್ಧ ಕರ್ಣಾಟಕ

ಶೋಭಕೃತು ಸಂವತ್ಸರ ೧೭೬ ಆಷಾಢ ಸಂಚಿಕೆ

ಯಂತ್ರಶಿಲ್ಪಿಯ ಕನಸುಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು.)

೨. ಸಾಗರಗಳಿಂದ ಶಕ್ತಿ

ಸಾಮಾನುಗಳ ದರದು ಹೆಚ್ಚುತ್ತಿರುವಾಗ, ಸರಬರಾಜು ಕಡಿಮೆಯಾಗುತ್ತಿರುವಾಗ, ಇವೊತ್ತಿನ ಮಾನವನು ಸಾಗರದ ಕಡೆಗೆ ಸಹಾಯಕ್ಕಾಗಿ ನೋಡುತ್ತಿದ್ದಾನೆ.

ಸಮುದ್ರದಲ್ಲಿ ಸವೆಯದಂಥ ರಾಸಾಯನಿಕ ಮತ್ತು ಲೋಹಗಳ ಗಣಿಯಿದೆ. ಸಮುದ್ರದ ನೀರಿನಿಂದ ಬ್ರೋಮಿನ್ ಮತ್ತು ಮ್ಯಾಗ್ನೀಸಿಯಂ ಬರುತ್ತವೆ. ಒಂದು ಸಲೆ ಮೈಲಿನಷ್ಟು ಸಮುದ್ರದ ನೀರಿನಲ್ಲಿ ೧೮,೦೦೦ ಪೌಂಡ್ ಯೂರೇನಿಯಮ್, ಟನ್ನುಗಳಷ್ಟು ಚಿನ್ನ ಃ ಎಷ್ಟೋ ಟನ್ನುಗಳಷ್ಟು ಕಬ್ಬಿಣ ಮತ್ತು ಪ್ರೀಸೊಡೈಮಿಯಂ (Praesodymium) ನಂಥ ಅಪೂರ್ವ ಲೋಹಗಳೂ ಇವೆ. ಅವುಗಳನ್ನು ಸ್ವಾಧೀನ ಮಾಡಿಕೊಳ್ಳುವ ದಕ್ಷತೆಯ ಮಾರ್ಗಗಳನ್ನು ಮಾತ್ರ ನಾವು ಕಂಡುಹಿಡಿಯಬೇಕಾಗಿದೆ. ವಿಶಾಲವಾದ ಭತ್ತದ ಗದ್ದೆಯಲ್ಲಿ ಒಂದು ಚೀಲ ಭತ್ತವನ್ನು ತೆಗೆದುಕೊಂಡಂತೆ ನಾವು ಇದುವರೆಗೂ ಅನಂತವಾದ ಸಮುದ್ರದ ಖನಿಜ ಮತ್ತು ಆಹಾರದ ಅವಕಾಶಗಳನ್ನು ಉಪಯೋಗಿಸಿಕೊಂಡಿದ್ದೇವೆ.

ಯಂತ್ರಶಿಲ್ಪಿಗಳೂ ಭೌತಶಾಸ್ತ್ರಜ್ಞರೂ ಹೊಸ ಶಕ್ತಿಯ ಆಕರಕ್ಕಾಗಿ

ಸಮುದ್ರದ ಕಡೆಗೆ ನೋಡುತ್ತಲೇ ಇದ್ದಾರೆ. ಗಾಳಿಯಲ್ಲಿ ಏರುವ ಸಮುದ್ರವನ್ನು ಹಿಡಿದರೆ ನಮಗೆ ಶಕ್ತಿಯ ಅಭಾವವೇ ಇಲ್ಲವೆಂದು ಅನೇಕರು ಸಾರಿದ್ದಾರೆ.

ಸಮುದ್ರದ ಶಕ್ತಿಯು ಕೊನೆಯಪಕ್ಷ ನಾಲ್ಕು ರೂಪಗಳಲ್ಲಿ ದೊರೆಯುತ್ತದೆ. ೧) ಅಲೆಗಳು, ೨) ತೆರೆನೊರೆ (Surf), ೩) ಉಬ್ಬರವಿಳಿತಗಳು ಮತ್ತು ೪) ಸಮುದ್ರದ ಮೇಲಿನ ನೀರಿಗೂ ಆಳದ ನೀರಿಗೂ ಇರುವ ಖರತ್ವದ ಅಂತರ.

ಸಮುದ್ರದಿಂದ ಇಲ್ಲವೆ ಗಾಳಿಯಿಂದ ಶಕ್ತಿಯನ್ನು ಪಡೆಯಬೇಕೆನ್ನುವಾಗ ಸೂರ್ಯನ ಶಕ್ತಿಯ ವಿಚಾರವನ್ನು ಜ್ಞಾಪಿಸಿಕೊಳ್ಳುವುದು ಒಳ್ಳೆಯದು. ಗಾಳಿಯನ್ನೂ ಅಲೆಗಳನ್ನೂ ನೆಚ್ಚುವುದಕ್ಕೇ ಆಗುವುದಿಲ್ಲ. ಸಮುದ್ರ ತೀರದಲ್ಲಿ ಯಾವಾಗಲೂ ತೆರೆನೊರೆಯಿದ್ದೇ ಇರುತ್ತದೆ. ಆದರೆ ಅದು ಇವೊತ್ತು ಉಗ್ರವಾಗಿರಬಹುದು. ನಾಳೆ ಸೌಮ್ಯವಾಗಿರಬಹುದು. ಭರತವು ಇಂಥ ಕಾಲದಲ್ಲಿಯೇ ಬರುತ್ತದೆಯೆಂದು ಹೇಳಬಹುದು. ಆದರೆ ಅದು ಬಿಟ್ಟು ಬಿಟ್ಟು ಬರುತ್ತದೆ. ಸಂತತವಾಗಿ ಬರುವುದಿಲ್ಲ. ಆದರೆ ಸಮುದ್ರದ ಮೇಲಿನ ಬಿಸಿನೀರಿಗೂ ತಳದ ತಣ್ಣೀರಿಗೂ ಇರುವ ಖರತ್ವದ ಅಂತರದಿಂದ ಯಾವಾಗಲೂ ಶಕ್ತಿಯನ್ನು ಪಡೆಯಬಹುದು.

ಉಷ್ಣವಲಯದ ಸಮುದ್ರದ ಮೇಲುಭಾಗದ ಬಿಸಿನೀರು ಕುದಿಯುವ ಮಟ್ಟಕ್ಕೆ ಕೆಳಗೂ ಇರುತ್ತವೆ. ಆದ್ದರಿಂದ ಆವಿಯ ಎಂಜಿನ್ನಿನ ಮೂಲಕ ಶಕ್ತಿಯನ್ನು ಎಳೆಯುವುದು ಸಾಧ್ಯವಿಲ್ಲ. ಆದರೆ ತಗ್ಗಿನ ಕುದಿಯುವ ಮಟ್ಟದ ದ್ರವದ ಹಬೆಯನ್ನು ಉಪಯೋಗಿಸುವ ಆವಿಯ ಎಂಜಿನ್ನುಗಳೂ ಇವೆ. ಕೆಲವು ಶಕ್ತಿಯ ಉತ್ಪಾದನೆಯ ಯಂತ್ರಗಳಲ್ಲಿ ಹೆಚ್ಚಿನ ಕುದಿಯುವ ಮಟ್ಟದ ದ್ರವವನ್ನೂ ಉಪಯೋಗಿಸುತ್ತಾರೆ. ಅಲ್ಲಿನ ಬಾಯಿಲರುಗಳಲ್ಲಿಯೂ ಟರ್ಬೈನುಗಳಲ್ಲಿಯೂ ಸಾಧಾರಣವಾದ ಒತ್ತಡದಲ್ಲಿ ಸೆಂಟಿಗ್ರೇಡ್ ೩೫೦ ಡಿಗ್ರಿಯ ಖರತ್ವದಲ್ಲಿ ಕುದಿಯುವ ಪಾದರಸವನ್ನು ಉಪಯೋಗಿಸುತ್ತಾರೆ. ಇಂಥ ಎಂಜಿನ್ನು ನೀರಿನ ಆವಿಯ ಎಂಜಿನ್ನಿಗಿಂತ ಹೆಚ್ಚಿನ ಖರತ್ವದಲ್ಲಿ ಕೆಲಸಮಾಡುತ್ತದೆ. ಕಡಿಮೆಯ ಖರತ್ವದ ಎಂಜಿನ್ನುಗಳಲ್ಲಿ—೨ ಡಿಗ್ರಿ ಸೆಂಟಿಗ್ರೇಡಿನ ಮೇಲೆ ಅನಿಲವಾಗುವ ಸಲ್ಫರ್ ಡಯಾಕ್ಸೈಡನ್ನು ಉಪಯೋಗಿಸಬಹುದು. ಇದು ಗಂಧಕವನ್ನು ಹೊತ್ತಿಸಿದಾಗ ಬರುವ ಖಾರವಾದ ವಾಸನೆಯ ಅನಿಲ.

ಶಕ್ತಿಯ ಉತ್ಪಾದನೆಯಲ್ಲಿ ಮೇಲಿನ ನೀರಿನ ಪರಮಾವಧಿಯ ಖರತ್ವವು ಅಷ್ಟು ಮುಖ್ಯವಲ್ಲ. ಅದಕ್ಕೂ ಕೆಳಗಿನ ತಣ್ಣೀರಿನ ಖರತ್ವಕ್ಕೂ ಇರುವ ವ್ಯತ್ಯಾಸವೇ ನಮಗೆ ಬೇಕಾದದ್ದು. ಇದನ್ನು ಜಲಪಾತದ ಮಟ್ಟದ ವ್ಯತ್ಯಾಸದ ಮಾದರಿಯಲ್ಲಿ ಖರತ್ವದ ಮಟ್ಟದ ವ್ಯತ್ಯಾಸವೆನ್ನಬಹುದು. ಬೇರೆ ಬೇರೆ ಜಲಪಾತಗಳಲ್ಲಿ ಮಟ್ಟದ ವ್ಯತ್ಯಾಸವು ಹೇಗೆ ಬೇರೆ ಬೇರೆಯಾಗಿರುತ್ತದೆಯೋ ಹಾಗೆ ಖರತ್ವದ ಮಟ್ಟವೂ ಬೇರೆ ಬೇರೆ ಜಾಗಗಳಲ್ಲಿ ವ್ಯತ್ಯಾಸವಾಗಿರಬಹುದು. ಇವೊತ್ತಿನ ಎಂಜಿನ್ನುಗಳು ಕೆಲಸಮಾಡಬೇಕಾದರೆ ಈ ವ್ಯತ್ಯಾಸವು ಹೆಚ್ಚಾಗಿರಬೇಕು.

ಹೀಗೆ ಶಕ್ತಿಯನ್ನು ಸಂಪಾದಿಸುವ ಪ್ರಯತ್ನವು ಮೊದಲು ನಡೆದದ್ದು ಫ್ರಾನ್ಸಿನಲ್ಲಿ ೧೮೮೧ರಲ್ಲಿ. ಒಂದು ಬುಗ್ಗೆಯ ನೀರು ಸೆಂಟಿಗ್ರೇಡ್ ೩೦ ಡಿಗ್ರಿಯ ಮಟ್ಟದಲ್ಲಿದ್ದು ಪಕ್ಕದ ಹೊಳೆಯ ನೀರಿನ ಖರತ್ವವು ೧೫ ಡಿಗ್ರಿಯಲ್ಲಿದ್ದರೆ ಬುಗ್ಗೆಯಲ್ಲಿ ಬಾಯಿಲರನ್ನಿಟ್ಟು ಅದರ ಕಂಡೆನ್‌ಸರನ್ನು ಹೊಳೆಯ ನೀರಿನಿಂದ ತಣ್ಣಗೆ ಮಾಡಿದರೆ ಸೆಂಟಿಗ್ರೇಡ್ ೧೫ ಡಿಗ್ರಿಯ ಖರತ್ವದ ವ್ಯತ್ಯಾಸವು ಬರುತ್ತದೆ. ಬಾಯಿಲರಿನಲ್ಲಿ ಸಲ್ಫರ್ ಡಯಾಕ್ಸೈಡನ್ನು ತುಂಬಿದರೆ ಅದೂ ಅನಿಲವಾಗಿ ಒತ್ತಡವನ್ನು ಉಂಟುಮಾಡಿದಾಗ ಬಾಯಿಲರಿಗೂ ಕಂಡೆನ್‌ಸರಿಗೂ ಇರುವ ಆವಿಯ ಒತ್ತಡದ ವ್ಯತ್ಯಾಸದಿಂದ ಒಂದು ಎಂಜಿನ್ನನ್ನು ನಡೆಸಬಹುದೆಂದು ತೋರಿತು. ಭೂಮಿಯ ಮೇಲೆ ಎಷ್ಟೋ ಬಿಸಿನೀರಿನ ಬುಗ್ಗೆಗಳಿವೆ. ಅವು ಇಲ್ಲದೆ ಇರುವ ಕಡೆ ಬಾಯಿಲರನ್ನು ತಣ್ಣೀರಿನಲ್ಲಿಟ್ಟರೂ ಕಂಡೆನ್‌ಸರನ್ನು ನೀರ್ಗಲ್ಲ ನದಿಯಲ್ಲಿ (Glacier) ಇಡಬಹುದು. ಸಮಭಾಜಕ ವೃತ್ತದಲ್ಲಿಯೂ ಸಾಗರದ ತಳದ ನೀರು ಸೆಂಟಿಗ್ರೇಡ್ ೫ ಡಿಗ್ರಿಗಳಿಗಿಂತ ಬಿಸಿಯಾಗಿರುವುದಿಲ್ಲ. ಮೇಲುಗಡೆ ಬಾಯಿಲರನ್ನಿಟ್ಟು ಒಂದು ಮೈಲಿಯ ಆಳದಲ್ಲಿ ಕಂಡೆನ್‌ಸರನ್ನು ಇಟ್ಟರೆ ಕೆಲಸ ನಡೆಯುತ್ತದೆ.

ಆಮೇಲೆ ಬಹುಕಾಲ ಹೆಚ್ಚೇನೂ ನಡೆಯಲಿಲ್ಲ. ಫ್ರಾನ್ಸ್‌ನಲ್ಲಿ ನಿಯಾನ್ ದೀಪಗಳನ್ನು ನಿರ್ಮಿಸಿ ಹಣವನ್ನು ಗಳಿಸಿದ್ದ ಕ್ಲಾಡ್ ಮತ್ತು ಇಂಜನಿಯರ್ ಬೋಷಿರೊ ಒಂದು ವರಧಿಯನ್ನು ವಿಜ್ಞಾನದ ಅಕೆಡಮಿಗೆ ೧೯೨೬ರಲ್ಲಿ ಒಪ್ಪಿಸಿದರು. ಉಷ್ಣವಲಯದಲ್ಲಿ ಸಮುದ್ರದ ಮೇಲಿನ ನೀರಿಗೂ ಕೆಳಗಿನ ನೀರಿಗೂ ಖರತ್ವದಲ್ಲಿ ಸೆಂಟಿಗ್ರೇಡ್ ೨೫ ಡಿಗ್ರಿಯ ವ್ಯತ್ಯಾಸವಿರುವುದಷ್ಟೆ. ಶಾಖವನ್ನು ಹೊರಗೆ ಬಿಡದ ಕೊಳವಿಯಿಂದ ಕೆಳಗಿನ ನೀರನ್ನು ಮೇಲಕ್ಕೆ ತಂದು ಶಕ್ತಿಯನ್ನು ಉತ್ಪಾದನೆ ಮಾಡಬಹುದೆಂದು ಅವರು ಸೂಚಿಸಿದರು. ದೊಡ್ಡ ಗಾಜಿನಸೀಸೆಗಳಲ್ಲಿ ಸೆಂಟಿಗ್ರೇಡ್ ೩೬ ಡಿಗ್ರಿಯ ನೀರನ್ನು ತುಂಬಿ ಕಡಿಮೆ ಒತ್ತಡದ ನೀರಿನ ಆವಿಯನ್ನು ಗಾಜಿನ ಕೊಳವಿಯ ಮೂಲಕ ಮತ್ತೊಂದು ದೊಡ್ಡ ಗಾಜಿನಸೀಸೆಯೊಳಗಿದ್ದ ಟರ್ಬೈನಿನ ಚಕ್ರಗಳ ಮೇಲೆ ಬಿಟ್ಟರು. ಈ ಸೀಸೆಯ ತಳದಲ್ಲಿ ಮಂಜಿನಗೆಡ್ಡೆಯನ್ನು ತುಂಬಿ ಎರಡು ಸೀಸೆಗಳಿಂದಲೂ ಗಾಳಿಯನ್ನು ತೆಗೆದು ಬಿಸಿನೀರು ಕುದಿಯುವಂತೆ ಮಾಡಿದರು. ಟರ್ಬೈನಿನಿಂದ ತಿರಿಗಿದ ಚಿಕ್ಕ ಡೈನಾಮೊ ಮೂರು ಸಣ್ಣ ವಿದ್ಯುದ್ದೀಪಗಳನ್ನು ಹತ್ತಿಸಿತು.

ಇದಾದ ಮೇಲೆ ಎಂಜಿನಿಯರು ಬೆಲ್ಜಿಯಮ್ಮಿನಲ್ಲಿ ಮ್ಯೂಸ್ ನದಿಯಲ್ಲಿ ಕಂಡೆನ್‌ಸರನ್ನಿಟ್ಟು ನದಿಯ ನೀರಿಗಿಂತ ಸೆಂಟಿಗ್ರೇಟ್ ೨೦ ಡಿಗ್ರಿ ಶಾಖವಾದ ಕಬ್ಬಿಣದ ಕುಲಿಮೆಗಳಲ್ಲಿ ತಣ್ಣಗೆ ಮಾಡುವ ನೀರನ್ನು ಉಪಯೋಗಿಸಿ ೧೯೨೮ರಲ್ಲಿ ಸಮರ್ಪಕವಾಗಿ ಕೆಲಸಮಾಡಿಸಿದನು. ಈಗ ಖರತ್ವವು ಸೆಂಟಿಗ್ರೇಡ್ ೨೮ ಡಿಗ್ರಿಗಳಿದ್ದಾಗ ಯಂತ್ರವು ಕೆಲಸಮಾಡುವುದರಲ್ಲಿ ಯಾವ ಅನುಮಾನವೂ ಉಳಿಯಲಿಲ್ಲ. ಈ ಪರೀಕ್ಷಾಯಂತ್ರವನ್ನು ವಿಜ್ಞಾನದ ಅಕೆಡಮಿಯವರು ನೋಡಿ ಅದು ಕೆಲಸ

ಮಾಡುವುದೆಂದೂ ಆದರೆ ಒಂದು ಮೈಲಿ ಉದ್ದವಾದ ಶಾಖವನ್ನು ಹೊರಗಡೆ ಬಿಡದ ಕೊಳವಿಯನ್ನು ತಯಾರಿಸುವುದು ಎಂದು ಸಾಧ್ಯವೇ ಎಂದು ಇನ್ನೂ ತೋರಿಸಬೇಕಾಗಿದೆಯೆಂದೂ ಅಭಿಪ್ರಾಯಪಟ್ಟರು.

ಈ ಯಂತ್ರವನ್ನು ಉಷ್ಣವಲಯದಲ್ಲಿ ಹಾವನದ ಹತ್ತಿರ ಕ್ಯೂಬದ ಉತ್ತರ ತೀರಕ್ಕೆ ಒಯ್ದುದ್ದಾಯಿತು. ಇಲ್ಲಿ ಸಮುದ್ರದ ಮೇಲಿನ ನೀರಿನ ಶಾಖವು ೨೮° ಸೆಂಟಿಗ್ರೇಡ್ ಬಳಸಿದ ನೀರನ್ನು ಆಚೆಗೆ ಸಾಗಿಸುವುದಕ್ಕೆ ಬಲವಾದ ಸಮುದ್ರ ಪ್ರವಾಹವೂ ಇಲ್ಲಿ ಇದೆ. ಆದರೆ ಸಮುದ್ರದ ತಳವು ಸಾಕಷ್ಟು ಇಳಿಜಾರಾಗಿರದೆ ಇದ್ದದ್ದರಿಂದ ತಣ್ಣೀರಿನ ಕೊಳವಿಯು ೧.೨ ಮೈಲಿ ಉದ್ದವಾಗಬೇಕಾಯಿತು. ಈ ಯಂತ್ರಕ್ಕೆ ೧ ೧/೨ ಅಡಿ ವ್ಯಾಸದ ಕೊಳವಿಯು ಸಾಕಾಗಿದ್ದರೂ ಆಮೇಲೆ ಇನ್ನೂ ದೊಡ್ಡ ಯಂತ್ರದಲ್ಲಿ ಉಪಯೋಗಿಸುವುದಕ್ಕಾಗಿ ಉಕ್ಕಿನ ೫ ಅಡಿಯ ಕೊಳವಿಗಳನ್ನು ತಯಾರಿಸಿದ್ದಾಯಿತು. ಆದರೆ ಮೊದಲನೆಯ ಕೊಳವಿಯ ಹಗ್ಗವು ಕಡಿದು ಕಳೆದು ಹೋಯಿತು. ಎರಡನೆಯದಕ್ಕೆ ಪೆಟ್ಟುಬಿದ್ದು ಸೋರಲು ಪ್ರಾರಂಭವಾಯಿತು. ಮೂರನೆಯದರ ಉದ್ದ ೨೦೦೦ ಅಡಿಯಷ್ಟು ಕಡಿಮೆಯಾಯಿತು. ಅಂತೂ ೧೯೩೦ರಲ್ಲಿ ಇದು ಕೆಲಸಮಾಡಿ ೨೨ ಕಿಲೋವಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಿತು. ಇದೇ ಯಂತ್ರದಿಂದಲೇ ಬೆಲ್ಜಿಯಮ್ಮಿನಲ್ಲಿ ೫೦೦ ಕಿಲೋವಾಟ್ ಬಂದಿತ್ತು. ಇದಕ್ಕೆ ಕಾರಣವೇನೆಂದರೆ ಅಲ್ಲಿ ಖರತ್ವದ ಮಟ್ಟವು ಸೆಂಟಿಗ್ರೇಡ್ ೨೦ ಡಿಗ್ರಿಗಳಿದ್ದರೆ ಇಲ್ಲಿ ಅದು ೧೩ ಡಿಗ್ರಿಗಳಿಗೆ ಇಳಿಯಿತು. ಈ ಪ್ರದರ್ಶನವು ಪರಿಣಾಮಕಾರಿಯಾಗಲಿಲ್ಲ. ಆದರೆ ಯಂತ್ರವು ಕೆಲಸಮಾಡಿತೆಂಬ ಸಮಾಧಾನ ಬಂತು.

ಕ್ಲಾಡ್ ಅವರ ಅಂದಾಜೇ ಬೇರೆಯಾಗಿತ್ತು. ಅವರ ವಿದ್ಯುದಾಗಾರವು ೨೦೦೦ ಅಡಿ ವ್ಯಾಸದ ಷಡ್ಭುಜದ ತೇಲುವ ದ್ವೀಪದ ಹಾಗಿತ್ತು. ಮಧ್ಯದಲ್ಲಿ ಹಡಗುಗಳಿಗೂ ವಿಮಾನಗಳಿಗೂ ಅದರ ಸ್ಥಾನವನ್ನು ತೋರಿಸುವುದಕ್ಕಾಗಿ ದೀಪದ ಮನೆ. ಕೇಂದ್ರದಿಂದ ಆರು ಮೂಲೆಗಳ ಕಡೆಗೂ ೪೦.೦೦೦ ಕಿಲೋವಾಟ್ ಶಕ್ತಿಯ ನಾಲ್ಕು ಟರ್ಬೋ—ಜನರೇಟರುಗಳು. ಹೀಗೆ ಒಟ್ಟು ಸುಮಾರು ೧೦ ಲಕ್ಷ ಕಿಲೋ ವಾಟುಗಳಾಯಿತು. ಬಿಸಿನೀರನ್ನು ದ್ವೀಪದ ತಳದ ಮೂಲಕವೂ ಕಣ್ಣೀರನ್ನು ಇಳೀ ಬಿಟ್ಟಿರುವ ೩೦೦೦ ಅಡಿ ಉದ್ದದ ಲಂಬವಾದ ಕೊಳವಿಯ ಮೂಲಕವೂ ತೆಗೆದು ಕೊಂಡು, ಮಿಶ್ರಣವಾದ ನೀರನ್ನು ೩೦೦ರಿಂದ ೪೦೦ ಅಡಿ ಆಳದಲ್ಲಿ ಬಿಡುವ ಏರ್ಪಾಡಿತ್ತು. ವಿದ್ಯುತ್ತನ್ನು ಕೂಡಿಹಾಕುವ ಯೋಚನೆಯೇ ಇವನಿಗೆ ಇರಲಿಲ್ಲ. ಸಮುದ್ರದ ನೀರಿನಿಂದ ರಾಸಾಯನಿಕಗಳನ್ನೂ ಲೋಹಗಳನ್ನೂ ಈ ವಿದ್ಯುತ್ತಿನ ಸಹಾಯದಿಂದ ತೆಗೆಯುವುದು ಈತನ ಉದ್ದೇಶವಾಗಿತ್ತು. ಇದು ನಡೆಯಲಿಲ್ಲ.

ಕೊನೆಯಲ್ಲಿ ಇವರು ಒಂದು ಹಡಗಿನ ಮೇಲೆ ಈ ವಿದ್ಯುದಾಗಾರವನ್ನು ಇಡಲು ನಿಶ್ಚಯಿಸಿದರು. ಮೊದಲನೆಯ ಸಂವಿಧಾನದ ೮೦೦ ಕಿಲೋವಾಟಿನ

ಆಗಾರವನ್ನು ಅವರು ೧೦೦೦ ಟನ್ ತೂಕದ ಹಡಗಿನ ಮೇಲೆ ಜೋಡಿಸಿದರು. ತಣ್ಣೀರಿನ ಕೊಳವಿಯನ್ನು ಪುನರ್ವಿನ್ಯಾಸಮಾಡಿದರು. ಇದರ ಕೆಳ ಕೊನೆಯನ್ನು ೨೦೦ ಟನ್ ತೂಕದ ಕಾಂಕ್ರೀಟಿನ ದಿಮ್ಮಿಗೆ ಕಟ್ಟಿ ಮೇಲಿನ ಕೊನೆಯಲ್ಲಿ ಕೊಳವಿಯನ್ನು ಸಾಧ್ಯವಾದಮಟ್ಟಿಗೆ ಲಂಬವಾಗಿ ಇಡುವ ಹಾಗೆ ನೀರಿನ ಕೆಳಗೆ ೫೦ ಅಡಿಯ ಆಳದಲ್ಲಿ ಒಂದು ಗೋಳಾಕಾರವಾದ ತೇಲುಬುರುಡೆಯನ್ನಿಟ್ಟರು. ಬಿರುಗಾಳಿ ಬಂದಾಗ ಈ ಕೊಳವಿಯನ್ನು ಕಳಚುವ ಹಾಗೆ ಏರ್ಪಾಡಾಗಿತ್ತು.

ಇದೆಲ್ಲಾ ಸರಿ. ಆದರೆ ವಿಮರ್ಶಕರ ಅಭಿಪ್ರಾಯದ ಪ್ರಕಾರ ಸಾಕಷ್ಟು ಉದ್ದವಿಲ್ಲದ ತಣ್ಣೀರಿನ ಕೊಳವಿಯಿಂದ ಬರುವ ಕವೋಷ್ಣವಾದ ನೀರೇ ಎಲ್ಲಾ ತೊಂದರೆಗೂ ಕಾರಣವಾಗಿತ್ತು. ಕಡಿಮೆಯ ಒತ್ತಡದ ನೀರಿನ ಹಬೆಯನ್ನು ಬಳಸಿದ್ದೇ ತಪ್ಪೆಂದೂ ಸಲ್ಫರ್‌ಡಯಾಕ್ಸೈಡ್ ಇಲ್ಲವೆ ಅಮೋನಿಯವನ್ನು ಉಪಯೋಗಿಸಬೇಕಾಗಿತ್ತೆಂದೂ ಅವರು ತಿಳಿದಿದ್ದರು. ಆಗ ಲಾರ್ಡ್‌ರೆಲ್ಲೊದಲ್ಲಿ ಆವಿಯು ಮಾಡುತ್ತಿದ್ದ ಕೆಲಸವನ್ನು ಬಿಸಿನೀರು ಇಲ್ಲಿ ಮಾಡುತ್ತಿತ್ತು, ಎಂದರೆ ಸಲ್ಫರ್ ಡಯಾಕ್ಸೈಡನ್ನು ಕಾಯಿಸುತ್ತಿತ್ತು. ಹಾಗೆ ಮಾಡಿದ್ದರೆ ಸಮುದ್ರದ ನೀರಿನ ಉಪ್ಪಿನಿಂದಲೂ ಮೇಲಿನ ನೀರಿನಲ್ಲಿದ್ದ ಗಾಳಿಯಿಂದಲೂ ತೊಂದರೆ ಬರುತ್ತಿರಲಿಲ್ಲ. ಆದರೆ ಈ ಸದುದ್ದೇಶದ ಟೀಕೆಗಳಿಗೆ ಕ್ಲಾಡ್ ಕಿವಿಗೊಡಲಿಲ್ಲ. ಹಡಗಿನಲ್ಲಿ ಪ್ರಯೋಗಗಳು ೧೯೩೩ರಲ್ಲಿ ನಡೆದು ಕ್ಯೂಬದಲ್ಲಿ ಆದ ಹಾಗೆಯೇ ಯಂತ್ರವೇನೋ ಓಡಿತು. ಆದರೆ ಲಕ್ಷಣವಾಗಿ ಓಡಲಿಲ್ಲ. ಇದರಿಂದ ಈ ಮಾರ್ಗದಲ್ಲಿ ಶಕ್ತಿಯ ಉತ್ಪಾದನೆಯಾಗುವುದಿಲ್ಲವೆಂದು ಹೇಳಿದ ಹಾಗಾಗಲಿಲ್ಲ. ಕ್ರಮವು ಉತ್ತಮವಾಗಬೇಕಾಗಿದೆ.

ಕಂಡೆನ್‌ಸರನ್ನು ಮಂಜುಗಡ್ಡೆಯಲ್ಲಿಟ್ಟರೆ ತಣ್ಣೀರಿನಲ್ಲಿ ಬಾಯಿಲರ್ ಇರಬಹುದೆಂಬ ಕ್ರಮವನ್ನು ಭೌತಶಾಸ್ತ್ರಜ್ಞ ಬಾರ್ಜೊ ಅನುಸರಿಸಿದನು. ಆರ್ಕ್ಟಿಕ್ ಸಮುದ್ರದಲ್ಲಿಯೂ ಸಮುದ್ರದ ತಳದನೀರು ಸೆಂಟಿಗ್ರೇಡ್—೫ ಡಿಗ್ರಿಯಲ್ಲಿರುತ್ತದೆ. ಆದರೆ ಅಲ್ಲಿನ ಗಾಳಿಯ ಖರತ್ವವು—೪೫ ಡಿಗ್ರಿ ಸೆಂಟಿಗ್ರೇಡ್. ಎಂದರೆ ವ್ಯತ್ಯಾಸವು ೫೦ ಡಿಗ್ರಿ ಸೆಂಟಿಗ್ರೇಡ್ ಆಯಿತು. ಸಾಲದ್ದಕ್ಕೆ ಶೀತವಲಯದಲ್ಲಿ ಶಾಖವು ಅವಶ್ಯವಾಗಿ ಬೇಕು. ಕೊಳವಿಯೂ ಕ್ಲಾಡಿನ ಯೋಜನೆಯಷ್ಟು ಉದ್ದವಾಗಿರಬೇಕಿಲ್ಲ. ಮಂಜುಗಡ್ಡೆಯ ಮೂಲಕ ಕೆಳಗಿನ ನೀರನ್ನು ಮುಟ್ಟಿದರೆ ಸಾಕು.

ಸೆಂಟಿಗ್ರೇಡ್—೧೦ ಡಿಗ್ರಿಗಿಂತ ಕಡಿಮೆಯ ಖರತ್ವದಲ್ಲಿ ದ್ರವವಾಗುವ ಬುಟೇನನ್ನು (C_4H_{10}) ಈತನು ಎಂಜಿನ್ನಿನಲ್ಲಿ ಉಪಯೋಗಿಸಿದನು. ಬುಟೇನ್ ನೀರಿನೊಡನೆ ಬೆರೆಯುವುದಿಲ್ಲ; ಕರಗುವುದಿಲ್ಲ. ಆದ್ದರಿಂದ ಯಂತ್ರದಲ್ಲಿ ತೊಡಕಿಲ್ಲ. ಬಾಯಿಲರಿನಲ್ಲಿ ಬುಟೇನ್ ದ್ರವವನ್ನು ತುಂಬಿ ಮಂಜುಗಡ್ಡೆಯ ಕೆಳಗಿನಿಂದ ನೀರನ್ನು ಪಂಪುಮಾಡಿ ಬಾಯಿಲರಿನೊಳಕ್ಕೆ ಬಿಟ್ಟರೆ ಬುಟೇನ್ ಕುದ್ದು ನೀರು ಮಂಜುಗಡ್ಡೆಯಾಗುತ್ತದೆ. ಬುಟೇನ್ ಅನಿಲವು ಟರ್ಬೈನಿನಲ್ಲಿ ತನ್ನ ಕೆಲಸವನ್ನು ಮುಗಿಸಿದ ಮೇಲೆ ಉಪ್ಪುನೀರಿನ ಮಂಜುಗಡ್ಡೆಯಿಂದ ತುಂಬಿದ ಕಂಡೆನ್‌ಸರಿಗೆ

ಹೋಗುತ್ತದೆ. ಅಲ್ಲಿ ಮತ್ತೆ ದ್ರವವಾಗಿ ಹೊರಗಡೆ ಹೆಚ್ಚು ಶೀತವಿಲ್ಲದೆ ಹೋದರೆ ಮಂಜುಗಡ್ಡೆಯೂ ಕೊಂಚ ಕರಗಬಹುದು. ಎರಡು ದ್ರವಗಳೂ ಬೆರೆಯದೆ ಇರುವುದರಿಂದ ಬುಟೇನ್ ಬಾಯಿಲರಿಗೆ ಬರುತ್ತದೆ. ಕಂಡೆನ್ಸರಿನ ಉಪ್ಪು ನೀರನ್ನು ಮತ್ತೆ ಮಂಜುಗಡ್ಡೆಯಾಗುವುದಕ್ಕೆ ಬಿಡುತ್ತಾರೆ.

ಮೊದಲದೃಷ್ಟಿಗೆ ೨೮° ಸೆಂಟಿಗ್ರೇಡ್ ಖರತ್ವದ ನೀರಿನಿಂದ ಶಕ್ತಿಯನ್ನು ಪಡೆಯುವುದು ೩° ನೀರಿನಿಂದ ಪಡೆಯುವುದಕ್ಕಿಂತ ಅನುಕೂಲವಾಗಿ ಕಾಣಬಹುದು. ಆದರೆ ಈ ಯೋಚನೆಯು ನಮ್ಮ ರಕ್ತದ ಖರತ್ವದ ದೃಷ್ಟಿಯಿಂದ ಬಂದದ್ದು. ನಮ್ಮ ಭಾಗಕ್ಕೆ ರಕ್ತಕ್ಕಿಂತ ಬೆಚ್ಚಗಿರುವುದು ಬಿಸಿ, ತಣ್ಣಗಿರುವುದು ತಣ್ಣಗೆ. ಆದರೆ ಇಲ್ಲಿ ಬೇಕಾಗಿರುವುದು ಶಾಖವಲ್ಲ. ಖರತ್ವದ ಅಂತರದ ಮಟ್ಟ. ಈ ಮಟ್ಟವು ಬಾರ್ಜೊ ಯೋಜನೆಯಲ್ಲಿ ಕ್ಲಾಡಿನ ಯೋಜನೆಗಿಂತ ಹೆಚ್ಚಾಗಿದೆ. ಸಾಲದ್ದಕ್ಕೆ ಯಂತ್ರವೂ ಸರಳ. ಬೆಲೆ ಕಮ್ಮಿ. ಬಾಳಿಕೆ ಹೆಚ್ಚು. ದುರದೃಷ್ಟವಶಾತ್ ಬಾರ್ಜೋವಿನ ಹತ್ತಿರ ಹಣವಿರಲಿಲ್ಲ. ಇದ್ದಿದ್ದರೆ ಗ್ರೀನ್‌ಲೆಂಡಿನಲ್ಲಿ ಆತನೂ ಪರೀಕ್ಷಾಯಂತ್ರವನ್ನು ನಿರ್ಮಿಸುತ್ತಿದ್ದನು. ಚಳಿಗಾಲದಲ್ಲಿ ಮಾತ್ರ ಇದು ಅಗ್ಗವಾಗಿರುತ್ತಿತ್ತು. ಜನ ನೆಲಸಿದ ದೇಶಗಳಲ್ಲಿ ಚಳಿಗಾಲದಲ್ಲಿಯೇ ಶಾಖದ ಅವಶ್ಯಕತೆಯು ಹೆಚ್ಚಾದ್ದರಿಂದ ಯಂತ್ರವು ಉಪಯೋಗವಾಗುತ್ತಿತ್ತು. ಆದರೆ ಅದು ಸಾಧ್ಯವಾಗಲಿಲ್ಲ.

ಸಮುದ್ರದ ಅಲೆಗಳು : ಈ ಅಲೆಗಳು ೧೦,೦೦೦ ಟನ್ ತೂಕದ ಜಹಜುಗಳನ್ನು ಹತ್ತಾರು ಅಡಿಗಳ ಎತ್ತರಕ್ಕೆ ಎತ್ತಬೇಕಾಗಿದ್ದರೆ ಅವುಗಳಲ್ಲಿ ಅಪಾರವಾದ ಶಕ್ತಿಯಿರಬೇಕು. ಇದನ್ನು ಬಳಸಿಕೊಳ್ಳುವುದು ಕಷ್ಟವಾಗಲಾರದು. ಇದಕ್ಕಾಗಿ ವಿಮ್ಮರ್ ಎಂಬ ಯಂತ್ರಶಿಲ್ಪಿಯು ಸರಳವಾದ ಸೂಚನೆಯನ್ನು ಕೊಟ್ಟನು. ತೀರಕ್ಕೆ ಸಮೀಪವಾಗಿ ಎರಡು ಭದ್ರ ಕಾಂಕ್ರೀಟಿನ ದಪ್ಪವಾದ ಗೂಟಗಳ ಸಾಲುಗಳನ್ನು ಹೊಡೆದು ಮಧ್ಯೆ ಸಾಮಾನ್ಯ ಹಡಗಿನ ಗಾತ್ರದ ತೇಲುಬುರುಡೆಗಳನ್ನು ಬಿಟ್ಟಾಗ ಅಲೆಗಳ ಚಲನೆಯು ಇದ್ದಲ್ಲಿಯೇ ಮೇಲಕ್ಕೂ ಕೆಳಕ್ಕೂ ಇರುವುದರಿಂದ ದಡಕ್ಕೆ ಬರುವ ಒಂದೊಂದು ಅಲೆಯೂ ಈ ಭಾರವಾದ ಬುರುಡೆಗಳನ್ನು ಎತ್ತಿ ಇಳಿಸುತ್ತದೆ. ಈ ಪಿಸ್ಟನ್ನಿನ ಮಾದರಿಯ ಚಲನೆಯನ್ನು ಮೀಟುಗೋಲುಗಳ ಮೂಲಕ ಉಪಯುಕ್ತವಾದ ಶಕ್ತಿಯಾಗಿ ಪರಿವರ್ತಿಸಬಹುದು.

ಇದೇನೋ ಕೇಳುವುದಕ್ಕೆ ಹಿತವಾಗಿರುತ್ತದೆ. ಆದರೆ ಮೋಟಾರಿನ ಎಂಜಿನ್ನಿನಲ್ಲಿ ಕಾಲು ಅಂಗುಲದ ಕಂಬಿಯು ಮಾಡುವುದನ್ನು ಈ ತೇಲುಬುರುಡೆಗಳಲ್ಲಿ ಮಾಡುವುದಕ್ಕೆ ದೊಡ್ಡ ಉಕ್ಕಿನ ತೊಲೆ ಬೇಕು. ಒಂದು ತೊಟ್ಟು ಎಣ್ಣೆಯನ್ನು ಎಂಜಿನ್ನಿಗೆ ಬಿಟ್ಟರೆ ಚಲನೆಯು ಸರಾಗವಾಗಿ ನಡೆಯುತ್ತದೆ. ದೊಡ್ಡ ಯಂತ್ರದಲ್ಲಿ ತೊಡಕಾದ ಏರ್ಪಾಡುಗಳು ಬೇಕು. ಎಂಜಿನ್ನಿನ ಒಂದೊಂದು ಸಿಲಿಂದರದಲ್ಲಿಯೂ ಉತ್ಪತ್ತಿಯಾಗುವ ಶಕ್ತಿಯೆಷ್ಟು—ಎಂದು ತಿಳಿದಿರುವುದರಿಂದ ಅದರ ಭಾಗಗಳ ಬಲವನ್ನು ಲೆಕ್ಕ ಹಾಕಬಹುದು. ಅಲೆಯ ಎಂಜಿನ್ನನ್ನು ಯಾವ ಬಲಕ್ಕೆ—ಎಂತ

ಲೆಕ್ಕ ಮಾಡುವುದು? ಸಾಮಾನ್ಯವಾದ ಅಲೆಯನ್ನಿಟ್ಟುಕೊಂಡು ಲೆಕ್ಕ ಹಾಕಿದರೆ ಬಿರುಗಾಳಿಯಲ್ಲಿ ಬರುವ ಅಲೆಗಳು ಯಂತ್ರವನ್ನೇ ಕಿತ್ತು ಒಗೆಯುತ್ತವೆ. ಪರಮಾವಧಿಯ ಬಲವನ್ನು ತೆಗೆದುಕೊಂಡರೆ ಒಂದೊಂದು ಭಾಗವೂ ವಿಪರೀತ ಭಾರವಾಗುತ್ತದೆ. ೧೨೦೦ ಅಡಿ ಅಗಲ, ೬೦೦ ಅಡಿ ಉದ್ದದ ತೇಲುಬುರುಡೆಗಳಿಂದ ೧೫೦೦ ಅಶ್ವಸಾಮರ್ಥ್ಯದ ಉತ್ಪಾದನೆಯಾಗುವುದೆಂದು ಲೆಕ್ಕ ಹಾಕಿದ್ದಾರೆ. ಇದು ಒಂದು ವಿಮಾನದ ಎಂಜಿನ್ನಿನಿಂದ ಬರುವುದಕ್ಕಿಂತ ಕಡಿಮೆ.

ಸಾಲದ್ದಕ್ಕೆ ಅಲೆಗಳಿಂದ ನಿರಂತರವಾಗಿ ಶಕ್ತಿಯು ದೊರಕುವುದಿಲ್ಲ. ಸಮುದ್ರವು ನೀಲವಾಗಿ ಶಾಂತವಾಗಿದ್ದಾಗ ಶಕ್ತಿಯ ಉತ್ಪಾದನೆಗೆ ಬೇರೆಯ ಉಪಾಯವನ್ನು ಹುಡುಕಬೇಕು. ಈ ತೊಂದರೆಯನ್ನು ತಪ್ಪಿಸಬಹುದೇನೋ. ಅಲೆಯ ಎಂಜಿನ್ನಿಗೆ ನೇರವಾಗಿ ಜನರೇಟರನ್ನು ಜೋಡಿಸಬೇಕಾಗಿಲ್ಲ. ಅದು ಎತ್ತರದಲ್ಲಿ ಸಮುದ್ರತೀರದ ಹತ್ತಿರ ಇರುವ ದೊಡ್ಡ ಕೊಳಕ್ಕೆ ನೀರನ್ನು ಎತ್ತಬಹುದು. ಇದರಿಂದ ನಿಯಂತ್ರಿತವಾಗಿ ಮತ್ತೆ ಸಮುದ್ರದ ಕಡೆಗೆ ಹರಿಯುವ ನೀರಿನಿಂದ ಜನರೇಟರುಗಳಿಗೆ ಜೋಡಿಸಿದ ಟರ್ಬೈನುಗಳನ್ನು ಓಡಿಸಬಹುದು.

ಈ ತೊಡಕಿನ ಅಲೆಯ ಎಂಜಿನ್ನೇ ಇಲ್ಲದೆ ಸಂತತವಾಗಿ ಶಕ್ತಿಯ ಉತ್ಪಾದನೆಗಾಗಿ ಸಮುದ್ರತೀರದ ಹತ್ತಿರದ ಎತ್ತರದ ಕೊಳಕ್ಕೆ ನೀರನ್ನು ಎತ್ತುವುದಕ್ಕೆ ಮತ್ತೊಂದು ಉಪಾಯವೂ ಇದೆ. ಬಿಸಿಗಾಳಿಯ ಬೆಲೂನನ್ನು ಜಂಟಿಯಾಗಿ ನಿರ್ಮಿಸಿದ ಸಹೋದರರಲ್ಲೊಬ್ಬರಾದ ಜೋಸೆಫ್ ಮೌಂಟ್‌ಗಾಲ್ಫಿಯರ್ ೧೭೯೬ರಲ್ಲಿ ಮೊದಲು ನಿರ್ಮಿಸಿದ "ಹೈಡ್ರಾಲಿಕ್‌ರ್ಯಾಮ್" ಎಂಬ ಮಾದರಿಯಲ್ಲಿ ಇದು ಕೆಲಸ ಮಾಡುತ್ತದೆ. ತೆರೆನೊರೆಯನ್ನು (Surf) ಹಿಡಿದು ಅದರಲ್ಲಿರುವ ಶಕ್ತಿಯು ಒಂದು ಭಾಗದಿಂದ ಕೊಂಚ ನೀರನ್ನು ಮೇಲಿನ ಮಟ್ಟಕ್ಕೆ ಎತ್ತುವ ಸಾಧನವು ಚಲಿಸುತ್ತಿರುವ ನೀರು ಒಂದು ಕಪಾಟವನ್ನು ತಳ್ಳಿ ಮುಚ್ಚಬಹುದೆಂಬ ತತ್ತ್ವದ ಮೇಲೆ ಕೆಲಸ ಮಾಡುತ್ತದೆ. ಅಲೆಯ ರೂಪದಲ್ಲಿ ಚಲಿಸುತ್ತಿರುವ ನೀರು ಎಡಗಡೆಯ ಲಾಲಕಿಯ ಮೂಲಕ ಮಟ್ಟವಾದ ಕೊಳವಿಯೊಳಕ್ಕೆ ನುಗ್ಗುತ್ತದೆ. ಇದರಲ್ಲಿ ಸಾಕಷ್ಟು ಶಕ್ತಿಯಿದ್ದರೆ ಒಂದು ಕವಾಟವನ್ನು ಮುಚ್ಚಿ ಅದು ಹೊರಗೆ ಹೋಗುವ ದಾರಿಯನ್ನೇ ಮುಚ್ಚುತ್ತದೆ. ಆದರೂ ಎಲ್ಲಿಯಾದರೂ ಹೇಗಾದರೂ ಖರ್ಚಾಗಬೇಕಾದ ಶಕ್ತಿಯು ಈ ನೀರಿನಲ್ಲಿರುತ್ತದೆ. ಈ ಸಾಧನದಿಂದ ಒಂದೇ ಕೆಲಸವನ್ನು ಮಾಡುವುದು ಸಾಧ್ಯ. ಕೊಂಚ ಭಾಗವನ್ನು ಮೇಲಿನ ಮಟ್ಟಕ್ಕೆ ಎತ್ತುತ್ತದೆ.

ಈ ಯೋಜನೆಯನ್ನು ಶಕ್ತಿಯ ಉತ್ಪಾದನೆಗಾಗಿ ಉಪಯೋಗಿಸಬೇಕಾದರೆ ಮೇಲಿನ ಮಟ್ಟದ ಕೊಳವು ಬಹಳ ದೊಡ್ಡದಾಗಬೇಕಾಗುತ್ತದೆ. ಏಕೆಂದರೆ ತೆರೆನೊರೆಯು ದುರ್ಬಲವಾದಾಗ ಎರಡು ವಾರಗಳವರೆಗೂ ಕೊಳದಿಂದಲೇ ನೀರು ಒಂದೇ ಸಮವಾಗಿ ಇಳಿಯಬೇಕು. ಇಂಥ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲು ಎಲ್ಲಾ ಸಮುದ್ರತೀರಗಳೂ ಒಂದೇ ರೀತಿ ಅನುಕೂಲವಾಗಿರುವುದಿಲ್ಲ. ಅನುಕೂಲ

ವಾಗಬೇಕಾದರೆ ಬಲವಾದ ಸಂತತವಾದ ತೆರೆನೊರೆಯಿರಬೇಕು. ತೀರವು ಎತ್ತರವಾಗಿ ಹತ್ತಿರದಲ್ಲಿ ಸ್ವಾಭಾವಿಕವಾದ ತಗ್ಗಿರಬೇಕು. ಇಂಥ ಸ್ಥಳದಲ್ಲಿ ಸುತ್ತಲಿನ ಪ್ರದೇಶದ ಮಳೆಯ ನೀರೂ ಈ ತಗ್ಗಿಗೆ ಇಳಿಯುತ್ತದೆ. ಅದರಿಂದ ಸರಬರಾಜು ತಪ್ಪದೆ ಒದಗಲು ಅವಕಾಶವಾಗುತ್ತದೆ. ಇಂಥ ಸ್ಥಳವು ಸಿಕ್ಕಿ ಅಲ್ಲಿ ವಿದ್ಯುತ್ತೂ ಬೇಕಾಗಿದ್ದರೆ ಪಂಪುಗಳ ಬದಲು ಈ ಸಾಧನವನ್ನು ಎತ್ತರದ ಕೊಳಕ್ಕೆ ನೀರನ್ನೆತ್ತುವುದಕ್ಕೆ ಉಪಯೋಗಿಸಬಹುದು.

ಈಗ ಭರತ ವಿಳಿತಗಳಿಗೂ, ಗಾಳಿಯ ಅಲೆ, ತೆರೆನೊರೆ—ಇವಕ್ಕೂ ಒಂದು ದೊಡ್ಡ ವ್ಯತ್ಯಾಸವಿದೆ. ಭರತಕ್ಕೂ ಹವಾಮಾನಕ್ಕೂ ಸಂಬಂಧವಿಲ್ಲ. ಅವು ಒಂದು ಕ್ಲೃಪ್ತವಾದ ಪರಿವರ್ತನ ಕ್ರಮದಲ್ಲಿ ನಡೆಯುವ ಖಗೋಳದ ಘಟನೆಯಾದ್ದರಿಂದ ಅದು ಯಾವಾಗ ಬರುವುದೆಂದು ಮುಂಚೆಯೇ ಭವಿಷ್ಯ ಹೇಳಬಹುದು.

ಭರತದ ಮುಖ್ಯವಾದ ಕಾರಣ ಚಂದ್ರನ ಗುರುತ್ವಾಕರ್ಷಣ ಶಕ್ತಿ. ಅದು ಚಂದ್ರಮಂಡಲದವರೆಗೂ ವ್ಯಾಪಿಸಿರುವ ಭೂಮಿಯ ಆಕರ್ಷಣ ಶಕ್ತಿಯನ್ನು ಭೇದಿಸಿಕೊಂಡು ಆಕಾಶದಲ್ಲಿ ನಮ್ಮ ಭೂಮಿಯವರೆಗೆ ಬರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಚಂದ್ರನು ಭೂಮಿಯನ್ನು ಆಕರ್ಷಿಸುತ್ತಾನೆ. ಪ್ರತಿಯಾಗಿ ಭೂಮಿಯೂ ಚಂದ್ರನನ್ನು ಆಕರ್ಷಿಸುತ್ತದೆ.

ಭೂಮಿಯ ಮುಕ್ಕಾಲು ಭಾಗವನ್ನು ಆವರಿಸಿ ಚಲನೆಗೆ ಪ್ರತಿರೋಧವನ್ನು ಕೊಡದೆ ಇರುವ ನೀರಿನ ಮೇಲೆ ಚಂದ್ರನ ಆಕರ್ಷಣೆಯು ಚೆನ್ನಾಗಿ ಕಾಣುತ್ತದೆ. ಸಮುದ್ರದ ಮೇಲ್ಮೈಯು ಇದರಿಂದ ವಿರೂಪವಾಗಿ ಕೊಂಚ ಉಬ್ಬುತ್ತದೆ. ಚಂದ್ರ ಕೇಂದ್ರದಿಂದ ಭೂಕೇಂದ್ರಕ್ಕೆ ಒಂದು ಸರಳರೇಖೆಯನ್ನು ಎಳೆದರೆ ಈ ರೇಖೆಯ ಸುತ್ತ ನೀರು ಚಂದ್ರನ ಕಡೆಗೆ ಒಂದು ಗಜದಷ್ಟು ಎಳೆದಿರುತ್ತದೆ. ಭೂಮಿಯೂ ಈ ಆಕರ್ಷಣೆಗೆ ಬಗ್ಗಿ ಚಂದ್ರನ ಆಚೆಯ ಕಡೆ ನೀರನ್ನು ಹಿಂದೆ ಬಿಟ್ಟು ಇನ್ನೊಂದು ಉಬ್ಬನ್ನು ಮಾಡಿಸುತ್ತದೆ. ಚಂದ್ರನು ಭೂಮಿಯ ಸುತ್ತ ತಿರುಗುವ ವೇಗದಲ್ಲಿಯೇ ಭೂಮಿಯೂ ತನ್ನ ಅಕ್ಷದ ಮೇಲೆ ತಿರುಗಿದ್ದರೆ ಈ ಎರಡು ಉಬ್ಬುಗಳೂ ಒಂದೇ ಜಾಗದಲ್ಲಿದ್ದು ಅದನ್ನು ಯಾರೂ ಗಮನಿಸುತ್ತಿರಲಿಲ್ಲ. ಆದರೆ ಭೂಮಿಯೇ ತಿರುಗುವುದರಿಂದ ಎರಡು ಉಬ್ಬುಗಳೂ ಭೂಗೋಳದ ಮೇಲೆ ಅಲೆಯುವ ಹಾಗೆ ಕಾಣುತ್ತವೆ. ಚಂದ್ರನು ನೇರವಾಗಿ ಕೆಳಗಡೆ ಇರುವ ನೀರನ್ನು ಅದಕ್ಕೆ ಎದುರಾಗಿರುವ ನೀರನ್ನು ವಿರೂಪಮಾಡುತ್ತಾನೆ.

ಜೊತೆಗೆ ಸೂರ್ಯನೂ ಹೀಗೆಯೇ ಎರಡು ಉಬ್ಬುಗಳನ್ನು ಮಾಡಿಸುತ್ತಾನೆ. ಸೂರ್ಯನು ಚಂದ್ರನಿಗಿಂತ ದೊಡ್ಡವನಾದರೂ ಭೂಮಿಯಿಂದ ಚಂದ್ರನ ದೂರ ೨,೪೦,೦೦೦ ಮೈಲಿ. ಸೂರ್ಯನ ದೂರ ೯೩೦ ಲಕ್ಷ ಮೈಲಿ. ಆದ್ದರಿಂದ ಈ ಉಬ್ಬುಗಳು ಚಂದ್ರನ ಉಬ್ಬುಗಳಷ್ಟು ದೊಡ್ಡವಲ್ಲ.

ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ಸೂರ್ಯನ ಮತ್ತು ಚಂದ್ರನ

ಉಬ್ಬುಗಳು ಒಂದೇ ದಿಕ್ಕಿನಲ್ಲಿದ್ದು ಭರತಗಳು ವಿಶೇಷ ಎತ್ತರವಾಗಿರುತ್ತವೆ. ಸೂರ್ಯನು ಉಬ್ಬನ್ನು ಮಾಡುವ ಕಡೆ ಚಂದ್ರನು ತಗ್ಗನ್ನು ಮಾಡಿದರೆ ಭರತವು ಕೊಂಚ ತಗ್ಗಾಗುತ್ತದೆ. ತೆರೆದ ಸಮುದ್ರದಲ್ಲಿ ಇದೆಲ್ಲಾ ಸೌಮ್ಯವಾಗಿರುತ್ತದೆ. ಸಮುದ್ರ ತೀರದಲ್ಲಿ ಒಳಚಾಚುಗಳಿದ್ದರೆ ಅದ್ಭುತವಾದ ದೃಶ್ಯಗಳು ಕಾಣಿಸುತ್ತವೆ.

ಕಳೆದ ಸಾವಿರ ವರ್ಷಗಳಿಂದಲೂ ಉಬ್ಬರವಿಳಿತದ ಪ್ರವಾಹಗಳನ್ನು ಯೂರೋಪಿನಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಲಂಡನ್ ನಗರಕ್ಕೆ ಮೊದಲು ಕುಡಿಯುವ ನೀರನ್ನು ಎತ್ತಿದ್ದು ಲಂಡನ್ ಸೇತುವೆಯ ಮೇಲೆ ಸ್ಥಾಪಿಸಿದ ಹುಟ್ಟುಗಾಲಿ **(Paddle Wheel)**ಯಿಂದ.

ಮೊದಲನೆಯ ಮಹಾಯುದ್ಧದ ನಂತರ ಉಬ್ಬರವಿಳಿತಗಳ ಶಕ್ತಿಯನ್ನು ಉಪಯೋಗಿಸುವ ಅನೇಕ ಯೋಜನೆಗಳು ಪ್ರಕಟವಾದವು. ಈ ವಿಚಾರದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಅನುಕೂಲವಾದ ಸ್ಥಳಗಳು ಹೆಚ್ಚಾಗಿಲ್ಲ. ತೀರವಾಸಿಗಳಾದ ಅನೇಕ ಫ್ರಾನ್ಸಿನ ಯಂತ್ರಶಿಲ್ಪಿಗಳು ಇಂಗ್ಲಿಷ್ ನಾಲೆಗೆ ಬೀಳುವ ಒಂದು ನದಿಯ ಮೇಲೆ ಒಂದು ಯಂತ್ರವನ್ನು ಸ್ಥಾಪಿಸಿದರು. ಇಲ್ಲಿ ಒಂದು ಉಬ್ಬರಕ್ಕೂ ಮತ್ತೊಂದಕ್ಕೂ ಇರುವ ಅಂತರ ೧೨ ಗಂಟೆ ೨೫ ನಿಮಿಷಗಳು. ಈ ಪೈಕಿ ೧೦ ಗಂಟೆಗಳ ಕಾಲ ೨೫೦೦ ಅಶ್ವಸಾಮರ್ಥ್ಯವು ಉತ್ಪತ್ತಿಯಾಗುತ್ತದೆ. ಭರತವು ಇಳಿದಾಗ ಹೊಳೆಗೆ ಅಡ್ಡಕಟ್ಟೆಯನ್ನು ಹಾಕಿ ಅದರಿಂದ ವಿದ್ಯುತ್ತನ್ನು ಪಡೆಯುತ್ತಿದ್ದರು.

ಈ ಯಂತ್ರಗಳನ್ನು ನಡೆಸುವುದಕ್ಕೆ ಹಲವು ಮಾರ್ಗಗಳಿವೆ. ಅವುಗಳಲ್ಲಿ ಒಂದೇ ಕೊಳದ ಯೋಜನೆಯು ಸರಳವಾದದ್ದು. ನದಿಯ ಅಳಿವೆಯಲ್ಲಿ ೨೦ ಅಡಿಯ ಭರತವಿದ್ದು ಕಟ್ಟೆಯನ್ನು ಕಟ್ಟಬಹುದಾದ ಹಳ್ಳವಿದ್ದರೆ ಕಟ್ಟೆಯಲ್ಲಿ ಬಾಗಿಲುಗಳನ್ನಿಟ್ಟು ಉಬ್ಬರದ ಕಾಲದಲ್ಲಿ ಎಲ್ಲಾ ಬಾಗಿಲುಗಳನ್ನೂ ತೆರೆದು ಹಳ್ಳವನ್ನು ತುಂಬಬಹುದು. ಉಬ್ಬರವು ಎತ್ತರಕ್ಕೆ ಹೋದಾಗ ಬಾಗಿಲುಗಳನ್ನು ಮುಚ್ಚಿ ಹೊರಗಡೆ ನೀರಿನ ಮಟ್ಟವು ಸುಮಾರು ಐದು ಅಡಿ ಇಳಿಯುವವರೆಗೂ ತಡೆದು ಕೂಡಿಟ್ಟ ನೀರನ್ನು ಟರ್ಬೈನುಗಳ ಮೂಲಕ ಬಿಡಬಹುದು. ಕಟ್ಟೆಯ ಎರಡು ಮುಖಗಳಲ್ಲಿಯೂ ನೀರು ಒಂದೇ ಮಟ್ಟಕ್ಕೆ ಬರುವವರೆಗೂ ಕೆಲವು ಗಂಟೆಗಳ ಕಾಲ ಈ ನೀರು ಒದಗುತ್ತದೆ. ಆಚೆಯ ಕಡೆಯಿಂದಲೂ ಉಬ್ಬರವು ಬಂದಾಗ ಬಾಗಿಲುಗಳನ್ನು ಮುಚ್ಚಿ ಈ ನೀರನ್ನೇ ಟರ್ಬೈನುಗಳ ಮೂಲಕ ಬಿಡಲೂಬಹುದು. ಆದರೆ ಅಳಿವೆಯು ನದೀಮುಖವಾಗಿರುವುದರಿಂದ ಕಟ್ಟೆಯು ಸಮುದ್ರದ ನೀರನ್ನೇ ಅಲ್ಲದೆ ಹೊಳೆಯ ನೀರನ್ನು ತಡೆದು ನಿಲ್ಲಿಸುತ್ತದೆ. ಈ ಸಂದರ್ಭದಲ್ಲಿ ಕಟ್ಟೆಯಿಂದ ನೀರನ್ನು ಹೊರಕ್ಕೆ ಬಿಟ್ಟಾಗ ಹೆಚ್ಚು ಕಾಲ ಟರ್ಬೈನುಗಳು ಕೆಲಸಮಾಡುತ್ತವೆ.

ಎರಡು ಕೊಳಗಳ ಯೋಜನೆಯಲ್ಲಿ ಟರ್ಬೋ–ಜನರೇಟರುಗಳನ್ನು ಕೂರಿಸಿದ ಕಟ್ಟೆಯು ಆ ಕೊಳಗಳನ್ನು ಪ್ರತ್ಯೇಕಿಸುತ್ತದೆ. ಈ ಪೈಕಿ ಒಂದು ಕೊಳವನ್ನು

ಎತ್ತರದ ಮಟ್ಟದಿಂದ ಕೆಲಸಮಾಡಿಸುತ್ತಾರೆ. ಟರ್ಬೈನುಗಳಿಂದ ನೀರು ತಗ್ಗಿನ ಕೊಳಕ್ಕಾದರೂ ಬೀಳಬಹುದು. ಇಲ್ಲವೆ ನೇರವಾಗಿ ಸಮುದ್ರವನ್ನಾದರೂ ಸೇರಬಹುದು. ಸಮುದ್ರದಿಂದ ಕೊಳಗಳಿಗೂ ಕೊಳದಿಂದ ಕೊಳಕ್ಕೂ ಬಾಗಿಲುಗಳನ್ನು ಸರಿಯಾದ ಕಾಲದಲ್ಲಿ ತೆರೆದರೆ ದಿನವೆಲ್ಲಾ ಟರ್ಬೈನುಗಳನ್ನು ನಡೆಸುವುದು ಸಾಧ್ಯ. ಇದರಲ್ಲಿ ಒಂದು ಕೊಳದ ಯೋಜನೆಯಿಂದ ಬರುವಷ್ಟು ಪರಮಾವಧಿಯ ವಿದ್ಯುತ್ತು ಉತ್ಪತ್ತಿಯಾಗಲಾರದು. ಆದರೆ ಒಂದೇ ಕೊಳವಿದ್ದರೆ ದಿನದಲ್ಲಿ ಎರಡು ಸಾರಿ ಶಕ್ತಿಯ ಉತ್ಪಾದನೆಯೇ ಇರುವುದಿಲ್ಲ. ಪ್ರತಿಯಾಗಿ ಇನ್ನೆರಡು ಸಾರಿ ಪರಮಾವಧಿಯ ಶಕ್ತಿಯೂ ಬರುತ್ತದೆ. ಅದು ನಮಗೆ ಅವಶ್ಯಕವಾದದ್ದಕ್ಕಿಂತ ಹೆಚ್ಚಾಗಿರಬಹುದು. ಆಗ ಮತ್ತೊಂದು ಎರಡು ಕೊಳಗಳ ಯೋಜನೆಯನ್ನು ಇಡಬಹುದು. ಪರಮಾವಧಿಯ ಎತ್ತರದ ಉಬ್ಬರವು ಬಂದಾಗ ನೀರನ್ನು ಎತ್ತರದಲ್ಲಿರುವ ಎರಡನೆಯ ಕೊಳಕ್ಕೆ ಪಂಪು ಮಾಡಿ ಶೇಖರಿಸಿಕೊಂಡು ಬೇಕಾದಾಗ ಬಳಸಿಕೊಳ್ಳಬಹುದು.

ಇಂಗ್ಲೆಂಡಿನಲ್ಲಿ ಸೆವರ್ನ್ ನದೀಮುಖದಲ್ಲಿಯೂ ಫ್ರಾನ್ಸಿನಲ್ಲಿ ರೈನ್ ನದಿಯಲ್ಲಿಯೂ ಕೆನಡದಲ್ಲಿ ಫಂಡಿಕೊಲ್ಲಿಯಲ್ಲಿಯೂ ಈ ಯೋಜನೆಗೆ ಸನ್ನಿವೇಶಗಳು ಅನುಕೂಲವಾಗಿವೆ. ಈ ಕ್ರಮದಲ್ಲಿ ಉತ್ಪಾದನೆಯ ವೆಚ್ಚವು ಮಾಮೂಲಾದ ಮಾರ್ಗಗಳಿಗಿಂತ ಕೊಂಚ ಹೆಚ್ಚಾಗಿರುವುದರಿಂದ ದೊಡ್ಡ ಯೋಜನೆಗಳಿಗೆ ಅವಕಾಶವಾಗಿಲ್ಲ. ಆದರೆ ಭೂಗರ್ಭದಲ್ಲಿನ ಇಂಧನಗಳು ತೀರಿದ ಹಾಗೂ ಇಂಗ್ಲೆಂಡಿನಲ್ಲಂತೂ ಈ ಯೋಜನೆಯು ಸಾಧ್ಯವಾಗುತ್ತದೆ. ವೈ ನದಿಯು ಸೇರುವ ಕಡೆ ಸೆವರ್ನ್ ನದಿಗೆ ಅಡ್ಡಲಾಗಿ ೨ ೧/೨ ಮೈಲಿ ಉದ್ದದ ಕಟ್ಟೆಯನ್ನು ಕಟ್ಟಿ ಒಂದು ಕೊಳದ ಯೋಜನೆಯನ್ನು ಪ್ರಾರಂಭಿಸಬಹುದು. ಈಗ ಆ ಯೋಜನೆಗೆ ಸುಮಾರು ೯ ಕೋಟಿ ಪೌಂಡು ಖರ್ಚು ತಗಲಬಹುದೇನೋ. ಇದರಿಂದ ವರ್ಷಕ್ಕೆ ೨೦೦ ಕೋಟಿ ಕಿಲೋವಾಟ್–ಗಂಟೆಯಷ್ಟು ವಿದ್ಯುತ್ ಉತ್ಪತ್ತಿಯಾಗಿ ಪ್ರತಿವರ್ಷವೂ ೧೦ ಲಕ್ಷ ಟನ್ ಕಲ್ಲಿದ್ದಿಲು ಉಳಿಯುತ್ತದೆ.

ನೋವಸ್ಕೋಷಿಯವನ್ನು ಕೆನಡದಿಂದ ಪ್ರತ್ಯೇಕಿಸುವ ಫಂಡಿ ನದಿಯಲ್ಲಿ ಎರಡು ಇಂಥ ಯೋಜನೆಗಳು ಸಾಧ್ಯ. ನಿರ್ಮಾಣವೇನೋ ಕಷ್ಟವಲ್ಲ. ಪೆಟಿಟ್‌ಕೊಡಿಯ ನದಿಯ ಮೇಲಿನ ಯೋಜನೆಯಿಂದ ವರ್ಷಕ್ಕೆ ೧೦೦ ಕೋಟಿ ಕಿಲೋವಾಟ್–ಗಂಟೆಯಷ್ಟು ವಿದ್ಯುತ್ತು ಬರಬಹುದು. ಆದರೆ ಈಗ ಅದು ದುಬಾರಿಯಾಗುತ್ತದೆ. ಪಾಸ್‌ಮರ್‍ಕ್ವಾಡಿ ಯೋಜನೆಯಲ್ಲಿ ನಡುವೆ ದ್ವೀಪಗಳಿರುವುದರಿಂದ ಕಟ್ಟೆಯ ಖರ್ಚು ಕಡಿಮೆಯಾಗುತ್ತದೆ. ಇಲ್ಲಿ ಒಂದೇ ಕೊಳದ ಯೋಜನೆಯು ಅನುಕೂಲವೆಂದು ತೋರುತ್ತದೆ. ಎರಡು ಕೊಳಗಳ ಯೋಜನೆಯೂ ಸಾಧ್ಯ. ಆದರೆ ಖರ್ಚು ಮಾತ್ರ ಹೆಚ್ಚು—೩.೬ ಕೋಟಿ ಡಾಲರುಗಳು. ಇಷ್ಟೇ ಶಕ್ತಿಯನ್ನು ಉತ್ಪಾದನೆ ಮಾಡುವ ಕಲ್ಲಿದ್ದಲಿನ ಯೋಜನೆಗೆ ೧.೬ ಕೋಟಿ ಡಾಲರುಗಳು ತಗಲುತ್ತವೆ. ಇರಬಹುದು.

ಇನ್ನೊಂದು ಶತಮಾನದ ನಂತರ ಕಲ್ಲಿದ್ದಿಲು ಎಲ್ಲಿರುತ್ತದೆ? ಉಬ್ಬರವಿಳಿತಗಳು ಮಾತ್ರ ನಿಲ್ಲುವುದಿಲ್ಲ.

ಇದೇ ನಮೂನೆಯ ಲೆಕ್ಕಾಚಾರದ ಮೇಲೆ ಆರ್ಜೆಂಟಿನದ ಯೋಜನೆಯನ್ನೂ ಮುಂದೊಡಲಾಗಿದೆ. ದಕ್ಷಿಣ ಆರ್ಜೆಂಟಿನದಲ್ಲಿ ಸ್ಯಾನ್ ಮಾಡಿಯಸ್ ಖಾರಿಯ ದಕ್ಷಿಣಕ್ಕೆ ವಾಲ್ಡೆನ್ ಪರ್ಯಾಯದ್ವೀಪವಿದೆ. ದಕ್ಷಿಣಕ್ಕೆ ಬಾಹಿಯನೂವ ಕೊಲ್ಲಿಯೂ ಉತ್ತರಕ್ಕೆ ಸ್ಯಾನ್ ಜೋಸ್ ಕೊಲ್ಲಿಯೂ ಇವೆ. ಭರತಗಳ ಎತ್ತರವು ೫೦ ಅಡಿಯಿರುವುದರಿಂದ ಯಾವ ಕೊಲ್ಲಿಯನ್ನು ಬೇಕಾದರೂ ಉಪಯೋಗಿಸ ಬಹುದು. ಆದರೆ ಸ್ಯಾನ್ ಜೋಸ್ ಕೊಲ್ಲಿಯಲ್ಲಿ ಕಟ್ಟೆಯು ೪೧/೨ ಮೈಲಿ ಉದ್ದವಾಗಿ ಮತ್ತೊಂದು ಕಟ್ಟೆಯು ಇದಕ್ಕಿಂತ ಉದ್ದವಾಗುವುದರಿಂದ ಅಲ್ಲಿಯೇ ಕೆಲಸವನ್ನು ಪ್ರಾರಂಭಿಸಬಹುದು. ಕಟ್ಟೆಯಲ್ಲಿ ಹಡಗುಗಳ ಸಂಚಾರಕ್ಕೆ ದಾರಿ ಮಾಡಬೇಕಾಗಿಲ್ಲ. ಅವು ಬಾಹಿಯಾನೂವದ ಮೂಲಕ ಹೋಗಬಹುದು. ಇದುವರೆಗಿನ ಮಹಾ ಪ್ರವಾಹದ ಮಟ್ಟಕ್ಕಿಂತ ೬ ಅಡಿ ಮೇಲಕ್ಕೆ ಕಾಂಕ್ರೀಟಿನ ಕಟ್ಟೆಯು ಏರುತ್ತದೆ. ೨೦ ಅಂಗುಲದ ಮಟ್ಟದ ವ್ಯತ್ಯಾಸದಲ್ಲಿ ಕೆಲಸಮಾಡುವ ಹಾಗೆ ಟರ್ಬೈನುಗಳನ್ನು ಸಂವಿಧಾನಮಾಡಿದೆ. ಆಗ ದಿನಕ್ಕೆ ಎರಡು ಸಾರಿ ೭೫ ನಿಮಿಷಗಳ ಕಾಲ ಮಾತ್ರ ಶಕ್ತಿಯ ಉತ್ಪಾದನೆಯಾಗುವುದಿಲ್ಲ. ಒಟ್ಟು ಒಂದು ವರ್ಷಕ್ಕೆ ೫೫೦ ಕೋಟಿ ಬಿ.ಟಿ.ಯು. ಉತ್ಪತ್ತಿಯಾಗಬಹುದು. ಇಷ್ಟು ಶಕ್ತಿಯನ್ನು ಪಡೆಯುವುದಕ್ಕೆ ವರ್ಷಕ್ಕೆ ೨೨೧/೨ ಲಕ್ಷ ಟನ್ ಕಲ್ಲಿದ್ದಿಲನ್ನು ಉರಿಸಬೇಕು. ಆರ್ಜೆಂಟಿನದಲ್ಲಿ ಭೂಗರ್ಭದಲ್ಲಿ ಇಂಧನವು ದೊರಕುವುದಿಲ್ಲ. ಆದರೆ ಈಗ ಹೊರಗಿನಿಂದ ಕಲ್ಲಿದ್ದಿಲನ್ನು ಸಾಗಿಸಿದರೂ ಉಬ್ಬರದ ಯೋಜನೆಗೇ ಹೆಚ್ಚು ಖರ್ಚಾಗುತ್ತದೆ.

—ಎಚ್. ಸಿ. ಕಪಿನೀಪತಿ ಭಟ್ಟ

ಸಂಪರ್ಕ ಸಾಧನ

ಅಲೆಕ್ಸಾಂಡರ್ ಗ್ರಹಾಂ ಬೆಲ್ ಎಂಬಾತನು ಈಗ್ಗೆ ಒಂದು ಶತಮಾನಕ್ಕೆ ಮುಂಚೆ, ಮುಖ್ಯವಾಗಿ ಕಿವುಡರಿಗೆ ನೆರವಾಗಲೆಂದು ಶಬ್ದವಿಜ್ಞಾನವನ್ನು ಅಧ್ಯಯನ ಮಾಡತೊಡಗಿದನು. ಕಿವುಡರನ್ನು ಸುತ್ತುಗಟ್ಟಿರುವ ಆ ನೀರವತೆಯ ಪರಿಧಿಯನ್ನೇ ಭೇದಿಸಿ, ಅವರೂ ಸಹ ಎಲ್ಲರಂತೆಯೇ ವ್ಯವಹರಿಸಲು ಸಾಧ್ಯವಾಗುವಂತೆ ಮಾಡಬೇಕೆಂಬುದೇ ಆ ವಿಜ್ಞಾನಿಯ ಮುಖ್ಯ ಗುರಿಯಾಗಿತ್ತು.

ಆತನ ಸಂಶೋಧನೆಗಳು ಕಿವುಡರಿಗೆ ಮಾತ್ರ ಉಪಕಾರವಾದುದಲ್ಲದೆ, ಇತರ ಅಡೆತಡೆಗಳನ್ನೂ ಅವು ನಿವಾರಿಸಿದುವು. ಟೆಲಿಫೋನ್, ರೇಡಿಯೋ ಮತ್ತು ಟೆಲಿವಿಜನ್ನುಗಳು ದೇಶದೇಶಾಂತರಗಳನ್ನು ದಾಟಿ, ಸಾಗರಗಳನ್ನು ಹಾಯ್ದು, ಇಂದು ಸಮಸ್ತ ವಿಶ್ವವನ್ನೇ ಒಂದುಗೂಡಿಸುತ್ತಿವೆ.

ಈಗಲಾದರೋ ಅಂತರಿಕ್ಷದಲ್ಲಿ ಅನೇಕ ಸಾಹಸಯಾನಗಳನ್ನು ಕೈಗೊಳ್ಳುತ್ತಿರುವುದನ್ನು ಕ್ಷಣಕ್ಷಣವೂ ಕೇಳುತ್ತಿದ್ದೇವೆ. ಹೊಚ್ಚ ಹೊಸತಾದ ಸಂಪರ್ಕಗಳ ಯುಗದ ಆರಂಭವನ್ನು ಕಾಣುತ್ತಿದ್ದೇವೆ. ಇವುಗಳನ್ನು ಸದುಪಯೋಗಪಡಿಸಿಕೊಳ್ಳುವುದು ಮನುಷ್ಯನ ಪಾಲಿಗೆ ಸೇರಿದ್ದು.

—ಸಂಗ್ರಹ

ಆರ್ಥಿಕ ಭೂಗೋಳ

ಅದರ ಸ್ವರೂಪ ಮತ್ತು ಲಕ್ಷಣಗಳು

ವಿದ್ಯಾವಂತ ಬುದ್ಧಿವಂತರಾದರೂ ಆನೆಯನ್ನು ಮೊಟ್ಟಮೊದಲು ಕಾಣುವುದಕ್ಕೆ ಮುಂಚೆ, ಆನೆ ಹೇಗಿದೆ ಎಂಬುದನ್ನು ತಿಳಿದುಕೊಳ್ಳಲು ಕಣ್ಣು ಕಟ್ಟಿಕೊಂಡು ಅದರ ಒಂದೊಂದು ಅಂಗವನ್ನು ಮುಟ್ಟಿ—ಆನೆ ಎಂಬುದು ಸೊಂಡಲಿನಂತಿದೆ ಎಂದು ಒಬ್ಬಾತ ಹೇಳಿದರೆ; ಮತ್ತೊಬ್ಬಾತ ಆನೆಯು ಬಾಲದಂತಿದೆ ಎಂದ; ಮಗದೊಬ್ಬ ಆನೆಯು ದೇವಾಲಯದ ದೊಡ್ಡ ಕಂಬದಂತಿದೆ—ಇತ್ಯಾದಿ ಇತ್ಯಾದಿ ಎಂಬುದಾಗಿ ವಿವರಿಸಿದ ನೀತಿಬೋಧೆಯಲ್ಲಿನ ಐವರು ಮಹಾಜ್ಞಾನಿ(?)ಗಳ ಕಥೆಯು ಭೂಗೋಳಜ್ಞನ ವಿಚಾರದಲ್ಲಿ ನೆನಪಿಗೆ ಬರುತ್ತದೆ. ೧೮ನೇ ಶತಮಾನದ ವರೆವಿಗೂ ಭೂಗೋಳಶಾಸ್ತ್ರಾಂಗದ ಯಾವುದಾದರೂ ಒಂದು ಅಂಗವನ್ನು ವಿವರಿಸಿ ಅದೇ ಭೂಗೋಳಶಾಸ್ತ್ರವೆಂದು ವಿವರಿಸುತ್ತಿದ್ದರು.

ಭೂಬಹಿರ್ವಲಯದ (Environment) ಭೂಮಿ, ವಾಯು ಮತ್ತು ನೀರು ಇವುಗಳ ಅಧ್ಯಯನವೇ ಭೂಗೋಳ. ಭೂಮಿಯ ವಿವಿಧಾಂಗಗಳು, ನೀರಿನ ವಿವಿಧರೂಪಗಳು ಮತ್ತು ವಾಯು ಇವುಗಳೊಂದಿಗಿನ ಮನುಷ್ಯನ ಸಂಬಂಧವು ಸದಾ ಇದ್ದೇ ಇರುತ್ತದೆ. ಈ ಮೂರು ಅಂಗಗಳೂ ಸದಾ ಒಂದರಿಂದ ಇನ್ನೊಂದು ಭಿನ್ನವಾಗಿದ್ದು ಬೇರೆ ಬೇರೆಯಾಗಿಯೇ ಇರುತ್ತದೆ—ಇದೇ ಭೂಗೋಳಶಾಸ್ತ್ರವೆಂದು ಭೂಗೋಳಜ್ಞ ಒಮ್ಮೆ ತಿಳಿದಿದ್ದ. ಇವಲ್ಲದೆ ಇನ್ನೂ ಅನೇಕ ವಿಷಯಗಳಿದ್ದುವು. ಅನೇಕ ವರ್ಷಗಳವರೆಗೆ ಸುಮ್ಮನಿದ್ದ ಆ ಶಾಸ್ತ್ರಜ್ಞನು ಈ ಇತರೇ ವಿಷಯಗಳ ಕಡೆ ಗಮನ ಹರಿಸಿದಾಗ ಭೂಗೋಳಶಾಸ್ತ್ರ ಸ್ವರೂಪದ (ತಾನು ತಿಳಿದುಕೊಂಡಿದ್ದ) ಕಡೆಗೂ ಸೂಕ್ಷ್ಮವಾಗಿ ದೃಷ್ಟಿಯೋಡಿಸಿದ. ಅವನಿಗೇ ನಾಚಿಕೆಯಾಯಿತು; ಇಷ್ಟು ಮಾತ್ರವೇ ಭೂಗೋಳಶಾಸ್ತ್ರವಲ್ಲ ಎಂಬುದೂ ಮನವರಿಕೆಯಾಯಿತು. ಹಾಗಾದರೆ ಭೂಗೋಳದ ಯಾವ ಅಂಗಕ್ಕೆ ಮೇಲೆ ತಿಳಿಸಿದ ಅರ್ಥ ಅನ್ವಯಿಸುತ್ತದೆ ಎಂದು ಯೋಚಿಸಿದ. ಆಗ ಆತನಿಗೆ ಹೊಳೆಯಿತು—ಇದು ಭೌತಿಕ ಭೂಗೋಳ ಮಾತ್ರ, ಸಂಪೂರ್ಣ ಭೂಗೋಳಶಾಸ್ತ್ರವಿದಲ್ಲ. ಹಾಗಾದರೆ ಭೂಗೋಳಶಾಸ್ತ್ರವೆಂದರೇನು ?

ಕೆಲವು ಶತಮಾನಗಳು ಉರುಳಿದುವು........

ಸನ್ನಿವೇಶ, ಮೇಲ್ಮೈಲಕ್ಷಣಗಳು, ನೈಸರ್ಗಿಕ ಅಡಚಣೆಗಳು, ಭೌಗೋಳಿಕ ವೈಶಿಷ್ಟ್ಯತೆ ಮತ್ತು ಒಂದು ಪ್ರದೇಶದ ವಿಸ್ತಾರಗಳು—ಒಂದು ರಾಷ್ಟ್ರದ ಐತಿಹಾಸಿಕ ರೂಪವನ್ನು ರೂಪಿಸುವುದರಲ್ಲಿ ಬಹು ಪ್ರಮುಖ ಸ್ಥಾನ ಪಡೆದಿವೆ. ಅಂದರೆ ಜಗತ್ತಿನಲ್ಲಿ ನಡೆಯುವ ಎಲ್ಲ ಐತಿಹಾಸಿಕ ಘಟನೆಗಳಿಗೂ ಹಿನ್ನೆಲೆಯಾಗಿ ಒಂದು

ಭೌಗೋಳಿಕ ತಥ್ಯದ ದಾರ್ಶನಿಕತೆ ಇದ್ದೇ ಇರುತ್ತದೆ. ಇದೇ ಭೂಗೋಳಶಾಸ್ತ್ರ; ಇದರ ವಿವರಣೆಯೇ ಭೂವಿವರಣೆ—ಎಂಬುದಾಗಿ ತಿಳಿದ. ಕೂಡಲೇ ಭೂಗೋಳಜ್ಞನ ಆನಂದಕ್ಕೆ ಪಾರವೇ ಇರಲಿಲ್ಲ. ಯಾರೂ ಅನ್ವೇಷಿಸದ ಒಂದು ನೂತನ ಶಾಸ್ತ್ರವನ್ನೇ ಕಂಡುಹಿಡಿದಷ್ಟು ಸಂತೋಷವಾಯಿತು ಅವನಿಗೆ. ಆದರೆ ಈ ವಿಷಯಗಳೇ ಅಲ್ಲದೆ ಇನ್ನೂ ಕೆಲವು ವಿಷಯಗಳಿದ್ದುವು. ಅವುಗಳನ್ನು ಈ ಗುಂಪಿಗೆ ಸೇರಿಸುವಂತಿಲ್ಲ. ಅವು ಇವುಗಳಿಗಿಂತಲೂ ಭಿನ್ನವಾದುವು. ಹಾಗಾದರೆ ಇಷ್ಟೇ ಭೂಗೋಳಶಾಸ್ತ್ರವಲ್ಲ. ಅದರಲ್ಲಿ ಇನ್ನೂ ಅನೇಕ ವಿಷಯಗಳು ಸೇರಬೇಕಾಗಿವೆ. ಹಾಗಾದರೆ ಇಷ್ಟು ಹೊತ್ತೂ ಕಷ್ಟಪಟ್ಟು ಕಂಡುಹಿಡಿದ ಅರ್ಥ ಯಾವ ರೀತಿಯ ಭೂಗೋಳಶಾಸ್ತ್ರದ್ದು? ಓಹೋ, ಇದೇ ಐತಿಹಾಸಿಕ ಭೂಗೋಳ (Historical Geography).

ಮತ್ತೆ ಯೋಚನಾ ಸಮುದ್ರದಲ್ಲಿ ಮುಳುಗಿದ.

ಶತಮಾನಗಳು ಉರುಳಿದುವು...........

ವಿವಿಧ ರಾಜ್ಯಗಳ ಸ್ವಭಾವ, ಅವುಗಳ ವ್ಯವಸ್ಥೆ ಮತ್ತು ಅವುಗಳಲ್ಲಿನ ಪಾರಸ್ಪರಿಕ ಸಂಬಂಧ—ಇವುಗಳ ಮೇಲೆ ಬೀಳುವ ಭೌಗೋಳಿಕ ಅವಸ್ಥೆಗಳ ಅನ್ವೇಷಣೆಯ ಅಧ್ಯಯನವೇ ಭೂಗೋಳಶಾಸ್ತ್ರ ಎಂಬುದಾಗಿ ನಂತರ ಭೂಗೋಳಜ್ಞನು ಅರಿತ. ಈ ದೃಷ್ಟಿಯ ಅಧ್ಯಯನವು ಮಾನವಶಾಸ್ತ್ರಗಳಲ್ಲಿ ಅತ್ಯಂತ ಮಹತ್ವಪೂರ್ಣವಾದುದು. ಪ್ರತಿದೇಶದ ವಿಸ್ತೀರ್ಣದ ನೈಸರ್ಗಿಕ ದೃಷ್ಟಿ, ಪ್ರಕೃತಿಯ ಪ್ರಭಾವ, ಭೂಮಿಯ ನೈಜಸ್ವರೂಪ, ನೆಲದ ಫಲವತ್ತಾಗಿರುವ ದೃಷ್ಟಿ, ಜನಸಂಖ್ಯೆಯ ಸಾಂದ್ರತೆ, ಅವುಗಳಲ್ಲಿನ ಜಾತಿಮತಗಳ ಸ್ಥಾನ ಮತ್ತು ಅವುಗಳಲ್ಲಿನ ತಮ್ಮ ತಮ್ಮ ಪ್ರದೇಶಗಳೊಡನೆಯ ಸಂಬಂಧ ಮತ್ತು ಸಮುದ್ರದೊಡನೆಯ ಸಂಪರ್ಕ—ಇತ್ಯಾದಿ ಭೌಗೋಳಿಕ ತಥ್ಯಗಳು ಆ ದೇಶದ ರಾಜಕೀಯ ಸ್ವರೂಪ, ಸರ್ಕಾರದ ರೂಪ ಮತ್ತು ಅದರ ನೆರೆಹೊರೆಯ ದೇಶಗಳೊಡನೆಯ ಸಂಬಂಧಗಳೊಡನೆ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ತಮ್ಮ ಪ್ರಭಾವವನ್ನು ತೋರಿಸುತ್ತಿರುತ್ತವೆ. ಉದಾಹರಣೆಗಾಗಿ ಜರ್ಮನಿಯನ್ನು ತೆಗೆದುಕೊಳ್ಳಬಹುದು. ಜರ್ಮನಿಯ ಒತ್ತಾದ ಜನಸಂಖ್ಯೆ, ಸಮುದ್ರತೀರದ ಪರಿಮಿತಿ ರೂಪ, ತನ್ನಲ್ಲಿನ ಪ್ರದೇಶಗಳ ವಿವಿಧ ಕೋನಗಳ ಬೆಳವಣಿಗೆಯ ಕ್ಷೀಣ ರೂಪಗಳು ಆ ರಾಷ್ಟ್ರದಲ್ಲಿ ಮಹತ್ತಾದ ರಾಜಕೀಯ ಅಶಾಂತಿಯನ್ನು ಹುಟ್ಟಿಸಿದುವು. ಇದರ ಪ್ರತಿಕ್ರಿಯೆಯ ಫಲವಾಗಿ ಆ ರಾಷ್ಟ್ರವು ಜಗತ್ತಿನ ವ್ಯಾಪಾರಕ್ಷೇತ್ರದಲ್ಲಿ ಬಹಳ ಶಕ್ತಿಶಾಲಿಯಾದ ಸ್ಪರ್ಧಿಯನ್ನಾಗಿ ಮಾಡಿತು.

ಹೀಗೆ ಇದುವರೆವಿಗೆ ತಾನು ಕಂಡುಹಿಡಿದ ಲಕ್ಷಣಗಳ ಮೇಲೆ ಒಮ್ಮೆ ದೃಷ್ಟಿಯೋಡಿಸಿದ. ಇದೂ ಭೂಗೋಳಶಾಸ್ತ್ರಾಧ್ಯಯನದ ಲಕ್ಷಣವೇ; ಅರ್ಥವೇನೇ ಆದರೂ ಅಪೂರ್ಣ ಎಂಬುದು ಅವನಿಗೆ ಮನವರಿಕೆಯಾಯಿತು. ಸುಂದರವಾಗಿ

ಚಿತ್ರಿಸಿದ ಮ್ಯೆಕೆಲೇಂಜಲೋವಿನ ಭಿತ್ತಿಚಿತ್ರಗಳಲ್ಲಿ ವರ್ಣವೈವಿಧ್ಯತೆ ಇಲ್ಲದಿರುವಂತಿತ್ತು. ಮನಸ್ಸಿಗೆ ಮತ್ತೆ ಯೋಚನೆ ಮೂಡಿತು–ಹಾಗಾದರೆ ಇದೂ ಭೂಗೋಳ ಶಾಸ್ತ್ರದ ಪೂರ್ಣ ಚಿತ್ರ ನೀಡುವುದಿಲ್ಲ; ಅದರ ಒಂದು ಅಂಗದ ವಿವರಣೆಯನ್ನು ಮಾತ್ರ ಕೊಡುವುದು—ಎಂದುಕೊಂಡು ಮತ್ತೆ ಅನ್ವೇಷಣೆಗೆ ಪ್ರಾರಂಭಿಸಿದ [ಇದು ರಾಜಕೀಯ ಭೂಗೋಳ (Political Geography.)]. ವರ್ಷಗಳು ರಥದ ಚಕ್ರದಂತೆ ಮುಂದೋಡತೊಡಗಿದುವು.

ಭೂಗೋಳ–ಮಾನವನ ಭಿನ್ನಭಿನ್ನ ಆರ್ಥಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಅಧ್ಯಯನವಾಗಿದೆ. ಮಾನವನ ಎಲ್ಲ ರೀತಿಯ ಚಟುವಟಿಕೆಗಳ ಮೇಲೆ ಭೂಬಹಿರ್ವಲಯವು ತನ್ನ ಅನವರತ ಪ್ರಭಾವವನ್ನು ಮೂಡಿಸಿರುತ್ತದೆ. ಆದರೆ ಮನುಷ್ಯನ ಎಲ್ಲ ಕಾರ್ಯಗಳು ಪ್ರಕೃತಿಯಿಂದ ನಿರ್ದೇಶಿತವಾದವುಗಳಾಗಿರುವುದಿಲ್ಲ. ಮನುಷ್ಯ ತನ್ನ ಆವಶ್ಯಕತೆಗಳಿಗೆ ಅನುಗುಣವಾಗಿ ನಿಸರ್ಗದಲ್ಲಿ ಕೆಲವು ಬದಲಾವಣೆಗಳನ್ನು ಮಾಡಹೊರಟರೂ; ಅದಕ್ಕೆ ತಕ್ಕಂತೆ ತಾನೂ ಬದಲಾಯಿಸುತ್ತಾನೆ. ಈ ರೀತಿಯಾಗಿ ಮಾನವನಿಂದ ಭೂಮಿಯಮೇಲೆ ಉಂಟುಮಾಡಿರುವ ಪರಿವರ್ತನೆಯ ಕಥನವೇ ಭೂಗೋಳವೆಂದು ಭೂಗೋಳಜ್ಞ ತಿಳಿದ.

ಈ ರೀತಿಯ ಸ್ವರೂಪವನ್ನು ಕಂಡಮೇಲಂತೂ ಭೂಗೋಳಜ್ಞ ಕುಣಿದು ಕುಪ್ಪಳಿಸಿದ. ಅವನ ಆನಂದಕ್ಕೆ ಎಲ್ಲೆಯೇ ಇರಲಿಲ್ಲ. ಅಂತೂ ಕೊನೆಗೆ ಶಾಸ್ತ್ರದ ಸತ್ವವನ್ನು ಕಂಡುಹಿಡಿದೆನೆಂದೇ ಆಕಾಶಕ್ಕೆ ಹಾರಿದ್ದ. ಆದರೆ ಉತ್ಸಾಹ ಬಹುಕಾಲ ಉಳಿಯಲಿಲ್ಲ. ಆನೆಯ ಬಾಲವನ್ನು ಮುಟ್ಟಿ, ಆನೆಯು ಹಗ್ಗದಂತಿದೆ ಎಂದು ಹೇಳಿದ ಕುರುಡನಂತಾಯಿತು ಭೂಗೋಳಜ್ಞನ ಸ್ಥಿತಿ. ಅಷ್ಟು ಹೊತ್ತಿಗಾಗಲೇ ವಿಜ್ಞಾನ ಬಹಳ ಮುಂದುವರೆದಿತ್ತು; ಮಾನವನ ಗಣನೆಗೂ ಮೀರಿ ಬೆಳೆದಿತ್ತು. ಅದರ ಬೆಳಕಿನಲ್ಲಿ ಮತ್ತೆ ಶಾಸ್ತ್ರದ ವಿಶ್ಲೇಷಣೆ ಮಾಡಿದ; ಇದುವರೆವಿಗೂ ತಿಳಿದಿದ್ದ ಭೂಗೋಳಶಾಸ್ತ್ರಾಂಗಗಳಲ್ಲೆಲ್ಲವನ್ನೂ ಸೇರಿಸಿದ. ಆಗ ಅವನಿಗೆ ಭೂಗೋಳಶಾಸ್ತ್ರದ ನೈಜಸ್ವರೂಪದ ಅರಿವಾಯಿತು.

ಇಂದು ಭೂಗೋಳಶಾಸ್ತ್ರ ತನ್ನ ಮೇರೆಗೂ ಮೀರಿ ಬೆಳೆದು ನಿಂತಿದೆ. ಅನೇಕ ಉಪಾಂಗಗಳು ಇದರಲ್ಲಿ ಮೂಡಿವೆ. ಪ್ರತಿಯೊಂದು ಉಪಾಂಗವೂ ಅಥವಾ ವಿಭಾಗವೂ ಪ್ರತ್ಯೇಕ ಅಧ್ಯಯನ ವಿಷಯವಾಗುವಷ್ಟು ಸ್ವಯಂಪರಿಪೂರ್ಣವಾಗಿದೆ.

ಹಿಂದೆಯೇ ತಿಳಿಸಿದಂತೆ ಆಧುನಿಕ ಭೂಗೋಳವನ್ನು ಭೌತಿಕ ಭೂಗೋಳ, ಮಾನವ ಭೂಗೋಳ, ರಾಜಕೀಯ ಭೂಗೋಳ ಮತ್ತು ಐತಿಹಾಸಿಕ ಭೂಗೋಳ–ಎಂಬುದಾಗಿ ನಾಲ್ಕು ಭಾಗಗಳಾಗಿ ಮಾಡಬಹುದು.

ಭೌತಿಕ ಭೂಗೋಳದಲ್ಲಿ ಭೂಗರ್ಭ ವಿಜ್ಞಾನ, ಭೂವಿಜ್ಞಾನ, ಪವನಶಾಸ್ತ್ರ, ಜಲವಿಜ್ಞಾನ, ಗಣಿತ ಭೂಗೋಳ, ಜೀವಭೂಗೋಳ, ಪ್ರಾಣಿಭೂಗೋಳ—ಎಂಬ ಪ್ರಭೇದಗಳಿವೆ.

ಮಾನವ ಭೂಗೋಳದಲ್ಲಿ ಮಾನವ ಭೂಗೋಳ, ಆರ್ಥಿಕ ಭೂಗೋಳ, ಕೃಷಿ ಭೂಗೋಳ, ಕೈಗಾರಿಕಾ ಭೂಗೋಳ. ಸಾಮಾಜಿಕ ಭೂಗೋಳ ಇತ್ಯಾದಿ ಪ್ರಭೇದ ಗಳಿವೆ.

ಮಾನವ ಭೂಗೋಳದ ಪ್ರಧಾನ ಸತ್ವ ಆರ್ಥಿಕ ಭೂಗೋಳದಲ್ಲಿ ಅಡಗಿದೆ. ಇದರಿಂದಾಗಿ ಒಮ್ಮೊಮ್ಮೆ ಮಾನವ ಭೂಗೋಳವನ್ನು ಆರ್ಥಿಕ ಭೂಗೋಳವೆಂದೂ ಕರೆಯುವರು. ಆರ್ಥಿಕ ಭೂಗೋಳವನ್ನು ಒಮ್ಮೊಮ್ಮೆ ಮಾನವ ಭೂಗೋಳವೆಂದೂ ಭ್ರಮಿಸುವುದೂ ಉಂಟು.

ಜೀವನದ ವ್ಯವಹಾರ ರೂಪ ಆರ್ಥಿಕಶಾಸ್ತ್ರ ಮತ್ತು ಮಾನವಭರಿತ (Terrestrial) ಭೂಮಿಯಲ್ಲಿನ ಜೀವನದ ಹಂಚಿಕೆಯೇ ಭೂಗೋಳಶಾಸ್ತ್ರ. ಆದುದರಿಂದ ಆರ್ಥಿಕ ಭೂಗೋಳವು ಮುಖ್ಯವಾಗಿ ಮನುಷ್ಯನ ಆರ್ಥಿಕ ಚಟುವಟಿಕೆಯ ಕೆಲಸ ಕಾರ್ಯಗಳಿಗೆ ಸಂಬಂಧಿಸುದುದಾಗಿದೆ. ಮನುಷ್ಯನ ಊಟ, ವಸತಿ ಮತ್ತು ಉಡುಪುಗಳ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಮನುಷ್ಯನ ಮುಖಾಂತರ ಉಂಟಾಗುವ ಉತ್ಪಾದಕ ಪ್ರಯತ್ನಗಳಿಂದ ಈ ಶಾಸ್ತ್ರಾಂಗವು ಕೂಡಿರುತ್ತದೆ. ಭೂಮಿಯ ಮೇಲ್ಭಾಗದ ನಿಸರ್ಗ ಸಾಧನೆಗಳ 'ಏಕೆ'? 'ಹೇಗೆ'? ಮತ್ತು 'ಎಲ್ಲಿ' ಎಂಬ ಪ್ರಶ್ನೆಗಳ ಉಪಯೋಗವಾಗುವುದರ ವಿಶ್ಲೇಷಣಾತ್ಮಕ ಅಧ್ಯಯನವೇ ಆರ್ಥಿಕ ಭೂಗೋಳದ ಮೂಲಮಂತ್ರವಾಗಿದೆ.

ಸಸ್ಯ ಮತ್ತು ಪ್ರಾಣಿಗಳ ತರಹದ ಜೀವಿಯಾದ (Organism) ಮಾನವನು ಭೂಮಿಗೆ ನೇರವಾಗಿ ಸಂಬಂಧಪಟ್ಟವನಾಗಿದ್ದಾನೆ. ಆದರೆ ಮಾನವನು ಭೂನಿವಾಸಿ ಪ್ರಾಣಿ(Terrestrial animal)ಯಾಗಿರುವುದಲ್ಲದೆ, ವಿಕಾಸವಾದದ ವೃಕ್ಷದಲ್ಲಿ ಅತ್ಯುಚ್ಚಸ್ಥಾನವನ್ನು ಪಡೆದಿದ್ದಾನೆ. ಪ್ರಪಂಚದ ಯಾವುದೋ ಮೂಲೆಯಲ್ಲಿರುವ ಹಿಂದುಳಿದ ಕೆಲವು ಪ್ರದೇಶಗಳಲ್ಲಿನ ಆದಿಮಾನವನಂತೆ ಸಸ್ಯ ಮತ್ತು ಪ್ರಾಣಿಗಳೂ ಭೂಬಹಿರ್ವಲಯಕ್ಕೆ (ವಾತಾವರಣ) ತಮ್ಮ ಪ್ರತಿಕ್ರಿಯೆಯನ್ನು ತೋರಿಸುತ್ತವೆ. ಆದರೆ ಮಾನವನು, ಪ್ರಾಣಿಗಳ ಮೇಲಿರುವ ತನ್ನ ಬುದ್ಧಿಶಕ್ತಿಯ ಮೇಲ್ಮೆಯ ದೃಷ್ಟಿಯಿಂದ, ನಿಸರ್ಗವನ್ನು ಸ್ವಲ್ಪಮಟ್ಟಿಗೆ ಸುಧಾರಿಸಬಲ್ಲ. ಸಾಧ್ಯವಾದಲ್ಲಿ ತನ್ನ ಉಳಿಯುವಿಕೆಯ ಸಾಧ್ಯತೆಗಾಗಿ ಸ್ವಾಭಾವಿಕ ಸನ್ನಿವೇಶವನ್ನೂ ಸೃಷ್ಟಿಸಬಲ್ಲ. ಆದುದರಿಂದ ಪ್ರಾಣಿಗಳು ತಮ್ಮ ಸ್ವಾಭಾವಿಕವಾಗಿ ಹುಟ್ಟಿ ಬೆಳೆಯುವ ಸ್ಥಳೀಯ (Habitat) ಸ್ವಾಭಾವಿಕತೆಗೆ ಹೊಂದಿಕೊಂಡಿರುವಷ್ಟು ಮಾನವನು ನಿಸರ್ಗದಮೇಲೆ ಆಧಾರಿತನಾಗಿಲ್ಲ. [ಸ್ಥಳದಿಂದ ಸ್ಥಳಕ್ಕೆ ಚಲಿಸುವ ಶಕ್ತಿಯ (Locomotion) ಮುಖಾಂತರ ಪ್ರಾಣಿಗಳು ಈ ರೀತಿಯ ವ್ಯತಿರೇಕವಾತಾವರಣ ಪರಿಸ್ಥಿತಿಗಳಿಂದ ತಪ್ಪಿಸಿಕೊಳ್ಳಬಹುದು.] ಸಸ್ಯಗಳು ಮತ್ತು ಪ್ರಾಣಿಗಳು ಹುಟ್ಟಿ ಬೆಳೆಯುವ ಸ್ಥಳೀಯ ಪ್ರಭಾವಗಳ ಸಂಬಂಧವೇ ಸಸ್ಯ ಜೀವಿಪರಿಸ್ಥಿತಿ ಶಾಸ್ತ್ರ(Plant Ecology)ವಾಗಿದೆ. ಇದೇ ರೀತಿಯಲ್ಲಿ ಪ್ರಾಣಿ ಜೀವಿಪರಿಸ್ಥಿತಿ ಶಾಸ್ತ್ರ (Animal Ecology) ಮತ್ತು

ಮಾನವ ಜೀವಿಪರಿಸ್ಥಿತಿ ಶಾಸ್ತ್ರ(Human Ecology)ಗಳಾಗಿವೆ. ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಮಾನವ ಜೀವಿಪರಿಸ್ಥಿತಿ ಶಾಸ್ತ್ರವೇ ಆರ್ಥಿಕ ಭೂಗೋಳವಾಗಿದೆ. ಜೀವಿಗಳು ಹುಟ್ಟಿಬೆಳೆಯುವ ಪರಿಸ್ಥಿತಿಗಳ ಜೊತೆಯಲ್ಲಿ ಮಾನವನು ನಿಸರ್ಗಕ್ಕೆ ತೋರುವ ಪ್ರತಿಕ್ರಿಯೆಯೊಂದಿಗೆ ನಿಸರ್ಗವು ವ್ಯವಹರಿಸುತ್ತದೆ. ಆದರೆ ಈ ಪ್ರತಿ ಕ್ರಿಯೆಯನ್ನು ಬದಲಾಯಿಸಬಹುದು. ಏಕೆಂದರೆ ಮಾನವನು ಜೀವಿಗಳ ಇರುವಿಕೆಯ ಸ್ಥಳೀಯ ಪ್ರಭಾವಗಳನ್ನು ಉಪಯೋಗಿಸಿಕೊಳ್ಳಬಲ್ಲ ರೀತಿಗಳಲ್ಲಿ ವೈವಿಧ್ಯತೆ ಇರುತ್ತದೆ.

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಮನುಷ್ಯರು ತಮ್ಮ ತಮ್ಮ ಜೀವನಕ್ಕಾಗಿ ವಿವಿಧ ಕಸುಬುಗಳನ್ನು ಅನುಸರಿಸಿರುತ್ತಾರೆ–ಸೌದೆ ಒಡೆಯುವುದು, ಮೀನು ಹಿಡಿಯುವುದು, ಬೇಟೆಯಾಡುವುದು, ವ್ಯವಸಾಯ, ಪಶುಪಾಲನೆ, ಗಣಿಕೈಗಾರಿಕೆ ಮತ್ತಿತರ ಕೈಗಾರಿಕೆಗಳು, ನೌಕರಿಮಾಡುವುದು, ವ್ಯಾಪಾರಮಾಡುವುದು ಇತ್ಯಾದಿಗಳು. ಮನುಷ್ಯರ ಈ ರೀತಿಯ ಆರ್ಥಿಕ ಪ್ರಯತ್ನಗಳ ಮೇಲೆ ಮಣ್ಣು, ಭೂಮಿಯ ರಚನೆ, ವಾಯುಗುಣ, ಸಸ್ಯವರ್ಗ, ಖನಿಜಗಳು, ಭೌಗೋಳಿಕ ಪರಿಸ್ಥಿತಿ, ಸಂಚಾರ ಮಾರ್ಗಗಳ ವ್ಯವಸ್ಥೆ, ಜನಸಾಂದ್ರತೆ ಇತ್ಯಾದಿ ಭೂಬಹಿರ್ವಲಯದ ವಿವಿಧ ಅಂಗಗಳ ಪ್ರಭಾವ ಮನುಷ್ಯನ ಕಸುಬುಗಳ ಮೇಲೆ ಬೀಳುತ್ತದೆ. ಇದರೊಂದಿಗೆ ಆರ್ಥಿಕ ವಿಕಾಸದ ಸಂತುಲನಾವಸ್ಥೆಯನ್ನು ಪಡೆಯುವುದಕ್ಕಾಗಿ ಕೃಷಿ ಮತ್ತು ಕೈಗಾರಿಕೆಗಳ ದೃಷ್ಟಿಯಿಂದ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರಕೃತಿ ಉಪಕರಣಗಳ, ಮತ್ತದರ ಸಾಧನೆಗಳ ರಕ್ಷಣೆಯ ಅಧ್ಯಯನ ಮತ್ತು ಆರ್ಥಿಕ ಉಪಯೋಗಕ್ಕಾಗಿ ಅವುಗಳ ಅನ್ವೇಷಣೆಮಾಡುವುದೇ ಆರ್ಥಿಕ ಭೂಗೋಳದ ಮೂಲ ವಿಷಯವಾಗಿರುತ್ತದೆ.

ಆರ್ಥಿಕ ಭೂಗೋಳವು ಎರಡು ಕೆಲಸಗಳನ್ನು ಮಾಡುತ್ತದೆ. ಮೊದಲನೆಯದಾಗಿ ಅದು ಪ್ರಪಂಚದ ಆರ್ಥಿಕ ಸಾಧನೆಗಳ ಸರಿಯಾದ ವಿವರಣೆ ನೀಡುತ್ತದೆ. ಎರಡನೆಯದಾಗಿ ಮನುಷ್ಯನು ತನ್ನ ಉಪಯೋಗಕ್ಕಾಗಿ ಈ ಆರ್ಥಿಕ ಸಾಧನೆಗಳನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತಾನೆ ಎಂಬುದನ್ನೂ ತಿಳಿಸುತ್ತದೆ.

ವಿವಿಧ ಭೂಗೋಳಜ್ಞರು, ಆರ್ಥಿಕ ಭೂಗೋಳದ ಅರ್ಥವನ್ನು, ಅದರ ಸ್ವರೂಪವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ವಿವರಿಸಿದ್ದಾರೆ.

"ಆರ್ಥಿಕ ಭೂಗೋಳವು ಮನುಷ್ಯನ ಭೌಗೋಳಿಕ ಮತ್ತು ಭೌತಿಕ ಪರಿಸ್ಥಿತಿಗಳಲ್ಲಿನ ಅವನ ಆರ್ಥಿಕ ಪ್ರಯತ್ನಗಳ ಮೇಲೆ ಬೀಳುವ ಪ್ರಭಾವಗಳ ಅಧ್ಯಯನವನ್ನು ತಿಳಿಸುತ್ತದೆ.-"

—ಮೈಕಫರ್ ಲೇನ್

"ಮಾನವನ ಆರ್ಥಿಕ ಪ್ರಯತ್ನಗಳೊಂದಿಗೆ ಅವನ ನೆಲಸುವಿಕೆಯ ಸಂಬಂಧವು ಹೇಗಿದೆ ಎಂಬುದನ್ನು ವಿವರಿಸುವ ಮಾನವ ಭೂಗೋಳ ಶಾಖೆಯೇ ಆರ್ಥಿಕ ಭೂಗೋಳ–"

—ಪ್ರೊ॥ ಬುಚಾನನ್

"ಮನುಷ್ಯನ ಆರ್ಥಿಕ ಪ್ರತಿಕ್ರಿಯೆಗಳ ಮೇಲೆ ಬೀಳುವ ಪ್ರಾಕೃತಿಕ ವಾತಾವರಣ ಅಥವಾ ಭೂಬಹಿರ್ವಲಯದ ಪ್ರಭಾವಗಳ ಅಧ್ಯಯನದ ಪ್ರತಿರೂಪ ವಾಗಿರುವ ಭೂಗೋಳ ಶಾಖೆಯೇ ಆರ್ಥಿಕ ಭೂಗೋಳ"—

—ರಡ್‌ಮಸ್ ಬ್ರೌನ್ (Rudmos Brown)

"ಯಾವ ಯಾವ ವಸ್ತುಗಳ ಉತ್ಪತ್ತಿ, ಅವುಗಳ ಸಾಗಾಣಿಕೆ. ಮತ್ತು ಅವುಗಳ ಮಾರಾಟಗಳ ಮೇಲೆ, ಎಲ್ಲ ರೀತಿಯ ಭೌಗೋಳಿಕ ಪರಿಸ್ಥಿತಿಗಳ ಪ್ರಭಾವ ಬೀರುವ ವಿವರಣೆ ಇರುವುದೋ, ಅಂಥಹ ವಿವರಣೆಯಿಂದ ಕೂಡಿರುವ ವಿಷಯ ಕೋಶವೇ ಆರ್ಥಿಕ ಭೂಗೋಳ" —ಜಿ. ಚಿಸೋಲ್ಮ್ (G. Chishollm)

"ಮಾನವನ ಕಸಬುಗಳ ಅಥವಾ ಜನಜೀವನಕ್ಕೆ ಸಹಾಯವಾಗುವಂಥ ಎಲ್ಲ ರೀತಿಯ ವಸ್ತುಗಳು, ಸಾಧನೆಗಳು, ಕೆಲಸಗಳು (ಪ್ರಯತ್ನಗಳು), ಗುಂಪುಗಳು (ಸಂಘಗಳು) ರೀತಿ ನೀತಿಗಳು ಮತ್ತು ಮನುಷ್ಯನ ಬುದ್ಧಿಶಕ್ತಿಗಳ ವಿವರಣೆ ನೀಡುವ ಭೂಗೋಳಾಂಗವು ಆರ್ಥಿಕ ಭೂಗೋಳವಾಗಿದೆ. ವ್ಯವಸಾಯ, ವ್ಯಾಪಾರ ಮತ್ತು ಕೈಗಾರಿಕೆ—ಇವು ಕಸುಬುಗಳ ಮೂರು ಮುಖ್ಯ ಭೇದಗಳು. ಆದುದರಿಂದ ಆರ್ಥಿಕ ಭೂಗೋಳದಲ್ಲಿ ಈ ಮೂರು ರೂಪಗಳೂ ಸಿಗುತ್ತವೆ. ಭೌತಿಕ ಪರಿಸ್ಥಿತಿಯ ಕೊಡುಗೈನ ಪ್ರಭಾವವು ಮನುಷ್ಯನ ಆಹಾರ, ಉಡುಪು, ವಸತಿ, ಯಂತ್ರಸಾಮಗ್ರಿಗಳು ಮತ್ತು ಇತರೇ ಆವಶ್ಯಕ ವಸ್ತುಗಳ ಪೂರೈಕೆಯ ರೂಪಗಳ ಮೇಲೆ ಬೀಳುವುದು. ಇದರ ಅನ್ವೇಷಣೆಯೇ ಈ ಶಾಸ್ತ್ರಾಂಗದ ಪ್ರಮುಖ ಸಮಸ್ಯೆ" —ಪ್ರೊ|| ಹಂಟಿಂಗ್‌ಟನ್

"ಮನುಷ್ಯನ ಆರ್ಥಿಕ ಕೆಲಸಗಳ ಮೇಲೆ ಪ್ರಾಕೃತಿಕ ಪರಿಸ್ಥಿತಿಗಳು ಪ್ರಭಾವ ಬೀರುತ್ತವೆ. ಇದರ ಅಧ್ಯಯನವೇ ಆರ್ಥಿಕ ಭೂಗೋಳ. ಮನುಷ್ಯನ ಆರ್ಥಿಕ ಪ್ರಯತ್ನಗಳಾದ ಪದಾರ್ಥಗಳ ಉತ್ಪನ್ನ, ಸಂಚಾರ ಮಾರ್ಗಗಳು ಮತ್ತು ಹಂಚಿಕೆ ಹಾಗೂ ವ್ಯಾಪಾರಗಳ ಮೇಲೆ ಅವನ ಸುತ್ತಮುತ್ತಲಿನ ಸನ್ನಿವೇಶ, ವಾಯುಗುಣ ಮತ್ತು ಸಸ್ಯವರ್ಗ ಇತ್ಯಾದಿ ಪ್ರಾಕೃತಿಕ ಪರಿಸ್ಥಿತಿಗಳು ಯಾವ ರೀತಿಯ ಪ್ರಭಾವ ವನ್ನು ಬೀರುತ್ತವೆ ಎಂಬುದರ ಅಧ್ಯಯನ ಈ ಭೂಗೋಳಾಂಗದಲ್ಲಿ ಸೇರಿದೆ"—

—ಪ್ರೊ|| ದಾಸಗುಪ್ತ

ಒಟ್ಟಿನಲ್ಲಿ ಹೇಳುವುದಾದರೆ—ಭೂಗೋಳಶಾಸ್ತ್ರದ ಒಂದು ಅಂಗ ಆರ್ಥಿಕ ಭೂಗೋಳ. ಇದರಲ್ಲಿ ಮನುಷ್ಯನ ಆರ್ಥಿಕ ಪ್ರಯತ್ನಗಳ ಮೇಲೆ ಬೀಳುವ ಮಾನವನ ಭೂಬಹಿರ್ವಲಯದ ಪ್ರಭಾವದ ಅಧ್ಯಯನವು ಸೇರಿದೆ.

ಆರ್ಥಿಕ ಭೂಗೋಳದಲ್ಲಿ ನಾಲ್ಕು ಮುಖ್ಯ ಅಂಗಗಳಿವೆ. ಮತ್ತು ಅದನ್ನು ಈ ಅಂಗಗಳಿಗೆ ಅನುಗುಣವಾಗಿ ನಾಲ್ಕು ಭಾಗಗಳಾಗಿ ವಿಭಾಗಿಸಬಹುದು.—ವ್ಯಾವಸಾಯಿಕ ಭೂಗೋಳ (Agricultural Geography), ಕೈಗಾರಿಕಾ ಭೂಗೋಳ (Industrial Geography), ವಾಣಿಜ್ಯ ಭೂಗೋಳ (Commercial

Georgraphy) ಮತ್ತು ಜನಸಾಂದ್ರತಾ ಭೂಗೋಳ (the Geography of Population). ಈ ನಾಲ್ಕು ಆರ್ಥಿಕ ಭೂಗೋಳಾಂಗಗಳೂ ಇಂದು ಬಹಳವಾಗಿ, ಮೇಲ್ಮಟ್ಟದ ಅಧ್ಯಯನದ ವಿಷಯಗಳಾಗಿ ಬೆಳೆದಿವೆ. ಇವು ಭೂಗೋಳಜ್ಞರ ವಿಶೇಷ ಅಭ್ಯಾಸದ ಹಾಗೂ ಸಂಶೋಧನಾತ್ಮಕ ವಿಷಯುಗಳಾಗಿವೆ.

ವ್ಯವಸಾಯದ ವಿವಿಧ ಬೆಳೆಗಳ ಬೆಳೆಯುವಿಕೆ, ಮತ್ತವುಗಳ ಪ್ರಪಂಚದ ಮಟ್ಟದ ಹಂಚಿಕೆಗಳನ್ನು ವಿವರಿಸುವ ಭೂಗೋಳಾಂಗವೇ ಕೃಷಿ ಭೂಗೋಳ ಅಥವಾ ವ್ಯಾವಸಾಯಿಕ ಭೂಗೋಳವಾಗಿದೆ. ಮಣ್ಣಿನ ಗುಣ, ನೀರು ಒದಗುವಿಕೆಯ ಸ್ವರೂಪ, ವಾಯುಗುಣದ ಪ್ರಭಾವ, ಬೀಜಗಳನ್ನು ಬಿತ್ತುವ, ಕಳೆಕೀಳುವ, ಕೊಯ್ಲು ಕೊಯ್ಯುವ ಇತ್ಯಾದಿ ಬೆಳೆ ಬೆಳೆಯಲನುಕೂಲವಾಗಬಹುದಾದ ವಿಷಯಗಳ ಅರಿವು ಪ್ರತಿಯೊಬ್ಬ ರೈತನಿಗೂ ಇರಬೇಕಾದುದು ಆವಶ್ಯಕ. ಈ ವಿಷಯಗಳು ವ್ಯಾವಸಾಯಿಕ ಭೂಗೋಳದ ಮೂಲ ಅಂಶಗಳು. ಆಹಾರ ಬೆಳೆಗಳು (Food Crops), ಪಾನೀಯ ಬೆಳೆಗಳು (Beverage Crops), ಉಡುಪು ಬೆಳೆಗಳು (Crops of Cloth) ಮತ್ತು ಉಪ ಆಹಾರ ಬೆಳೆಗಳು—ಎಲ್ಲೆಲ್ಲಿ ಹೆಚ್ಚು ಬೆಳೆಯುತ್ತವೆ, ಈ ಬೆಳೆಗಳ ಬೆಳವಣಿಗೆಗೆ ಇರುವ ಭೌಗೋಳಿಕ ಅಂಶಗಳು ಯಾವುವು, ಯಾವ ರೀತಿ ಕೈಗಾರಿಕೆಗಳ ಬೆಳವಣಿಗೆಗೆ ಇವು ಸಹಾಯಮಾಡುವುವು ಎಂಬ ವಿಷಯ ವಿವರಗಳಿಗೆ ಮೇಲೆ ತಿಳಿಸಿದ ಮೂಲ ಅಂಶಗಳು ಆಧಾರಭೂತವಾಗಿವೆ. ವ್ಯವಸಾಯದಲ್ಲಿ ಗಣನೆಗೂ ಮೀರಿ ಮುಂದುವರೆದಿರುವ ಅಮೆರಿಕಾ ಸಂಯುಕ್ತ ಸಂಸ್ಥಾನಗಳು, ಇಂಗ್ಲೆಂಡ್ ಮತ್ತು ರಷ್ಯಾ ದೇಶಗಳು ಕೃಷಿ ಭೂಗೋಳ ಸಂಬಂಧದಲ್ಲಿ ಅನೇಕ ಗ್ರಂಥಗಳನ್ನು ರಚಿಸಿರುವುವಲ್ಲದೆ, ಹೆಚ್ಚಿನ ಮಟ್ಟದ ವಿಕಾಸ ಹೊಂದಿದೆ.

ಕೈಗಾರಿಕಾ ಭೂಗೋಳದಲ್ಲಿ ಖನಿಜಗಳಿಗೆ ಸಂಬಂಧಪಟ್ಟ ವಿಷಯುಗಳೇ ಅಲ್ಲದೆ; ಒಂದು ಕಚ್ಚಾವಸ್ತುವು ಸಿದ್ಧವಸ್ತು ಆಗಬೇಕಾದರೆ ಯಾವ ಯಾವ ಭೌಗೋಳಿಕ ಅಂಶಗಳ ಸಹಾಯದಿಂದ ಯಾವ ಯಾವ ರೂಪಗಳನ್ನು ಪಡೆಯುತ್ತದೆ ಎಂಬುದರ ವಿವರಣೆಯೂ ಇರುತ್ತದೆ. ಯಾವ ರೀತಿಯ ಶಿಲೆಯಲ್ಲಿ, ಎಂತಹ ಶಿಲಾಪದರ ಪ್ರದೇಶದಲ್ಲಿ ಖನಿಜಗಳು ಸಿಗುತ್ತವೆ ಎಂಬುದನ್ನು ಭೂಶಾಸ್ತ್ರಜ್ಞನು ತಿಳಿಸಿದರೆ ಅವು ಯಾವ ರೂಪದಲ್ಲಿವೆ, ಯಾವ ಸ್ಥಿತಿಯಲ್ಲಿ ಅವು ಭೂಮಿಯಿಂದ ಹೊರಗಡೆ ಬರಬಲ್ಲದು ಎಂಬುದನ್ನು ಭೂಗೋಳಜ್ಞನು ವಿವರಿಸುತ್ತಾನೆ. ಇವುಗಳ ಉತ್ಪತ್ತಿ, ಹಂಚಿಕೆ, ಇವುಗಳಿಂದ ಉತ್ಪಾದಿತವಾದ ವಸ್ತುಗಳ ಮಾರುವಿಕೆಗೆ ಸಂಬಂಧಪಟ್ಟ ಸಮಸ್ಯೆಗಳ ಸಾಮಾಜಿಕ ಹಾಗೂ ಆರ್ಥಿಕ ಪೃಷ್ಠಭೂಮಿಯಿಂದ ಕೂಡಿದ ಭೌಗೋಳಿಕ ದೃಷ್ಟಿಕೋಣದ ಆವಶ್ಯಕತೆ ಇಲ್ಲಿದೆ. ಒಂದು ಪ್ರದೇಶ ಕೈಗಾರಿಕಾ ಪ್ರದೇಶವಾಗಬೇಕಾಗಿದ್ದರೆ ಎಲ್ಲ ರೀತಿಯ ಅನುಕೂಲಗಳಿರುವ ಹಿನ್ನೆಲೆ ಪ್ರದೇಶದ ಆವಶ್ಯಕತೆ ಅದಕ್ಕೆ ಇರಬೇಕು. ಈ ಔದ್ಯೋಗಿಕ ಸಾಧನೆಗಳ

ಸರ್ವೋತ್ತಮ ಉಪಯೋಗದ ಭೌಗೋಳಿಕ ಹಿನ್ನೆಲೆಯನ್ನು ಈ ಆರ್ಥಿಕ ಭೌಗೋಳಿಕಾಂಗ ವಿವರಿಸುತ್ತದೆ. ಒಂದು ದೇಶದ ಕಚ್ಚಾವಸ್ತುಗಳ ಮತ್ತು ಶಕ್ತಿಯ ಸಾಧನಗಳ ಉಪಯೋಗ ಮತ್ತವುಗಳ ಹಂಚಿಕೆಗೆ ಸಂಬಂಧಪಟ್ಟ ಸಮಸ್ಯೆಗಳ ಅಧ್ಯಯನ ವಲಯವು ಕೈಗಾರಿಕಾ ಭೂಗೋಳದ ಕಾರ್ಯಕ್ಷೇತ್ರದಲ್ಲಿದೆ.

ಒಂದು ದೇಶವು ತಾನು ತಯಾರಿಸಿದ ಸಿದ್ಧವಸ್ತುವನ್ನು ತನ್ನ ಆವಶ್ಯಕತೆಗಿಂತಲೂ ಹೆಚ್ಚಾಗಿರುವುದನ್ನು ತನ್ನ ಬಳಿ ಇಟ್ಟುಕೊಳ್ಳಲು ಪ್ರಯತ್ನಿಸುವುದಿಲ್ಲ. ಅದನ್ನು ಮತ್ತೊಂದು ದೇಶಕ್ಕೆ ಕಳುಹಿಸಲು ಪ್ರಯತ್ನಿಸುತ್ತದೆ. ತನ್ನಲ್ಲಿನ ಕೊರತೆಯ ವಸ್ತುಗಳನ್ನು ಬೇರೆಕಡೆಯಿಂದ ತರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಇದೊಂದು ಸ್ವಾಭಾವಿಕ ಭೌಗೋಳಿಕ ವಿಷಯ ಪ್ರತಿ ಒಂದು ದೇಶಕ್ಕೂ ಅಂಟಿರುತ್ತದೆ. ಈ ರೀತಿಯ ದೇಶ ದೇಶಗಳ ಮಧ್ಯದಲ್ಲಿನ ಆಮದು, ರಫ್ತು, ಅವುಗಳ ವ್ಯಾಪಾರ, ಸಂಚಾರಮಾರ್ಗಗಳ ಸಾಧನಗಳು ಮತ್ತು ವ್ಯಾಪಾರಿಕ ಕೇಂದ್ರಗಳ ವಿಕಾಸ ಮತ್ತು ಉನ್ನತಿಯ ಕಾರಣಗಳ ಅಧ್ಯಯನವನ್ನು ನಾವು ವಾಣಿಜ್ಯ ಭೂಗೋಳದಲ್ಲಿ ಕಾಣುತ್ತೇವೆ. ಪ್ರತಿಯೊಂದು ದೇಶದ ವ್ಯಾಪಾರವು ಆಯಾ ದೇಶದ ವ್ಯಾವಸಾಯಿಕ ಬೆಳೆಗಳು, ಕಚ್ಚಾಪದಾರ್ಥಗಳು, ಸಿದ್ಧವಸ್ತುಗಳು ಮತ್ತು ಕೈಗಾರಿಕೋತ್ಪತ್ತಿ ವಸ್ತುಗಳ ಮೇಲೆ ಈ ಭೂಗೋಳಾಂಗವು ಆಧಾರಿತವಾಗಿದೆ. ಆದುದರಿಂದ ವ್ಯಾವಸಾಯಿಕ ಭೂಗೋಳ ಮತ್ತು ಕೈಗಾರಿಕಾ ಭೂಗೋಳಗಳ ಮುಂದುವರಿದ ವಿಷಯಾಧ್ಯಯನವೇ ವಾಣಿಜ್ಯ ಭೂಗೋಳವಾಗಿದೆ ಎಂಬುದು ಕೆಲವು ಇತ್ತೀಚಿನ ಭೂಗೋಳಜ್ಞರ ಅಭಿಪ್ರಾಯವಾಗಿದೆ.

ಜನಸಾಂದ್ರತೆ ಕೆಲವು ಕಡೆ ಬಹಳ ಒತ್ತಾಗಿ ಇರುತ್ತದೆ. ಮತ್ತೆ ಕೆಲವು ಕಡೆ ಬಹಳ ವಿರಳವಾಗಿರುತ್ತದೆ. ಜನರಹಿತ ಪ್ರದೇಶಗಳಂತೂ ಭೂಮಿಯ ಮೇಲೆ ಅನೇಕವಿವೆ. ಈ ರೀತಿಯ ವೈಪರೀತ್ಯಕ್ಕೆ ಭೌಗೋಳಿಕ ಆಧಾರಗಳೂ ಅನೇಕವಿವೆ. ಯಾವ ಯಾವ ಹಿನ್ನೆಲೆಯಲ್ಲಿ ಈ ವೈಪರೀತ್ಯಗಳು ಉಂಟಾಗುತ್ತವೆ ಎಂಬುದರ ವಿವೇಚನಾತ್ಮಕ ವಿಷಯ ನಿರೂಪಣೆಯೇ ಜನಸಾಂದ್ರತಾ ಭೂಗೋಳದ ತಿರುಳು.

ಈ ರೀತಿಯಲ್ಲಿ ಆರ್ಥಿಕ ಭೂಗೋಳವು ಮೇಲೆ ತಿಳಿಸಿದ ನಾಲ್ಕು ಅಂಗ ಶಾಸ್ತ್ರಗಳ ಮೇಲೆ ನಿಂತಿದೆ. ಪ್ರಪಂಚವು ಮುಂದುವರಿದಂತೆಲ್ಲ ಈ ಶಾಸ್ತ್ರಾಂಗವೂ ಬಹಳವಾಗಿ ಮುಂದುವರಿಯುತ್ತಿದೆ; ಬೆಳೆಯುತ್ತಿದೆ. ಪ್ರತಿಯೊಂದು ದೇಶವೂ ವೈಜ್ಞಾನಿಕವಾಗಿ ಬೆಳೆದಂತೆಲ್ಲ; ಇತರೇ ದೃಷ್ಟಿಗಳಿಂದಲೂ ಬೆಳೆಯಬೇಕಾಗುತ್ತದೆ. ಒಂದು ದೇಶ ಮುಂದುವರಿಯಬೇಕಾದರೆ ಇದೇ ಕಾರಣ. ಯಾವುದೇ ಒಂದು ದೇಶ ಮುಂದುವರೆದಿರಲಿ, ಅದಕ್ಕೆ ಕಾರಣಗಳನ್ನು ಅರಿಯಬೇಕಾಗಿದ್ದಲ್ಲಿ, ಆರ್ಥಿಕ ಭೂಗೋಳದಿಂದಲೇ ಸಾಧ್ಯ. ಆ ದೇಶದ ಔನ್ನತ್ಯವನ್ನು ಆರ್ಥಿಕ ಭೂಗೋಳದ ಮುಖಾಂತರ ಅಳೆಯಬಹುದು. ಆದುದರಿಂದ ಇಂದು ಆರ್ಥಿಕ ಭೂಗೋಳದ ಆವಶ್ಯಕತೆ ಬಹಳವಾಗಿದೆ.

ಯಾವುದೇ ದೇಶದಲ್ಲಿ ದೊರೆಯುವ ಪ್ರಕೃತಿಸಂಪತ್ತಾದ ಅರಣ್ಯವಸ್ತುಗಳು, ವ್ಯಾವಸಾಯಿಕ ಪದಾರ್ಥಗಳು ಮತ್ತು ಖನಿಜಗಳು ಯಾವ ಯಾವ ಸಾಧನಗಳ ಮುಖಾಂತರ ಎಲ್ಲಿ ದೊರೆಯುವುವು ಮತ್ತು ಅವುಗಳನ್ನು ಯಾವ ಕೆಲಸಕ್ಕಾಗಿ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಆರ್ಥಿಕ ಭೂಗೋಳದಿಂದ ತಿಳಿದುಕೊಳ್ಳಬಹುದು.

ಭೂಗರ್ಭದಲ್ಲಿ ಯಾವ ಯಾವ ಪದಾರ್ಥಗಳು ಅಡಗಿವೆ, ಮಾನವನ ಆವಶ್ಯಕತೆಗಳಿಗೆ ಅನುಗುಣವಾಗಿ ಇವನ್ನು ಹೇಗೆ ಉಪಯೋಗಿಸಿಕೊಳ್ಳಬಹುದು–ಎಂಬ ಜ್ಞಾನವನ್ನು ಆರ್ಥಿಕ ಭೂಗೋಳವು ನಮಗೆ ಒದಗಿಸುವುದಲ್ಲದೆ ಎಂಥ ಸ್ಥಳದಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪಿಸಬಹುದು, ಅದಕ್ಕಿರುವ ಅನುಕೂಲಗಳೇನೇನು ಎಂಬುದನ್ನೂ ವಿವರಿಸುತ್ತದೆ.

ಒಂದು ದೇಶದ ಆವಶ್ಯಕತೆಗಳಿಗೆ ಅನುಗುಣವಾಗಿ ಕಚ್ಚಾವಸ್ತುಗಳು, ಆಹಾರ ಪದಾರ್ಥಗಳು ಮತ್ತು ಯಂತ್ರಸಾಮಗ್ರಿಗಳನ್ನು ಎಲ್ಲಿಂದ ತರಿಸಿಕೊಳ್ಳಬಹುದು ಮತ್ತು ಈ ವಸ್ತುಗಳನ್ನು ತರಿಸಿಕೊಳ್ಳಲು ಇರುವ ವ್ಯಾಪಾರ ಮಾರ್ಗಗಳ ಅನುಕೂಲಗಳು ಏನೇನು ಎಂಬುದನ್ನೂ ಆರ್ಥಿಕ ಭೂಗೋಳವು ತಿಳಿಸುತ್ತದೆ. ಭಾರತದ ಜನಸಂಖ್ಯೆ ಹೆಚ್ಚಿದಂತೆಲ್ಲ, ಅದಕ್ಕೆ ಅನುಗುಣವಾಗಿ ಆಹಾರಸಾಮಗ್ರಿಗಳ ಪೂರೈಕೆಯೂ ಉಂಟಾಗಬೇಕು. ಆಂತರಿಕ ಪೂರೈಕೆ ಸಾಧ್ಯವಿಲ್ಲದಿದ್ದಲ್ಲಿ; ಆಹಾರ ಸಾಮಗ್ರಿಗಳನ್ನು ಆಮದುಮಾಡಿಕೊಳ್ಳಬೇಕಾಗುತ್ತದೆ. ನಿಸ್ಸಂದೇಹವಾಗಿ ಈ ಆಹಾರಸಾಮಗ್ರಿಗಳನ್ನು ಚೀನಾ, ಬರ್ಮಾ, ಆಸ್ಟ್ರೇಲಿಯಾ, ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಕೆನಡಾಗಳಿಂದ ತರಿಸಿಕೊಳ್ಳಲೇಬೇಕಾಗುತ್ತದೆ. ಈ ದೃಷ್ಟಿಯಿಂದ ವ್ಯಾಪಾರಿಗಳಿಗೆ ಆರ್ಥಿಕ ಭೂಗೋಳಜ್ಞಾನದ ಪರಿಚಯವಿರಬೇಕಾದುದು ಆವಶ್ಯಕ.

ವಿಶ್ವದ ವಿಭಿನ್ನ ಭಾಗಗಳಲ್ಲಿನ ಮಾನವಸಮುದಾಯವು ಯಾವ ರೀತಿಯಲ್ಲಿ ತನ್ನ ಭೌತಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತದೆ; ಜನಸಮುದಾಯದ ಜೀವನ, ಅದರ ಊಟವ್ಯವಸ್ಥೆ, ವೇಷಭೂಷಣಗಳು ಹೇಗಿವೆ, ಅಥವಾ ಅದು ತನ್ನ ಜೀವನದ ಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ತನ್ನಲ್ಲಿನ ಪ್ರಕೃತಿಸಂಪತ್ತನ್ನು ಯಾವ ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದೆ–ಇತ್ಯಾದಿ ಎಲ್ಲ ವಿಷಯಗಳನ್ನೂ ನಾವು ಆರ್ಥಿಕ ಭೂಗೋಳದಿಂದ ಪಡೆಯಬಹುದು. ಯಾವ ದೇಶವು ಯಾವ ರೀತಿಯಲ್ಲಿ ಆರ್ಥಿಕ ಉನ್ನತಿಯನ್ನು ಪಡೆದಿದೆ ಮತ್ತು ಯಾವ ದೇಶವು ಆರ್ಥಿಕ ದೃಷ್ಟಿಯಿಂದ ಏಕೆ ಹಿಂದುಳಿದಿದೆ–ಎಂಬುದು ಆರ್ಥಿಕ ಭೂಗೋಳದ ಅಧ್ಯಯನದಿಂದ ತಿಳಿದುಕೊಳ್ಳಬಹುದು.

ಪ್ರತಿ ದೇಶದ ಉನ್ನತಿಗಾಗಿ ಸುವ್ಯವಸ್ಥಿತ ಯೋಜನೆಗಳನ್ನು ನಿರ್ಮಿಸಲು ಆ ದೇಶದ ಬೇರೆ ಬೇರೆ ಭಾಗಗಳಲ್ಲಿ ಸಿಗುವ ಅಥವಾ ಉತ್ಪನ್ನವಾಗುವ ವಸ್ತುಗಳ

ಸ್ವರೂಪದ ಪೂರ್ಣ ಅರಿವು ಶಾಸ್ತ್ರಜ್ಞರಿಗೆ ಇರಬೇಕಾದುದು ಆವಶ್ಯಕ. ಇದರಿಂದ ಅವರು ಬಹು ಸುಲಭವಾಗಿ ಈ ನಿರ್ಣಯಗಳನ್ನು ಮಾಡಬಲ್ಲರು–ದೇಶದ ಪ್ರಕೃತಿ ಸಂಪತ್ತನ್ನು ಹೇಗೆ ಶ್ರೇಷ್ಠ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು, ದೇಶದಲ್ಲಿ ಯಾವ ಯಾವ ಉದ್ಯೋಗಗಳು ನೆಲಸುವಂತೆ ಮಾಡಬಹುದು, ವ್ಯಾವಸಾಯಿಕ ಪ್ರತಿಫಲಗಳನ್ನು ಯಾವ ರೀತಿ ಅಭಿವೃದ್ಧಿಪಡಿಸಬಹುದು. ಯಾವ ರೀತಿ ನಿರುದ್ಯೋಗವನ್ನು ಕಡಿಮೆ ಮಾಡಬಹುದು ಇತ್ಯಾದಿ. ಈ ವಿಷಯಗಳ ಪೂರ್ಣ ಅರಿವುಂಟಾಗಲು ಅವರಿಗೆ ಆರ್ಥಿಕ ಭೂಗೋಳದ ಜ್ಞಾನ ಇರಬೇಕಾದುದು ಆವಶ್ಯಕ.

ಪ್ರತಿಯೊಂದು ದೇಶವೂ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಸ್ವಾತಂತ್ರ್ಯ ಪಡೆಯಲು ಎಲ್ಲ ರೀತಿಯ ಪ್ರಯತ್ನಗಳನ್ನೂ ಮಾಡುತ್ತದೆ. ಅಂತೆಯೇ ನಮ್ಮ ದೇಶವೂ ವರ್ಷಗಳ ಸಂಕಷ್ಟ, ಸಂಕೀರ್ಣತೆಗಳಿಂದ ಆರ್ಥಿಕ ಸ್ವಾತಂತ್ರ್ಯ ಪಡೆಯಲು ಪ್ರಯತ್ನಿಸುತ್ತಿದೆ. ಇತರ ದೇಶಗಳಂತೆ ನಮ್ಮ ದೇಶದ ಆರ್ಥಿಕ ಸಮತೋಲನತೆಯನ್ನು ಪಡೆಯಲು ಸರ್ಕಾರವು ಪಂಚವಾರ್ಷಿಕ ಯೋಜನೆಗಳನ್ನು ನಿರ್ಮಿಸಿದೆ. ಈ ರೀತಿಯ ಸಂದಿಗ್ಧ ಪರಿಸ್ಥಿತಿಯಲ್ಲಿ ಭೂಗೋಳವು ವಿವರಣಾತ್ಮಕ ವಿಷಯವಾಗದೆ, ಕಾರ್ಯರೂಪಕ (Practical) ವಿಷಯವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸಾಮಾನ್ಯ ಭಾರತೀಯನ ಅನುಕೂಲಕ್ಕಾಗಿ ಈ ಶಾಸ್ತ್ರದ ಮೂಲಸೂತ್ರಗಳನ್ನು ಬಳಸಬೇಕಾಗುತ್ತದೆ. ಭೂಗೋಳವೇನಾದರೂ ಬೋಧಿಸಿದರೆ, ಅದು ಬೋಧಿಸುವುದು ಇಷ್ಟು ಮಾತ್ರವೇ–ಏನೆಂದರೆ–ನಮ್ಮ ತಾಯಿನೆಲದ ಸ್ವಾಭಾವಿಕ ಸಂಪತ್ತನ್ನು ಉಪಯೋಗಿಸಿಕೊಳ್ಳುವುದರಲ್ಲಿ ಮಾನವನ ಉನ್ಮಾದ ಹೆಚ್ಚುತ್ತದೆ ; ಪ್ರತಿ ಸಾಮಾನ್ಯ ಮಾನವನ ಹಿತಕ್ಕೆ ಅನುಗುಣವಾಗಿ ಮತ್ತು ಭೂಬಹಿರ್ವಲಯ ಪರಿಸ್ಥಿತಿಗಳ ಅನುಗುಣವಾಗಿ ಪ್ರಾದೇಶಿಕ ವೈವಿಧ್ಯತೆಗಳನ್ನು ಅರ್ಥಮಾಡಿಕೊಂಡು ಅದನ್ನು ದೇಶದ ಭವಿಷ್ಯದ ಬೆಳವಣಿಗೆಗಾಗಿ ಉಪಯೋಗಿಸಿಕೊಂಡರೆ ಭೂಗೋಳಶಾಸ್ತ್ರದ ಬೀಗದ ಕೈ ನಮ್ಮ ಕೈಯ್ಯಲ್ಲಿದ್ದಂತೆ ಆಗುತ್ತದೆ. ರಾಜಕೀಯ ವಿದ್ವೇಷ ಮತ್ತು ತಳಮಳಗಳಿಂದ ಕೂಡಿದ ಈ ಜಗತ್ತಿನಲ್ಲಿ ಶಾಂತಿರೀತಿಯ ಇರುವಿಕೆಯು ನಮ್ಮ ದೀನ ನೈಸರ್ಗಿಕ ಸಂಪತ್ತಿನ ಉಪಯೋಗದ ಉನ್ಮಾದ ವಿಧಾನಗಳಲ್ಲಿಲ್ಲ. ಆದರೆ ಅದನ್ನು ಸರಿಯಾದ ನೈಜಮಾರ್ಗದಲ್ಲಿ ಉಪಯೋಗಿಸಿಕೊಂಡು ಹೋಗುವುದರಲ್ಲಿದೆ. ಇದರೊಂದಿಗೆ ನೈಸರ್ಗಿಕ ಸಂಪತ್ತನ್ನು ಕಾಪಾಡುವ ನೀತಿಯನ್ನು ಅನುಸರಿಸುವುದೂ ಒಳ್ಳಿತಾದುದು.

ಇಂದು ಜಗತ್ತಿನಲ್ಲಿ ಯಾವ ಒಂದು ಅಶಾಂತಿಯ ಕಿಚ್ಚು ದೇಶದೇಶಗಳ ಮಧ್ಯೆ ಹಬ್ಬಿದೆಯೋ ; ಅದನ್ನು ಸಾಂತ್ವನಗೊಳಿಸುವ ಭಗೀರಥ ಪ್ರಯತ್ನವು ವಿಜ್ಞಾನಿಗಳು, ರಾಜನೀತಿಜ್ಞರು, ಅರ್ಥಶಾಸ್ತ್ರಜ್ಞರು ಮತ್ತು ಭೂಗೋಳಶಾಸ್ತ್ರಜ್ಞರ ಮುಖಾಂತರ ನಡೆಯುತ್ತಿದೆಯೋ ಅದರ ಹಿಂದೆ ಭೌಗೋಳಿಕ ಆಧಾರತತ್ವಗಳು ತಮ್ಮ ಪ್ರಭಾವವನ್ನು ಬೀರುತ್ತಲೇ ಇವೆ. ಈ ಎಲ್ಲ ಸಮಸ್ಯೆಗಳನ್ನು ಆರ್ಥಿಕ

ಭೂಗೋಳದ ಹಿನ್ನೆಲೆಯಲ್ಲಿ ಬಿಡಿಸಲು ಪ್ರಯತ್ನಿಸಿದ್ದೇ ಆದರೆ ಸುಲಭವಾಗಿ ಪರಿಹಾರ ವಾಗುವುವು.

ಈ ರೀತಿಯಲ್ಲಿ ಕ್ಲಿಮ್, ಸ್ಟಾರ್ಕೆ ಮತ್ತು ಹಾಲ್(Klimm, Starkey and Hall: Introductory Economic Geography)ರವರ 'ಆರ್ಥಿಕ ಭೂಗೋಳದ ಮುನ್ನುಡಿ' ಎಂಬ ಗ್ರಂಥದಲ್ಲಿ ಹೇಳಿರುವಂತೆ ಭೂಮಿಯ ಪ್ರಕೃತಿ ಸಂಪತ್ತಿನ ಅಧಿಕತಮ ಉಪಯೋಗದ ರೀತಿಯನ್ನು ತಿಳಿಸುವ ಒಂದು ಯಂತ್ರ ಆರ್ಥಿಕ ಭೂಗೋಳ. ಉದಾಹರಣೆಗಾಗಿ—ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಕೆನಡಾದಲ್ಲಿ ಮತ್ತು ಭಾರತದಲ್ಲಿ ಲಾರ್ಡ್ ಡಾಲ್‌ಹೌಸಿಯಿಂದ ಹಾಕಿಸಲ್ಪಟ್ಟ ರೈಲ್ವೇ ರಸ್ತೆಗಳು ಆಯಾ ದೇಶವನ್ನು ಒಂದೇ ದಾರದಿಂದ ಏಕತ್ರಿತ ಮಾಡುವ ಒಂದು ಕಾರಣಮಾತ್ರವಾದುವುಗಳು. ಟಿಲಿಫೋನ್ ಕಂಪೆನಿಯವರು ತಮ್ಮ ಮಾರುಕಟ್ಟೆಯ ಭೂಗೋಳದ ಅಧ್ಯಯನಮಾಡಿದ ಮೇಲೆಯೇ ಟಿಲಿಫೋನ್ ವ್ಯವಸ್ಥೆ ಮಾಡುವರು ಮತ್ತು ಭೌಗೋಳಿಕ ಪರಿಸ್ಥಿತಿಗಳಿಗೆ ಅನುಗುಣವಾಗಿಯೇ ಅವರು ತಮ್ಮ ಮುಂದಿನ ಯೋಜನೆಗಳನ್ನು ನಿರ್ಮಿಸುವರು. ಆರ್ಥಿಕ ಭೂಗೋಳವು ಕೇವಲ ವ್ಯಾಪಾರ ಸಮುದಾಯಕ್ಕೆ ಮಾತ್ರ ಉಪಯೋಗಕಾರಕವಾದ ವಿಷಯವಲ್ಲ, ಬದಲಾಗಿ ಕಲೆ ಮತ್ತು ವಿಜ್ಞಾನಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಅನೇಕ ವಿದ್ಯಾರ್ಥಿಗಳಿಗೂ ಹಾಗೂ ಸಂಶೋಧನಕರ್ತರಿಗೂ ಇದರ ಜ್ಞಾನ ಪಡೆಯುವುದು ಲಾಭದಾಯಕ. ಜೀವನದ ವಿವಿಧ ಕ್ಷೇತ್ರಗಳಲ್ಲಿಯೂ ಆರ್ಥಿಕ ಭೂಗೋಳದ ಆವಶ್ಯಕತೆ ವಿಶೇಷ ಮಹತ್ವಪೂರ್ಣವಾದುದು.

—ರಘುಸುತ

ಆಧಾರ ಗ್ರಂಥಗಳು :—

1. Elements of Geography—Finch & Trewartna.
2. Economic Geography—Mcferlance.
3. Eeonomic & Commercial Geography—Chathurbhing Mamoria.
4. ಆರ್ಥಿಕ ಭೂಗೋಳ—ಮೂಲ : ಡಾ॥ ಜಿ. ಕೆ. ಘೋರಿ ; ಅನುವಾದ : ಕೆ. ಆರ್. ರಂಗಾಚಾರ್.
5. Chishollm's Hand book of Commercial Geography.

ವಿಶ್ವಸಂಸ್ಥೆಯ ವಿಶೇಷನಿಧಿ

(United Nations Special Fund)

೧. ಆರ್ಥಿಕಾಭಿವೃದ್ಧಿಯಲ್ಲಿ ಹಿಂದುಳಿದಿರುವ ರಾಷ್ಟ್ರಗಳು ಪ್ರಾಕೃತಿಕ ಸಂಪತ್ತಿನಲ್ಲಿ ಹಾಗೂ ಹುದುಗಿರುವ ಇತರ ಆರ್ಥಿಕ ಸಾಧನಗಳಲ್ಲಿ ಸಹಜವಾಗಿ ಬಡತನವಾಗಿರುವ ರಾಷ್ಟ್ರಗಳಾಗಿಲ್ಲ. ಈ ಎಲ್ಲಾ ಸಾಧನಗಳನ್ನು ಸರಿಯಾಗಿ ರೂಢಿಸಿಕೊಳ್ಳದೆ ಇವು ಆರ್ಥಿಕವಾಗಿ ಹಿಂದುಳಿದಿವೆ ಹಾಗೂ ಬಡಜನರಿಂದ ತುಂಬಿವೆ. ಈಚಿನ ವರ್ಷಗಳಲ್ಲಿ ತೀವ್ರ ಆರ್ಥಿಕಾಭಿವೃದ್ಧಿ ಸಾಧಿಸುವುದರಲ್ಲಿ ಹೊಸ ಆಸಕ್ತಿ ತಳೆದು ಈ ರಾಷ್ಟ್ರಗಳು ತಮ್ಮ ಆರ್ಥಿಕ ಶಕ್ತಿಗಳನ್ನು ಪ್ರಕಾಶಪಡಿಸಹತ್ತಿವೆ. ತಮ್ಮತಮ್ಮಲ್ಲಿ ಹುದುಗಿರುವ ಸಂಪನ್ಮೂಲಗಳನ್ನು ಆದಷ್ಟು ಕರಾರುವಾಕ್ಕಾಗಿ ತಿಳಿಯುವುದು ಮತ್ತು ಉದ್ಯಮಗಳ ಸ್ಥಾಪನೆಗೆ ಮುನ್ನ ನಡೆಯಬೇಕಾದ ಅನೇಕ ವಿಧದ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು ಇವು ಇಂತಹ ಪ್ರಯತ್ನಗಳಲ್ಲಿನ ಮೂಲಭೂತ ಕಾರ್ಯಗಳಾಗಿವೆ. ಈ ತರಹದ ಕಾರ್ಯಗಳಿಗೆ ಸಹಾಯನೀಡಲು ಪ್ರತ್ಯೇಕ ಅಂತರರಾಷ್ಟ್ರೀಯ ಸಂಸ್ಥೆಯೊಂದು ಇದ್ದರೆ ಒಳ್ಳೆಯದು ಎಂಬ ಭಾವನೆಯೇ 'ವಿಶ್ವಸಂಸ್ಥೆಯ ವಿಶೇಷನಿಧಿ'ಯು ಸ್ಥಾಪನೆಗೆ ಕಾರಣವಾಯಿತು.

೨. ಆರ್ಥಿಕಾಭಿವೃದ್ಧಿಗೆ ಸಾಕಷ್ಟು ಬಂಡವಾಳವನ್ನು ಪ್ರಪಂಚಬ್ಯಾಂಕಿನ ಸಾಲದ ಷರತ್ತುಗಳಿಗಿಂತ ಹೆಚ್ಚು ಉದಾರವಾದ ಷರತ್ತುಗಳ ಮೇಲೆ ಹಿಂದುಳಿದಿರುವ ರಾಷ್ಟ್ರಗಳಿಗೆ ಒದಗಿಸಲು ವಿಶೇಷನಿಧಿಯೊಂದನ್ನು ಸ್ಥಾಪಿಸಬೇಕೆಂದು ಡಾ|| ವಿ. ಕೆ. ಆರ್. ವಿ. ರಾವ್ ಅವರ ಅಧ್ಯಕ್ಷತೆಯಲ್ಲಿ ೧೯೪೯ರಲ್ಲಿ ಸೇರಿದ ವಿಶ್ವಸಂಸ್ಥೆಯ ಆರ್ಥಿಕಾಭಿವೃದ್ಧಿ ಉಪಸಮಿತಿಯು ಶಿಫಾರಸು ಮಾಡಿತು. ಆದರೆ ಬಂಡವಾಳ ಹಾಕಬಲ್ಲ ಪ್ರಮುಖ ರಾಷ್ಟ್ರಗಳು ೨೫ ಕೋಟಿ ಡಾಲರುಗಳಷ್ಟು ಆರಂಭ ಬಂಡವಾಳವಿರುವ ದೊಡ್ಡ ಪ್ರಮಾಣದ ಇಂತಹ ನಿಧಿಯ ಸ್ಥಾಪನೆಗೆ ಒಪ್ಪಲಿಲ್ಲ ವಾದ್ದರಿಂದ ಸಲಹೆಯು ಕಾರ್ಯರೂಪಕ್ಕೆ ಇಳಿಯಲಿಲ್ಲ. ಇದಕ್ಕೆ ಪ್ರತಿಯಾಗಿ ಮಿತಿಯಾದ ಬಂಡವಾಳ ಹಾಗೂ ಉದ್ದೇಶಗಳೊಡನೆ ವಿಶ್ವಸಂಸ್ಥೆಯ ವಿಶೇಷ ನಿಧಿಯು ೧೯೫೮ನೆಯ ಅಕ್ಟೋಬರ್ ೧೪ರಂದು ಸ್ಥಾಪಿಸಲ್ಪಟ್ಟು ೧೯೫೯ನೆಯ ಜನವರಿ ೧ರಿಂದ ಕಾರ್ಯಾಚರಣೆಗಳನ್ನು ಆರಂಭಿಸಿತು.

೩. ವಿಶೇಷನಿಧಿಯು ಸಾಲ ಕೊಡುವ ಸಂಸ್ಥೆಯಲ್ಲ. ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದ ಕೆಲವು ರೀತಿಯ 'ಪ್ರಾಜೆಕ್ಟು'ಗಳಿಗೆ ನಿರ್ದಿಷ್ಟ ಷರತ್ತುಗಳ ಮೇಲೆ ಸಹಾಯ ದೊರಕಿಸಿಕೊಡುವುದು ಈ ಸಂಸ್ಥೆಯ ಪಾತ್ರವಾಗಿದೆ. ಮೂರು ವಿಧದ 'ಪ್ರಾಜೆಕ್ಟು'ಗಳಿಗೆ ವಿಶೇಷನಿಧಿಯು ಸಹಾಯ ಒದಗಿಸುವುದು: (೧) ಉದ್ಯಮ ಸಾಧ್ಯತೆಗಳ ಪರಿಶೀಲನೆ ಅಥವಾ ಸರ್ವೆ ಕಾರ್ಯಗಳನ್ನು ಕೈಕೊಂಡು ಅಭಿವೃದ್ಧಿ

ಯಾಗಲಿರುವ ರಾಷ್ಟ್ರಗಳ ಹುದುಗಿರುವ ಸಂಪನ್ಮೂಲಗಳನ್ನು ಹಿಡಿದೆತ್ತಿ ತೋರಿಸುವುದು. (೨) ಸಂಶೋಧನೆಗಳ ಮೂಲಕ ಸ್ಥಳೀಯ ಸಾಮಗ್ರಿಗಳು ಹಾಗೂ ಉತ್ಪನ್ನಗಳಿಗೆ ಹೊಸ ಉಪಯೋಗಗಳನ್ನು ಕಂಡುಹಿಡಿಯುವುದು. (೩) ಜನಸಂಖ್ಯಾಬಲವು ಹೆಚ್ಚು ಪರಿಣಾಮಕಾರಿಯಾಗುವಂತೆ ತಕ್ಕ ಟೆಕ್ನಿಕಲ್ ವಿದ್ಯಾಭ್ಯಾಸ ಹಾಗೂ ಶಿಕ್ಷಣ ಏರ್ಪಾಡುಮಾಡಲು ಸಹಾಯಮಾಡುವುದು. ಈ ಎಲ್ಲ ವಿಧದ ಕಾರ್ಯಾಚರಣೆಗಳೂ ಆರ್ಥಿಕೋದ್ಯಮಗಳ ಅವಕಾಶಗಳನ್ನು ತೋರಿಸಿಕೊಟ್ಟು ಬಂಡವಾಳ ಹೂಡುವುದಕ್ಕೆ ದಾರಿ ತೋರಿಸುವ "ಹೂಟಿಯ-ಮುನ್ನ" (Pre-investment) ಚಟುವಟಿಕೆಗಳಾಗಿವೆ. ಇಂತಹ ಕಾರ್ಯಾಚರಣೆಗಳಿಗೆ ಸಾಕಷ್ಟು ಗಮನಕೊಡದಿದ್ದರೆ ಬಂಡವಾಳ ಚಲನೆಗೆ ಉತ್ತೇಜನವಿರದ ಹಾಗೂ ಅನೇಕವೇಳೆ ಬಂಡವಾಳ ವ್ಯರ್ಥವಾಗುವ ಪರಿಸ್ಥಿತಿ ಸಂಭವಿಸಬಹುದು; ವಾಸ್ತವವಾಗಿ ಹೀಗೆ ಆಗಿರುವುದುಂಟು. ಆದ್ದರಿಂದಲೇ ಪ್ರಕೃತ ಇದ್ದ ಅಂತರರಾಷ್ಟ್ರೀಯ ಆರ್ಥಿಕಾಭಿವೃದ್ಧಿ ಸಂಸ್ಥೆಗಳ ಶ್ರೇಣಿಗೆ ಈ 'ವಿಶ್ವಸಂಸ್ಥೆಯ ವಿಶೇಷನಿಧಿ'ಯನ್ನು ಸೇರಿಸಲಾಯಿತು.

೪. ವಿಶೇಷನಿಧಿಯು 'ಪ್ರಾಜೆಕ್ಟ್'ಗೆ ಸಂಬಂಧಿಸಿದ ಕ್ಷೇತ್ರ ಚಟುವಟಿಕೆಗಳನ್ನು (Field operations) ಸ್ವಂತವಾಗಿ ನಡೆಯಿಸುವುದಿಲ್ಲ. ಇತರ ಯಾವುದಾದರೂ ಸಂಸ್ಥೆಯನ್ನು ಕಾರ್ಯನಿರ್ವಾಹಕ ಸಂಸ್ಥೆಯಾಗಿ (Executing Agency) ಇಟ್ಟುಕೊಂಡು ಅಂತಹ 'ಏಜೆನ್ಸಿ'ಗಳ ಮೂಲಕ 'ಪ್ರಾಜೆಕ್ಟು'ಗಳ ಕಾರ್ಯಾಚರಣೆಗಳೆಲ್ಲವನ್ನೂ ನಡೆಯಿಸುವುದು. 'ಪ್ರಾಜೆಕ್ಟ್'ಗೆ ಸಂಬಂಧಪಟ್ಟ ನಿಪುಣರ ನೇಮಕ, ಸಲಕರಣೆಗಳನ್ನು ಒದಗಿಸುವುದು, ವ್ಯಾಸಂಗ ವೇತನಗಳನ್ನು ಕೊಡುವುದು, ತಾಂತ್ರಿಕ ಮೇಲ್ವಿಚಾರಣೆ ಇತ್ಯಾದಿ ಕಾರ್ಯಗಳೆಲ್ಲವೂ ಅಂತಹ 'ಏಜೆನ್ಸಿ'ಯ ಹೊಣೆ. ಆದರೆ ಒಟ್ಟು ಹಣಕಾಸಿನ ಮಿತವ್ಯಯ, ಹಾಗೂ ಪರಿಣಾಮಕಾರಿ ಉಪಯೋಗದ ಅಂತಿಮ ಹೊಣೆಗಾರಿಕೆ ವಿಶೇಷನಿಧಿಗೆ ಸೇರಿದೆ. ಅದು ಕಾರ್ಯನಿರ್ವಾಹಕ 'ಏಜೆನ್ಸಿ'ಯಿಂದ ಕಾಲಕಾಲಕ್ಕೆ ವರದಿಗಳನ್ನು ತರಿಸಿಕೊಂಡು ಪ್ರಗತಿಯನ್ನು ವೀಕ್ಷಿಸುವುದು.

೫. ವಿಶೇಷ ನಿಧಿಯ ಕಾರ್ಯಕ್ಷೇತ್ರಗಳಾದ 'ಸರ್ವೆ', ಸಂಶೋಧನೆ ಹಾಗೂ ತಾಂತ್ರಿಕ (Techinical) ಶಿಕ್ಷಣಗಳಿಗೆ ಸಂಬಂಧಿಸಿದ 'ಪ್ರಾಜೆಕ್ಟು'ಗಳನ್ನು ಆರಿಸುವಾಗ ಅನುಸರಿಸುವ ಸಾಮಾನ್ಯ ಷರತ್ತುಗಳು ಇವು: 'ಪ್ರಾಜೆಕ್ಟು' ಸಾಧಾರಣವಾಗಿ ವಿಶೇಷ ನಿಧಿಯಿಂದ ಕೊನೆಪಕ್ಷ ಎರಡೂವರೆ ಲಕ್ಷ ಡಾಲರುಗಳಷ್ಟು ಸಹಾಯವನ್ನು ಒಳಕೊಂಡಿರಬೇಕು. ಆಯಾ ದೇಶದ ದೀರ್ಘಕಾಲಾವಧಿ ಅಭಿವೃದ್ಧಿಯೋಜನೆಗಳೊಡನೆ ಸರಿಯಾಗಿ ಹೊಂದಿಕೊಳ್ಳುವಂತಹುದಾಗಿರಬೇಕು. 'ಪ್ರಾಜೆಕ್ಟ್'ನಿಂದ ಉಂಟಾಗಬಹುದಾದ ಪ್ರಯೋಜನವನ್ನು ಸಂಪೂರ್ಣವಾಗಿ ಪಡೆಯಲು ಆವಶ್ಯಕವಾದ ಉದ್ಯಮ ಚಟುವಟಿಕೆಗಳನ್ನು ಮುಂದುವರಿಸುವುದೆಂಬ ಭರವಸೆಯನ್ನು ಆ ರಾಷ್ಟ್ರವು ವಿಶೇಷ ನಿಧಿಗೆ ನೀಡಬೇಕು. ಹೆಚ್ಚುಭಾಗ ವೆಚ್ಚವನ್ನು ಆಯಾ ರಾಷ್ಟ್ರವೇ ವಹಿಸಿಕೊಳ್ಳಬೇಕು.

ಸಂಪತ್ತು ಸಾಧನಗಳ 'ಸರ್ವೆ'ಗಳಲ್ಲಿ ಯಾವುದು ಶೀಘ್ರವಾಗಿ ಬಂಡವಾಳ ಹೂಟಿಯನ್ನು ಆಕರ್ಷಿಸಬಲ್ಲದೋ ಹಾಗೂ ಶೀಘ್ರದಲ್ಲಿಯೇ ಫಲಪ್ರದವಾಗುವುದೋ ಅಂತಹ 'ಪ್ರಾಜೆಕ್ಟು'ಗಳಿಗೆ ವಿಶೇಷನಿಧಿಯು ಆದ್ಯತೆ ನೀಡುವುದು. ಹೂಟಿ ಹಾಕಬಹುದೋ ಇಲ್ಲವೋ ಎಂಬ ಬಗ್ಗೆ ಸಾರ್ವಜನಿಕರಲ್ಲಿ ಇರಬಹುದಾದ ಅನುಮಾನವನ್ನು ಪರಿಹರಿಸುವಂತಹ 'ಸರ್ವೆ' ಕಾರ್ಯಗಳನ್ನು ಕೈಕೊಂಡು ವಿಶೇಷನಿಧಿಯು ಖಾಸಗಿ ಬಂಡವಾಳ ಹೂಟಿಯನ್ನು ಚುರುಕುಗೊಳಿಸುವುದು.

ವಿಶೇಷನಿಧಿಯು ಉತ್ಪನ್ನ ಹೆಚ್ಚುವರಿಗೆ ಸಹಾಯವಾಗುವಂತಹ ಸಂಶೋಧನೆಗಳಿಗೆ ಸಹಾಯನೀಡುವುದು. ಇಂತಹ ಸಂಶೋಧನೆಗಳಲ್ಲಿ, ತಯಾರಿಕೆಯ ವಿಧಾನಗಳು (Techniques of production), ಹೊಸ ಸಲಕರಣೆಗಳ ಮಾದರಿ, ಕಚ್ಚಾ ಸಾಮಗ್ರಿಗಳ ಹೆಚ್ಚು ಫಲಕಾರಿ ಉಪಯೋಗ, ಮಾರುಕಟ್ಟೆ ಅಭಿವೃದ್ಧಿ ಇತ್ಯಾದಿ ಬಾಬುಗಳ ಬಗ್ಗೆ ಸಂಶೋಧನೆಗಳು ಮುಖ್ಯವಾದುವು. ನಿಧಿಯ ಸಹಾಯದಿಂದ ನಡೆಯುವ ಸಂಶೋಧನೆಗಳ ಪೂರ್ಣ ಪ್ರಯೋಜನ ಪಡೆಯಲು ಆವಶ್ಯಕ ಕ್ರಮಗಳನ್ನು ಸಂಬಂಧಪಟ್ಟ ರಾಷ್ಟ್ರಸರ್ಕಾರ ಹಾಗೂ ಉದ್ಯಮಿಗಳು ಕೈಗೊಳ್ಳುವರೆಂದು ವಿಶೇಷನಿಧಿಯು ನಿರೀಕ್ಷಿಸುತ್ತದೆ.

ವಿದ್ಯಾಭ್ಯಾಸ ಹಾಗೂ 'ತರಬೇತಿ' 'ಪ್ರಾಜೆಕ್ಟು'ಗಳ' ಪೈಕಿ 'ಟೆಕ್ನಾಲಜಿ'ಯಲ್ಲಿ ಉನ್ನತ ಶಿಕ್ಷಣ ನೀಡುವ ಹಾಗೂ ಸ್ಥಳೀಯ ಕೈಗಾರಿಕಾ ಶಿಕ್ಷಕರ ತರಬೇತಿ ಮಾಡುವ ಯೋಜನೆಗಳಿಗೆ ವಿಶೇಷನಿಧಿಯು ಹೆಚ್ಚು ಮಾನ್ಯತೆ ನೀಡುವುದು. ಹೀಗೆ 'ಪ್ರಾಜೆಕ್ಟು'ಗಳನ್ನು ಚುನಾಯಿಸುವುದಕ್ಕೂ ಸಹಾಯ ನೀಡುವುದಕ್ಕೂ ವಿಶೇಷನಿಧಿಯು ನಿರ್ದಿಷ್ಟವಾದ ಅಂಶಗಳ ಬಗ್ಗೆ ಅನೇಕ ಸಾಮಾನ್ಯ ಕಟ್ಟುಗಳನ್ನು ವಿಧಿಸಿದೆ.

೬. ವಿಶೇಷನಿಧಿಯ ಹಣಬಲವು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಹಾಕುವ ಚಂದಾ ಮೊಬಲಗಿನಿಂದ ಒದಗುವುದು. 'ಜನರಲ್ ಅಸೆಂಬ್ಲಿ'ಯ ವಾರ್ಷಿಕ ಸಭೆಯೊಂದರಲ್ಲಿ ಸದಸ್ಯರಾಷ್ಟ್ರಗಳು ತಾವು ಹಾಕಬಯಸುವ ಚಂದಾ ಮೊಬಲಗನ್ನು ತಿಳಿಸುವುವು. ಈ ರೀತಿ ಒಪ್ಪಿ ವರ್ಷ ವರ್ಷ ಹಾಕುತ್ತಿರುವ ಚಂದಾಹಣ ೧೯೫೯ರಲ್ಲಿ ೨,೫೮,೧೭೧೪೨ ಡಾಲರುಗಳಷ್ಟೂ, ೧೯೬೦ರಲ್ಲಿ ೩,೭೨,೯೦೩೧ ಡಾಲರುಗಳಷ್ಟೂ ಆಗಿದ್ದವು.

೭. ವಿಶೇಷನಿಧಿಯ ಆಡಳಿತಕ್ಕಾಗಿ ಒಬ್ಬ 'ಮ್ಯಾನೇಜಿಂಗ್ ಡೈರೆಕ್ಟರು' ಮತ್ತು ಒಬ್ಬ 'ಅಸೋಸಿಯೇಟ್ ಮ್ಯಾನೇಜಿಂಗ್ ಡೈರೆಕ್ಟರು' ಇರುತ್ತಾರೆ. ಇವರಿಗೆ ಸಹಾಯಕವಾಗಿ ಒಂದು ಸಲಹಾ ಬೋರ್ಡು ಹಾಗೂ ಒಂದು ಆಡಳಿತ ಸಭೆಯೂ ಮತ್ತು ನ್ಯೂಯಾರ್ಕಿನಲ್ಲಿರುವ ವಿಶ್ವಸಂಸ್ಥೆಯ ಕೇಂದ್ರ ಕಛೇರಿಯೊಳಗೆಯೇ ಪ್ರತ್ಯೇಕವಾದ 'ಸೆಕ್ರೆಟೇರಿಯಟ್' ಒಂದೂ ಇವೆ. ಸಲಹಾ ಬೋರ್ಡಿನಲ್ಲಿ ವಿಶ್ವಸಂಸ್ಥೆಯ 'ಸೆಕ್ರೆಟರಿ-ಜನರಲ್', ಪ್ರಪಂಚ ಬ್ಯಾಂಕಿನ ಅಧ್ಯಕ್ಷರು, ಟೆಕ್ನಿಕಲ್

ಸಹಾಯ 'ಬೋರ್ಡಿ'ನ ಅಧ್ಯಕ್ಷರು ಮತ್ತು ವಿಶೇಷನಿಧಿಯ ಮ್ಯಾನೇಜಿಂಗ್ ಡೈರೆಕ್ಟರು-ಇವರುಗಳು ಇರುತ್ತಾರೆ.

ಆಡಳಿತ ಸಭೆಯಲ್ಲಿ (Governing Council) ಆರ್ಥಿಕವಾಗಿ ಮುಂದುವರಿದಿರುವ ರಾಷ್ಟ್ರಗಳ ೯ ಪ್ರತಿನಿಧಿಗಳೂ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ರಾಷ್ಟ್ರಗಳ ೯ ಪ್ರತಿನಿಧಿಗಳೂ ಇರುತ್ತಾರೆ. ಈ ಪ್ರತಿನಿಧಿಗಳನ್ನು ಆರ್ಥಿಕ ಹಾಗೂ ಸಾಮಾಜಿಕ ಸಭೆಯು ಚುನಾಯಿಸುವುದು. ಆಡಳಿತ ಸಭೆಯು ಸಾಮಾನ್ಯವಾಗಿ ವರ್ಷಕ್ಕೆ ಎರಡು ಬಾರಿ-ಮೇ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ-ಸೇರಿ ಈ ಮೂರು ವಿಧದ ವಿಷಯಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರಗಳನ್ನು ಕೈಕೊಳ್ಳುವುದು : (i) ವಿಶೇಷನಿಧಿಯ ಕ್ರಿಯಾನೀತಿ, (ii) ವಿಶೇಷನಿಧಿಯ ಕಾರ್ಯಾಚರಣೆಗಳ ಆಡಳಿತ ಮೇಲ್ವಿಚಾರಣೆ, (iii) 'ಪ್ರಾಜೆಕ್ಟು'ಗಳಿಗೆ ಧನಸಹಾಯ ಹಂಚುವಿಕೆ.

ವರ್ಷಕ್ಕೊಮ್ಮೆ ವಿಶೇಷನಿಧಿಯು ಅದರ ಕಾರ್ಯಾಚರಣೆಗಳ ಬಗ್ಗೆ ವಿಶ್ವಸಂಸ್ಥೆಯ ಆರ್ಥಿಕ ಹಾಗೂ ಸಾಮಾಜಿಕ ಸಭೆಗೆ ವರದಿ ಸಲ್ಲಿಸುವುದು. ಆರ್ಥಿಕ ಹಾಗೂ ಸಾಮಾಜಿಕ ಸಭೆಯು ವಿಶೇಷನಿಧಿಯ ಆಡಳಿತದ ಬಗ್ಗೆ ಅದರ ಸಮೀಕ್ಷಾ ವರದಿಯನ್ನೂ, ವಿಶೇಷನಿಧಿಯ ವರದಿಯನ್ನೂ ವಿಶ್ವಸಂಸ್ಥೆಯ 'ಜನರಲ್ ಅಸೆಂಬ್ಲಿ'ಗೆ ಸಲ್ಲಿಸುವುದು. ಎಲ್ಲಾ ಸದಸ್ಯರಾಷ್ಟ್ರಗಳನ್ನು ಒಳಕೊಂಡ ಈ 'ಜನರಲ್ ಅಸೆಂಬ್ಲಿ'ಯು ವಿಶೇಷನಿಧಿಯ ಪ್ರಗತಿಯನ್ನು ಗಮನಿಸಿ ಸೂಕ್ತ ಶಿಫಾರಸುಗಳನ್ನು ಮಾಡುವುದು. ಹೀಗೆ ವಿಶ್ವಸಂಸ್ಥೆಯ ನೇತೃತ್ವದಲ್ಲಿ ವಿಶೇಷನಿಧಿಯು ಅದರ ರೀತಿ ನೀತಿಗಳನ್ನು ರೂಪಿಸಿಕೊಂಡು ಆರ್ಥಿಕಾಭಿವೃದ್ಧಿಗೆ ಸಹಾಯನೀಡುತ್ತಿರುವ ವಿಶೇಷ ಸಂಸ್ಥೆಯಾಗಿದೆ.

೮. ಸರ್ಕಾರಗಳಿಂದ ಬರುವ ಕೋರಿಕೆಗಳನ್ನು ಮಾತ್ರ ವಿಶೇಷನಿಧಿಯು ಪರಿಗಣಿಸುವುದು. ಕೋರಿಕೆಗಳು ನಿಧಿಯು ಗೊತ್ತುಮಾಡುವ ಒಂದು ಕೇಂದ್ರದ ಮೂಲಕ ಸಲ್ಲಿಸಲ್ಪಡಬೇಕು. ಇಂಡಿಯ ಸರ್ಕಾರದ ಹಣಕಾಸು ಸಚಿವ ಶಾಖೆಯ ಆರ್ಥಿಕ ವ್ಯವಹಾರ ಶಾಖೆಯು ಹೀಗೆ ಸದ್ಯಕ್ಕೆ ಗೊತ್ತುಮಾಡಲ್ಪಟ್ಟ ಕೇಂದ್ರವಾಗಿದೆ. ಆಯಾ ದೇಶದಲ್ಲಿರುವ ವಿಶ್ವಸಂಸ್ಥೆಯ 'ಟೆಕ್ನಿಕಲ್' ಸಹಾಯದ ವಿಸ್ತೃತ ಕಾರ್ಯಕ್ರಮದ (Expanded Programme of Technical Assistance-E.P.T.A.) ರೆಸಿಡೆಂಟ್ ಪ್ರತಿನಿಧಿಗಳು ಕೋರಿಕೆಗಳನ್ನು ತಯಾರಿಸುವುದರಲ್ಲಿ ಸಹಾಯನೀಡುತ್ತಾರೆ. ಸಹಾಯ ಬಯಸುವ ರಾಷ್ಟ್ರಗಳು ಸಲ್ಲಿಸುವ 'ಪ್ರಾಜೆಕ್ಟು'ಗಳ ತಯಾರಿಕೆಯ ಮೊದಲ ಹಂತದಲ್ಲಿಯೇ ಹೀಗೆ ವಿಶ್ವಸಂಸ್ಥೆಯ ಪಾತ್ರ ಮುಖ್ಯವಾಗಿದೆ. ಆದ್ಯತೆಗೆ ಅರ್ಹವಾದ ಉತ್ತಮ ಅಭಿವೃದ್ಧಿ 'ಪ್ರಾಜೆಕ್ಟು'ಗಳನ್ನು ಆರಿಸುವುದರಲ್ಲಿ ನಿಪುಣರ ಸಹಾಯವನ್ನು ಸದಸ್ಯರಾಷ್ಟ್ರಗಳಿಗೆ ನೀಡುವ ಸಲುವಾಗಿ ಆವಶ್ಯಕವಾದ ಖರ್ಚನ್ನು ವಿಶೇಷನಿಧಿಯು ವಹಿಸಿಕೊಳ್ಳುವುದು. ಈ ಬಗ್ಗೆ ೧೯೬೦ ರಲ್ಲಿ ಸುಮಾರು ಎರಡುವರೆ ಲಕ್ಷ ಡಾಲರು ಹಣವನ್ನು ನಿಧಿಯು ಖರ್ಚುಮಾಡಿತು.

ವಿಶೇಷನಿಧಿಯ ಅವಗಾಹನೆಗೆ ಸಲ್ಲಿಸಲಾಗುವ 'ಪ್ರಾಜೆಕ್ಟು'ಗಳು ಮೊದಲು

ಸಲಹಾ ಬೋರ್ಡಿನಲ್ಲಿ ಚರ್ಚಿಸಲ್ಪಡುವುವು. 'ಪ್ರಾಜೆಕ್ಟಿ'ನ ಬಗ್ಗೆ ವಿಶೇಷ ಪರಿಶೀಲನೆ ನಡೆಸುವುದು ಆವಶ್ಯಕವೆಂದು ತೋರಿದರೆ ಮ್ಯಾನೇಜಿಂಗ್ ಡೈರೆಕ್ಟರು ನಿಪುಣರನ್ನು ನೇಮಿಸಿ ಅವರಿಂದ ಪರಿಣಿತ ಸಲಹೆಗಳನ್ನು ಪಡೆಯಬಹುದು. ಮ್ಯಾನೇಜಿಂಗ್ ಡೈರೆಕ್ಟರು 'ಪ್ರಾಜೆಕ್ಟು'ಗಳಿಗೆ ಸಹಾಯನೀಡುವ ಬಗ್ಗೆ ಮಾಡುವ ಶಿಫಾರಸಿನ ಮೇಲೆ ಆಡಳಿತ ಸಭೆಯು ಅದರ ಒಪ್ಪಿಗೆಯನ್ನು ಕೊಡುವುದು. ವಿಶೇಷನಿಧಿ, ಕಾರ್ಯನಿರ್ವಾಹಕ ಸಂಸ್ಥೆ ಹಾಗೂ ಸಹಾಯ ಪಡೆಯುವ ಸರ್ಕಾರ ಇವು ಮೂರು ಪಕ್ಷಗಳೂ ಸಹಿ ಹಾಕುವ ಒಪ್ಪಂದದೊಡನೆ ಕಾರ್ಯಾಚರಣೆ ಆರಂಭಿಸುವುದು. ಈ ಮೂರು ಪಕ್ಷಗಳ ಪಾತ್ರವನ್ನೂ, ಹೊಣೆಯನ್ನೂ, ಕಾರ್ಯಕ್ರಮಗಳನ್ನೂ ವಿವರಿಸುವ ಕಾರ್ಯಯೋಜನೆಯನ್ನು (Plan of Operations) ಸಿದ್ಧಗೊಳಿಸಿ ಅದರಂತೆ 'ಪ್ರಾಜೆಕ್ಟಿ'ನ ಕಾರ್ಯಾಚರಣೆಗಳನ್ನು ನಡೆಸಲಾಗುವುದು. ಸಹಾಯ ಪಡೆಯುವ ಸರ್ಕಾರವು ಅದರ ಹಣಕಾಸಿನ ಹೊಣೆಯ ಬಗ್ಗೆ ಮೊದಲ ಕಂತನ್ನು ವಿಶೇಷ ನಿಧಿಯು ನಮೂದಿಸುವ ಬ್ಯಾಂಕಿನಲ್ಲಿ ಠೇವಣಿ ಇಟ್ಟ ಮೇಲೆ ನಿಧಿಯು ಅದರ ಹಣ ಕಾಸು ಭಾಗದ ವೆಚ್ಚವನ್ನು ಮಂಜೂರುಮಾಡುವುದು.

೯. ವಿಶೇಷನಿಧಿಯ ಆಡಳಿತ ಸಭೆಯು ೧೯೫೯ನೆಯ ಮೇ ತಿಂಗಳಲ್ಲಿ ಪ್ರಥಮ ವಾಗಿ ೬೨ ಲಕ್ಷ ಡಾಲರುಗಳ ಸಹಾಯ ಒಳಕೊಂಡ ೧೩ 'ಪ್ರಾಜೆಕ್ಟು'ಗಳನ್ನು ಮಂಜೂರುಮಾಡಿತು. ಅಂದಿನಿಂದ ಈವರೆವಿಗೆ (ಜನವರಿ ೧೯೬೨) ೬೮ ರಾಷ್ಟ್ರಗಳಲ್ಲಿ ಹಂಚಿರುವ ಹಾಗೂ ಒಟ್ಟು ೧೭.೪ ಕೋಟಿ ಡಾಲರುಗಳ ಸಹಾಯವನ್ನು ಒಳ ಕೊಂಡಿರುವ ೨೦೫ 'ಪ್ರಾಜೆಕ್ಟು'ಗಳನ್ನು ಮಂಜೂರುಮಾಡಿದೆ. ವಿಶ್ವವಿದ್ಯಾನಿಲಯದ ಮಟ್ಟದ ಹಾಗೂ ಇತರ ಟೆಕ್ನಿಕಲ್ ವಿದ್ಯಾಭ್ಯಾಸ, ನೀರಾವರಿ ಹಾಗೂ ವಿದ್ಯುಚ್ಛಕ್ತಿ, ಖನಿಜ ಹಾಗೂ ಭೂಗರ್ಭ ಸರ್ವೆಗಳು, ವ್ಯವಸಾಯ ಹಾಗೂ ಜಾನುವಾರು ಸರ್ವೆಗಳು, ಕೈಗಾರಿಕಾ ಸಂಶೋಧನೆ ಸಂಸ್ಥೆಗಳು ಇತ್ಯಾದಿಯಾಗಿ ಅನೇಕ ತರಹದ ಅಭಿವೃದ್ಧಿ ಬಾಬುಗಳು ಹೀಗೆ ಮಂಜೂರಾದ 'ಪ್ರಾಜೆಕ್ಟು'ಗಳಲ್ಲಿ ಸೇರಿವೆ.

ಸಂಶೋಧನೆ ಹಾಗೂ ಶಿಕ್ಷಣ 'ಪ್ರಾಜೆಕ್ಟು'ಗಳಲ್ಲಿ ಆಯಾ ಸರ್ಕಾರದ ಚಂದಾ ಭಾಗ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಏಕೆಂದರೆ ಆಯಾ ಸರ್ಕಾರಗಳೇ ವಹಿಸಿಕೊಳ್ಳಬೇಕಾದ ಕಟ್ಟಡಗಳು, ಸ್ಥಳೀಯ ಸಲಕರಣೆಗಳು, ಸ್ಥಳೀಯ ಸಿಬ್ಬಂದಿ ಇಂತಹ ವೆಚ್ಚದ ಬಾಬುಗಳು ಈ 'ಪ್ರಾಜೆಕ್ಟು'ಗಳಲ್ಲಿ ಪ್ರಧಾನವಾಗಿವೆ. ಸರ್ವೆ 'ಪ್ರಾಜೆಕ್ಟು'ಗಳಲ್ಲಿ ಸಾಮಾನ್ಯವಾಗಿ ವಿದೇಶಿ ಸಿಬ್ಬಂದಿ ಹಾಗೂ ವಿದೇಶಿ ಸಲಕರಣೆಗಳ ಮೇಲಿನ ವೆಚ್ಚ ಹೆಚ್ಚುಭಾಗವಾಗಿರುತ್ತದೆ ; ಈ ತರಹದ ವೆಚ್ಚವು ವಿಶೇಷನಿಧಿಯ ಭಾಗಕ್ಕೆ ಸೇರುತ್ತದೆ.

೧೦. ಆರಂಭದಿಂದ, ಅಂದರೆ ೧೯೫೯ನೆಯ ಮೇ ತಿಂಗಳಿನಿಂದ ೧೯೬೨ನೆಯ ಜನವರಿ ವರೆವಿಗೆ ವಿಶೇಷನಿಧಿಯ ಸಹಾಯದಿಂದ ಇಂಡಿಯವು ಕೈಕೊಂಡಿರುವ ೧೮ 'ಪ್ರಾಜೆಕ್ಟು'ಗಳ ಕೆಲವು ವಿವರಗಳನ್ನು ಈ ಕೆಳಗೆ ಕಾಣಿಸಲಾಗಿದೆ:—

ವಿಶೇಷನಿಧಿಯು ಈವರೆವಿಗೆ ಮಂಜೂರುಮಾಡಿರುವ ಒಟ್ಟು ೨೦೫ 'ಪ್ರಾಜೆಕ್ಟ್' ಗಳಲ್ಲಿ ಇಂಡಿಯಕ್ಕೆ ಇಲ್ಲಿ ತೋರಿಸಿರುವಂತೆ (ಪಟ್ಟಿಯನ್ನು ನೋಡಿ) ೧೮ 'ಪ್ರಾಜೆಕ್ಟು' ಗಳಿಗೆ ಸಹಾಯ ನೀಡಿದೆ. ಹಾಗೂ ವಿಶೇಷನಿಧಿಯು ಮಾಡಿರುವ ೧೭.೪ ಕೋಟಿ ಡಾಲರುಗಳ ವೆಚ್ಚದಲ್ಲಿ ೧.೬ ಕೋಟಿ, ಅಂದರೆ ಶೇಕಡ ೯ರಷ್ಟು ಇಂಡಿಯದ 'ಪ್ರಾಜೆಕ್ಟು'ಗಳಿಗಾಗಿ ವೆಚ್ಚವಾಗಿದೆ. ಇದರಿಂದ ಇಂಡಿಯದ ೧೮ 'ಪ್ರಾಜೆಕ್ಟು'ಗಳ ಒಟ್ಟು ವೆಚ್ಚದ ಶೇಕಡ ೨೭ರಷ್ಟನ್ನು ವಿಶೇಷ ನಿಧಿಯು ವಹಿಸಿಕೊಂಡಂತಾಗಿದೆ. ವಿಶೇಷನಿಧಿಯ ವೆಚ್ಚಭಾಗದಲ್ಲಿ ಅರ್ಧಕ್ಕೂ ಹೆಚ್ಚಾಗಿ ಸಲಕರಣೆಗಳನ್ನು ಒದಗಿಸುವುದಕ್ಕೂ ಹಾಗೂ ಉಳಿದುದನ್ನು ನಿಪುಣರು, ವ್ಯಾಸಂಗವೇತನಗಳು, 'ಎಕ್ಸಿಕ್ಯೂಟಿಂಗ್ ಏಜೆನ್ಸಿ ಕಮಿಷರ್' ಇತ್ಯಾದಿ ಬಾಬುಗಳ ಬಗ್ಗೆಯೂ ವೆಚ್ಚಮಾಡಲಾಗಿದೆ.

೧೧. ಈ ನಾಲ್ಕು ವರ್ಷಗಳಲ್ಲಿ ವಿಶೇಷನಿಧಿಯು ಮಾಡಿರುವ ಅಭಿವೃದ್ಧಿ ವೆಚ್ಚ ಕೇವಲ ೧೭ ಕೋಟಿ ಡಾಲರುಗಳಷ್ಟೇ ಆಗಿದ್ದಾಗ್ಯೂ ಅದು ಹಿಂದುಳಿದಿರುವ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗಾಗಿ ವಿಶ್ವಸಂಸ್ಥೆಯು ರೂಪಿಸುತ್ತಿರುವ ವ್ಯವಸ್ಥೆಯ ಒಂದು ಮುಖ್ಯ ಭಾಗವಾಗಿದೆ. ಅದರ ಪಾತ್ರ ವಿಶೇಷ ರೀತಿಯದು ಎಂದು ಹೇಳಬಹುದು; ಏಕೆಂದರೆ, ಹೊಸ ಬಂಡವಾಳಕ್ಕೆ ದಾರಿ ತೋರಿಸುವಂತಹ 'ಹೂಟಿಯ ಮುನ್ನ' (Pre-investment) ಕಾರ್ಯಾಚರಣೆಗಳನ್ನು ಈ ಸಂಸ್ಥೆಯು ಕೈಕೊಳ್ಳುತ್ತಿದೆ. ಈ ಭಾಗದಲ್ಲಿ 'ಟೆಕ್ನಿಕಲ್ ಸಹಾಯದ ವಿಸ್ತೃತ ಪ್ರೋಗ್ರಾಂ' (Expanded Programme of Technical Assistance) ಹಾಗೂ ಇತರ ಅಭಿವೃದ್ಧಿ ಸಹಾಯ ಸಂಸ್ಥೆಗಳ ಕಾರ್ಯಾಚರಣೆಗಳಿಗೆ ಅನುಪೂರಕ(Complementary)ವಾಗಿದೆ. ಅಲ್ಲದೆ ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳನ್ನು 'ಕಾರ್ಯನಿರ್ವಾಹಕ ಏಜೆನ್ಸಿ'(Executive Agency)ಯಾಗಿ ಒಪ್ಪಿಸಿ ಅವುಗಳ ಮೂಲಕ ಕಾರ್ಯಾಚರಣೆಗಳನ್ನು ನಡೆಸುವುದರಿಂದ ಇಂತಹ ಅಂತರರಾಷ್ಟ್ರೀಯ ಸಂಸ್ಥೆಗಳೊಳಗೂ ಹಾಗೂ ವಿವಿಧ ರಾಷ್ಟ್ರಗಳೊಳಗೂ ಅಭಿವೃದ್ಧಿ ಕಾರ್ಯಾಚರಣೆಗಳ ಬಗ್ಗೆ ಪರಸ್ಪರ ಸಂಪರ್ಕ ಹೆಚ್ಚಿಸಿದಂತಾಗಿದೆ. ಹೀಗೆ ವಿಶೇಷನಿಧಿಯ ಪಾತ್ರ ಅನಭಿವೃದ್ಧಿ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಅತಿ ಮುಖ್ಯವಾಗಿದೆ. ಆದರೆ ಈ ಸಂಸ್ಥೆಯ ಮಿತಿಯುಳ್ಳ ಉದ್ದೇಶಗಳ ದೃಷ್ಟಿಯಿಂದ ನೋಡಿದರೂ ಪ್ರಪಂಚದ ಅನಭಿವೃದ್ಧಿ ರಾಷ್ಟ್ರಗಳಿಗೆ ಈಗ ನೀಡಲಾಗುತ್ತಿರುವ ಸಹಾಯದ ಪ್ರಮಾಣಕ್ಕಿಂತ ಅತ್ಯಧಿಕ ಪ್ರಮಾಣದಲ್ಲಿ ಸಹಾಯ ಆವಶ್ಯಕವಾಗಿದೆ. ವಿಶೇಷನಿಧಿಯು ಅದರ ಬಂಡವಾಳದ ಬಲವನ್ನು ಹೆಚ್ಚಿಸಿಕೊಂಡು ಹಿಂದುಳಿದಿರುವ ರಾಷ್ಟ್ರಗಳಿಗೆ ಹೆಚ್ಚು ಪ್ರಮಾಣದಲ್ಲಿ ಸಹಾಯವನ್ನು ದೊರಕಿಸುವುದೆಂದು ಆಶಿಸಬಹುದು.

—ಅ. ಪು. ಶ್ರೀನಿವಾಸಮೂರ್ತಿ

ಕ್ಯಾಂಟ್ ಮತ್ತು ಅವನ ತತ್ತ್ವ

ಪ್ರಷ್ಯಾದೇಶದ ಕೋನಿಗ್ಸ್‌ಬರ್ಗ್ ಎಂಬ ಊರಿನಲ್ಲಿ ಇಮಾನ್ಯುಯಲ್ ಕ್ಯಾಂಟ್ ಎಂಬ ತಾತ್ವಿಕನು ೧೭೨೪ನೆಯ ಇಸವಿಯಲ್ಲಿ ಹುಟ್ಟಿದನು. ಅವನ ತಂದೆ ತುಂಬ ಬಡವ; ಜೀನುಮಾಡುವುದು ಅವನ ಕೆಲಸ. ಕ್ಯಾಂಟನ ತಾಯಿಗೆ ವ್ರತನಿಯಮಗಳಲ್ಲಿ ತುಂಬ ಭಕ್ತಿ; ಬೆಳಗಿಂದ ಸಂಜೆಯವರೆಗೂ ಮಗನನ್ನು ಮತದಲ್ಲಿ ಅದ್ದಿ ಮುಳುಗಿಸುತ್ತಿದ್ದಳು. ದೊಡ್ಡವನಾದ ಮೇಲೆ ಅವನು ಜನರ ಮತಾಚರಣೆಗಳ ಮೇಲೆ ಎದುರು ಬೀಳುವುದಕ್ಕೆ ಇದೇ ಕಾರಣವಾಯಿತು; ಆದರೆ ಮತದ ಮುಖ್ಯ ತತ್ವಗಳಲ್ಲಿ ಇದೇ ಅವನಿಗೆ ದೃಢ ನಂಬಿಕೆಯನ್ನೂ ಹುಟ್ಟಿಸಿತು. ಬಡತನದ ಮನೆತನದಲ್ಲಿ ಹುಟ್ಟಿದರೂ ಕ್ಯಾಂಟನು ತನ್ನ ಊರಿನ ವಿಶ್ವವಿದ್ಯಾಲಯದಲ್ಲಿ ವಿದ್ಯೆಯನ್ನು ಕಲಿತನು. ಮೂವತ್ತೊಂದನೆಯ ವಯಸ್ಸಿನಲ್ಲಿ ಅವನಿಗೆ ಅಲ್ಲಿಯೇ ಉಪನ್ಯಾಸಕನ ಕೆಲಸವಾಯಿತು. ಆ ಚಿಕ್ಕ ಕೆಲಸದಲ್ಲಿಯೇ ಅವನು ಬಹಳ ವರ್ಷಗಳವರೆಗೂ ಇರಬೇಕಾಯಿತು; ತನ್ನನ್ನು ಪ್ರಾಧ್ಯಾಪಕ (Professor) ನನ್ನಾಗಿ ಮಾಡಬೇಕೆಂದು ಎರಡು ಸಾರಿ ಅರ್ಜಿ ಹಾಕಿಕೊಂಡರೂ ಅಧಿಕಾರಿಗಳು ಕಿವಿಗೆ ಹಾಕಿಕೊಳ್ಳಲಿಲ್ಲ. ಕೊನೆಗೆ ತನ್ನ ನಲವತ್ತಾರನೆಯ ವಯಸ್ಸಿನಲ್ಲಿ ಅವನು ತರ್ಕ ಮತ್ತು ತತ್ವದ ಪ್ರಾಧ್ಯಾಪಕನಾದನು.

ಎಲ್ಲರೂ ಮೆಚ್ಚತಕ್ಕ ಅನೇಕ ಗುಣಗಳು ಕ್ಯಾಂಟನಲ್ಲಿದ್ದುವು; ಆದರೆ ಕೆಲವು ವಿಷಯಗಳಲ್ಲಿ ಅವನು ನಗುಬರುವಂತೆ ನಡೆದುಕೊಳ್ಳುತ್ತಿದ್ದನು. ಅವನಿಗೆ ಮಕ್ಕಳಂತೆ ಸರಳಹೃದಯವಿತ್ತು; ಯಾರಕೂಡಲೂ ಕೆಟ್ಟಮಾತನ್ನಾಡುತ್ತಿರಲಿಲ್ಲ. ಬಹಳ ದಾಕ್ಷಿಣ್ಯಪ್ರಕೃತಿ; ದಾರಿಯಂಚಿನಲ್ಲಿ ಕತ್ತು ಬಗ್ಗಿಸಿಕೊಂಡು ತನ್ನ ಪಾಡಿಗೆ ತಾನು ಹೋಗುವ ಸ್ವಭಾವ. ಅವನಿಗೆ ದೇಹಶಕ್ತಿಯು ಹೆಚ್ಚಾಗಿರಲಿಲ್ಲ; ಆದರೆ ಅವನ ಮನಶ್ಶಕ್ತಿಗೆ ಮಿತಿಯೇ ಇರಲಿಲ್ಲ. ತನ್ನ ದೇಹಸ್ಥಿತಿಯನ್ನು ಸರಿಯಾಗಿಟ್ಟುಕೊಳ್ಳು ವುದಕ್ಕೆ ಅವನು ವೈದ್ಯರ ಸಲಹೆಗಳನ್ನು ಕೇಳುತ್ತಿರಲಿಲ್ಲ; ರೋಗರುಜಿನಗಳನ್ನು ಮನೋದಾರ್ಢ್ಯದಿಂದ ಗೆಲ್ಲಬೇಕೆಂದು ಅವನ ನಂಬಿಕೆ. ಆದ್ದರಿಂದ ಅವನು ಹೊರಗೆ ತಿರುಗಾಡಲು ಹೊರಟಾಗ ಮೂಗಿಂದಲೇ ಉಸಿರು ಬಿಡಬೇಕೆಂದು ನಿಯಮವನ್ನಿಟ್ಟುಕೊಂಡಿದ್ದನು; ಆಗ ಅವನು ಯಾರಕೂಡಲೂ ಮಾತಾಡುತ್ತಿರಲಿಲ್ಲ. ಏಕೆಂದರೆ ನೆಗಡಿಗಿಂತ ಮೌನವೇ ಲೇಸೆಂದು ತಿಳಿದಿದ್ದನು.

ಯಾವ ಕೆಲಸವನ್ನು ಮಾಡಬೇಕಾದರೂ ಕ್ಯಾಂಟನು ಅದನ್ನು ಚೆನ್ನಾಗಿ ಯೋಚಿಸದೆ ಮಾಡುತ್ತಿರಲಿಲ್ಲ. ಮುಖ್ಯವಾಗಿ ಅವನ ಜೀವನವೇ ಲೆಕ್ಕಾಚಾರದ ಜೀವನವಾಗಿತ್ತು. ಆದ್ದರಿಂದಲೇ ಅವನು ಮದುವೆ ಮಾಡಿಕೊಳ್ಳಲಿಲ್ಲವೋ ಏನೋ! ಮದುವೆಮಾಡಿಕೊಳ್ಳಬೇಕೆಂದು ಅವನು ಎರಡು ಸಲ ಯೋಚಿಸಿದ್ದನು: ಮೊದಲನೆಯ ಸಲ, ಮದುವೆಯ ಸಾಧಕ ಬಾಧಕಗಳನ್ನು ಅವನು ಇನ್ನೂ ಅಳೆಯುತ್ತಿದ್ದಾಗ,

ಇವನ ವಿಚಾರ ಪೂರೈಸುವುದರೊಳಗಾಗಿ ಇವನು ಮದುವೆಯಾಗಬೇಕೆಂದಿದ್ದ ಹೆಣ್ಣು ಜಾಗ್ರತೆಯಾಗಿ ಮನಸ್ಸುಮಾಡಿದವನನ್ನು ನೋಡಿ ಮದುವೆಯಾಗಿಬಿಟ್ಟಳು; ಎರಡನೆಯ ಸಲ, ಮದುವೆಮಾಡಿಕೊಳ್ಳೆಂದು ಕೇಳುವುದರೊಳಗಾಗಿ ಬೇಸರಗೊಂಡ ಇನ್ನೊಬ್ಬಾಕೆಯು ಬೇರೆ ಊರಿಗೆ ಹೊರಟುಹೋದಳು. ಮದುವೆಯಾದ ಬಾಳು ರಗಳೆಯ ಬಾಳೆಂದುಕೊಂಡು ಕ್ಯಾಂಟನು ಸುಮ್ಮನಾದನು.—ತತ್ವವು ಬರಿಯ ಮಾತಲ್ಲವೆಂದೂ, ಅದನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕೆಂದೂ ಅವನು ನಂಬಿದ್ದನು. ಆದ್ದರಿಂದಲೇ ತಾನು ಹೇಳುತ್ತಿದ್ದ ತತ್ವವನ್ನು ತನ್ನ ಜೀವನದಲ್ಲಿ ಅವನು ಅನುಸರಿಸುತ್ತಿದ್ದನು.

ಕ್ಯಾಂಟಿನ ತತ್ವದ ಹೆಸರು ವಿಮರ್ಶನಾ ತತ್ವ. ಅದು ಬುದ್ಧಿಶಕ್ತಿಯ (Reason) ಎಲ್ಲೆಯನ್ನು ವಿಮರ್ಶಿಸುವ ವಿಚಾರ. ಆದ್ದರಿಂದಲೇ ಕ್ಯಾಂಟನು ತನ್ನ ಮುಖ್ಯವಾದ ಮೂರು ಪುಸ್ತಕಗಳನ್ನು ವಿಮರ್ಶೆಗಳೆಂದು ಕರೆಯುತ್ತಾನೆ. "ಕ್ರಿಟೀಕ್ ಆಫ್ ಪ್ಯೂರ್ ರೀಸ್ನ" (ಶುದ್ಧ ಬುದ್ಧಿಶಕ್ತಿಯ ವಿಮರ್ಶೆ) ಎಂಬುದು ಮೊದಲನೆಯ ಪುಸ್ತಕ; ವಾದ ದೃಷ್ಟಿಯಿಂದ ಬುದ್ಧಿಶಕ್ತಿಯನ್ನು ಅಳೆಯುವ ವಿಚಾರ ಅಥವಾ ವಿಜ್ಞಾನದ ವಿಚಾರ. "ಕ್ರಿಟೀಕ್ ಆಫ್ ಪ್ರ್ಯಾಕ್ಟಿಕಲ್ ರೀಸ್ನ" (ಅನುಷ್ಠಿತ ಬುದ್ಧಿ ಶಕ್ತಿಯ ವಿಮರ್ಶೆ) ಎಂಬುದು ಎರಡನೆಯ ಪುಸ್ತಕ; ಅನುಭವದಲ್ಲಿ ಕಂಡುಬರುವ ನೀತಿಧರ್ಮದ ವಿಚಾರ. "ಕ್ರಿಟೀಕ್ ಆಫ್ ಜಡ್ಜ್‌ಮೆಂಟ್" (ನಿರ್ಣಯದ ವಿಮರ್ಶೆ) ಎಂಬುದು ಮೂರನೆಯ ಪುಸ್ತಕ; ಸೌಂದರ್ಯ ಮತ್ತು ವಿಶ್ವಸಂಕಲ್ಪದ ವಿಚಾರ. ಈ ಪುಸ್ತಕಗಳಲ್ಲಿ ಕ್ಯಾಂಟನು ಮನುಷ್ಯನ ಬುದ್ಧಿಶಕ್ತಿಯನ್ನು ನಿರ್ದಾಕ್ಷಿಣ್ಯವಾದ ವಿಮರ್ಶೆಗೊಳಮಾಡಿದ್ದಾನೆ.

ಅವನ ವಿದ್ಯಾರ್ಜನೆಯ ಕಾಲದಲ್ಲಿ ಬುದ್ಧಿಪ್ರಧಾನ ವಾದ (Rationalism) ಮತ್ತು ಇಂದ್ರಿಯಪ್ರಧಾನ ವಾದ (Empiricism) ಎಂಬ ಎರಡು ತತ್ವಗಳು ಮುಖ್ಯವಾಗಿದ್ದುವು.

(೧) **ಬುದ್ಧಿಪ್ರಧಾನ ವಾದ:** ಒಂದು ಕಡೆ ಡೇಕಾರ್ಟ್, ಸ್ಪಿನೋಜಾ, ಲೆಬ್ನಿಟ್ಜ್ ಎಂಬ ತಾತ್ವಿಕರು ಇಂದ್ರಿಯ ಜ್ಞಾನವು ಮಾಯೆಯೆಂದೂ, ಜ್ಞಾನಕ್ಕೆ ಬುದ್ಧಿಯೇ ಮೂಲವೆಂದೂ ಈ ರೀತಿ ಸಾರಿದರು:—ಒಬ್ಬನು ಹೇಳಿದ್ದನ್ನು ನಂಬುವ ಹಾಗಿಲ್ಲ; ಸೂರ್ಯನು ಭೂಮಿಯನ್ನು ಬಳಸುತ್ತಾನೆಂದು ಯಾವನಾದರೂ ಹೇಳಿದರೆ ಅದನ್ನು ನಂಬುವ ಹಾಗಿಲ್ಲ. ಮತ್ತು ನೋಡುವುದು, ಕೇಳುವುದು, ಮುಟ್ಟುವುದು ಮುಂತಾದ ಇಂದ್ರಿಯ ವ್ಯಾಪಾರವನ್ನೂ ನಂಬುವ ಹಾಗಿಲ್ಲ; ದೂರದ ಬೆಟ್ಟವು ನುಣ್ಣಗೆ ಕಾಣುತ್ತದೆ. ಹಗ್ಗವು ಹಾವಿನ ಹಾಗೆ ಕಾಣುತ್ತದೆ. ಆದರೆ ನಾನು ಯಾವುದನ್ನು ಸಂಶಯಪಟ್ಟರೂ ಸಂಶಯಪಡುವ ನನ್ನನ್ನು ಸಂಶಯ ಪಡುವಹಾಗಿಲ್ಲ. ಈ ನಿಸ್ಸಂಶಯವಾದ, ಸ್ಪಷ್ಟವಾದ ಆತ್ಮಜ್ಞಾನವನ್ನು ತಳಹದಿ ಯಾಗಿಟ್ಟುಕೊಂಡು, ಈಶ್ವರ, ಚಿತ್, ಅಚಿತ್ ಮುಂತಾದ ವಿಶ್ವದ ಕಟ್ಟಡವನ್ನು

ಕಟ್ಟಬಹುದು. ಈ ಜ್ಞಾನಕ್ಕೆಲ್ಲಾ ಬುದ್ಧಿಯೇ ಕಾರಣ.–ಆದರೆ ನಾನು ಎಂಬ ಅಡಿಗಲ್ಲಿನ ತಿಳಿವಳಿಕೆ ಹೇಗೆ ಬಂದಿತೆಂದು ಕೇಳಿದರೆ ಸಾಕ್ಷಿಜ್ಞಾನದಿಂದ (Intuition) ಬಂದಿತೆಂದು ಆ ತಾತ್ವಿಕರು ಹೇಳಬೇಕಾಯಿತು.

(೨) **ಇಂದ್ರಿಯಪ್ರಧಾನ ವಾದ :** ಇನ್ನೊಂದು ಕಡೆ ಲಾಕ್, ಬಾರ್ಕ್ಲೆ, ಹ್ಯೂಂ ಎಂಬ ತಾತ್ವಿಕರು ಬುದ್ಧಿಶಕ್ತಿಯಿಂದ ಜ್ಞಾನವುಂಟಾಗುವುದಿಲ್ಲವೆಂದೂ, ಜ್ಞಾನಕ್ಕೆ ಇಂದ್ರಿಯ ವ್ಯಾಪಾರವೇ ಮೂಲವೆಂದೂ ಈ ರೀತಿ ಸಾರಿದರು :— ಕಣ್ಣಿಗೆ ಕಾಣದಿದ್ದದ್ದು, ಕಿವಿಗೆ ಕೇಳದಿದ್ದದ್ದು, ಮೈಗೆ ಸೋಕದಿದ್ದದ್ದು ಬುದ್ಧಿಯೊಳಗೆ ಹೇಗಿದ್ದೀತು? ಮನಸ್ಸು ಬರಿಯ ಕಪ್ಪುಹಲಗೆ. ಮೇಣದ ಹಾಳೆ; ಇಂದ್ರಿಯ ವ್ಯಾಪಾರದಿಂದುಂಟಾದ ವಾಸನೆಗಳೇ ಅದರಲ್ಲಿ ಬರೆದಂತೆ, ಅಚ್ಚುಹಾಕಿದಂತೆ ಕಂಡು ಬರುವುವು. ಆ ವಾಸನೆಗಳಲ್ಲದೆ ನಮಗೆ ಬೇರೆ ಜ್ಞಾನ ಯಾವುದೂ ಇಲ್ಲ. ಇರುವಿಕೆ ಯಾಗಬೇಕಾದರೆ ಪ್ರತ್ಯಕ್ಷವಾಗಬೇಕು. ಈಶ್ವರ, ಚಿತ್, ಅಚಿತ್ ಎಂಬುವು ನಮ್ಮ ಇಂದ್ರಿಯಾನುಭವದಲ್ಲಿ ಪ್ರತ್ಯಕ್ಷವಾಗಿಲ್ಲ; ಆದ್ದರಿಂದ ಅವುಗಳಿಲ್ಲ. ಸಂಬಂಧ, ಕಾರಣ ಮುಂತಾದವೂ ಕೂಡ ಸಹವಾಸದಲ್ಲಿರುವ ವಾಸನೆಗಳ ಮೆರೆವಣಿಗೆಗಳು; ಪದ್ಧತಿಯಿಂದ ಬೇರೂರಿದ ನಂಬಿಕೆಗಳು. ಆದ್ದರಿಂದ ಇವೂ ಸುಳ್ಳು. ಆದರೆ ಯಾವುದೂ ನಿಜವಲ್ಲದಿದ್ದರೆ ಈ ವಾದವೂ ನಿಜವಲ್ಲವೆಂದು ಹೇಳಬೇಕಾಗುವುದು.

ಕ್ಯಾಂಟನು ಮೊದಮೊದಲು ಬುದ್ಧಿಪ್ರಧಾನ ವಾದವೇ ಸರಿಯಾದ ತತ್ವವೆಂದು ಕೊಂಡಿದ್ದನು. ಆದರೆ ಇಂದ್ರಿಯ ಪ್ರಧಾನ ವಾದದ ಸಿದ್ಧಾಂತಗಳು ಅವನ ಕಣ್ಣನ್ನು ತೆರೆದುವು. ಹ್ಯೂಂ ಎಂಬ ತಾತ್ವಿಕನು ಅವಿಚಾರದ ನಿದ್ರೆಯಿಂದ ಅವನನ್ನು ಎಬ್ಬಿಸಿದನಂತೆ. ವಿಚಾರಮಾಡಿದ ಮೇಲೆ ಕ್ಯಾಂಟನಿಗೆ ಈ ಎರಡು ವಾದಗಳೂ ಸರಿಬೀಳಲಿಲ್ಲ; ಮೊದಲನೆಯದು ಹಟವಾದದಲ್ಲಿಯೂ (Dogmatism), ಎರಡನೆ ಯದು ಸಂಶಯ ವಾದದಲ್ಲಿಯೂ (Scepticism) ಪರಿಣಮಿಸುತ್ತವೆಯೆಂದು ಅವನಿಗೆ ತಿಳಿಯಿತು. ಆದ್ದರಿಂದ ಕ್ಯಾಂಟನು ಈ ಎರಡು ವಾದಗಳ ತಪ್ಪನ್ನು ಬಿಟ್ಟು ಗುಣಗಳನ್ನು ಮಾತ್ರ ಹೊಂದಿಕೆ ಮಾಡಲು ಪ್ರಯತ್ನಿಸಿದನು. ಎರಡನೆಯ ವಾದ ದಂತೆ ಜ್ಞಾನದ ಸಾಮಾಗ್ರಿಯು ಇಂದ್ರಿಯಾನುಭವದಿಂದ ಸಿಕ್ಕುತ್ತದೆಯೆಂದೂ, ಮೊದಲನೆಯ ವಾದದಂತೆ ಅನುಭವಗಳನ್ನು ಬುದ್ಧಿಯು ತನ್ನ ಹುಟ್ಟು ದಾರಿಯಿಂದ ಆಲೋಚಿಸುತ್ತದೆಯೆಂದೂ ಹೇಳಿದನು. ಆದರೆ ನಮ್ಮ ಅನುಭವದಲ್ಲಿ ಕಂಡುಬಂದಂತೆ ಮಾತ್ರ ವಸ್ತುಗಳನ್ನು ನಾವು ತಿಳಿಯುತ್ತೇವೆ; ಅವುಗಳ ಮೂಲರೂಪವನ್ನು ತಿಳಿಯಲಾರೆವು. ಅನುಭವಾತೀತ ಪ್ರಪಂಚದ ಜ್ಞಾನವು ಅಥವಾ ಬ್ರಹ್ಮಜ್ಞಾನವು ನಮಗೆ ದೊರೆಯುವುದಿಲ್ಲ.

ಈ ಸಿದ್ಧಾಂತವನ್ನು ಸ್ಥಾಪಿಸಲು ತನ್ನ ಮೊದಲನೆಯ ಪುಸ್ತಕದಲ್ಲಿ ಕ್ಯಾಂಟನು ಈ ರೀತಿ ವಿಚಾರಮಾಡಿದ್ದಾನೆ:—ಜ್ಞಾನವು ನಿರ್ಣಯಾಕಾರದಲ್ಲಿರುತ್ತದೆ. "ಇದು ಮೇಜು, ಹುಲ್ಲು ಹಸುರಾಗಿದೆ, ಮನುಷ್ಯನಿಗೆ ಸಾವುಂಟು" ಎಂಬುವುಗಳು

ನಿರ್ಣಯಗಳು (Judgement); ಅವುಗಳೇ ಜ್ಞಾನ. ಆ ಜ್ಞಾನವು ಸಾರ್ವತ್ರಿಕವಾದದ್ದು, ಆವಶ್ಯಕವಾದದ್ದು. ಆದರೆ ಜ್ಞಾನವು ಹೇಗೆ ಸಾಧ್ಯ? ವಸ್ತುವಿದೆಯೆ, ಅದರ ಜ್ಞಾನವು ಸಾಧ್ಯವೆ, ಎಂದು ಕ್ಯಾಂಟನು ಕೇಳುವುದಿಲ್ಲ. ವಸ್ತುವಿದೆಯೆಂದೂ ಅದರ ಜ್ಞಾನವು ಬಹಳಮಟ್ಟಿಗೆ ಸಾಧ್ಯವೆಂದೂ ಅವನ ನಂಬಿಕೆ; ಆದ್ದರಿಂದ ಜ್ಞಾನವು ಸಾಧ್ಯವಾಗುವ ಮಾರ್ಗವನ್ನು ಮಾತ್ರ ವಿಚಾರಮಾಡಿದ್ದಾನೆ. ಜ್ಞಾನವು ಹೇಗೆ ಸಾಧ್ಯ, ಎಂಬ ಪ್ರಶ್ನೆಯನ್ನು ಎರಡು ಭಾಗಗಳಾಗಿ ಮಾಡಬಹುದು: (೧) ಪ್ರತ್ಯಕ್ಷ ಜ್ಞಾನವು ಹೇಗೆ ಸಾಧ್ಯ? (೨) ಕಲ್ಪನಾ ಜ್ಞಾನವು ಹೇಗೆ ಸಾಧ್ಯ?

(೧) **ಪ್ರತ್ಯಕ್ಷಜ್ಞಾನ ವಾದ:** ನೋಟ, ಸದ್ದು, ರುಚಿ ಮುಂತಾದ ವೇದನಾಂಶಗಳು (Sensation) ಪ್ರತ್ಯಕ್ಷಜ್ಞಾನದ ಸಾಮಗ್ರಿಗಳು ಮತ್ತು ದೇಶ, ಕಾಲ (Space, Time) ಎಂಬುವೆರಡೂ ಪ್ರತ್ಯಕ್ಷ ಜ್ಞಾನದ ಮೂಲ ಆಕಾರಗಳು (Form). ವೇದನಾಂಶಗಳು ದೇಶ, ಕಾಲ ಎಂಬ ಆಕಾರಗಳ ಮೂಲಕ ಪ್ರತ್ಯಕ್ಷಾಂಶಗಳು (Percept) ಆಗುತ್ತವೆ. ಉದಾ: ನಮಗೆ ಕಾಣುವ ಅನೇಕ ವಸ್ತುಗಳಲ್ಲಿ "ಹಣ್ಣು" ಎನ್ನುವುದು ಒಂದು ಕಡೆ ಒಂದು ಹೊತ್ತಿನಲ್ಲಿರುವುದರಿಂದ, ಎಲ್ಲಾದರೂ ಯಾವಾಗಲಾದರೂ ಇರುವುದರಿಂದ ನಮಗೆ ತಿಳಿದುಬರುತ್ತದೆ. ಯಾವ ವಸ್ತುವನ್ನಾದರೂ ಅದಿರುವ ಹೊತ್ತುಗೊತ್ತುಗಳಿಂದ ನಾವು ತಿಳಿಯಲು ಸಾಧ್ಯ. ಇದೇ ರೀತಿ ಗಣಿತ ಶಾಸ್ತ್ರದ ಜ್ಞಾನವೆಲ್ಲವೂ ಸಾಧ್ಯ. ಆದ್ದರಿಂದ ಬುದ್ಧಿಪ್ರಧಾನ ವಾದವೆಲ್ಲವೂ ಸರಿಯೆಂದು ಹೇಳುವುದಕ್ಕಾಗುವುದಿಲ್ಲ.

(೨) **ಕಲ್ಪನಾಜ್ಞಾನ ವಾದ:** ಪ್ರತ್ಯಕ್ಷಾಂಶಗಳು ಕಲ್ಪನಾಜ್ಞಾನದ ಸಾಮಗ್ರಿಗಳು ಮತ್ತು ಪದಾರ್ಥಗಳು (Categories) ಕಲ್ಪನಾ ಜ್ಞಾನದ ಮೂಲ ಆಕಾರಗಳು. ಒಂದಾಗುವಿಕೆ ಬೇರೆಯಾಗುವಿಕೆ ಮುಂತಾದ ಪರಿಮಾಣ, ಇರುವತನ ಇಲ್ಲದತನ ಮುಂತಾದ ಗುಣ, ಕಾರಣ ಕಾರ್ಯ ಮುಂತಾದ ಸಂಬಂಧ, ಸಾಧ್ಯತೆ ಆವಶ್ಯಕತೆ ಮುಂತಾದ ರೀತಿ, ಇವು ನಾಲ್ಕೂ ಪದಾರ್ಥಗಳು. ಪ್ರತ್ಯಕ್ಷಾಂಶಗಳು ಈ ಪದಾರ್ಥಗಳೆಂಬ ಆಕಾರಗಳ ಮೂಲಕ ಕಲ್ಪನಾಂಶಗಳು (Concept) ಆಗುತ್ತವೆ. ಉದಾ: ಬೇರೆ ಬೇರೆ ಹಣ್ಣುಗಳನ್ನು ನೋಡಿದಮೇಲೆ ಅವುಗಳ ಜಾತಿ, ಆವಶ್ಯಕತೆ ಮುಂತಾದ ಕಲ್ಪನೆಗಳುಂಟಾಗುತ್ತವೆ. ಯಾವ ವಿಷಯವನ್ನಾದರೂ ಈ ಪದಾರ್ಥಗಳ ಮೂಲಕ ನಾವು ತಿಳಿಯಲು ಸಾಧ್ಯ. ಇದೇ ರೀತಿ ಭೌತಶಾಸ್ತ್ರದ ಜ್ಞಾನವೆಲ್ಲವೂ ಸಾಧ್ಯ. ಆದ್ದರಿಂದ ಇಂದ್ರಿಯಪ್ರಧಾನ ವಾದವೆಲ್ಲವೂ ಸರಿಯೆಂದು ಹೇಳುವುದಕ್ಕಾಗುವುದಿಲ್ಲ.

ಇಂದ್ರಿಯವ್ಯಾಪಾರವೊಂದರಿಂದಲೇ ಅಥವಾ ಬುದ್ಧಿವ್ಯಾಪಾರವೊಂದರಿಂದಲೇ ಜ್ಞಾನವುಂಟಾಗುವುದಿಲ್ಲ; ಇಂದ್ರಿಯಗಳು ಯೋಚಿಸಲಾರವು ಮತ್ತು ಬುದ್ಧಿಯು ಪ್ರತ್ಯಕ್ಷಿಸಲಾರದು. ಇಂದ್ರಿಯಾನುಭವದಿಂದ ಹುಟ್ಟಿದ ವಿಷಯಗಳೂ ಬುದ್ಧಿಯಿಂದ ಹುಟ್ಟಿದ ಕಲ್ಪನೆಗಳೂ ಬೇರೆ ಬೇರೆಯಾಗಿದ್ದರೂ ಪರಸ್ಪರ ಸಹಾಯ ಮಾಡುತ್ತವೆ. ಸರಿಯಾದ ಜ್ಞಾನವಾಗಬೇಕಾದರೆ ಪ್ರತ್ಯಕ್ಷಾಂಶಗಳೂ ಕಲ್ಪನಾಂಶ

ಗಳೂ ಮಿಳಿತವಾಗಬೇಕು. ಉದಾ: ಮಳೆಗಾಲದಲ್ಲಿ ಕಾಮನಬಿಲ್ಲನ್ನು ಕಾಣುವುದು ಪೂರ್ಣಜ್ಞಾನವಲ್ಲ; ಮೋಡದಲ್ಲಿರುವ ನೀರಿನ ಕಣಗಳಲ್ಲಿ ಸೂರ್ಯಕಿರಣಗಳು ಪ್ರತಿಬಿಂಬಿಸುವುದರಿಂದ ಬಿಲ್ಲಿನಂತೆ ಬಣ್ಣಗಳು ಕಾಣುವುವೆಂದು ತಿಳಿದುಕೊಳ್ಳಬೇಕು. ಆದ್ದರಿಂದ, ಕಲ್ಪನಾಂಶಗಳಿಲ್ಲದ ಪ್ರತ್ಯಕ್ಷಾಂಶಗಳು ಕುರುಡು; ಪ್ರತ್ಯಕ್ಷಾಂಶಗಳಿಲ್ಲದ ಕಲ್ಪನಾಂಶಗಳು ಬರಡು. ಅಥವಾ ಪ್ರತ್ಯಕ್ಷಿಸಿ ನೋಡಿದರೂ ಪ್ರಮಾಣಿಸಿ ನೋಡ ಬೇಕು. ವೇದನಾಂಶಗಳು ಪ್ರತ್ಯಕ್ಷಾಂಶಗಳಿಗೆ ಸಾಮಗ್ರಿಯಾದಂತೆ ಪ್ರತ್ಯಕ್ಷಾಂಶಗಳು ಕಲ್ಪನಾಂಶಗಳಿಗೆ ಸಾಮಗ್ರಿ. ಅಥವಾ, ಪ್ರತ್ಯಕ್ಷ ಜ್ಞಾನವೂ ಕಲ್ಪನಾ ಜ್ಞಾನವೂ ಒಂದಕ್ಕೊಂದಾಗಿ ಹೆಣೆದುಕೊಂಡಿವೆ. ಕೋಪರ್ನಿಕಸ್ ಎಂಬಾತನು ಭೂಮಿಯನ್ನು ಸೂರ್ಯನು ಬಳಸುವುದಿಲ್ಲವೆಂದೂ, ಭೂಮಿಯು ಸೂರ್ಯನನ್ನು ಬಳಸುವುದೆಂದೂ ಸ್ಥಾಪಿಸಿ ಜ್ಯೋತಿಪ್ರಪಂಚದಲ್ಲಿ ಕ್ರಾಂತಿಯುಂಟುಮಾಡಿದಂತೆ, ಕ್ಯಾಂಟನು ಜ್ಞಾನ ವುಂಟಾಗಲು ಇಂದ್ರಿಯವ್ಯಾಪಾರವು ಸಾಲದೆಂದೂ, ಅದನ್ನೊಳಗೊಂಡ ಬುದ್ಧಿ ವ್ಯಾಪಾರವು ಆವಶ್ಯಕವೆಂದೂ ಸ್ಥಾಪಿಸಿ ತತ್ವಪ್ರಪಂಚದಲ್ಲಿ ಕ್ರಾಂತಿಯುಂಟು ಮಾಡಿದನು.

ಮನಸ್ಸು ದೇಶ ಕಾಲಗಳ ಮೂಲಕ ಪ್ರತ್ಯಕ್ಷಿಸುತ್ತದೆ ಮತ್ತು ಪದಾರ್ಥಗಳ ಮೂಲಕ ಯೋಚಿಸುತ್ತದೆ. ಮನಸ್ಸಿಗೆ ಸ್ವಾಭಾವಿಕವಾದ ಈ ಎರಡು ಆಕಾರಗಳೂ ಇಲ್ಲದಿದ್ದರೆ ಅನುಭವವೇ ಅಸಾಧ್ಯ. ಮನಸ್ಸು ಅನುಭವದ ವಸ್ತುಗಳನ್ನೆಲ್ಲಾ ಒಂದು ರೀತಿ ಅನುವ್ಯವಸಾಯದಲ್ಲಿ ಒಟ್ಟುಗೂಡಿಸಿ ಕ್ರಮವನ್ನೇರ್ಪಡಿಸುತ್ತದೆ. ಉದಾ: ಹಣ್ಣು ಹತ್ತಿರವಿರುವಾಗ ನನಗೆ ಹಸಿವಾಗುವುದು ವೇದನೆ; ಹಸಿವೆಂದು ಹಣ್ಣನ್ನು ನೋಡುವುದು ಪ್ರತ್ಯಕ್ಷ; ಹಣ್ಣು ಹಸಿವನ್ನು ಹೋಗಲಾಡಿಸುವುದೆಂದು ಕೊಳ್ಳುವುದು ಕಲ್ಪನೆ; ಇವೆಲ್ಲವೂ ಮನಸ್ಸಿನ ವ್ಯವಸಾಯ. ಇವೆಲ್ಲವೂ ನನಗೆ ತಿಳಿದಿವೆ ಎಂದು ತಿಳಿದುಕೊಳ್ಳುವುದು ಅನುವ್ಯವಸಾಯ.

ಪ್ರತ್ಯಕ್ಷಜ್ಞಾನದ ಮತ್ತು ಕಲ್ಪನಾಜ್ಞಾನದ ಆಕಾರಗಳು ಅನುಭವಪ್ರಪಂಚಕ್ಕೆ ಸಂಬಂಧಪಟ್ಟಿರುವುದರಿಂದ ಅದಕ್ಕೆ ಮಾತ್ರ ಅನ್ವಯಿಸುತ್ತವೆ; ಆದರೆ ಅನುಭವಾತೀತ ಪ್ರಪಂಚಕ್ಕೆ ಸಂಬಂಧಪಟ್ಟಿಲ್ಲ, ಆದ್ದರಿಂದ ಅದಕ್ಕೆ ಅನ್ವಯಿಸುವುದಿಲ್ಲ. ನಾವು ಆ ಪ್ರಪಂಚವನ್ನು ಪ್ರತ್ಯಕ್ಷಿಸಲಾರೆವು, ಪ್ರಮಾಣಿಸಲಾರೆವು. ಗಣಿತಶಾಸ್ತ್ರ ಭೌತಶಾಸ್ತ್ರ ಗಳ ಜ್ಞಾನಕ್ಕೆ ಅಥವಾ ವಿಜ್ಞಾನಕ್ಕೆ ಈ ಆಕಾರಗಳನ್ನು ಉಪಯೋಗಿಸಬಹುದು; ಭೂತಜ್ಞಾನವನ್ನು ಮೀರಿದ ತತ್ವಜ್ಞಾನಕ್ಕೆ ಈ ಆಕಾರಗಳನ್ನು ಉಪಯೋಗಿಸುವುದ ಕ್ಕಾಗುವುದಿಲ್ಲ. ನಮ್ಮ ಅನುಭವಪ್ರಪಂಚವೆಂಬುದು ನಿಜವಸ್ತುಗಳ ಬಾಹ್ಯರೂಪ; ನಮ್ಮ ಬುದ್ಧಿಶಕ್ತಿಯ ಸಹಾಯದಿಂದ ಆ ಬಾಹ್ಯರೂಪವನ್ನು ಮಾತ್ರ ತಿಳಿಯಬಲ್ಲೆವು. ಆದರೆ ನಮ್ಮ ಪ್ರಪಂಚಕ್ಕೆ ಆಧಾರವಾಗಿರುವ ನಿಜವಸ್ತುಗಳ ಪ್ರಪಂಚವನ್ನು ನಾವು ಯುಕ್ತಿಯ ಸಹಾಯದಿಂದ ತಿಳಿಯಲಾರೆವು; ಆತ್ಮಸ್ವಾತಂತ್ರ್ಯ, ಅಮರತ್ವ ಮತ್ತು ಈಶ್ವರ, ಇವುಗಳ ಜ್ಞಾನವು ನಮಗೆ ಅಸಾಧ್ಯ.

ಈ ದಿವ್ಯಜ್ಞಾನವು ನಮಗೆ ಅಸಾಧ್ಯವಾದರೂ ನಮ್ಮ ಬುದ್ಧಿಶಕ್ತಿಯು ಸುಮ್ಮನಿರುವುದಿಲ್ಲ ; ಜಗತ್ತು, ಜೀವ, ಈಶ್ವರ ಮುಂತಾದ ಭಾವನೆಗಳ (Ideas) ಮೂಲಕ ಅದು ಇಂದ್ರಿಯವ್ಯಾಪಾರವನ್ನೂ ಬುದ್ಧಿವ್ಯಾಪಾರವನ್ನೂ ದಾಟಿದ ಪ್ರಪಂಚವನ್ನು ತಿಳಿಯಲು ಪ್ರಯತ್ನಿಸುತ್ತದೆ. ಭಾವನೆಗಳು ಬುದ್ಧಿಶಕ್ತಿಯಿಂದ ಹುಟ್ಟಿದರೂ ಅವುಗಳಿಗೆ ನಮ್ಮ ಪ್ರಪಂಚದಲ್ಲಿ ಯಾವ ಪ್ರತಿರೂಪವೂ ಇಲ್ಲ; ಏಕೆಂದರೆ ಬೇರೆ ಪ್ರಪಂಚವೇ ಅವುಗಳ ಲಕ್ಷ್ಯ. ಅಥವಾ, ಭಾವನೆಗಳು ನಮ್ಮ ಕಲ್ಪನೆಗಳನ್ನು ವ್ಯವಸ್ಥೆಗೊಳಿಸುತ್ತವೆಯೇ ಹೊರತು ಇನ್ನು ಯಾವ ಕೆಲಸವನ್ನೂ ಮಾಡಲಾರವು.

ತಿಳಿಯಲಾರದ್ದನ್ನು ತಿಳಿಯಬೇಕೆಂಬ ಬುದ್ಧಿಶಕ್ತಿಯ ಈ ಪ್ರಯತ್ನವು ವಿರೋಧೋಕ್ತಿಗಳಲ್ಲಿ ಕೊನೆಗಾಣುತ್ತದೆ. ಉದಾ : ಪ್ರಪಂಚವು ವ್ಯಾವಹಾರಿಕ ದೃಷ್ಟಿಯಿಂದ ನಿತ್ಯವಾಗಿಯೂ ಅನಂತವಾಗಿಯೂ ಕಾರಣರಹಿತವಾಗಿಯೂ, ಪಾರಮಾರ್ಥಿಕ ದೃಷ್ಟಿಯಿಂದ ಅನಿತ್ಯವಾಗಿಯೂ ಅಂತವುಳ್ಳದ್ದಾಗಿಯೂ ಕಾರಣಸಹಿತವಾಗಿಯೂ ಕಂಡುಬರುತ್ತದೆ. ಈಶ್ವರವಾದದ ಗತಿಯೂ ಅಷ್ಟೆ ! ಈಶ್ವರಭಾವನೆಯಿರುವುದರಿಂದ ಈಶ್ವರನಿದ್ದಾನೆಂದು ವಾದಿಸುವುದು ತಪ್ಪು ; ನೂರು ರೂಪಾಯಿಗಳ ಭಾವನೆಯಿರುವುದರಿಂದ ನೂರು ರೂಪಾಯಿಗಳಿದ್ದ ಹಾಗಾಗಲಿಲ್ಲ. ಅಥವಾ ಎಲ್ಲಕ್ಕೂ ಕಾರಣಕರ್ತನಾದ್ದರಿಂದ ಈಶ್ವರನಿದ್ದಾನೆಂದು ವಾದಿಸುವುದೂ ತಪ್ಪು ; ಎಲ್ಲಕ್ಕೂ ಕಾರಣವಿದ್ದರೆ ಈಶ್ವರನಿಗೂ ಕಾರಣವಿರಬೇಕೆಂದು ಹೇಳಬೇಕಾಗುವುದು. ಆದ್ದರಿಂದ ವಿಜ್ಞಾನವೇ ಆಗಲಿ ಈಶ್ವರವಾದವೇ ಆಗಲಿ ಯಾವುದೂ ಶುದ್ಧ ಬುದ್ಧಿಶಕ್ತಿಯ ಅಥವಾ ತರ್ಕದ ಸಹಾಯದಿಂದ ಜೀವ ಈಶ್ವರರ ತತ್ವವನ್ನು ತಿಳಿಯಲಾರದು. ಹೀಗೆ ನಮ್ಮ ಜ್ಞಾನವು ವೇದನೆಯಿಂದ ಹೊರಟು, ಪ್ರತ್ಯಕ್ಷವಾಗಿ ಕಲ್ಪನೆಯನ್ನು ಸೇರಿ ಭಾವನೆಯ ಮಟ್ಟಕ್ಕೆ ಬಂದು ನಿಲ್ಲುತ್ತದೆ.

ಯಾರ ಗೋಜಿಗೂ ಹೋಗದ ಈ ಬಡತಾತ್ವಿಕನು ಹುಟ್ಟಿ ಬೆಳೆದ ಊರನ್ನು ಬಿಟ್ಟವನೇ ಅಲ್ಲ. ಆದರೆ ಇವನ ಪುಸ್ತಕವು ಎಲ್ಲಾ ಜನರ ಮನಸ್ಸನ್ನೂ ಅಲ್ಲೋಲ ಕಲ್ಲೋಲ ಮಾಡಿತು. ಹ್ಯೂಮಿನ ಸಂಶಯವಾದವನ್ನು ಸಾಯಿಸಿ ವಿಜ್ಞಾನದ, ತತ್ವದ ಮತ್ತು ಮತದ ಸತ್ಯವನ್ನು ಕಾಪಾಡಲು ಹೊರಟ ಈ ಪುಸ್ತಕವು ವಸ್ತುಗಳ ಬಾಹ್ಯರೂಪವನ್ನು ಮಾತ್ರ ತಿಳಿಯಬಹುದೆಂದು ವಿಜ್ಞಾನವನ್ನು ತಡೆಗಟ್ಟಿತು ; ನಿಜ ವಸ್ತುಗಳ ಜ್ಞಾನವು ಅಸಾಧ್ಯವೆಂದು ತತ್ವಶಾಸ್ತ್ರವನ್ನು ಹೆದರಿಸಿತು ; ದೇವರನ್ನು ಸ್ಥಾಪಿಸುವ ವಾದವು ತಪ್ಪೆಂದು ಈಶ್ವರವಾದವನ್ನು ಕೊಂದಿತು. ಮತಾವಲಂಬಿಗಳು ಇದನ್ನು ಸಹಿಸಲಾರದೆ ತಮ್ಮ ನಾಯಿಗಳಿಗೆ ಕ್ಯಾಂಟ್ ಎಂದು ಹೆಸರಿಟ್ಟು ಸೇಡು ತೀರಿಸಿಕೊಳ್ಳಲು ಹೊರಟರಂತೆ !

ಕ್ಯಾಂಟನ ತತ್ವವನ್ನು ಪೂರ್ಣದೃಷ್ಟಿಯಿಂದ ನೋಡಬೇಕಾದರೆ ಅವನ ಮೂರು ಪುಸ್ತಕಗಳನ್ನೂ ಒಟ್ಟುಗೂಡಿಸಿ ವಿಮರ್ಶಿಸಬೇಕು. ಆನೆಯ ಒಂದೊಂದೇ ಅವಯವವನ್ನು ಗ್ರಹಿಸಿ ಆ ಅವಯವವೇ ಆನೆಯೆಂದುಕೊಂಡಂತೆ ಕ್ಯಾಂಟನ

ಒಂದೊಂದೇ ಪುಸ್ತಕವನ್ನು ಓದಿ ಅದೇ ಅವನ ತತ್ವವೆನ್ನುವುದು ತಪ್ಪು ದಾರಿ. ಮೊದಲನೆಯ ಪುಸ್ತಕದ ಸಿದ್ಧಾಂತವನ್ನು ಮಿಕ್ಕೆರಡು ಪುಸ್ತಕಗಳ ಸಿದ್ಧಾಂತಗಳು ಪೂರ್ಣಗೊಳಿಸುತ್ತವೆ. ಒಂದು ರೀತಿಯಲ್ಲಿ ಕ್ಯಾಂಟನ ಮೊದಲನೆಯ ಪುಸ್ತಕವು ವಿಮರ್ಶನಾತತ್ವದ ಪೂರ್ವಪಕ್ಷವೆಂದೂ, ಎರಡನೆಯ ಪುಸ್ತಕವು ಉತ್ತರಪಕ್ಷವೆಂದೂ, ಮೂರನೆಯ ಪುಸ್ತಕವು ಸಿದ್ಧಾಂತವೆಂದೂ ಹೇಳಬಹುದು.

ತನ್ನ ಎರಡನೆಯ ಪುಸ್ತಕದಲ್ಲಿ ಕ್ಯಾಂಟನು ವೃತ್ತಿಧರ್ಮದ ಮೂಲಕ ಜೀವ ಈಶ್ವರರನ್ನು ಸ್ಥಾಪಿಸಿದ್ದಾನೆ. ಬುದ್ಧಿಯೊಡನೆ ಶ್ರದ್ಧೆಯು (Faith) ಸೇರಬೇಕು. ಆಗ ಬುದ್ಧಿಶಕ್ತಿಯು ವಾದದೃಷ್ಟಿಯಿಂದ ಮಾಡಲಾರದ್ದನ್ನು ವ್ಯವಹಾರ ದೃಷ್ಟಿಯಿಂದ ಮಾಡಬಲ್ಲದು. ಮತಧರ್ಮದ ಆಧಾರವು ವಿಜ್ಞಾನದಲ್ಲಿ ಮತ್ತು ಈಶ್ವರವಾದದಲ್ಲಿ ಸಿಕ್ಕದಿದ್ದರೂ ನೀತಿಧರ್ಮದಲ್ಲಿ ಸಿಕ್ಕುತ್ತದೆ. ಸಾರ್ವತ್ರಿಕವಾದ ಆವಶ್ಯಕವಾದ ನೀತಿಧರ್ಮವು ಇಂದ್ರಿಯ ವ್ಯಾಪಾರದಿಂದಾಗಲೀ ಬುದ್ಧಿವ್ಯಾಪಾರದಿಂದಾಗಲೀ ಹುಟ್ಟುವುದಿಲ್ಲ; ಅದು ಸಾಕ್ಷಿಜ್ಞಾನದಿಂದ ಹುಟ್ಟುತ್ತದೆ. ಉದಾ: ಒಳ್ಳೆಯದನ್ನು ಮಾಡಬೇಕು, ಕೆಟ್ಟದ್ದನ್ನು ಮಾಡಕೂಡದು ಎಂಬ ಆಜ್ಞೆಯು ನಮ್ಮ ಅಂತರಾಳದಲ್ಲಿ ಪ್ರೇರಣೆಯಾಗುತ್ತದೆ. ಆದ್ದರಿಂದ ನೀತಿಧರ್ಮವು ಸ್ಪಷ್ಟವಾದ ಕಟ್ಟಾಜ್ಞೆ. ಈ ಆಜ್ಞೆಯನ್ನು ಹೊರಗಿನವರು ಹಾಕಿಲ್ಲ. ನೀತಿಯು ನಮ್ಮ ಸ್ವಭಾವದಲ್ಲಿ ಬೇರೂರಿರುವುದರಿಂದ ಈ ಆಜ್ಞೆಯನ್ನು ನಮ್ಮ ಮೇಲೆ ನಮಗೋಸ್ಕರ ನಾವೇ ಹಾಕಿಕೊಂಡಿದ್ದೇವೆ.

ಈ ಆಜ್ಞೆಯು ಒಬ್ಬರಿಗೊಂದು ಇನ್ನೊಬ್ಬರಿಗೊಂದಲ್ಲ; ಅದು ಎಲ್ಲರಿಗೂ ಅನ್ವಯಿಸುತ್ತದೆ. ಅಥವಾ, ನಾವು ಮಾಡುವ ಕೆಲಸಗಳೆಲ್ಲವೂ ಸಾರ್ವತ್ರಿಕ ನಿಯಮದಂತಿರಬೇಕು. ಉದಾ: ಒಬ್ಬನು ಸುಳ್ಳಾಡಿದರೆ ಎಲ್ಲರೂ ಸುಳ್ಳಾಡಬಹುದು; ಆಮೇಲೆ ಮಾತುಕೊಡುವುದೇ ನಿಂತುಹೋಗುವುದು; ಆದ್ದರಿಂದ ಸುಳ್ಳಾಡಕೂಡದೆಂದುಕೊಳ್ಳುತ್ತೇವೆ. ಇದೇ ರೀತಿ ನೀತಿಯ ಎಲ್ಲಾ ನಿಯಮಗಳನ್ನು ಎಲ್ಲರೂ ಅನುಸರಿಸುವುದು ಅವರ ಕರ್ತವ್ಯ. ನಿಯಮಗಳನ್ನು ಆಚರಿಸುವುದರಲ್ಲಿ ಕ್ಯಾಂಟನಿಗೆ ಬಹಳ ಕಠಿನ ಹೃದಯ; ಯಾವ ಆಚರಣೆಯನ್ನೂ ಚಾಚೂ ತಪ್ಪಕೂಡದು. ಅವನ ದಿನಚರಿಯೂ ಹಾಗೆಯೇ ಇತ್ತು: ಮಳೆಯಾಗಲಿ, ಚಳಿಯಾಗಲಿ, ಹೇಳುವುದು, ಕಾಫಿ ಕುಡಿಯುವುದು, ಬರೆಯುವುದು, ಉಪನ್ಯಾಸ ಕೊಡುವುದು, ಊಟಮಾಡುವುದು, ತಿರುಗಾಡಲು ಹೊರಡುವುದು, ಎಲ್ಲವೂ ಯಂತ್ರದಂತೆ ನಡೆದುಕೊಂಡು ಹೋಗುತ್ತಿದ್ದವು; ಕ್ಯಾಂಟನು ತಿರುಗಾಡಲು ಹೊರಟಿದ್ದನ್ನು ಕಂಡು ನೆರೆಹೊರೆಯವರು ತಮ್ಮ ಗಡಿಯಾರಗಳ ಗಂಟೆಯನ್ನು ಸರಿಮಾಡಿಕೊಳ್ಳುತ್ತಿದ್ದರಂತೆ!

ಫಲಾಪೇಕ್ಷೆಯಿಲ್ಲದೆ ನಮ್ಮ ಕರ್ತವ್ಯವನ್ನು ನಾವು ಮಾಡುವುದೇ ಸತ್ಪ್ರಯತ್ನ; ಸತ್ಪ್ರಯತ್ನಕ್ಕಿಂತ ಒಳ್ಳೆಯದು ಯಾವುದೂ ಇಲ್ಲ. ಸುಖದುಃಖಗಳ ಯೋಚನೆ

ಯಿಲ್ಲದೆ, ಪ್ರತಿಫಲವನ್ನು ಆಶಿಸದೆ, ಎಲ್ಲರ ಸುಖದುಃಖಗಳು ನಮ್ಮ ಸುಖದುಃಖಗಳೆಂದುಕೊಂಡು ಎಲ್ಲರಿಗೂ ಒಳ್ಳೆಯದನ್ನು ಮಾಡುವುದು ನಮ್ಮ ಕರ್ತವ್ಯ. ಕ್ಯಾಂಟನು ಹೇಳುವ ಕರ್ತವ್ಯನಿಷ್ಠೆಯು ಭಗವದ್ಗೀತೆಯ ಕರ್ಮಯೋಗದಲ್ಲಿ ಕೆಲವು ಭಾಗಗಳನ್ನು ನಮ್ಮ ನೆನಪಿಗೆ ತರುತ್ತದೆ. ಈ ಕರ್ತವ್ಯವು ಸಿದ್ಧಿಸಬೇಕಾದರೆ ಸಮಾಜದಲ್ಲಿ ಪ್ರತಿಯೊಬ್ಬನೂ ತನ್ನದೇ ಒಂದು ಗುರಿಯುಂಟೆಂದು ತಿಳಿದುಕೊಳ್ಳಬೇಕು, ಮತ್ತು ತಾನೇ ಆ ಗುರಿಯನ್ನು ಸಾಧಿಸಬೇಕು ; ಇನ್ನೊಬ್ಬನನ್ನು ಸಾಧನವಾಗಿಟ್ಟುಕೊಳ್ಳಕೂಡದು. ಉದಾ : ಒಂದು ಪುಸ್ತಕವನ್ನು ಬರೆಯಬೇಕೆಂದಿದ್ದರೆ ತಾನೇ ಬರೆಯಬೇಕೇ ವಿನಾ ಇನ್ನೊಬ್ಬನಿಂದ ಬರೆಸಿ ತನ್ನದೆಂದು ಹೇಳಿಕೊಳ್ಳಕೂಡದು. ಹೀಗೆ ಎಲ್ಲರಿಗೂ ಸಮಾನವಾದ ಹಕ್ಕುಬಾಧ್ಯತೆಗಳುಂಟೆಂದುಕೊಂಡು ಎಲ್ಲರೂ ಕರ್ತವ್ಯಪರರಾದರೆ ಒಂದು ಆದರ್ಶ ಸಮಾಜವೇ ಹುಟ್ಟುವುದು.

ಈ ಕರ್ತವ್ಯನಿಷ್ಠೆಯನ್ನು ನಮಗೆ ಬೋಧಿಸುವುದು ಬುದ್ಧಿಯಲ್ಲ, ಶ್ರದ್ಧೆ. ನಮ್ಮ ಗುರಿಯನ್ನು ಸಾಧಿಸಿಕೊಳ್ಳುವುದಕ್ಕೆ ನಮಗೆ ಹಕ್ಕುಂಟು, ಸ್ವಾತಂತ್ರ್ಯವುಂಟು ; ಅಥವಾ, ಶ್ರದ್ಧೆಯು ಆತ್ಮಸ್ವಾತಂತ್ರ್ಯವನ್ನು ತೋರಿಸುತ್ತದೆ. ಮತ್ತು ತಪ್ಪುಮಾಡಿದವನು ಒಂದು ಸಮಯವಲ್ಲದಿದ್ದರೆ ಇನ್ನೊಂದು ಸಮಯದಲ್ಲಿ ಸಿಕ್ಕಿಬಿದ್ದು ಶಿಕ್ಷೆಯನ್ನು ಅನುಭವಿಸುವನು ; ಹಾಗೆಯೇ, ನಾವು ಮಾಡಿದ ಕೆಲಸದ ಫಲವನ್ನು ಈಗಿಲ್ಲದಿದ್ದರೆ ಇನ್ನೊಂದು ವೇಳೆಯಾದರೂ ಅನುಭವಿಸಿಯೇ ತೀರಬೇಕು. ಅಥವಾ, ನಮ್ಮ ಜೀವನದಲ್ಲಿ ಒದಗುವ ಕಷ್ಟನಿಷ್ಠುರಗಳೂ ಸಾವುನೋವುಗಳೂ ನಾವು ಹಿಂದೆ ಮಾಡಿದ ಕೆಲಸಗಳ ಫಲ. ಆದ್ದರಿಂದ ಎಂಥ ತೊಂದರೆ ಬಂದರೂ ನಮ್ಮ ಕರ್ತವ್ಯವನ್ನು ನಾವು ಮಾಡಬೇಕು ; ಒಂದು ಜನ್ಮದಲ್ಲಿಲ್ಲದಿದ್ದರೆ ಇನ್ನೊಂದು ಜನ್ಮದಲ್ಲಿ ಅದರ ಫಲವನ್ನು ಅನುಭವಿಸುತ್ತೇವೆ. ಇದರಿಂದ ಜೀವನಿಗೆ ಅನೇಕ ಜನ್ಮಗಳಿವೆಯೆಂದು ನಂಬಲೇಬೇಕಾಗುವುದು; ಅಥವಾ, ಶ್ರದ್ಧೆಯು ಆತ್ಮನ ಅಮರತ್ವವನ್ನು ತೋರಿಸುತ್ತದೆ.

ಆತ್ಮಸ್ವಾತಂತ್ರ್ಯಕ್ಕೂ ಅಮರತ್ವಕ್ಕೂ ತಕ್ಕ ಆಧಾರವಿರಬೇಕು; ಈ ಆಧಾರವೇ ಈಶ್ವರ. ಆದರೆ ಈಶ್ವರನಿಗೆ ಕಾರಣವಿಲ್ಲ ; ಏಕೆಂದರೆ ಅವನು ಕಾರಣಕ್ಕೆ ಆಧಾರಿ. ಆದ್ದರಿಂದ ಕಾರಣವನ್ನು ಮೀರಿದವನು. ಇದನ್ನು ಸಾಧಿಸುವುದಕ್ಕೆ ಯುಕ್ತಿಗೆ ಸಾಮರ್ಥ್ಯಸಾಲದು ; ಶ್ರದ್ಧಾಭಕ್ತಿಗಳು ಬೇಕು. ನಿಜವಸ್ತುಗಳ ಹಿಂದೆ ಈಶ್ವರ ನಿದ್ದಾನೆಂದು ಬುದ್ಧಿಗೆ ಹೊಳೆಯದಿದ್ದದ್ದು ಶ್ರದ್ಧೆಗೆ ಹೊಳೆಯುತ್ತದೆ.

ಈ ಎರಡು ಪುಸ್ತಕಗಳ ಸಿದ್ಧಾಂತಗಳನ್ನು ಕ್ಯಾಂಟನು ತನ್ನ ಮೂರನೆಯ ಪುಸ್ತಕದಲ್ಲಿ ಜೋಡಿಸಿ ಜಗತ್ತಿನ ಸೌಂದರ್ಯವು ವಿಶ್ವಸಂಕಲ್ಪವನ್ನು ತಿಳಿಸುತ್ತದೆಯೆಂದು ಸ್ಥಾಪಿಸಿದ್ದಾನೆ. ಒಂದು ಅಂದವಾದ ವಸ್ತುವನ್ನು ಪರೀಕ್ಷಿಸಿದರೆ ಅದರಲ್ಲಿ ಒಂದು ನಕಾಸಿಯು (Design) ಕಂಡುಬರುತ್ತದೆ. ಆ ನಕಾಸಿಗೆ ಹೊಂದಿಕೆಯೆ (Harmony) ಹೆಗ್ಗುರುತು ; ಅಥವಾ, ಸಮಪಾಟು ಮತ್ತು ಒಗ್ಗಟ್ಟು (Symmetry

and Unity) ಇರುವ ಕಡೆಯೆಲ್ಲಾ ಹೊಂದಿಕೆಯಿದೆ, ಸೌಂದರ್ಯವಿದೆ. ಉದಾ: ಹಾಡಿನಲ್ಲಿ, ಚಿತ್ರದಲ್ಲಿ, ಕಟ್ಟಡದಲ್ಲಿ ಸೌಂದರ್ಯವಿರಬೇಕಾದರೆ ಹೊಂದಿಕೆಯಿರಬೇಕು. ಈ ಹೊಂದಿಕೆಯನ್ನೊಳಗೊಂಡ ನಕಾಸಿಯನ್ನು ಕಾಣುವುದಕ್ಕೆ ಬುದ್ಧಿಯಿರಬೇಕು ಮತ್ತು ಈ ಸೌಂದರ್ಯವನ್ನು ಅನುಭವಿಸುವುದಕ್ಕೆ ಶ್ರದ್ಧೆಯಿರಬೇಕು. ಬಿರುಕು ಗೋಡೆಯಲ್ಲಿ ಬೆಳೆದ ಹೂವಿನಂಥ ಸಣ್ಣದರಲ್ಲೂ, ಹೊತ್ತುಹುಟ್ಟಿ ಮುಳುಗುವುದರಂಥ ದೊಡ್ಡದರಲ್ಲೂ ಇರುವ ಸೊಬಗನ್ನು ಅರಿತು ಅನುಭವಿಸುವವನೇ ಮಹಾತ್ಮನು; ಅಂಥವನು ಹೊರಗಿರುವ ತಾರಾಮಂಡಲವನ್ನೂ ಒಳಗಿರುವ ಧರ್ಮವಿಧಿಯನ್ನೂ ತಿಳಿಯಬಲ್ಲನು.

ಜಗತ್ತಿನ ಸೌಂದರ್ಯವನ್ನು ಅನುಭವಿಸಿದರೆ ಆ ರಚನೆಗೆ ತಕ್ಕ ವಿಶ್ವಸಂಕಲ್ಪವಿರಬೇಕೆಂದು ನಮಗೆ ಚೆನ್ನಾಗಿ ತಿಳಿಯುತ್ತದೆ. ಈ ಸೌಂದರ್ಯ ಸಂಕಲ್ಪಗಳನ್ನು ವಿಚಾರಿಸುತ್ತ ಹೊರಟರೆ ವಿಶ್ವವು ಎಣಿಕೆಯಿಲ್ಲದ, ಹೊಂದಿಕೊಂಡಿರುವ ಭಾಗಗಳ ಜೋಡಣೆಯೆಂದು ನಮಗೆ ಬೋಧೆಯಾಗುತ್ತದೆ. ಹೀಗೆ ತನ್ನ ಮೂರು ಪುಸ್ತಕಗಳಲ್ಲಿ ವಿಶ್ವದ ಇರುವಿಕೆ, ಅರಿವಿಕೆ ಮತ್ತು ಅನುಭವಿಸುವಿಕೆಗಳನ್ನು ಕ್ಯಾಂಟನು ವಿಶದಪಡಿಸಿದ್ದಾನೆ. ಅವನ ವಾದಸರಣಿಯನ್ನು ನೋಡಿದರೆ ವಿಶ್ವವು ಸಚ್ಚಿದಾನಂದಸ್ವರೂಪವೆಂಬುದನ್ನು ತಿಳಿಸಲು ಪ್ರಯತ್ನಿಸಿದ್ದಾನೆಂದು ಹೇಳಬಹುದು.

ಇಂಥ ಮಹತ್ವವಾದ ವಿಷಯಗಳನ್ನು ನುರಿತ ಬುದ್ಧಿಯಿಂದ ಬರೆದ ಕ್ಯಾಂಟನು ತನ್ನ ಎಪ್ಪತ್ತೊಂಬತ್ತನೆಯ ವರ್ಷದಲ್ಲಿ ತೀರಿಹೋದನು ; ಆದರೆ ಅವನ ತತ್ವವು ತೀರಿಹೋಗಿಲ್ಲ. ಆ ತತ್ವವೇ ಮುಂದೆ ಹುಟ್ಟಿದ ತತ್ವಗಳಿಗೆಲ್ಲಾ ತವರುಮನೆಯಾಗಿದೆ.

—ಎಚ್. ಕೆ. ರಾಜಾರಾವ್

ಕಬ್ಬಿಣದ ಅಂಶವು ಅಧಿಕವಾಗಿರುವ ಕೆಲವು ಆಹಾರಪದಾರ್ಥಗಳು

(ಪ್ರಮಾಣ ಮಿಲಿಗ್ರಾಂಗಳಲ್ಲಿ)

	ಧಾನ್ಯಗಳು		
ಕಂಬು	೮.೮	ಅಕ್ಕಿ (ಪಾಲಿಷ್)	೨.೮
ಜೋಳ	೬.೨	ಅಕ್ಕಿ (ಕುಸುಪಲು)	೩.೨
ರಾಗಿ	೫.೪	ಗೋಧಿ	೫.೩
ಅಕ್ಕಿ (ಕೊಟ್ಟಿದ್ದು)	೩.೬		
	ಬೇಳೆಗಳು		
ಕಡಲೇ ಬೇಳೆ	೮.೯	ಬಟಾಣಿ	೪.೪
ಉದ್ದಿನ ಬೇಳೆ	೯.೮	ತೊಗರಿ ಬೇಳೆ	೮.೮
ಹೆಸರು ಬೇಳೆ	೮.೪	ಸೋಯಾ ಅವರೆ	೧೧.೩
ಹುರುಳಿ	೭.೬		
	ಎಣ್ಣೆಯ ಬೀಜಗಳು		
ಗೋಡಂಬಿ	೫.೦	ಕಡಲೇಕಾಯಿ	೧.೬
ಎಳ್ಳು	೧೦.೫		
	ತರಕಾರಿಗಳು		
ದಂಟು	೨೧.೪	ಹಾಗಲಕಾಯಿ	೯.೪
ಕೊತ್ತಂಬರಿ ಸೊಪ್ಪು	೧೦.೦	ಗೋರಿಕಾಯಿ	೫.೮
ಮೆಂತ್ಯದ ಸೊಪ್ಪು	೧೬.೯	ಟೊಮ್ಯಾಟೊ	೨.೪
ಪುದಿನಾ	೧೫.೬		
	ಮಾಂಸಾಹಾರಗಳು		
ಮೊಟ್ಟೆ	೨.೧	ಪಿತ್ತಜನಕಾಂಗ (ಕುರಿ)	೬.೩
ಮೀನು	೨.೩	ಕುರಿಯ ಮಾಂಸ	೨.೫
	ಇತರ ಆಹಾರಪದಾರ್ಥಗಳು		
ವೀಳೆಯದೆಲೆ	೫.೭	ಬೆಲ್ಲ	೧೧.೪

—"ಆಹಾರ ವಿಜ್ಞಾನ"ದಿಂದ
(ಸಂ. VIII, ಸಂ. ೨.)

ಹಿಮರಚನಾ ಶಾಸ್ತ್ರ

ಪ್ರಕೃತಿ ನೀರಿನ ಆವಶ್ಯಕತೆ ಹೆಚ್ಚು ಇರದ ಕಾಲದಲ್ಲಿ ಹೆಚ್ಚಿನ ನೀರನ್ನು ಮಂಜುಗಡ್ಡೆಯ ರೂಪದಲ್ಲಿ ಶೇಖರಿಸಿ ಅದರ ಆವಶ್ಯಕತೆ ಮೂಡಿದಾಗ ಮಂಜುಗಡ್ಡೆ ಕರಗಿ ನೀರಾಗುವಂತೆ ಮಾಡುವ ಶಕ್ತಿಯನ್ನು ಪಡೆದು—ಜಲಸಂಚಯಕ್ಕೆ ತನ್ನದೇ ಆದ ವಿಶಿಷ್ಟ ಸಾಧನವನ್ನು ಹೊಂದಿದೆ.

ಹಿಮಪ್ರವಾಹಕ್ಕೆ ಮೂಲ ''ಹೆಪ್ಪುಗಟ್ಟಿದ ಮಂಜು'' ಅಥವಾ ''ಘನ-ಹಿಮ''. ಬೇಸಗೆಯ ಕೊನೆಯಲ್ಲಿ ಹಿಮಾಲಯದ ಹಿಮಪ್ರವಾಹವು ವರಿಷ್ಠಮಟ್ಟವನ್ನು ತಲಪಿ—ಕರಗಿ—ನೀರಾಗಿ—ನದಿಯಾಗಿ-ರೈತರಿಗೆ ಹೊನ್ನಾಗಿ ಹರಿಯುತ್ತದೆ.

'' ಹಿಮರಾಶಿಯ ಚಂಡಮಾರುತಗಳು '' ಮಾನವನಿಗೆ ಒಂದು ದುಃಸ್ವಪ್ನ. ಅವುಗಳ ಪ್ರಕೋಪ ಜನ-ವಸತಿ-ಪ್ರಾಣಿಗಳನ್ನು ನುಚ್ಚುನೂರು ಮಾಡಬಲ್ಲದು. ನಾಡು-ಬೀಡುಗಳು ನಾಶವಾಗುವುವು. ೧೯೫೧ರಲ್ಲಿ ಸ್ವಿಟ್ಜರ್ಲೆಂಡಿನ ಆಲ್ಪ್ಸ್ ಪರ್ವತ ನಿವಾಸಿಗಳು ಇಂತಹ ಎರಡು ಭೀಕರ ಮಾರುತಗಳನ್ನೆದುರಿಸಬೇಕಾಯಿತು. ಮೊದಲ ಮಾರುತ(ಜನವರಿ ೧೪-೨೧)ದಲ್ಲಿ ದಿನಕ್ಕೆ ಹೊಸ ಹಿಮರಾಶಿಯ ಮೊತ್ತ ೨.೫ ಮೀಟರುಗಳಷ್ಟಾದರೆ ಎರಡನೆಯ ಮಾರುತದಲ್ಲಿ (ಫೆಬ್ರವರಿ ೬-೧೨) ಅದು ೪ ಮೀಟರುಗಳ ಮಟ್ಟವನ್ನು ತಲುಪಿತು. ಈ ಭಯಂಕರ ಹಿಮಪಾತಕ್ಕೆ ಸುಮಾರು ೯೩ ಜನ, ೫೩೦ ದನ-ಕರು, ೧,೦೦೦ ಮನೆ ಮತ್ತು ೧೨೦,೦೦೦ ಘನ-ಗಜದಷ್ಟು ವನಪ್ರದೇಶಗಳು ಆಹುತಿಯಾದುವು.

ವೈಜ್ಞಾನಿಕ ಪಥದಲ್ಲಿ ನಡೆದಿರುವ ಮಾನವ, ತನ್ನ ಅಳಿವು-ಉಳಿವುಗಳನ್ನು ನಿರ್ಧರಿಸಬಲ್ಲ ಹಿಮದ ವಾಸ್ತು ವಿಶ್ಲೇಷಣ ನಡೆಸಿ ಅದರ ವಿನಾಶಕಾರೀ ಗುಣಗಳಿಗೆ ಒಂದು ತಡೆಯನ್ನೂ, ಅದರ ಮಾನವೋಪಯೋಗಿ ಲಕ್ಷಣಗಳಿಗೆ ಪ್ರೋತ್ಸಾಹವನ್ನೂ ಅವಶ್ಯ ನೀಡಬೇಕಾಗಿದೆ.

ಪ್ರಕೃತಿ ಪರೀಕ್ಷಣೆಯ ಮೂಲಕ, ಪ್ರಯೋಗ ಹಾಗೂ ಸಿದ್ಧಾಂತಗಳ ಮೂಲಕ ಹಿಮರಚನಾ ಸಿದ್ಧಾಂತವನ್ನು ತಯಾರಿಸ ಹೊರಟಿದ್ದ ತಾಂತ್ರಿಕರಿಗೆ ಮಂಜು ಮತ್ತು ಮಣ್ಣು-ಇವುಗಳ ಗುಣಗಳಲ್ಲಿನ ಸಾಮೀಪ್ಯ-ಸಮನ್ವಯಗಳ ಅರಿವು, ಆ ಹಿಮರಚನಾಸಿದ್ಧಾಂತವನ್ನು ಮಣ್ಣಿನ ರಚನೆಗನುಗುಣವಾಗಿ ತಯಾರಿಸಲು ಎಡೆಮಾಡಿಕೊಟ್ಟಿತು.

ಮಂಜು ಹವೆಯ ಉಳಿಕೆಯಾದಲ್ಲಿ ಮಣ್ಣು ನೀರಿನ ಉಳಿಕೆ (Sediment). ಮಂಜು ಶಾಖದ ಮಟ್ಟಕ್ಕನುಗುಣವಾಗಿ ಮೂರು ಅವಸ್ಥೆಗಳಲ್ಲಿಯೂ (ಘನ-ದ್ರವ-ಅನಿಲ) ಇರಬಲ್ಲುದು. ನಮ್ಮ ಅನ್ವೇಷಣಕ್ಕೆ ಅಗತ್ಯವಾದುದು ಅದರ ಮಂಜಿನ ಅವಸ್ಥೆ ; ಅರ್ಥಾತ್ ಅದರ ಘನರೂಪ. ಘನರೂಪದಲ್ಲಿರುವ ಬೃಹತ್ತಾದ ಮಂಜು ಗಡ್ಡೆಯ ಯಾವುದಾದರೊಂದು ಪದರವು ಹವೆಯಿಂದ ಕರಗಿ ಅದರ ಘನರೂಪವನ್ನು

ಕಳೆದುಕೊಂಡರೆ, ಪದರ ಪದರಗಳ ನಡುವಿನ ಸಂಸಕ್ತಿ ಅಥವಾ ಅಣುಬಂಧನಾ ಶಕ್ತಿಯಲ್ಲಿ ವಿಲೋಪವುಂಟಾಗಿ, ಆ ಮಂಜುಗಡ್ಡೆಯು ಜರುಗಲು ತೊಡಗುತ್ತದೆ.

ಮಣ್ಣಿನ ಪರಿಶೀಲನೆ ನಡೆಸುವಾಗ-ನಯವಾದ-ನೆನೆದು ಅನುವೇಧನಗೊಂಡ (Saturated) ಮಣ್ಣಿಗೆ ಪ್ರಾಧಾನ್ಯ ಕೊಡಬೇಕಾಗುತ್ತದೆ. ಮಣ್ಣು ಅನೇಕ ಅಣುಗಳ ಸಮ್ಮಿಲನವಷ್ಟೆ? ಆ ಅಣುಗಳು ಸಹಜ ಸಂಸಕ್ತಿಯಿಂದ ಪರಸ್ಪರ ಅಂಟಿ ಕೊಂಡಿರುತ್ತವೆ. ಇಲ್ಲಿ ಯಾವುದಾದರೂ ಪದರದ ವಿಲೋಪ ಕರಗುವಿಕೆಯಿಂದ ಅಥವಾ 'ಅಂತರ್ ನಿಕ್ಸಾರಣ'ದಿಂದ (Internal Erosion) ಮಾತ್ರ ಸಾಧ್ಯ.

ಗಾತ್ರಸಂಕೋಚನ ಮಂಜು ಮತ್ತು ಮಣ್ಣುಗಳೆರಡರಲ್ಲಿಯೂ ನಡೆಯುವ ಒಂದು ಮುಖ್ಯ ಕ್ರಿಯೆ.

ಮಂಜಿನ ಗಾತ್ರಸಂಕೋಚನಕ್ಕೆ ಕಾರಣ ಅದರ ಸಹಜರೂಪಾಂತರ (Metamorphosis). ಇದರ ಮಿತಿಯು ಒತ್ತಡ(Pressure)ವನ್ನವಲಂಬಿಸಿರುತ್ತದೆ ಮತ್ತು ಪ್ರತ್ಯೇಕ ಮಂಜುಗಡ್ಡೆಯ ಗಾತ್ರಕ್ಕನುಗುಣವಾಗಿ ಬದಲಾಗುತ್ತದೆ.

ಮಂಜುಗಡ್ಡೆಯಲ್ಲಿ ಸಾಮಾನ್ಯವಾಗಿ ಸೂಕ್ಷ್ಮರಂಧ್ರಗಳಿರುತ್ತವೆ. ಈ ಸೂಕ್ಷ್ಮ ರಂಧ್ರಗಳನ್ನನುಸರಿಸಿ ಮಂಜುಗಡ್ಡೆಯನ್ನು "ಹಗುರ ಮಂಜುಗಡ್ಡೆ" "ಅಡಕ ಮಂಜುಗಡ್ಡೆ" ಎಂದು ವಿಂಗಡಿಸಲಾಗುವುದು. ('ಹಗುರ ಮಂಜುಗಡ್ಡೆ'ಯಲ್ಲಿ ಅದರ ಒಟ್ಟು ಗಾತ್ರದ ೯೦ರಷ್ಟು ಭಾಗವನ್ನು ಸೂಕ್ಷ್ಮರಂಧ್ರಗಳೇ ವ್ಯಾಪಿಸಿ ಕೊಂಡಿರುತ್ತವೆ). ಗಾತ್ರಸಂಕೋಚನವು ಸಾಮಾನ್ಯವಾಗಿ ಅಚಲಕ್ಷೇತ್ರಗಳಲ್ಲಿ (Firm Region) ನಡೆಯುತ್ತದೆ.

ಕ್ರಿಯಾತ್ಮಕವಾದ ಒತ್ತಡವನ್ನವಲಂಬಿಸಿ ಮಣ್ಣಿನಲ್ಲಿ ನಡೆಯುವ ಗಾತ್ರ ಸಂಕೋಚನ ಎರಡು ಬಗೆಯದು :

೧. ನೀರಿನಲ್ಲಿ ಅನುವೇಧನಗೊಂಡ ನುಣುಪಾದ ಮಣ್ಣಿನ ಗಾತ್ರಸಂಕೋಚನ-ಅದರಲ್ಲಿನ ನೀರಿನ ಹೊರ ಹೊಮ್ಮುವಿಕೆಯಿಂದ.

೨. ಪರಸ್ಪರ ಬಲವಾಗಿ ಒತ್ತಿಕೊಂಡಿರುವ ತರಿಮಣ್ಣಿನ ಗಾತ್ರಸಂಕೋಚನ-ಋತು ಪರಿಣಾಮದಿಂದ.

ಪರ್ವತ ಪ್ರದೇಶಗಳಲ್ಲಿ ಮೂಡುವ ಮಂಜಿನ ಸ್ಥಿರಾಸ್ಥಿರತೆಯ ಪರೀಕ್ಷಣೆ ನಡೆಸುವಾಗ ಇಳಕಲು ಮೇಲ್ಮೈಯನ್ನೂ ಪರಿಗಣಿಸಬೇಕಾಗುತ್ತದೆ. ಈ ಇಳಕಲಿನ ಅಸ್ಥಿರತೆಯೇ ಹಿಮಪಾತದ ಮೂಲಕಾರಣ. ಇಳಕಲಿನಲ್ಲಿರುವ ಹಿಮದ ಪದರಗಳು ನೆಲಸುವಾಗ (Settlement) ನಡೆಯುವ ಕುಗ್ಗುವಿಕೆಯ ಕ್ರಿಯೆಯಿಂದ ಅವುಗಳಲ್ಲಿ ಒಂದು ಬಗೆಯ ಚೇತನ ಉಂಟಾಗುತ್ತದೆ. ಈ ಚೇತನವೇ ಚಲನೆಗೆ ಮೂಲ. ಈ ಚಲನೆಯು ಇಳಕಲಿನಲ್ಲಿ ಅಧೋಮುಖವಾಗಿ ಮಾತ್ರವಲ್ಲದೆ ಅದಕ್ಕೆ ಹೊಂದಿ ಕೊಂಡಂತೆಯೇ ಸಮಾನಾಂತರವಾಗಿಯೂ ನಡೆಯುತ್ತದೆ. ಇವೆರಡು ಕ್ರಿಯೆ ಕಂಪನ ಕ್ರಿಯೆಗೆ ಮೂಲಕಾರಣವಾಗುತ್ತದೆ. ಕಂಪನ ಕ್ರಿಯೆಯೊಂದಿಗೆ ಮಂಜು

ಗಡ್ಡೆಯ ಪದರಗಳ ಜರಗುವಿಕೆಯೂ ಸಾಗುತ್ತದೆ. ಈ ಜರಗುವಿಕೆಯು ಮಂಜು ಗಡ್ಡೆಯ ಇಳಕಲನ್ನು ಮಾತ್ರವಲ್ಲದೆ ಅದರ ಗಾತ್ರವನ್ನೂ ಅವಲಂಬಿಸಿರುತ್ತದೆ.

ಮಂಜುಗಡ್ಡೆಯಲ್ಲಿ ಒತ್ತಡದ ಉತ್ಪತ್ತಿಗೆ ಮೂಲಕಾರಣ ಜಾರುತ್ತಿರುವ ಹಿಮಪದರಗಳ 'ವೇಗ' ಮತ್ತು 'ಗತಿ'ಗಳೊಳಗಿನ ವ್ಯತ್ಯಾಸವೇ ಆಗಿದೆ. ಉದಾಹರಣೆಗಾಗಿ ಇಳಕಲಿನ ಮೇಲಿರುವ ಹಿಮದ ಕಂಪನ ಕ್ರಿಯೆಯನ್ನು ಪರಿಶೀಲಿಸಿದರೆ ತುದಿಯಲ್ಲಿ ವಿಕೋಚನ ಕ್ಷೇತ್ರವೂ (Tension Zone) ತಳಭಾಗದಲ್ಲಿ ಸಂಕೋಚನ ಕ್ಷೇತ್ರವೂ (Compression Zone) ನಡುವೆ ತಾಟಸ್ಥ್ಯಕೇಂದ್ರವೂ ಕಂಡು ಬರುವುದು.

ವಿಕೋಚನ ಕ್ಷೇತ್ರದಲ್ಲಿ ವಿಕೋಚನದ ಒತ್ತಡ(Stress)ವು ಮಾತ್ರವಲ್ಲದೆ ವಿಕೋಚನ ಬಲ(Strength)ವೂ ಕಾಲದೊಂದಿಗೆ ಬದಲಾಗುತ್ತಿದೆ. ವಿಕೋಚನ ಬಲವು ತನ್ನ ಪರಿಷ್ಠ ಮಟ್ಟವನ್ನು ತಲುಪುವುದಕ್ಕೆ ಮೊದಲೇ ಮಂಜುಗಡ್ಡೆಯು ತನ್ನ ಸ್ಥಿರತೆಯನ್ನು ಕಳೆದುಕೊಂಡುಬಿಡುತ್ತದೆ, ಈ ಸ್ಥಿತಿಯಲ್ಲಿ ಕಿಂಚಿತ್ ಕಂಪನವೂ ಮಂಜುಗಡ್ಡೆಯ ತುದಿಯಲ್ಲಿ(ವಿಕೋಚನ ಕ್ಷೇತ್ರ) ಬಿರುಕುಗಳನ್ನುಂಟುಮಾಡುತ್ತದೆ. ಈ ಬಿರುಕುಗಳು ಕ್ಷಣಾರ್ಧದಲ್ಲಿ (=ಶಬ್ದವೇಗ) ಇಳಕಲಿಗೆ ಸಮಾನಾಂತರವಾಗಿ ಹಿಮದ ಕಾರ್ತನಿಕ ಬಲವನ್ನು (Shear Strength) ಎದುರಿಸುತ್ತಾ ಹಿಮಪ್ರದೇಶವೆಲ್ಲವನ್ನೂ ಆವರಿಸಿಬಿಡುವುವು. ಈ ಸಮಯದಲ್ಲಿ ಸಂಕೋಚನ ಕ್ಷೇತ್ರದಲ್ಲಿ ಸಂಕೋಚನ ಶಕ್ತಿಯು ಏರುತ್ತಾ ಹೋಗಿ ಅದರ ಪರಿಷ್ಠ ಮಟ್ಟವನ್ನು ದಾಟುವುದು. ಆಗ ಹಿಮವು ರಾಶಿಯಾಗಿ ಹರಿಯತೊಡಗುತ್ತದೆ. ಈ ಕಾರ್ಯವು ಅವಿಚ್ಛಿನ್ನವಾಗಿ ನಡೆಯುತ್ತಾ ಭೀಕರ ಹಿಮಮಾರುತಕ್ಕೆ ನಾಂದಿಯಾಗುತ್ತದೆ.

ಮಂಜುಗಡ್ಡೆಯ ಒಳಗೆ ನಡೆಯುವ ಈ ಮೇಲೆ ತಿಳಿಸಿದ ಕ್ರಿಯೆಗಳ ಸಂಕೀರ್ಣತೆಯಿಂದಾಗಿ, ಹಿಮಪಾತ ಮತ್ತು ಹಿಮಗಡ್ಡೆಗಳ ಸ್ಥಿರಾಸ್ಥಿರತೆಗಳನ್ನಭ್ಯಸಿಸುವಾಗ ಅನೇಕ ತೊಡಕುಗಳನ್ನೆದುರಿಸಬೇಕಾಗುವುದು ಖಚಿತ.

ಪವನಶಾಸ್ತ್ರದ ವಿಶೇಷ ಜ್ಞಾನವು ಹಿಮದ ರೂಪಾಂತರ ಗುಣದ ಅರಿವಿಗೆ ಅನುಕೂಲ ಮಾಡಿಕೊಡುವುದು. ಹಿಮದ ಯಾಂತ್ರಿಕ ವರ್ತನೆಯ ಪರೀಕ್ಷಣೆ ನಡೆಸುವಾಗ ಮಣ್ಣಿನೊಡನೆ ಅದಕ್ಕಿರುವ ಸಾದೃಶ್ಯವು ನೆರವಾದರೂ, ಅದರ ಉಷ್ಣಾಂಶಕ್ಕನುಗುಣವಾಗಿ ಬದಲಾಗುವ ಗುಣವನ್ನೂ ಮತ್ತು ಪ್ರಯೋಗ ಸಮಯದಲ್ಲಾಗುವ ಅದರ ಅವಿರತ ಭೌತಿಕ ಬದಲಾವಣೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುವುದು.

"ಹಿಮಮಾರುತ"ಗಳ ಮುನ್ಸೂಚನೆ ಮತ್ತು ಅದರ ಪರಿಹಾರಕ್ಕಾಗಿ ಸ್ವಿಟ್ಜರ್ಲೆಂಡಿನಲ್ಲಿ ಹಿಮರಚನಾ ಶಾಸ್ತ್ರವನ್ನು ಬಳಸುತ್ತಾರೆ. ಮಂಜಿನಿಂದ ಜನಸಂಚಾರ ಮತ್ತು ವಾಹನಸಂಚಾರಕ್ಕೆ ಆಗುವ ಅಡಚಣೆಯನ್ನು ತಪ್ಪಿಸಲು ಕೆನಡ ಮತ್ತಿತರ ಕೆಲವು ದೇಶಗಳಲ್ಲಿ ಹಿಮರಚನಾ ಶಾಸ್ತ್ರವನ್ನಭ್ಯಸಿಸುತ್ತಾರೆ.

—ಎನ್. ರಾಮಾನುಜ

ಪಾರಿಭಾಷಿಕ ಶಬ್ದಗಳು

ಅವಿಚ್ಛಿನ್ನ : Continuous
ಅಚಲಕ್ಷೇತ್ರ : Firm Region
ಅನುವೇಧನ : Saturated
ಅವಿರತ : Continuous
ಉಳಿಕೆ : Sediment
ಋತು ಪರಿಣಾಮ : Weathering Action
ಒತ್ತಡ : (*a*) Pressure (*b*) Stress
ಅಂತರ್ ನಿಕ್ಷಾರಣ : Internal Erosion
ಕಾರ್ತನಿಕ ಬಲ : Shear Strength
ಗಾತ್ರಸಂಕೋಚನ : Volume Decrease
ಜಲಸಂಚಯ : Storage of Water
ತಟಸ್ಥ : Neutral
ನೆಲಸುವಿಕೆ : Settlement
ಪವನಶಾಸ್ತ್ರ : Meteorology
ಭೌತಿಕ ಬದಲಾವಣೆ : Physical Change
ಯಾಂತ್ರಿಕ : Mechanical
ವಿಕೋಚನ : Tension (ಸೆಳೆತ)
ಸಂಕೋಚನ : Compression (ಸೆಡೆತ)
ಸೂಕ್ಷ್ಮರಂಧ್ರ : Pores
ಹಿಮಪ್ರವಾಹ : Glaciers
ಹಿಮಪಾತ : Avalanches
ಹಿಮರಚನಾ ಶಾಸ್ತ್ರ : Snow Technology

ಮಕ್ಕಳು ಅಳುವುದೇಕೆ?

ಅಳು ಜೀವನದಲ್ಲಿ ಒಂದು ಅಸ್ತ್ರವಾಗಿ ಮಾರ್ಪಡಬಹುದು, ಇಲ್ಲವೇ ದುಃಖವನ್ನು ತೋಡಿಕೊಳ್ಳುವ ಸಾಧನವಾಗಲೂಬಹುದು. ಇದರಲ್ಲಿ ಮೊದಲನೆಯದನ್ನು ಹೆಚ್ಚಾಗಿ ಮಕ್ಕಳಲ್ಲಿ ಕಾಣುತ್ತೇವೆ.

ಕಾರಣವಿಲ್ಲದೆ ಮಗು ಖಂಡಿತವಾಗಿಯೂ ಅಳುವುದಿಲ್ಲ. ಒಂದು ಮಗು ಅತ್ತರೆ ಇನ್ನೊಂದು ಅಳಲೇಬೇಕೆಂಬ ನಿಯಮವಿರದಿದ್ದರೂ, ಹೆರಿಗೆ ಆಸ್ಪತ್ರೆಗಳಲ್ಲಿ ರಾತ್ರಿಯ ವೇಳೆ ಒಂದು ಮಗು ಅಳಲು ಪ್ರಾರಂಭಿಸಿದರೆ, ಅಲ್ಲಿರುವ ಇತರ ಮಕ್ಕಳೂ ಧ್ವನಿಗೂಡಿಸುವುದನ್ನು ಕಂಡಿದ್ದೇವೆ. ಆದರೆ ಅಳು ಖಂಡಿತವಾಗಿಯೂ ಸಾಂಕ್ರಾಮಿಕವಲ್ಲ. ಮಕ್ಕಳಲ್ಲಿ ಅಳು ಆವಶ್ಯಕತೆಯ ಕುರುಹಾಗಿರುತ್ತದೆ. ಸಂತಸಕ್ಕಿಂತ ಮುಂಚಿತವಾಗಿಯೇ ಅತೃಪ್ತಿಯನ್ನು ಪ್ರಚಾರಪಡಿಸುವ ಶಕ್ತಿಯನ್ನು ಮಗು ಹೊಂದಿರುತ್ತದೆ. ಮಗು ಹುಟ್ಟಿದ ಕೂಡಲೇ ಅಳುತ್ತದೆಯೇ ಹೊರತು ನಗುವುದಿಲ್ಲ. ಹಸುಗೂಸುಗಳಲ್ಲಿ ಅತೃಪ್ತಿಯನ್ನುಂಟುಮಾಡುವ ಚೇತನಾಪ್ರದ ವಿಚಾರಗಳು ಹೆಚ್ಚಾಗಿರುವುದಿಲ್ಲ. ಹಸುಗೂಸುಗಳು ಅಳುವುದಕ್ಕೆ ಏಕಾಂತತೆ ಮತ್ತು ಅತೃಪ್ತಿಗಳೇ ಮುಖ್ಯಕಾರಣಗಳಾಗಿರುತ್ತದೆ. ಹಸಿವು ಅಸೌಖ್ಯಕ್ಕೆ ಮುಖ್ಯ ಕಾರಣವಾಗಿರುತ್ತದೆ. ಸ್ವಾಭಿಲಾಷೆಯ ಆಹಾರ ಸೇವನೆಯಲ್ಲಿರುವ ಮಕ್ಕಳ ಅಳು ಸಾಕಷ್ಟು ಆಹಾರವನ್ನು ಕೊಟ್ಟ ತಕ್ಷಣ ನಿಲ್ಲುತ್ತದೆ. ಹುಟ್ಟಿದ ಹೊಸದರಲ್ಲಿ ಒಂದೊಂದು ಮಗುವಿನ ಅಳು ಒಂದೊಂದು ತರಹ ಇರುತ್ತದೆ. ಕೆಲವು ಮಕ್ಕಳು ಹೆಚ್ಚಾಗಿ ಅಳುತ್ತವೆ. ಅದರಲ್ಲೂ ಕೆಲವು ಆಹಾರವನ್ನು ಕೊಡುವುದರಲ್ಲಿ ತಡವಾದರೆ ಅಸಾಧ್ಯ ಅಳುತ್ತವೆ. ಆದರೆ ಇನ್ನೂ ಕೆಲವು ಹಸಿವನ್ನೂ ಸಹ ಸಹಿಸಿಕೊಂಡು ಸುಮ್ಮನಿರುತ್ತವೆ. ಕಾಲ ನಿಯಮದ ಪ್ರಕಾರ ಆಹಾರವನ್ನು ಸೇವಿಸುವ ಮಕ್ಕಳಲ್ಲಿ ಕೆಲವು ಆ ಕಾಲದ ಗೊತ್ತುವಳಿಗೆ ಹೊಂದಿಕೊಂಡಿರುತ್ತವೆ. ಬಹುಶಃ ಅವುಗಳಿಗೆ ಆ ಕಾಲದಲ್ಲಿ ಮಾತ್ರ ಹಸಿವಾಗಬಹುದೆಂದು ಕಾಣುತ್ತದೆ. ಇನ್ನೂ ಕೆಲವು ಕಾಲಗತಿಯನ್ನು ಮುಟ್ಟದ ಮುಂಚೆಯೇ ಹಸಿವಿನಿಂದ ಅಳುತ್ತಿರುತ್ತವೆ. ಮಕ್ಕಳು ಹಸಿವಿನಿಂದ ರಾತ್ರಿಯ ವೇಳೆಯಲ್ಲಿಯೂ ಅಳುತ್ತವೆ. ಆಗಲೂ ಹಾಲನ್ನು ಕೊಡಬೇಕು. ಹೀಗೆ ಹಾಲು ಕೊಡುವುದರಿಂದ ಮಕ್ಕಳು ದುರಭ್ಯಾಸಕ್ಕೆ ತುತ್ತಾಗುತ್ತಾರೆಂದು ಕೆಲವರು ಭಾವಿಸುತ್ತಾರೆ. ಆದರೆ ಈ ಭಾವನೆ ಅನುಚಿತವೆಂದು ಬೇರೆ ಹೇಳಬೇಕಾಗಿಲ್ಲ. ಈ ತರಹೆಯ ತಪ್ಪು ನಂಬಿಕೆಗೆ ಬಲಿಯಾಗಿ ಮಕ್ಕಳಿಗೆ ರಾತ್ರಿಯ ವೇಳೆ ಹಾಲನ್ನು ಕೊಡದೆಹೋದಲ್ಲಿ ಮಕ್ಕಳು ಅಳದೆಯಿರಲಾರವು.

ಎದೆಯ ಹಾಲನ್ನು ಹೀರುವಾಗ ಕೆಲವು ಮಕ್ಕಳು ಹೆಚ್ಚಿಗೆ ಕಾಲವನ್ನೂ, ಕೆಲವು ಕಡಿಮೆ ಕಾಲವನ್ನೂ ತೆಗೆದುಕೊಳ್ಳುತ್ತವೆ. ಇದು ಬಹುಶಃ ತಾಯಿಯ ಎದೆಯ ಹಾಲಿನ ಪ್ರವಹಿಸುವಿಕೆಯನ್ನು ಅವಲಂಬಿಸಿರುತ್ತದೆ. ಆದುದರಿಂದ ಈ

ವಿಚಾರವನ್ನು ಪರಿಶೀಲಿಸದೆ ಮೊಲೆಯನ್ನು ಕುಡಿಯಲಿಕ್ಕೆ ಕಾಲದ ನಿಗದಿಮಾಡುವುದು ತಪ್ಪಾಗುತ್ತದೆ. ಎದೆಯ ಹಾಲನ್ನು ಕುಡಿಯುವ ಮಕ್ಕಳಿಗೆ ಹಾಲು ಕುಡಿಯಲು ಸಾಕಷ್ಟು ಕಾಲವನ್ನು ಕೊಡದೆ ಹೋದಲ್ಲಿ ಅರೆಹಸಿವಿನಿಂದ ಅಳುತ್ತವೆ. ಹಸಿವು ಬಾಯಾರಿಕೆಗಳನ್ನು ಅಡಗಿಸಿಕೊಳ್ಳಲು ಮತ್ತು ಸಾಮಾನ್ಯವಾದ ತೂಕವನ್ನು ಹೆಚ್ಚಿಸಿಕೊಳ್ಳಲು ಕೆಲವು ಮಕ್ಕಳಿಗೆ ಇತರರಿಗಿಂತ ಹೆಚ್ಚಿಗೆ ಹಾಲು ಬೇಕಾಗುತ್ತದೆ. ಇಂತಹ ಮಕ್ಕಳಿಗೆ ಇತರ ಮಕ್ಕಳಿಗೆ ಕೊಡುವಷ್ಟೇ ಹಾಲನ್ನು ಕೊಟ್ಟರೆ ಸಾಕಾಗದೆ ಅಳುತ್ತವೆ. ಕಾಲ ಮತ್ತು ಪರಿಮಿತಿಯ ಗೊತ್ತುವಳಿಯಿಂದ ಮಕ್ಕಳ ಪೋಷಣೆ ಮಾಡಕೂಡದು.

ಕೆಲವು ಮಕ್ಕಳು ಮುಂಗೋಪಿಗಳಾಗಿರುತ್ತವೆ. ಎದೆಗೆ ಹಾಕಿಕೊಂಡ ತಕ್ಷಣ ತುಂಬಾ ಅಳುತ್ತವೆ, ಇಲ್ಲವೇ ಒಂದು ನಿಮಿಷ ಹಾಲನ್ನು ಕುಡಿದು ಪುನಃ ಅಳುತ್ತವೆ. ಇನ್ನೂ ಕೆಲವು ಒಂದು ಮೊಲೆಯಿಂದ ಇನ್ನೊಂದು ಮೊಲೆಗೆ ಬದಲಾಯಿಸುವುದರೊಳಗಾಗಿ ಅರಚುತ್ತವೆ. ಆದರೆ ಶಾಂತಸ್ವಭಾವದ ಮಕ್ಕಳು ಈ ರೀತಿ ರಗಳೆಯನ್ನು ಮಾಡುವುದಿಲ್ಲ.

ಹಸುಗೂಸುಗಳಲ್ಲಿ ಅಸ್ವಸ್ಥತೆಯನ್ನುಂಟುಮಾಡುವ ಕಾರಣಗಳಲ್ಲಿ ಹೊಟ್ಟೆ ಉಬ್ಬರವೂ ಒಂದು. ಹುಟ್ಟಿದ ಮೂರು ತಿಂಗಳುಗಳವರೆಗೆ ಮಕ್ಕಳ ಅಳುವಿಗೆ ಹೊಟ್ಟೆಯನೋವು ಕಾರಣವಾಗಿರುತ್ತದೆ. ಈ ನೋವು ಸಾಮಾನ್ಯವಾಗಿ ನಿಯಮವಿರದಿದ್ದರೂ ಸಂಜೆಯ ವೇಳೆಗೆ ಬರುತ್ತದೆ. ಈ ನೋವು ಕೆಲವು ವೇಳೆ ತಾಯಿಯ ಹಾಲಿನಲ್ಲಿರುವ ಸೆನ್ನಗಳಂತಹ ಕೆಲವು ವಿಶೇಷಾಂಶಗಳಿಂದ ಬರುತ್ತದೆ.

ಬಟ್ಟೆಗಳನ್ನು ಹೆಚ್ಚಾಗಿ ತೊಡಿಸಿದರೆ, ಚಳಿ ಅಥವಾ ಶಖೆ ಹೆಚ್ಚಾದರೆ, ಒದ್ದೆಯಾದ ಇಲ್ಲವೇ ಹೊಲಸಾದ ಕಾಚವಿದ್ದರೆ, ಅಹಿತಕರವಾದ ವಾಸನೆ ಅಥವಾ ರುಚಿ, ಕಡಿತದ ಬೊಕ್ಕೆಗಳು, ಇವೇ ಮೊದಲಾದುವು ಮಕ್ಕಳಲ್ಲಿ ಅಳುವುದಕ್ಕೆ ಇತರ ಕಾರಣಗಳು.

ಆಕಸ್ಮಿಕವಾಗಿ ಹೆಚ್ಚಿನ ಗಲಾಟೆಯಾದಾಗ, ಪ್ರಕಾಶಮಾನವಾದ ಬೆಳಕು ಮುಖದ ಮೇಲೆ ಹರಿದಾಗ, ರಾತ್ರಿಯ ವೇಳೆ, ದೀಪವನ್ನಾರಿಸಿದಾಗ ಕೆಲವು ಮಕ್ಕಳು ಅಳುತ್ತವೆ.

ಏಕಾಂತತೆಯು ಮಕ್ಕಳು ಅಳುವುದಕ್ಕೆ ಒಂದು ಕಾರಣವಾಗಿರುತ್ತದೆ. ಅಂತಹ ವೇಳೆಯಲ್ಲಿ ಮಗುವನ್ನೆತ್ತಿಕೊಂಡಕೂಡಲೇ ಅಳು ನಿಲ್ಲುತ್ತದೆ. ಆದರೆ ಆ ಅಳು ಹಸಿವಿನಿಂದಾಗಿದ್ದರೆ ಕೇವಲ ಎತ್ತಿಕೊಳ್ಳುವುದರಿಂದ ನಿಲ್ಲುವುದಿಲ್ಲ. ಅನಾಹುತಕ್ಕೀಡಾಗಬಹುದೆಂಬ ಭಯ ಮಕ್ಕಳು ಏಕಾಂತವಾಗಿದ್ದಾಗ ಉದ್ಭವಿಸಬಹುದು. ಹೀಗೆ ಏಕಾಂತತೆಯಲ್ಲಿ ಚಿತ್ತಚಂಚಲವಾದಾಗ ಅಳುವುದನ್ನು ತಾಯಂದಿರು ತಪ್ಪು ತಿಳಿದು ಹೆಚ್ಚು ಹೆಚ್ಚಾಗಿ ಹಾಲನ್ನು ಅನಾವಶ್ಯಕವಾಗಿ ಕುಡಿಸುತ್ತಾರೆ. ಇದು ಸ್ವಾಭಿಲಾಷೆಯುಳ್ಳ ಮಕ್ಕಳಲ್ಲಿ ಹೆಚ್ಚಾಗಿ ಕಾಣಬರುತ್ತದೆ.

ಮಕ್ಕಳ ದೇಹಸ್ಥಿತಿ ಶೀಘ್ರವಾಗಿ ಬದಲಾಯಿಸಿದಾಗ ಅಳುತ್ತವೆ. ಬಟ್ಟೆಗಳನ್ನು ಬದಲಿಸುವಾಗ, ನಿದ್ದೆಬಂದಾಗ, ಮಕ್ಕಳು ಅಳುತ್ತವೆ. ಕೆಲವು ಮಕ್ಕಳು ಸ್ನಾನ ಮಾಡಿಸುವಾಗ ಅತ್ತರೆ, ಕೆಲವು ಸಂತೋಷಪಡುತ್ತವೆ. ಇದು ಬಹುಶಃ ನೀರಿನ ಉಷ್ಣತೆಯನ್ನು ಹೊಂದಿಕೊಂಡಿರುತ್ತದೆ. ಕೈಕಾಲುಗಳನ್ನು ಅಲುಗಾಡದಂತೆ ಹಿಡಿದುಕೊಂಡರೆ ಮಕ್ಕಳು ಅಳುತ್ತವೆ. ಬಿಗಿಯಾದ ಬಟ್ಟೆಗಳನ್ನು ಹಾಕಿದಾಗ ಮಕ್ಕಳು ಅಳುವುದಕ್ಕೆ ಇದೇ ಕಾರಣವಿರಬಹುದು.

ವಯಸ್ಸಾದಂತೆ ಮಕ್ಕಳಲ್ಲಿ ಅಳುವುದಕ್ಕೆ ಪ್ರಚೋದಕಾಂಶಗಳು ಹೆಚ್ಚಾದರೂ ಅಳುವುದು ಕಡಿಮೆಯಾಗುತ್ತದೆ. ಮಗು ಆರು ತಿಂಗಳುಗಳಾದ ನಂತರ ಹಸಿವು ಬಾಯಾರಿಕೆಗಳನ್ನು ಒಂದು ತಿಂಗಳ ಮಗುವಿಗಿಂತ ಹೆಚ್ಚುಕಾಲ ಸಹಿಸಬಲ್ಲದು. ಆರು ತಿಂಗಳುಗಳಾದ ನಂತರ ಸಾಮಾನ್ಯವಾಗಿ ಬಟ್ಟೆ ಒದ್ದೆಯಾಗುವಿಕೆ, ಹಸಿವು, ಬಾಯಾರಿಕೆ, ಶಕ್ತಿಹೀನತೆ, ಬಳಲಿಕೆ, ಹಲ್ಲುಬರುವಿಕೆ, ಇತ್ಯಾದಿಗಳು ಮಕ್ಕಳು ಅಳುವುದಕ್ಕೆ ಕಾರಣಗಳಾಗಿರುತ್ತವೆ. ಕೆಲವು ಮಕ್ಕಳು ಮೂತ್ರ ವಿಸರ್ಜನೆ ಮಾಡುವಾಗಲೂ ಅಳುತ್ತಿರುತ್ತವೆ. ಹೆದರಿಕೆ ಮಕ್ಕಳಲ್ಲಿ ಅಳುವನ್ನುಂಟುಮಾಡುತ್ತದೆ. ಹೊಸಬರ ಮುಖದರ್ಶನದಿಂದ ಅದರಲ್ಲೂ ಅವರೇನಾದರೂ ಮಗುವನ್ನು ಮಾತನಾಡಿಸಲು ಪ್ರಯತ್ನಿಸಿದರೆ ಅಳುತ್ತವೆ. ಹಾಸಿಗೆಯಲ್ಲಾಗಲೀ ಇಲ್ಲವೇ ತೊಟ್ಟಲಿನಲ್ಲಾಗಲೀ ಕಷ್ಟಕ್ಕೆ ಸಿಲುಕಿದಾಗ ಮಗು ಅಳುತ್ತದೆ. ತೊಟ್ಟಲಿನಲ್ಲಿ ಕಾಲು ಸಿಕ್ಕಿಕೊಂಡಾಗ, ಇರುವೆ ಕಚ್ಚಿದಾಗ, ತಿಗಣೆ ರಕ್ತ ಹೀರುವಾಗ, ಸೊಳ್ಳೆ ಕಚ್ಚಿದಾಗ ಹಾಗೂ ಮಲಗುವ ಕೋಣೆಯನ್ನು ಬದಲಿಸಿದಾಗ ಮಗು ಅಳುತ್ತದೆ.

ಮಗು ಒಂಬತ್ತು ತಿಂಗಳುಗಳನ್ನು ದಾಟಿದನಂತರ, ತನ್ನ ತಾಯಿಯು ಇತರ ಮಕ್ಕಳನ್ನು ಎತ್ತಿಕೊಂಡು ಮುದ್ದಾಡಿದರೆ ಅಸೂಯೆಯಿಂದ ಅಳುತ್ತದೆ. ಆದರೂ, ತನ್ನ ಸಹೋದರಿ ಇಲ್ಲವೇ ಸಹೋದರ ಬಿದ್ದಾಗ ಇಲ್ಲವೇ ಯಾರಾದರೂ ಅವರನ್ನು ಥಳಿಸಿದಾಗ ಅದು ಅಳುತ್ತದೆ. ಮಗುವಿನ ಬೆಳೆಯುತ್ತಿರುವ ಶಕ್ತಿಯನ್ನು ಹತ್ತಿಕ್ಕಲು ಪ್ರಯತ್ನಿಸಿದಾಗ, ಸ್ವಾತಂತ್ರ್ಯಾಪೇಕ್ಷೆಯುಳ್ಳ ಮಗುವಿಗೆ ಸ್ವಾತಂತ್ರ್ಯವನ್ನು ಕೊಡದಾಗ ಅದು ಅಳುತ್ತದೆ. ಮಗುವು ಕುಳಿತುಕೊಳ್ಳಲು ಇಚ್ಛಿಸಿದಾಗ ಅವಕಾಶವನ್ನು ಕೊಡದಿದ್ದರೆ, ಹೊರಗಡೆ ಆಡಲು ಆಶಿಸಿದಾಗ ತೊಟ್ಟಲಿನಲ್ಲಿ ಮಲಗಿಸಲು ಪ್ರಯತ್ನಿಸಿದರೆ, ವಸ್ತುಗಳನ್ನು ಹಿಡಿಯುವ ಶಕ್ತಿಬಂದಾಗ, ಅವಕಾಶವನ್ನು ಕೊಡದಿದ್ದರೆ ಮಗುವು ಅಳುತ್ತದೆ. ಆಟದ ಸಾಮಾನುಗಳನ್ನು ಕೊಡದೆ ಮಗುವೊಂದನ್ನೇ ಬಹಳ ಹೊತ್ತಿನವರೆಗೆ ಬಿಟ್ಟಾಗ ಬೇಸರಿಕೆಯಿಂದ ಅಳುತ್ತದೆ. ಮಗುವು ಯಾವುದಾದರೊಂದು ವಸ್ತುವಿನಿಂದ ಆನಂದವನ್ನನುಸರಿಸುತ್ತಿರುವಾಗ ಅದನ್ನು ತಪ್ಪಿಸಿದರೆ ಅಳುತ್ತದೆ. ತಾಯಿಯ ತೋಳಿನಿಂದ ಕಿತ್ತುಕೊಂಡಾಗ, ಬಿಸಿನೀರಿನ ಸ್ನಾನದ ಬಾನೆಯಿಂದ ಹೊರತೆಗೆದಾಗ, ತಾಯಿಯು ಮಗುವಿನ ಸಂಗಡ ಆಡುತ್ತಿದ್ದ ಆಟವನ್ನು ನಿಲ್ಲಿಸಿದಾಗ, ಇಲ್ಲವೇ ಎತ್ತಿಕೊಂಡಿದ್ದ ಮಗುವನ್ನು ಮಲಗಿಸಿದಾಗ ಅಳುತ್ತದೆ. ಮಗುವಿಗೆ

ಬೇಕಾದ ವಸ್ತುವನ್ನು ಅವನಿಂದ ಕಿತ್ತುಕೊಂಡಾಗ, ಅಥವಾ ಬೇಕಾದ ವಸ್ತು ಕೈಗೆ ಸಿಗದಾಗ ಅಳುತ್ತದೆ. ಅಹಂ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ಏನಾದರೂ ಅಡ್ಡಿಯಾದಲ್ಲಿ ಮಗು ಅಳುತ್ತದೆ. ಐದಾರು ತಿಂಗಳಾದನಂತರ ಮಗು ಅಭಿರುಚಿಯನ್ನೂ ಮತ್ತು ದ್ವೇಷವನ್ನೂ ವ್ಯಕ್ತಪಡಿಸುವ ಚೈತನ್ಯವನ್ನು ಹೊಂದಿರುತ್ತದೆ. ಮಗುವಿಗೆ ಬೇಡವಾದ ಆಹಾರವನ್ನು ಒತ್ತಾಯದಿಂದ ತಿನ್ನಿಸುವಾಗ್ಗೆ, ಬೇಡವಾದ ಹೊಸಪಾತ್ರೆಯನ್ನು ಪಯೋಗಿಸಿದಾಗ, ಪ್ರತಿದಿನವೂ ಉಪಯೋಗಿಸುವ ಪಾತ್ರೆಯನ್ನು ಬಿಟ್ಟು. ಬೇರೆ ಪಾತ್ರೆಯನ್ನು ಊಟಮಾಡಿಸಲುಪಯೋಗಿಸಿದರೆ ಅಳುತ್ತದೆ. ಸ್ವಾತಂತ್ರ್ಯಮತಿ ಮಕ್ಕಳನ್ನು ಅವರ ಪಾಡಿಗೆ ಅವರನ್ನು ಬಿಡದೆ, ತಾಯಿಯಾಗಲೀ, ಇನ್ನಾರಾದರಾಗಲೀ ಊಟಮಾಡಿಸಲು ಹೋದರೆ ಅಳುತ್ತವೆ. ಈ ವಯಸ್ಸಿನಲ್ಲಿ ಸೌಖ್ಯ, ಪ್ರೀತಿ ಮತ್ತು ಭದ್ರತೆ ಮಕ್ಕಳ ಮೂಲಭೂತ ಅಗತ್ಯಗಳಾಗಿರುತ್ತವೆ. ಇವುಗಳನ್ನು ಮಗುವು ಕಾಣದಿದ್ದರೆ ಅಳುತ್ತದೆ. ಹೊಸದಾಗಿ ಕಲಿತ ಕೌಶಲ್ಯ ಪ್ರದರ್ಶನಕ್ಕೆ ಅವಕಾಶ ಸಿಗದಾಗ ಮಗು ಅಳುತ್ತದೆ.

ಒಂದು ವರ್ಷದನಂತರ ಮಗುವಿನ ಅಹಂ ಮತ್ತು ಕೌಶಲ್ಯಪ್ರದರ್ಶನಕ್ಕೆ ಅಡಚಣೆಯುಂಟಾದಾಗ ಮಾತ್ರ ಅಳುತ್ತದೆ. ತನ್ನ ಆಟದಲ್ಲಿ ಯಾರಾದರೂ ಪ್ರವೇಶಿಸಿದರಾಗಲೀ, ತನ್ನ ಆಟಕ್ಕೆ ಬೇಕಾದ ಸಾಮಾನು ಇತರ ಮಕ್ಕಳ ಕೈಲಿರುವುದನ್ನು ಕಂಡರಾಗಲೀ ಅಳುತ್ತದೆ. ಅಪಾಯಕಾರಕ ಕೃತ್ಯಗಳಲ್ಲಿ ಭಾಗಿಯಾಗುವುದನ್ನು ತಂದೆತಾಯಿಗಳು ತಪ್ಪಿಸಿದರೆ ಅಳುತ್ತದೆ. ಸಣ್ಣ ಪೆಟ್ಟುಗಳನ್ನು ತಿಂದಾಗ ಇತರರ ಗಮನವನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳುವುದಕ್ಕೆ ಮಾತ್ರ ಮಗು ಅಳುತ್ತದೆ.

ಮಗುವಿಗೆ ಅತ್ಯಾವಶ್ಯಕವಾದ ಪ್ರೀತಿ ಮತ್ತು ಭದ್ರತೆಗೆ ಕೊರತೆಯುಂಟಾದಾಗ ಅಳುತ್ತದೆ. ಬಹುಶಃ ತನ್ನ ತಾಯಿಯಿಂದ ಬೇರೆಯಾದೆನೆಂಬ ಭಯದಿಂದ ಮಗು ಕತ್ತಲೆಯಾದಾಗ ಅಳುತ್ತದೆ. ಮಗುವನ್ನು ಒಂಟಿಯಾಗಿ ಬಿಟ್ಟಾಗ, ಇಲ್ಲವೇ ನಡೆಯುತ್ತಿರುವಾಗ ಹಿಂದಕ್ಕೆ ಬಿಟ್ಟರೆ ಅಳುತ್ತದೆ.

ಮಗುವಿಗೆ ಒಂದೂವರೆ ವರ್ಷಗಳಾದ ನಂತರ ಅನೇಕ ತರಹೆಯ ಹೆದರಿಕೆಗಳುಂಟಾಗುತ್ತವೆ. ಅಲ್ಲದೆ ಭದ್ರತೆಗಾಗಿ ತನ್ನ ತಾಯಿಯ ಸನಿಹವನ್ನು ಬಯಸುತ್ತದೆ. ಮನೆಯ ಹೊರಗಡೆ ಗಾಳಿ ಮತ್ತು ಮಳೆಗೆ ಸಿಕ್ಕಾಗ ಮಗು ಅಳುತ್ತದೆ. ಹಲ್ಲು ಬರುವ ವೇದನೆಯಿಂದ, ಮೈಯಲ್ಲಿ ಹುಷಾರಿಲ್ಲದಿದ್ದರೆ ಮಗು ಅಳುತ್ತದೆ.

ಮಗುವಿನ ಸಂಪೂರ್ಣಾಧಿಕಾರತ್ವ ಅಥವಾ ಪ್ರಭಾವಪೂರ್ಣತೆಗಳಲ್ಲಿ ತಲೆಹಾಕಿದಾಗ ಅಳುತ್ತದೆ. ಮಗುವು ಸಿದ್ಧವಾಗದಮುನ್ನ ಅದನ್ನು ಪಳಗಿಸಲು ಹೋದರೆ ಅಳುತ್ತದೆ.

ಯಾವುದೇ ಕಾರಣವಿರಲಿ, ಯಾವಾಗ ಮಗುವು ಅತಿಯಾಗಿ ಅಳುತ್ತದೆಯೋ, ಆಗ ಮೂಲದೋಷ ಮಗುವಿನ ಕಾರ್ಯನಿರ್ವಹಣೆಯಲ್ಲಿರುತ್ತದೆ.

ತಿಳಿವಳಿಕೆಯುಳ್ಳ ತಾಯಂದಿರು ಮಗುವು ಹಸಿವಾದಾಗ ಅಳುವುದನ್ನೂ,

ನಿದ್ದೆಬಂದಾಗ ಅಳುವುದನ್ನೂ, ಕಷ್ಟಕ್ಕೆ ಸಿಲುಕಿದಾಗ ಅಳುವುದನ್ನೂ, ರೋಗಗ್ರಸ್ತ ಮಗುವಿನ ಅಳುವನ್ನೂ ಗುರುತಿಸಬಲ್ಲ ಚೈತನ್ಯವನ್ನು ಹೊಂದಿರುತ್ತಾರೆ ಅಂತಹ ವರಿಗೆ ಮಗುವಿನ ಕಾರ್ಯನಿರ್ವಹಣೆ ಕಷ್ಟವಾಗುವುದಿಲ್ಲ.

ಡಾ॥ ಎ. ನಾರಾಯಣಪ್ಪ

ಗ್ರಂಥಋಣ

1 A Text Book of PEDIATRICS, NELSON 1959
2 Hand Book of PEDIATRICS, Three Authors 1959
3 Normal Child, Illingworth 1957
4 Child Health and Development, Edited by RICHARD 1956
5 Diseases of CHILDREN, Hutchison 1948
6 Child Health Prentitioner series 1947

ಎಳನೀರಿನ ಮಹತ್ವ

ಎಳನೀರು ಒಂದು ಉತ್ತಮ ಪಾನೀಯ. ಇದರಲ್ಲಿ ದೇಹಪೋಷಣೆಗೆ ನೆರವಾಗುವ ಕೆಳಕಂಡ ಪೋಷಕಾಂಶಗಳು ಇರುತ್ತವೆ.

ನೀರು	೯೫. ೫%	ಕಬ್ಬಿಣ	೦. ೫ ಮಿಲಿಗ್ರಾಂ
ಸಸಾರಜನಕಾಂಶ	೦. ೧%		೧೦೦ ಘ. ಸೆ.
ಮೇದಸ್ಸು	೦. ೧%	ನಿಕೋಟಿನಿಕಾಮ್ಲ	೦. ೬೪%
ಖನಿಜಾಂಶಗಳು	೦. ೪%	ಪ್ಯಾಂಟೋಥೆನಿಕ್ ಆಮ್ಲ	೦. ೪೧%
ಶರ್ಕರಪಿಷ್ಟಾದಿಗಳು	೦. ೫%	ಬಯೋಟಿನ್	೦. ೦೨%
ಸುಣ್ಣದ ಅಂಶ....	೦.೦೨%	ರೈಬೋಫ್ಲೋವಿನ್	೦. ೦೧%
ರಂಜಕಾಂಶ	೦.೦೧%	ಫೋಲಿಕಾಮ್ಲ	೦.೦೦೩ ಮೈಕ್ರೊಗ್ರಾಂ ೧೦೦ಘ. ಸೆಂ.
		ವಿಟಮಿನ್ "ಸಿ"	೨.೨-೩.೭ ಮಿಲಿಗ್ರಾಂ "

ಥಯಮಿನ್ ಮತ್ತು ಪಿರಿಡಾಕ್ಸಿನ್ ಎಂಬ "ಬಿ"ವರ್ಗದ ವಿಟಮಿನ್ನುಗಳು ಅತ್ಯಲ್ಪ ಪ್ರಮಾಣದಲ್ಲಿರುತ್ತವೆ.

—"ಆಹಾರ ವಿಜ್ಞಾನ"ದಿಂದ
(ಸಂ. VIII, ಸಂ. ೧)

ವಿಶಿಷ್ಟ ಸೃಷ್ಟಿಯಿಂದ ಪರಿವರ್ತನವಾದದ ಕಡೆಗೆ*

ವಿಚಾರಶೀಲರೆಲ್ಲರೂ ಒಪ್ಪಲೇಬೇಕಾದ ರೀತಿಯಲ್ಲಿ ಜೀವವಿಕಾಸ(Organic evolution)ದ ಕಲ್ಪನೆಯನ್ನು ಅವರ ಗಮನಕ್ಕೆ ತಂದು ನೂರನಾಲ್ಕು ವರ್ಷಗಳು ಮಾತ್ರ ಸಂದಿವೆ. ವಿವಿಧ ಬಗೆಯ ಸಸ್ಯಗಳು ಮತ್ತು ಪ್ರಾಣಿಗಳು ಈಗ ಇರುವಂತೆ ಇರುವುದಕ್ಕೆ ಅವು ಆ ರೀತಿ ಪರಿವರ್ತಿತವಾಗಿರುವುದೇ ಕಾರಣವೆಂದೂ, ಅಪರಿವರ್ತನೀಯತೆಯಲ್ಲ, ಬದಲಾವಣೆಯೇ ಜೀವಿಗಳಲ್ಲಿ ನಿಯಮವೆಂದೂ, ತೋರಿಸಿಕೊಟ್ಟುದು ಮಾನವ ಜ್ಞಾನಭಂಡಾರಕ್ಕೆ ಮಾಡಿದ ಅತಿ ಮುಖ್ಯ ಕೊಡುಗೆಗಳಲ್ಲೊಂದು. ಇದರ ಪ್ರಭಾವವು ಮಾನವ ವಿಚಾರದ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತದೆ.

ತಮ್ಮತಮ್ಮಲ್ಲಿಯೇ ಪ್ರಸವಿಸಿ(breed)ಕೊಳ್ಳಬಲ್ಲ ವ್ಯಕ್ತಿಗಳ ಸಮೂಹವು ಒಂದು ಜೀವಜಾತಿ (species) ಎಂದು ಹದಿನೇಳನೆ ಶತಮಾನದ ಅಂತ್ಯದಲ್ಲಿ ಜಾನ್ ರೇಯು ವ್ಯಾಖ್ಯಾನಿಸಿದಾಗಲೇ ಸಸ್ಯ ಮತ್ತು ಪ್ರಾಣಿಗಳು ಅನೇಕ ಸ್ವಾಭಾವಿಕ ಜಾತಿಗಳನ್ನೊಳಗೊಂಡಿದೆಯೆಂಬುದು ಸ್ಪಷ್ಟವಾಗಿದ್ದಿತ್ತು. ಆದರೆ ಇಂಥ ಪ್ರತಿ ಜಾತಿಯೂ ವಿಶಿಷ್ಟ ಸೃಷ್ಟಿ(Special creation)ಯ ಫಲಿತಾಂಶವೆಂದು ಸಾಮಾನ್ಯವಾಗಿ ಅಂಗೀಕೃತವಾಗಿದ್ದುದರಿಂದ ಇದಕ್ಕೂ ಮುಂದಿನ ವಿಚಾರಕ್ಕೆ ಪ್ರೇರೇಪಣೆಯೇ ಇದ್ದಿಲ್ಲ.

ಜಾತಿಗಳ ಅಪರಿವರ್ತನೀಯತೆ(Immutability)ಯ ಬಗ್ಗೆ ಅನುಮಾನಗಳು ಬರಲು ಹದಿನೆಂಟನೆಯ ಶತಮಾನದಲ್ಲಿ ಆರಂಭವಾಯಿತು. ಸಿದ್ಧಾಂತಿಕವಾಗಿ ವಾದಮಾಡುವ ಕೆಲವು ದಾರ್ಶನಿಕರಿಗೂ, ಸಾಗುವಳಿ ಸಸ್ಯಗಳಲ್ಲಿ ಮತ್ತು ಪಾಲಿತ (Domesticated) ಪ್ರಾಣಿಗಳಲ್ಲಿ, ಒಂದೇ ಜಾತಿಯ ವಿವಿಧೀಕೃತ ಉತ್ಪನ್ನಗಳೆಂದು ಪರಿಗಣಿತವಾಗಿದ್ದ ನಾನಾ ಪ್ರಭೇದ (Variety)ಗಳನ್ನು ಕರಾರುವಾಕ್ಕಾಗಿ ಗುರುತಿಸಲು ಪ್ರಯತ್ನಿಸಿದ ಅಲ್ಪಸಂಖ್ಯೆಯ ಕೆಲವು ಪ್ರಕೃತಿ ಶಾಸ್ತ್ರಜ್ಞರಿಗೂ, ಜಾತಿಗಳು ಅಪರಿವರ್ತನೀಯವೆಂದು ಒಪ್ಪಲು ಕಷ್ಟವಾಯಿತು. ಹೀಗಾಗಿ ಕೆಲವು ಪ್ರಕೃತಿ ಶಾಸ್ತ್ರಜ್ಞರೂ, ತನ್ನ ಆಮೇಲಿನ ವರ್ಷಗಳಲ್ಲಿ ಲಿನೆಯಸ್(Linnaeus)ನಂಥ ಪ್ರಸಿದ್ಧ ವಿಜ್ಞಾನಿಯೂ, ಈ ಜಾತಿಗಳು ಅವುಗಳಿಗಿಂತ ದೊಡ್ಡದಾದ ಪ್ರಜಾತಿ (Genus)ಗಳ ಪರಿವರ್ತನೆಯಿಂದ ಅವತೀರ್ಣವಾದುವೆಂದು ಸಮ್ಮತಿಸಿ, ಆದರೆ ಈ ಪ್ರಜಾತಿಗಳು ಮಾತ್ರ ಪರಿವರ್ತನವಾಗದಂಥ ನಿತ್ಯವಸ್ತುಗಳು—ಎಂಬ ಒಡಂಬಡಿಕೆಯ ನಿಲವನ್ನು ಪರಿಗ್ರಹಿಸಿದರು.

---

*"ಎಂಡವರ್" ಪತ್ರಿಕೆಯಲ್ಲಿ ಪ್ರಕಟವಾದ (Vol. XVII, No. 60, April 1958) ಸರ್ ಗಾವಿನ್ ಡಿ. ಬೀರ್ ಅವರ ಮೂಲಲೇಖನವನ್ನು ಕನ್ನಡಕ್ಕೆ ಭಾಷಾಂತರಿಸಲು ಅನುಮತಿಯಿತ್ತ ಆ ಪತ್ರಿಕೆಯ ಸಂಪಾದಕರಿಗೆ ನಾನು ಕೃತಜ್ಞನಾಗಿದ್ದೇನೆ.

—ಲೇಖಕ

೧೯ನೆಯ ಶತಮಾನದಲ್ಲಿ ನಡೆದ ಸಮನ್ವೇಷಣೆ(Exploration)ಗಳು ಕೊನೆ ಮುಟ್ಟುತ್ತ ಬಂದಂತೆ, ಪ್ರಪಂಚದ ವಿವಿಧ ಸಸ್ಯ ಮತ್ತು ಪ್ರಾಣಿಗಳ ಸವಿಸ್ತರ ಜ್ಞಾನ ಹೆಚ್ಚಿ, ಜಾತಿ ಮತ್ತು ಪ್ರಭೇದಗಳ ನಡುವಣ ವ್ಯತ್ಯಾಸದ ಸಮಸ್ಯೆ ಉತ್ಕಟವಾಗುತ್ತ ಬಂತು. ಪ್ರತಿಭೆಗೆ ಸಮಾನವಾದ ಧೈರ್ಯ ಮತ್ತು ದೃಷ್ಟಿವೈಶಾಲ್ಯದಿಂದ ಫ್ರೆಂಚ್ ಪ್ರಕೃತಿ ಶಾಸ್ತ್ರಜ್ಞ ಲಾಮಾರ್ಕ(Lamarck)ನು ಜಾತಿ ಮತ್ತು ಪ್ರಭೇದಗಳಲ್ಲಿ ಅಂಥ ಸಾರಭೂತ ವ್ಯತ್ಯಾಸವೇನೂ ಇಲ್ಲವೆಂದೂ, ಇವುಗಳೆರಡೂ ಪರಿವರ್ತನೆಗೆ ವಶವಾದುವೆಂದೂ, ಜಾತಿಗಳ ಪರಿವರ್ತನತೆ – ಅಪರಿವರ್ತನೀಯತೆಯಲ್ಲ – ಜೀವದ ಆಧಾರವೆಂದೂ ಘೋಷಿಸಿ, ಈ ಸಮಸ್ಯೆಯನ್ನು ಪರಿಹರಿಸಿದನು. ಆದದ್ದೇನೆಂದರೆ ಲಾಮಾರ್ಕನ ವಿಚಾರಗಳು ಎರಡು ಕಾರಣಗಳಿಂದಾಗಿ ಅಗ್ರಾಹ್ಯವಾದುವು. ವಿಕಾಸದ ಬಗ್ಗೆಯ ತನ್ನ ಭಾವನೆಗೆ ಸಾಕ್ಷ್ಯಗಳನ್ನೊದಗಿಸಲು ಯಾವ ವಿಶ್ಲೇಷಣೆಯನ್ನೂ ಅವನು ಕೈಗೊಳ್ಳದಿದ್ದುದು ಮೊದಲನೆಯದು. ಈ ಭಾವನೆ ಅವನ ಮನಸ್ಸಿಗೆ ಸ್ಫುರಿಸಿತು. ಅದನ್ನು ಸಾಧಿಸಿ ತೋರಿಸಿಕೊಡುವ ತೊಂದರೆಯನ್ನು ತೆಗೆದುಕೊಳ್ಳದೆ ಅದರ ಸತ್ಯತೆಯನ್ನು ಅವನು ಅಂಗೀಕರಿಸಿದ. ಎರಡನೆಯದಾಗಿ, ದುರದೃಷ್ಟದಿಂದ ವಿಕಾಸದ ಕಾರಣಗಳ ಬಗ್ಗೆ ಅವನು ಕೊಡಹೋದ ವಿಶದೀಕರಣ ವಿಕಾಸದ ಕಲ್ಪನೆಯನ್ನೇ ಒಪ್ಪಿಕೊಳ್ಳುವುದರಲ್ಲಿ ವಿರೋಧವನ್ನು ಎಬ್ಬಿಸಿತು. ಪ್ರಾಣಿಯೊಂದಕ್ಕೆ ಹೊಸ ಆವಶ್ಯಕತೆಯು ಬೇಕೆನಿಸಿದರೆ, ಅದರ ಅಂತಃಕರಣ ಅಥವಾ ಸುಪ್ತಚೇತನ(Subconcious)ದ ಚಟುವಟಿಕೆಗಳು ಇದನ್ನು ಪೂರೈಸುವ ಹೊಸ ಅಂಗಗಳನ್ನು ಉತ್ಪಾದಿಸುತ್ತವೆಂದು ಅವನು ತರ್ಕಿಸಿದ. ಈ ಊಹೆ, ಪ್ರಾಣಿಗಳ ಜಾತಿ ಉತ್ಪತ್ತಿಯ ಸಮಸ್ಯಾ ಪರಿಹಾರಕ್ಕೆ ಅಮಾನ್ಯವಾದದ್ದಲ್ಲದೆ, ಸಸ್ಯಗಳ ವಿಷಯದಲ್ಲಿ ಸ್ವಲ್ಪವೂ ಅನ್ವಯವಾಗಲಿಲ್ಲ. ಇದಲ್ಲದೆ ಬಹುಕಾಲ ಮಾನ್ಯವಾಗಿದ್ದು, ಈಗ ನಿರಾಧಾರವೆಂದು ತಿಳಿದುಬಂದಿರುವ ಉಪಯೋಗ ಮತ್ತು ಅನುಪಯೋಗದ ಪರಿಣಾಮಗಳು ಆನುವಂಶೀಯವಾಗಿ ಸಂಪ್ರೇಷಿತ(Hereditarily transmitted)ವಾಗುತ್ತವೆಂಬ ಮತವನ್ನು ಲಾಮಾರ್ಕನು ಮುಂದಿಟ್ಟ. ಅಲ್ಲಿಗೆ ಈ ವಿಷಯವು ಸ್ವಲ್ಪಕಾಲ ಸ್ತಬ್ಧವಾಗಿತ್ತು.

ವಿಕಾಸದ ವಾಸ್ತವಿಕತೆ.

೧೮೩೧ರಲ್ಲಿ ಡಾರ್ವಿನನು ಬೀಗಲ್ ಹಡಗಿನಲ್ಲಿ ಸಮುದ್ರಪ್ರಯಾಣಕ್ಕೆ ಹೊರಟಾಗ ಜಾತಿಗಳ ಅಪರಿವರ್ತನೀಯತೆಯನ್ನು ಶಂಕಿಸಲು ಅವನಿಗೆ ಯಾವ ಕಾರಣವೂ ಇರಲಿಲ್ಲ. ಸಾಕ್ಷ್ಯದ ಬೆಂಬಲವಿಲ್ಲದ ಅವನ ತಾತ 'ಎರಾಸ್ಮಸ್ (Erasmus)ನ ಪರಿಕಲ್ಪನೆ(Speculation)ಗಳಿಗೆ ಅವನು ಯಾವ ಬೆಲೆಯನ್ನೂ ಕೊಡಲಿಲ್ಲ. ವಿಕಾಸದ ಕಾರಣಗಳನ್ನು ಕುರಿತು ಲಾಮಾರ್ಕನ ಮೋಜಿನ ಕಲ್ಪನೆಗಳಾದರೋ ಈ ವಿಷಯವನ್ನೇ ಅಪಕೀರ್ತಿಗೆ ಭಾಗಿಯಾಗಿ ಮಾಡುವಂಥವಾಗಿದ್ದವು. ಇದಲ್ಲದೆ ಪ್ರಳಯದಂಥ (Catastrophism) ಹಠಾತ್ ವಿನಾಶಗಳು ಸಂಭವಿಸು

ವುದಕ್ಕಿಂತ ಏಕರೂಪವಾಗಿ ನಡೆದುಕೊಂಡು ಬರುವುದೇ (Uniformitarianism) ವಿಶ್ವದಲ್ಲಿ ಸಾಧಾರಣ ನಿಯಮವೆಂದು ಪ್ರತಿಪಾದಿಸುವುದರಿಂದಾಗಿ ಡಾರ್ವಿನನು ಅಷ್ಟೊಂದು ಋಣಿಯಾದ "ಭೂಶಾಸ್ತ್ರ ತತ್ತ್ವಗಳು" ಎಂಬ ಲಯಲ(Lyell)ನ ಪುಸ್ತಕದಲ್ಲಿ ವಿಕಾಸದ ಸಂಭವನೀಯತೆಯು ದೃಢವಾಗಿ ನಿರಾಕರಿಸಲ್ಪಟ್ಟಿತ್ತೆಂಬುದನ್ನು ನಾವು ಇಲ್ಲಿ ಸೇರಿಸಬೇಕು.

ಜಾತಿಯ ಅಪರಿವರ್ತನೀಯತೆಯ ಎದುರಾಗಿ ಡಾರ್ವಿನನ ವಿರೋಧವನ್ನು ಮೂರು ತಂಡದ ವೀಕ್ಷಣೆಗಳು ಆರಂಭಿಸಿದವು. ಗ್ಯಾಲಪೊಗಾಸ್ ದ್ವೀಪಗಳ ಪ್ರಾಣಿಗಳನ್ನು ಅಧ್ಯಯನ ಮಾಡುತ್ತಿದ್ದಾಗ ಅಲ್ಲಿಯ ಗುಬ್ಬಿಯ ಜಾತಿಗಳು ದ್ವೀಪದ್ವೀಪಕ್ಕೆ ಸ್ವಲ್ಪ ಸ್ವಲ್ಪ ವ್ಯತ್ಯಾಸವಾಗುತ್ತಿದ್ದರೂ, ತಮ್ಮ ತಮ್ಮೊಳಗೇ ಅಲ್ಲದೆ ಪಕ್ಕದ-ಭೂಪ್ರದೇಶವಾದ ದಕ್ಷಿಣ ಅಮೆರಿಕದ ಇತರ ಗುಬ್ಬಿಗಳಿಗೂ ಸಾಮಾನ್ಯ ಹೋಲಿಕೆಯನ್ನು ತೋರಿಸುತ್ತಿದ್ದುದನ್ನು ಕಂಡುಹಿಡಿದುದರಿಂದ ಅವನ ಮೊದಲನೆಯ ವೀಕ್ಷಣೆಯು ಉಪಸ್ಥಿತವಾಯಿತು. ಈ ಎಲ್ಲ ಜಾತಿಗಳೂ ಬೇರೆಬೇರೆಯಾಗಿ ಅವು ಈಗ ಕಾಣಬರುವ ಸ್ವರೂಪದಲ್ಲೇ ಸೃಷ್ಟಿಯಾಗಿದ್ದರೆ, ಇಲ್ಲಿ ಮಾತ್ರವೇ 'ಸೃಷ್ಟಿ'ಯ ಇಂಥ ದುಂದುಗಾರಿಕೆಯ ವೆಚ್ಚಕ್ಕೆ ಕಾರಣವೇನು? ಭೌಗೋಳಿಕ ಸಾಮಿಪ್ಯವು ಈ 'ಸೃಷ್ಟಿ'ಗಳು ಪರಸ್ಪರ ಇಷ್ಟು ನಿಕಟವಾಗಿ ಹೋಲುವಂತೆ ಏಕೆ ಮಾಡಿರಬೇಕು? ಗ್ಯಾಲಪೊಗಾಸ್ ಗಣದ್ವೀಪ (Archepelago) ಮತ್ತು ಕೇಪ್‌ವರ್ಡೆ ಎಂಬ ಆಫ್ರಿಕ ಪಕ್ಕದ ಇನ್ನೊಂದು ದ್ವೀಪ-ಇವುಗಳಲ್ಲಿ ಭೌತಸ್ಥಿತಿಗಳ ಸಮಾನತೆಯಿದ್ದರೂ ಪ್ರಾಣಿಜಾತಿಗಳು ಏಕೆ ಸಂಪೂರ್ಣವಾಗಿ ಭಿನ್ನವಾಗಿರಬೇಕು? ಮೊದಲನೆಯದರ ಪ್ರಾಣಿಗಳು ಪಕ್ಕದ ದಕ್ಷಿಣ ಅಮೆರಿಕದ ಪ್ರಾಣಿಗಳನ್ನೂ, ಎರಡನೆಯದರದು ಆಫ್ರಿಕದವನ್ನೂ ಏಕೆ ಹೋಲುವಂತಿರಬೇಕು?

ದಕ್ಷಿಣ ಅಮೆರಿಕದಲ್ಲಿ ಅವನು ಪ್ರಯಾಣಮಾಡುತ್ತಿದ್ದಾಗ ಕೆಲವು ಪ್ರದೇಶಗಳ ನಿರ್ದಿಷ್ಟ ಭಾಗಗಳಲ್ಲಿ ವಾಸಿಸುವ ಜಾತಿಗಳ ಸ್ಥಾನವನ್ನು ಪಕ್ಕದ ಪ್ರದೇಶಗಳಲ್ಲಿ ಇವಕ್ಕಿಂತ ಭಿನ್ನವಾದ, ಆದರೆ ಸಾಕಷ್ಟು ಹೋಲಿಕೆಯುಳ್ಳ ಬೇರೆ ಜಾತಿಗಳು ಆಕ್ರಮಿಸಿಕೊಂಡುದನ್ನು ಕಂಡುಹಿಡಿದ ಸಂಗತಿಗೆ ಎರಡನೆಯ ತಂಡದ ವೀಕ್ಷಣೆಗಳು ಸಂಬಂಧಿಸಿವೆ. ಈ ಖಂಡದ ಲಾಪ್ಲಾಟಾ ಪ್ರದೇಶದ ಸವಾನಾ ಹುಲ್ಲುಗಾವಲಿನ ಮೊಲದಂಥ ಪ್ರಾಣಿಗಳು ಉತ್ತರ ಅಮೆರಿಕಾ ಅಥವಾ ಪೂರ್ವಾರ್ಧಗೋಲದ ಮೂಲಜಾತಿಗಳಂತಲ್ಲದೆ ದಕ್ಷಿಣ ಅಮೆರಿಕಾಕ್ಕೆ ಮಾತ್ರ ವಿಶಿಷ್ಟವಾದ ಮೂಲಪ್ರಕಾರದಲ್ಲಿ ಏಕೆ ರಚಿತವಾಗಿವೆ?

ಪ್ಯಾಂಪಾಸ್ ಹುಲ್ಲುಗಾವಲಿನಲ್ಲಿ ಈಗ ಆ ಖಂಡದಲ್ಲಿ ವಾಸಿಸುತ್ತಿರುವ ಆರ್ಮಡಿಲೊ (Armadillo) ಪ್ರಾಣಿಗಳಂತೆಯೇ ಕವಚದಿಂದ ಹೊದೆಯಲ್ಪಟ್ಟ ದೊಡ್ಡ ಸಸ್ತನಿ(Mammal)ಗಳ ಉತ್ಖಾತ (ಅಗೆದು ತೆಗೆಯಲ್ಪಟ್ಟದ್ದು, i.e. Fossil)ದ ಅವಶೇಷಗಳನ್ನು ಅವನು ಕಂಡುಹಿಡಿದ ಸಂಗತಿಗೆ ಮೂರನೆಯ ತಂಡದ ವೀಕ್ಷಣೆಗಳು

ಸಂಬಂಧಿಸಿವೆ. ಈ ಲುಪ್ತ(Extinct)ವಾಗಿರುವ ಪ್ರಾಣಿಗಳು ಈಗ ಅಲ್ಲಿ ವಾಸಿಸುತ್ತಿರುವವುಗಳಂತೆಯೇ ಏಕೆ ಸಂರಚಿತವಾಗಿವೆ?

ಜಾತಿಗಳು ಅಪರಿವರ್ತನೀಯ ಹಾಗೂ ಅವು ಬೇರೆಬೇರೆಯಾಗಿ ಮೊದಲು ಸೃಷ್ಟಿಯಾದ ನಂತರ ಬದಲಿಸೇ ಇಲ್ಲ ಎಂಬ ದೃಷ್ಟಿಕೋನದಿಂದ ಈ ಯಾವ ಪ್ರಶ್ನೆಗೂ, ಸಕಾರಣ ಉತ್ತರ ಸಾಧ್ಯವಿರಲಿಲ್ಲ. ಇವೆಲ್ಲ ಅರ್ಥವಾಗದ ರಹಸ್ಯಗಳಾಗಿಯೇ ಉಳಿಯಬೇಕಿತ್ತು. ಇದಕ್ಕೆ ಬದಲಾಗಿ, ಪ್ರಭೇದಗಳಂತೆಯೆ ಜಾತಿಗಳೂ ಅವತರಣ (Descent)ವಾಗುವಾಗ, ಪರಿವರ್ತನೆಗೂ, ವಿವಿಧ ಪರಂಪರೆಗಳಾಗಿ ಭಿನ್ನೀಕೃತವಾಗುವುದಕ್ಕೂ, ಅಧೀನವಾಗಿದ್ದಲ್ಲಿ, ಈ ಎಲ್ಲ ಪ್ರಶ್ನೆಗಳನ್ನೂ ತೃಪ್ತಿಕರವಾಗಿ ಮತ್ತು ಸರಳವಾಗಿ ಉತ್ತರಿಸಬಹುದು. ತಮ್ಮತಮ್ಮೊಳಗೂ, ದಕ್ಷಿಣ ಅಮೆರಿಕದ ಇತರ ಗುಬ್ಬಿಗಳಿಗೂ ಗ್ಯಾಲಪೊಗಾಸ್ ಗುಬ್ಬಿಗಳು ಹೋಲುವುದು, ಎಲ್ಲವೂ ಒಂದು ಸಾಮಾನ್ಯ ಪೂರ್ವಜ(Common ancestor)ದಿಂದ ಅವಕೃತವಾಗಿರುವುದರಿಂದ. ತಮ್ಮತಮ್ಮಲ್ಲಿ ಭಿನ್ನವಾಗಿರುವುದು ಪ್ರತಿ ಒಂದೂ ತನ್ನ ನಿರ್ದಿಷ್ಟ ದ್ವೀಪಕ್ಕೆ ಮಾತ್ರ ಪರಿಮಿತವಾದ ಜೀವನ ರೀತಿಗೆ ಹೊಂದಿಕೊಂಡಿರುವುದರಿಂದ. ಉದಾಹರಣೆಗೆ, ಒಂದು ಜಾತಿಯು ನೆಲದಮೇಲಿನ ಬೀಜಗಳನ್ನು ಆಯ್ದು ತಿನ್ನಲೂ, ಇನ್ನೊಂದು ಮರಗಳಲ್ಲಿನ ಕೀಟಗಳನ್ನು ಹೆಕ್ಕಿ ತಿನ್ನಲೂ ಹೊಂದಿಕೊಂಡಿವೆ. ಗ್ಯಾಲಪೊಗಾಸ್ ದ್ವೀಪಗಳ ಜ್ವಾಲಾಮುಖಜ ಸ್ವರೂಪ ಮತ್ತು ಭೌತ ಪರಿಸ್ಥಿತಿಗಳು ಕೇಪ್‌ವರ್ಡೆ ದ್ವೀಪಗಳನ್ನು ಹೋಲುತ್ತವೆ. ಆದರೂ ಕೂಡ ಗ್ಯಾಲಪೊಗಾಸ್ ಪಕ್ಷಿಗಳೆಲ್ಲಾ ಕೇಪ್‌ವರ್ಡೆ ಪಕ್ಷಿಗಳಿಗಿಂತ ಭಿನ್ನವಾಗಿವೆ. ಆದ್ದರಿಂದ ದ್ವೀಪಗಳ ಭೌತ ಸಂಸ್ಥಿತಿಗಳಲ್ಲಿ ಅವುಗಳ ಭಿನ್ನತೆಗಳನ್ನು ನಿಶ್ಚಯಿಸುವುದು. ಈ ಭಿನ್ನತೆಗಳಿಗೆ ಕಾರಣ, ಕೇಪ್‌ವರ್ಡೆ ಪಕ್ಷಿಗಳು ಆಫ್ರಿಕ ಪಕ್ಷಿಗಳೊಡನೆ ಸಾಮಾನ್ಯ ಪೂರ್ವಜವನ್ನೂ, ಆದರೆ ಗ್ಯಾಲಪೊಗಾಸ್ ಪಕ್ಷಿಗಳು ದಕ್ಷಿಣ ಅಮೆರಿಕ ಪಕ್ಷಿಗಳೊಡನೆ ಸಾಮಾನ್ಯ ಪೂರ್ವಜವನ್ನೂ ಪಾಲುಗೊಂಡಿರುವುದು. ದಕ್ಷಿಣ ಅಮೆರಿಕದ ಕೃಂತಕ (ಕಡಿದು ತಿನ್ನುವ Rodent),ವರ್ಗದ ಯೋಜನೆಯಂತೆಯೇ ಅಲ್ಲಿನ ಮೊಲಗಳು ನಿರ್ಮಿತವಾಗಿವೆ. ಏಕೆಂದರೆ ಅಲ್ಲಿನ ಎಲ್ಲ ಕೃಂತಕಗಳೂ ಸಾಮಾನ್ಯ ಪೂರ್ವಜದಿಂದ ಅವತರಿಸಿವೆ. ಉತ್ಖಾತ ಗ್ಲಿಪ್ಟೊಡಾನ್ (Glyptodon) ಪ್ರಾಣಿ ಈಗ ಅಲ್ಲಿ ವಾಸಿಸುತ್ತಿರುವ ಆರ್ಮಡಿಲೊವನ್ನು ಹೋಲುವುದು ಕೂಡ ಅವೆರಡೂ ಒಂದೇ ಸಾಮಾನ್ಯ ಪೂರ್ವಜದ ಪಾಲುದಾರರಾದ್ದರಿಂದ. ಈ ದೃಷ್ಟಾಂತವು ವಿಶೇಷ ಪ್ರಾಮುಖ್ಯತೆಯುಳ್ಳದ್ದು. ಏಕೆಂದರೆ, ಜೀವಿಸುತ್ತಿರುವ ಜಾತಿಗಳು ಲುಪ್ತಜಾತಿಗಳೊಡನೆ ಬಂಧುತ್ವವನ್ನು ಹೀಗೆ ತೋರಿಸುವುದಾದರೆ, ಲುಪ್ತಪ್ರಾಣಿಗಳು ಜೀವಂತ ವಂಶಜರಾವುದನ್ನೂ ಮಿಗಿಸಿಲ್ಲವೆಂದು ನಂಬುವ ಅವಶ್ಯಕತೆಯೇನೂ ಇಲ್ಲ. ಅವು ಈಗಲೂ ಜೀವಂತವಿರುವ ಪ್ರತಿನಿಧಿಗಳನ್ನು ಹೊಂದಿರಬಹುದು. ಹಾಗೆಂದರೆ, ಉತ್ಖಾತಗಳ ಪುರಾತ್ವಕೀ [ಪುರಾಣ (ಜೀವ)ದಶಾಸ್ತ್ರ Palaeontological] ನಿಲೇಖ (Record)ದ ಅಖಿಲ ಸಂಪತ್ತೂ ವಿಕಾಸ ಸಮಸ್ಯೆಯ ಅಧ್ಯಯನಕ್ಕೆ ಸಾಮಗ್ರಿಯಾಗಿ ಒದಗಿಬರುತ್ತದೆ.

ಇತರ ಜೀವಜಾತಿಗಳಿಗೂ ಸಾಮಾನ್ಯವಾದ ಪೂರ್ವಜ ಜಾತಿಗಳಿಂದ, ಪರಿವರ್ತನಾಸಹಿತ ಅವತರಣವಾಗುವ ಮೂಲಕ, ಅನುಕ್ರಮ ಉತ್ಪಾದನೆಯನ್ನೂ, ವಿಕಾಸವನ್ನೂ, ಜೀವಜಾತಿಗಳು ಅನುಭವಿಸಿವೆಯೆಂಬ ಕಾರ್ಯವಾಹೀ ಉಪಕಲ್ಪನೆ (Working hypothesis)ಯನ್ನು ಪಡೆದುಕೊಂಡು, ನಂತರ ಡಾರ್ವಿನನು ಇದಕ್ಕೆ ಸಂಬಂಧಿಸಿದ ಸಾಕ್ಷ್ಯಗಳಿಗಾಗಿ ಸಸ್ಯ ಮತ್ತು ಪ್ರಾಣಿಶಾಸ್ತ್ರಜ್ಞಾನದ ಅಖಿಲ ಕ್ಷೇತ್ರವನ್ನೂ ಹುಡುಕಲು ಉಪಕ್ರಮಿಸಿದ. ಪ್ರಾಣಿಗಳ ವಿಕಾಸವನ್ನು ವಿವರಿಸುವ ಯಾವ ಸಾಮಾನ್ಯ ತತ್ವಗಳೂ, ಸಸ್ಯಗಳಿಗೂ ಅನ್ವಯಿಸದಿದ್ದಲ್ಲಿ, ಅಂಗೀಕರಣೀಯವಾಗಲಾರದೆಂಬುದನ್ನು ಅವನು ಮನಗಂಡ.

ಪ್ರಥಮತಃ, ಡೇಲಿಯ, ಆಲೂಗೆಡ್ಡೆ, ಪಾರಿವಾಳ, ಮೊಲ–ಇವೇ ಮುಂತಾದ ಸಾಗುವಳೀ ಸಸ್ಯಗಳು ಮತ್ತು ಪಾಲಿತ ಪ್ರಾಣಿಗಳಲ್ಲಿ, ಪ್ರತಿಯೊಂದರಲ್ಲಿಯೂ, ಒಂದೇ ಮೂಲಶಾಖೆಯಿಂದ ಬಹುಸಂಖ್ಯೆಯ ಪ್ರಭೇದಗಳು ಉತ್ಪನ್ನವಾಗಿವೆ. ಆದ್ದರಿಂದ ಪರಿವರ್ತನಾಸಹಿತ ಅವತರಣ ಮತ್ತು ಅನೇಕ ಶ್ರೇಣಿಗಳಾಗಿವೈಭಿನ್ನತೆ-ಇವುಗಳು ಜಾತಿಯ ಒಳಗೆ ಖಂಡಿತವಾಗಿಯೂ ಸಾಧ್ಯ.

ತುಲನಾತ್ಮಕ ಅನುಭೇದವು[1] (Comparative Anatomy) ಅನೇಕ ಜೀವವರ್ಗಗಳಲ್ಲಿ ಸಮಾನ ರಚನಾ ಯೋಜನೆ ಇರುವುದನ್ನು ಹೊರಪಡಿಸುತ್ತದೆ. ಕಶೇರುಕ (Vertebrate) ಪ್ರಾಣಿಗಳು, ನಡೆಯಲು, ಓಡಲು, ಈಜಲು ಅಥವಾ ಹಾರಲು ಉಪಯೋಗಿತವಾಗುವ ಪೂರ್ವ ಅವಯವ(Forelimbs)ಗಳನ್ನು ಹೊಂದಿರುವುವು. ಆದರೆ ಇವುಗಳಲ್ಲಿ, ಪ್ರಾಣಿಯು ಕಪ್ಪೆ, ಹಲ್ಲಿ, ಆಮೆ, ಪಕ್ಷಿ, ಮೊಲ, ಸೀಲ್, ಬಾವಲಿ, ಮನುಷ್ಯ–ಇಂಥ ಯಾವುದೇ ಆದರೂ, ಅವುಗಳ ಕಂಕಾಲ(Skeleton)ದ[2] ವಿವಿಧ ಭಾಗಗಳು, ತೋಳಿನಿಂದ ಹಿಡಿದು ಬೆರಳಿನ ಕೊನೆಯ ಸಂಧಿಯವರೆಗೂ, ಅಸ್ಥಿ ಅಸ್ಥಿಗೆ ಅನುರೂಪವಾಗಿವೆ. ಅಂಥ ರಚಿತಿ(Structure)ಗಳು ಸಧರ್ಮೀ(Homologous)ಯಗಳೆಂದು ಹೇಳುವುದಕ್ಕೆ ಇದು ಅರ್ಥ. ಈ ಪ್ರಾಣಿಗಳೆಲ್ಲ ಸಾಮಾನ್ಯ ಪೂರ್ವಜದಿಂದ ಅವಕೃತವಲ್ಲದಿದ್ದರೆ, ಈ ಅನುರೂಪ್ಯ(Correspondences)ಗಳು ಅವಿವರಣೀಯ. ಆದ್ದರಿಂದ ಮೂಲಭೂತ (Fundamental) ಸಾದೃಶ್ಯವು ಜಾನ್ಯತೀ ಬಂಧುತ್ವ (Genetic Affinity)[3]ಕ್ಕೆ ಸಾಕ್ಷಿ.

---

[1] ಅನುಭೇದ, Anatomy. ಬಳಕೆಯಲ್ಲಿನ 'ಶಾರೀರಶಾಸ್ತ್ರ' (Body Science) 'ಅಂಗರಚನಾಶಾಸ್ತ್ರ' (Science of Organ Structure)ಗಳು ಅಷ್ಟು ವೈಶೇಷಿಕ (Specific) ಪದಗಳಲ್ಲ. ವ್ಯುತ್ಪತ್ತಿಕವಾದ (etymological) anatomy (structures revealed following sctioning. Ana+tomy) ಅನುಭೇದ.

[2] ಕಂಕಾಲ, skeleton. ಬಳಕೆಯಲ್ಲಿನ 'ಅಸ್ಥಿಪಂಜರ' ದೇಹದ ಸಮಗ್ರ skeletonಗೆ, ಅನ್ವಯಿಸುತ್ತದೆ. ಒಟ್ಟಿಗೂ, ಭಾಗಗಳಿಗೂ ಅನ್ವಯಿಸಬಲ್ಲ 'ಕಂಕಾಲ' ಹೆಚ್ಚು ಉಚಿತ.

[3] Genetics, ಜಾನ್ಯತೀ. Englishನ genಗೆ ಸಮಾನವಾದ ಸಂಸ್ಕೃತದ 'ಜನ್' ಧಾತುವಿನಿಂದ ಆದ ಸದೃಶ ಪದ; ಅದರಂತೆಯೇ ಜನನ ಸಂಬಂಧದ ಎಲ್ಲವನ್ನೂ ಇದು ಸೂಚಿಸುತ್ತದೆ.

ಭ್ರೂಣಶಾಸ್ತ್ರ(Embryology)ವು, ಪ್ರೌಢಸ್ಥಿತಿಯಲ್ಲಿ ಮೀನು, ಹಲ್ಲಿ, ಕೋಳಿ, ಮನುಷ್ಯ ಇವುಗಳಷ್ಟು ಭಿನ್ನವಿರುವ ಪ್ರಾಣಿಗಳ ತರುಣ ಭ್ರೂಣಗಳ ನಡುವೆ ಅಪೂರ್ವ ರಚನಾ ಸಮಾನತೆಯನ್ನು ಹೊರಗೆಡಹುತ್ತದೆ. ಈ ಸಮಾನತೆಯು ಹೃದಯದಿಂದ ರಕ್ತವಾಹಿನಿ(Blood Vessels)ಗಳು ಪೃಷ್ಟ ರೋಹಿಣಿಗೆ (Dorsal Aorta) ಹರಿಯುವ ಕ್ರಮದಂಥ ಸಣ್ಣಪುಟ್ಟ ವಿವರಗಳವರೆಗೂ ವ್ಯಾಪಿಸಿರುತ್ತದೆ. ಭ್ರೂಣಗಳ ನಡುವಣ ಈ ಸಮಾನತೆಯನ್ನು ಅವುಗಳು ಸೇರಿದ ವರ್ಗಗಳ ಬಂಧುತ್ವ ಮತ್ತು ಸಾಮಾನ್ಯ ಪೂರ್ವಜದಿಂದ ಅವತರಣ—ಇದರಿಂದ ಮಾತ್ರ ಅರ್ಥಮಾಡಿಕೊಳ್ಳಬಹುದು.

ಒಂದು ಕಾಲದಲ್ಲಿ ಪೂರ್ವಜರಲ್ಲಿ ಮುಖ್ಯವಾದ ಕೆಲಸಮಾಡುತ್ತಿದ್ದು, ಈಗ ಬೇರೆಯೇ ಆದ ಕಾರ್ಯವನ್ನು ಮಾಡುತ್ತಲೋ, ಅಥವಾ ಯಾವ ಕಾರ್ಯವನ್ನೂ ಮಾಡದೆಯೋ ಇರುವಂಥ ರಚಿತಿಗಳ ಅವಶಿಷ್ಟ(Vestige)ದ ಸಾಕ್ಷ್ಯಗಳನ್ನೂ ಭ್ರೂಣಶಾಸ್ತ್ರವು ಒದಗಿಸುತ್ತದೆ. ವ್ಹೇಲ್‌ಬೋನ್ (Whalebone) ತಿಮಿಂಗಿಲದ ಹಲ್ಲುಗಳು, ಹಾವುಗಳ ಅವಯವಗಳು, ಉಷ್ಟ್ರಪಕ್ಷಿ ಮತ್ತು ಪೆಂಗ್ವಿನ್‌ಗಳ ರೆಕ್ಕೆಗಳು— ಇವು ಅಂಥ ಅಂಗಗಳಿಗೆ ಉದಾಹರಣೆ. ಇತರ ಅಸಂಖ್ಯಾತ ಉದಾಹರಣೆಗಳು ಡಾರ್ವಿನನ ಕಾಲದಿಂದೀಚೆಗೆ ಸಂಶೋಧಿತವಾಗಿವೆ. ಇವುಗಳಲ್ಲಿ ಎದ್ದು ಕಾಣುವವು, ಅವಶಿಷ್ಟ ಕಣ್ಣಾದ ಪೀನಿಯಲ್ ಗ್ರಂಥಿ (Pineal Gland) ಮತ್ತು ತಮ್ಮ ಪೂರ್ವಜರು ಅಂಡದಂತ(Egg Tooth)ವನ್ನು ಪಯೋಗಿಸಿ ಮೊಟ್ಟೆ ಕಡಿದು ಮರಿಮಾಡುವುದನ್ನು ನಿಲ್ಲಿಸಿ ೭೫ ಕೋಟಿ ವರ್ಷಗಳಾಗಿದ್ದರೂ, ಕಾಂಗರೂ, ಮೊದಲಾದ ಕೋಸೀಯ (Marsupial)ಗಳಲ್ಲಿ ಇನ್ನೂ ಕಾಣಬರುವ ಅಂಡದಂತ. ಇಲ್ಲಿ ಪುನಃ, ಈ ಎಲ್ಲ ಸಂಗತಿಗಳನ್ನೂ ಸಾಮಾನ್ಯ ಪೂರ್ವಜ ರೂಪಗಳಿಂದಾದ ಅವತರಣವು ವಿವರಿಸುತ್ತದೆ.

ಉತ್ಖಾತ ನಿಲೇಖದ ಜ್ಞಾನ ಡಾರ್ವಿನನ ಕಾಲದಲ್ಲಿ ಎಷ್ಟು ಅಪರಿಪೂರ್ಣವಿತ್ತೆಂದರೆ, ವಿಕಾಸಪಥವನ್ನು ನಿದರ್ಶಿಸುವ ಶ್ರೇಣಿಗಳ ರೂಪದಲ್ಲಿ ಎಂಥ ದೃಷ್ಟಾಂತವೂ ಇದ್ದಿಲ್ಲ. ಹಾಗಿದ್ದರೂ, ಟರ್ಷಿಯನ್ ಸ್ತರ(Tertian Strata)ಗಳಲ್ಲಿ ಕ್ಷಿತಿಜವು (Horizon) ಕೆಳಗಿನದಾದಷ್ಟು, ಈಗ ಜೀವಂತವಾಗಿರುವ ಜಾತಿಗಳಿಗೆ ಸೇರಿದ ಉತ್ಖಾತಗಳು ಕಡಿಮೆಯಾಗುತ್ತ ಬರುವುದೆಂಬುದನ್ನು ಅವನು ನೋಡಿದ. ಹೀಗೆ, ಪುರಾತ್ವಕೆಯು ಹೊಸಜಾತಿಗಳು ಮೈದೋರುವುವೆಂದೂ, ಹಳೆಯುವು ಲುಪ್ತವಾಗುವುವೆಂದೂ, ಎಲ್ಲವೂ ಒಂದೇ ಕಾಲದಲ್ಲಲ್ಲ, ಬದಲು ಆನುಪೂರ್ವವಾಗಿ ಮತ್ತು ಕ್ರಮೇಣವಾಗಿ—ಎಂದೂ ತೋರಿಸಿತು. ಕಾಲಕಾಲದಲ್ಲಿ ಹೊಸ ಜಾತಿಗಳು ಇತರ ಜಾತಿಗಳಿಂದ ಪರಿವರ್ತನಾಸಹಿತ ಅವತರಣದ ಮೂಲಕ ಹುಟ್ಟಿ ಬಂದಿಲ್ಲದಿದ್ದರೆ ಇದು ಏಕೆ ಹೀಗಿರಬೇಕು?

ಸಸ್ಯಗಳೂ, ಪ್ರಾಣಿಗಳೂ ಅವುಗಳ ಸಾದೃಶ್ಯ(Resemblances)ಕ್ಕೆ ಅನುಸಾರವಾಗಿ ವರ್ಗೀಕರಿಸಲ್ಪಟ್ಟಿವೆ (Classified). ಜರಿಗಿಡಗಳು (Ferns), ಶಂಕುಧರಿಗಳು

(Conifers), ಮೃದ್ವಂಗಿಗಳು (Molluscs), ಸಸ್ತನಿಗಳು ಮುಂತಾದ ಅಂಥ ಅಸಂಖ್ಯಾತವೇನೂ ಅಲ್ಲದಷ್ಟು ವರ್ಗಗಳಲ್ಲಿ ಒಂದಲ್ಲ ಒಂದು ಗುಂಪಿನಲ್ಲಿ ಇವು ಇಡಲ್ಪಟ್ಟಿವೆ. ಆದರೆ ಈ ಪ್ರತಿ ಗುಂಪಿನ ಒಳಗೂ ಇನ್ನೂ ಚಿಕ್ಕ ಗುಂಪುಗಳಾಗಿ ಉಪವಿಭಾಗವಿದೆ. ಉದಾಹರಣೆಗೆ, ಸಸ್ತನಿಗಳು, ಕೃಂತಕಗಳು (ಕಡಿದು ತಿನ್ನುವ Rodents), ಮಾಂಸಾಹಾರಿಗಳು (Carnivores), ಖುರಯುಕ್ತಗಳು (ಗೊರಸುಳ್ಳ Ungulates), ಪ್ರಾಥಮಿಗಳು ('ಶ್ರೇಷ್ಠ' ಅಥವಾ ಪ್ರಥಮವಾದ Primates) ಎಂದು ಉಪವಿಭಾಜಿತವಾಗಿವೆ. ಇವುಗಳಲ್ಲಿ ಪುನಃ ಉಪವಿಭಾಗವುಂಟು. ನಾವು ಗಮನಿಸಬೇಕಾದ ಮುಖ್ಯ ವಿಷಯವೇನೆಂದರೆ, ವರ್ಗೀಕರಣವು ಯಾವಾಗಲೂ ಜಾತಿಗಳನ್ನು ಇತರ ದೊಡ್ಡ ಸಮಾವೇಶಿತವಾದ ಗುಂಪುಗಳಲ್ಲಿ ಇಡುತ್ತದೆ. ಇದು ಎಷ್ಟು ಸರ್ವಸಾಮಾನ್ಯ(Commonplace)ವೆಂದರೆ ಅನೇಕ ಸಲ ಇದರ ಅರ್ಥ ಮಹತ್ವತೆಯು ಅಲಕ್ಷಿಸಲ್ಪಡುತ್ತದೆ. ಜೀವಿಗಳು ಏಕೆ ಹೀಗೆ ವರ್ಗೀಕರಿಸಲ್ಪಡಬೇಕು? ಏಣಿಯಲ್ಲಿನ ಹಂತಗಳಂತೆ ಒಂದೇ ಸರಣಿಯಲ್ಲಿ, ಅಥವಾ ಕಡಲ ಕರೆಯಲ್ಲಿನ ನೊರಜುಗಲ್ಲಿನಂತೆ ಅಸ್ತವ್ಯಸ್ತವಾಗಿ, ಅಥವಾ ಕಲ್ಪಿತ ತಾರಾಗಣಗಳಲ್ಲಿನ ನಕ್ಷತ್ರಗಳಂತೆ ಛಂದಸ್ವಿಯಾಗಿ, ಏಕೆ ಅವು ಹರಡಿಕೊಂಡಿಲ್ಲ? ಕಾರಣವೇನೆಂದರೆ, ಗುಂಪುಗಳೊಳಗೆ ಗುಂಪುಗಳಿರುವಂಥ ಈ ವ್ಯವಸ್ಥೆ ವಿಕಾಸಪಥವನ್ನು ಪ್ರತಿಫಲಿಸುವ ಸ್ವಾಭಾವಿಕ ವರ್ಗೀಕರಣ. ಇದು ಸಾಮಾನ್ಯ ಪೂರ್ವಜದಿಂದಾದ ಅವತರಣಿಕೆಯ ಫಲಿತಾಂಶ ಮತ್ತು ಬಂಧುತ್ವದ ನಿರ್ದೇಶ. ಗುಂಪುಗಳ ಒಳಗಿನ ವ್ಯತ್ಯಾಸಗಳು ಅಂಥ ಅವತರಣಕಾಲದಲ್ಲಿ ಆದ ಪರಿವರ್ತನೆ ಮತ್ತು ವೈಭಿನ್ನತೆಗಳಿಂದ ಉಂಟಾದದ್ದು.

ಈ ಎಲ್ಲ ಮೂಲಗಳಿಂದ ಒದಗಿದ ಆಧಾರದ ಮೇಲೆ ಡಾರ್ವಿನನು ಜಾತಿಗಳು ಬದಲಿಸಿವೆ, ಇತರ ಜಾತಿಗಳಿಂದ ಉತ್ಪತ್ತಿತವಾಗಿವೆ ಮತ್ತು ವಿಕಾಸವು ಸಂಭವಿಸಿದೆ ಎಂಬ ಅಖಂಡನೀಯ ವಾದವನ್ನು ನಿರ್ಮಿಸಿದ. ಅವನಿಗಿದ್ದಷ್ಟು ಸ್ವಲ್ಪ ಆದೇಯ[4] (Data)ದ ಮೇಲೆಯೇ ಹೀಗೆ ಅವನು ಮಾಡಿದನೆಂಬುದು ಅವನ ಪ್ರತಿಭಾಶಕ್ತಿಯ ಕುರುಹು. ಏಕೆಂದರೆ ಅವನು ತನ್ನ ನಿರ್ಧಾರಗಳನ್ನು ಕೈಗೊಂಡ ಕಾಲದಲ್ಲಿ ಈಗ ವಿಕಾಸದ ವಾಸ್ತವಿಕತೆ ಮತ್ತು ಪಥವನ್ನು ನಿದರ್ಶಿಸಲು ಸುಭದ್ರ ದೃಷ್ಟಾಂತಗಳೆಂದು ಬಳಸುವ ಯಾವ ಸಂಗತಿಗಳೂ ಸಂಶೋಧಿತವಾಗಿರಲಿಲ್ಲ. ಈಚೆಗೆ ಕಂಡುಹಿಡಿದ ಇಂಥವುಗಳಲ್ಲಿ ಮುಖ್ಯವಾದುವುಗಳು ಸಾಲಿಗ್ರಾಮ (Ammonite) ಅಥವಾ ಕುದುರೆಯ ವಿಕಾಸವನ್ನು ಮೆಟ್ಟಲು ಮೆಟ್ಟಲಾಗಿ ಹೊರತರುವ ಉತ್ಖಾತಗಳ ರಮಣೀಯ ಶ್ರೇಣಿಗಳು ಮತ್ತು ಆರ್ಕಿಯಾಪ್ಟೆರಿಕ್ಸ್ (Archeopteryx), ಪಿತೆಕಾಂತ್ರೊಪಸ್(Pitheconthropus)ನಂಥ ಕಶೇರುಕಗಳ ವಿವಿಧ ವರ್ಗಗಳ ಪೂರ್ವಜರನ್ನು ಪ್ರತಿನಿಧಿಸುವ ಉತ್ಖಾತಗಳು.

---

4 ಆದೇಯ, Data. ಉಪಾದೇಯ ಸಾಮಗ್ರಿ; ಸಂಸ್ಕೃತದ ಸಂಕ್ಷಿಪ್ತತರ ರೂಪ.

ವಿಕಾಸ ತಥ್ಯದ ಡಾರ್ವಿನನ ಆಧಾರದ ಮುಖ್ಯ ಹಂತಗಳು, ಮುಂದೆ ೧೮೪೪ರಲ್ಲಿ ತಾನೇ ಪ್ರಬಂಧವಾಗಿ ವಿಸ್ತರಿಸಿ, ೧೮೪೭ರಲ್ಲಿ ಕರಡುಪ್ರತಿಯಾಗಿ ಅವನು ಬರೆದಿಟ್ಟಾಗಲೆ–ಇವೆರಡರಲ್ಲಿ ಯಾವುದನ್ನೂ ಅವನು ಸ್ವತಃ ಪ್ರಕಟಿಸದಿದ್ದರೂ–ಸ್ಥಾಪಿತವಾಗಿತ್ತು. ಇದಕ್ಕೆ ಶೀಘ್ರದಲ್ಲಿಯೇ ಮತ್ತೊಬ್ಬ ಪ್ರಕೃತಿಶಾಸ್ತ್ರಜ್ಞ ಆಲ್ಫ್ರೆಡ್ ರಸಲ್ ವ್ಯಾಲೇಸನು (Alfred Russel Wallace) ಇದೇ ರೀತಿಯ ಸಮನ್ವೇಷಣೆಗೆ ಒಯ್ಯಲ್ಪಟ್ಟನು. ಭೌಗೋಲಿಕವಾಗಿ (Geographically) ಪ್ರಪಂಚದ ಮೇಲೆಲ್ಲವೂ, ಭೌಮಿತೀಯವಾಗಿ (Geologically) ಉತ್ಖಾತ ನಿಲೇಖದಲ್ಲೂ, ಜೀವಿಪ್ರಸರಣ (Distribution) ದ ಮೇಲಿನ ಕೆಲವು ಸರಳ ವೀಕ್ಷಣೆಗಳಿಂದ ವ್ಯಾಲೇಸನು ಅಷ್ಟೇ ಸರಳವಾದ, ವಿಚಾರ ಚರಿತ್ರೆಯಲ್ಲೇ ಅತಿ ಮುಖ್ಯವಾದ ವಿಕಾಸವನ್ನು ಪ್ರತ್ಯಕ್ಷೀಕರಿಸಲನುವಾದ, ನಿರ್ಧಾರಗಳನ್ನು ಹೊರತಂದ. ಜಾತಿ ಪರಿವರ್ತನೀಯತೆಯ ಸಮಸ್ಯೆಗೆ ಅವನಂಥದೇ ಪರಿಹಾರವನ್ನು, ಡಾರ್ವಿನನಿಗಿಂತ ಸ್ವತಂತ್ರನಾಗಿ ಮತ್ತು ಅವನ ಕೃತಿಯ ಪರಿಚಯವೇ ಇಲ್ಲದೆ ವ್ಯಾಲೇಸನು ಕಂಡುಕೊಂಡ. ವಿಕಾಸ ತಥ್ಯದ ಸ್ಥಾಪನೆಯ ಕೀರ್ತಿ ನ್ಯಾಯವಾಗಿಯೇ ಡಾರ್ವಿನನಿಗೆ ಅಷ್ಟೊಂದು ಕೊಡಲ್ಪಟ್ಟಿರುವುದರಿಂದ, ಈ ಸಮಸ್ಯೆಗೆ ವ್ಯಾಲೇಸನ ಕೊಡುಗೆಯನ್ನೂ ಪರಿಗಣಿಸಿ ಗೌರವಿಸುವುದು ನ್ಯಾಯಸಮ್ಮತವೇ.

ಪ್ರಕೃತಿ ಉದ್ಗ್ರಹಣ(ಮೇಲೆ ಆರಿಸಿಕೊಳ್ಳುವುದು, Selection)ದ ಸಂಯಂತ್ರ (Mechanism)

ತಾನು ಸಂಗ್ರಹಿಸಿದ ಸಾಕ್ಷ್ಯಗಳಿಂದ ವಿಕಾಸದ ಅಸ್ತಿತ್ವವು ತಪ್ಪಿಸಿಕೊಳ್ಳಲಾಗದ ನಿರ್ಣಯವೆಂಬುದು ೧೮೩೭ರಲ್ಲಿಯೇ ಡಾರ್ವಿನನಿಗೆ ಗೊತ್ತಿದ್ದರೂ, ಜೀವಿಗಳು ಪರಿಸ್ಥಿತಿಗೆ(Environment) ಹೊಂದಿಕೊಂಡಿರುವ ಸಂಗತಿಗೆ ವಿವರಣೆಯನ್ನು ಕಂಡುಕೊಳ್ಳುವತನಕ ತನ್ನ ಸಂಶೋಧನೆಯಲ್ಲಿ ಮುಂದುವರಿಯಲು ಅವನು ಸಿದ್ಧನಾಗಲಿಲ್ಲ. ಸಾಮಾನ್ಯವಾಗಿ ಎಲ್ಲ ಸಸ್ಯಗಳೂ, ಪ್ರಾಣಿಗಳೂ ತಮ್ಮ ಪರಿಸ್ಥಿತಿಗೆ ಹೊಂದಿಕೊಂಡೇ ಇರುತ್ತವೆ. ಇಲ್ಲದಿದ್ದರೆ ಅವು ಜೀವಿಸುತ್ತಲೇ ಇರಲಿಲ್ಲ, ಮನುಷ್ಯನು ಸಮುದ್ರದಲ್ಲಿ ಮುಳುಗಿಹೋಗುತ್ತಾನೆ; ಆದರೆ ಮೀನು ನೀರಿನ ಹೊರಗೆ ಸತ್ತುಹೋಗುತ್ತದೆ. ಜೀವಿಗೂ ಅದರ ಜೀವನ ಪರಿಸ್ಥಿತಿಗೂ ನಿರ್ದಿಷ್ಟ ಮತ್ತು ನಿಕಟ ಸಂಬಂಧವನ್ನು ತೋರಿಸುವ ಅನೇಕ ರಚಿತಿಗಳುಂಟು.

ಜಾತಿಯೊಂದರ ವ್ಯಕ್ತಿಗಳೆಲ್ಲ ಏಕರೂಪಿಗಳಲ್ಲವೆಂದೂ, ಗಾತ್ರ, ಸಾಮರ್ಥ್ಯ, ಆರೋಗ್ಯ, ಫಲವತ್ತತೆ, ಆಯುಸ್ಸು, ಅಂತಃಸ್ಫೂರ್ತಿ (Instinct) ಸ್ವಭಾವ, ಮನೋಲಕ್ಷಣ, ಮತ್ತಿತರ ಅಸಂಖ್ಯ ಲಕ್ಷಣಗಳಲ್ಲಿ ವೈವಿಧ್ಯವನ್ನು ತೋರಿಸುತ್ತವೆಂದೂ ಡಾರ್ವಿನನಿಗೆ ಗೊತ್ತಿತ್ತು. ಅಂಥ ವೈವಿಧ್ಯಗಳು ಪ್ರಯೋಜನಕಾರಿಯಾಗುವಂತೆ ಉಪಯೋಗಿಸಲ್ಪಡಬಹುದೆಂಬುದನ್ನೂ, ಮತ್ತು ಹಾಗೆ ತಾನು ನಡೆಸುವ ಕೃತಕ

ಉದ್ಗ್ರಹಣ(Artificial Selection)ದಲ್ಲಿ ಮನುಷ್ಯನು ಆಗಲೇ ಉಪಯೋಗಿಸಿಯೂ ಇದ್ದಾನೆಂಬುದನ್ನೂ ಅವನು ಶೀಘ್ರದಲ್ಲಿಯೇ ಕಂಡುಕೊಂಡ. ನವಶಿಲಾಯುಗ (New Stone Age)ದ ಕಾಲದಿಂದಲೂ ಇಂಥ ಕೃತಕ ರೀತಿಯ ಮೂಲಕವೇ ಮನುಷ್ಯನು ತನ್ನ ಸಾಗುವಳೀ ಸಸ್ಯಗಳನ್ನೂ, ಪಾಲಿತ ಪ್ರಾಣಿಗಳನ್ನೂ ಪಡೆದು ಕೊಂಡಿದ್ದಾನೆ. ಇದರ ಗುಟ್ಟು ಉದ್ಗ್ರಹಣ. ಇಚ್ಛಿತ ಗುಣಗಳನ್ನು ಹೊಂದಿರುವ ಪಿತೃ(Parents)ಗಳಿಂದಲೇ ಪ್ರಸವನ (Breeding) ಮಾಡುವ ಪದ್ಧತಿ. ಆದರೆ ಮನುಷ್ಯ ಇಲ್ಲವೆ ಬೇರೊಂದು ಅರಿವುಳ್ಳ ಯಾವೊಂದು ಜೀವಿಯೂ ನಿರ್ದೇಶಿಸದೆಯೇ, ಭೂಮಿಯ ಮೇಲೆ ಜೀವ ಹುಟ್ಟಿದಂದಿನಿಂದಲೂ, ಪ್ರಕೃತಿಯ ವನ್ಯ (Wild) ಪ್ರಾಣಿಗಳು ಮತ್ತು ಸಸ್ಯಗಳಲ್ಲಿ ಉದ್ಗ್ರಹಣವು ಹೇಗೆ ಪ್ರವರ್ತವಾಗಿತ್ತು? ಈ ಒಗಟಿಗೆ ಪರಿಹಾರ ಮಾಲ್ಥಸನ "ಪ್ರಜಾ ಸಮುದಾಯದ ಮೇಲಿನ ಪ್ರಬಂಧ"ವನ್ನು (Malthus-Essay on Population) ಓದಿದಾಗ, ಪ್ರಾಣಿಗಳೂ ಸಸ್ಯಗಳೂ ಜೀವಿಸುವ ಸಂಸ್ಪರ್ಧಾತ್ಮಕ (Competitive) ಸ್ಥಿತಿಯಲ್ಲಿ, ಜೀವಿಯ ಫಲ್ಯಸಂತಾನ (Fertile Offspring)ಗಳನ್ನುಳಿಸಿಹೋಗುವ ಸಾಮರ್ಥ್ಯವನ್ನು ಹೆಚ್ಚಿಸುವ ಯಾವೊಂದು ಲಕ್ಷಣವೂ ಪುರಕ್ಷಿತ(Preserved)ವಾಗುತ್ತದೆಂದೂ, ಇದನ್ನು ಕಡಿಮೆ ಮಾಡುವ ವೈವಿಧ್ಯಗಳು ವರ್ಜಿತವಾಗುತ್ತದೆಂದೂ ಅವನು ಅರಿತುಕೊಂಡಾಗ ಡಾರ್ವಿನನಿಗೆ ಹೊಳೆಯಿತು. ಪ್ರಕೃತಿ ಸ್ಥಿತಿಯಲ್ಲಿ ಉದ್ಗ್ರಹಣವು ಸ್ವಯಂ ಚಾಲಿತವಾಗಿ (Automatically) ಕೆಲಸಮಾಡುತ್ತದೆ. ಅದಕ್ಕಾಗಿಯೇ ಇದನ್ನು ಡಾರ್ವಿನನು ಪ್ರಕೃತಿ ಉದ್ಗ್ರಹಣ (Natural Selection) ಎಂದು ಕರೆದನು.

ಇದಾದ ಮೇಲೆಯೇ ಡಾರ್ವಿನನು ಸಸ್ಯ ಮತ್ತು ಪ್ರಾಣಿಗಳಲ್ಲಿನ ವಿಕಾಸದ ಕಾರಣಗಳಿಗೂ ಮತ್ತು ವಾಸ್ತವಿಕತೆಗೂ ತರ್ಕಬದ್ಧ ವಿವರಣೆಯನ್ನೊದಗಿಸುವ ಪರಿಪೂರ್ಣ ಸಿದ್ಧಾಂತವನ್ನು ರೂಪಿಸಬಲ್ಲವನಾದನು. ಇದು, ಆಗಲೇ ಅವನಿಗೆ ನಿಜವೆಂದು ಗೊತ್ತಿದ್ದ ನಾಲ್ಕು ಪ್ರತಿಪಾದನೆ(Proposition)ಗಳ ಮೇಲೂ, ಈಗ ಇವೂ ನಿಜವೆಂದು ತಿಳಿದುಬಂದಿರುವ ಮೂರು ನಿಗಮನ(Deduction)ಗಳ ಮೇಲೂ ವಿಧ್ಯುಕ್ತವಾಗಿ (Formally) ಆಧಾರಿತವಾಗಿದೆ. ಅವುಗಳನ್ನು ಹೀಗೆ ಎಣಿಸಿ ಹೇಳಬಹುದು :—

೧. ಜೀವಿಗಳು ಪ್ರೌಢ ವ್ಯಕ್ತಿಗಳನ್ನು ಹುಟ್ಟಿಸುವುದಕ್ಕಿಂತ ಅತ್ಯಧಿಕ ಸಂಖ್ಯೆಯಲ್ಲಿ ಪ್ರಜನ ಕೋಶಗಳನ್ನು (Reproductive cells) ಉಂಟುಮಾಡುತ್ತವೆ.

೨. ಒಂದು ಜೀವಜಾತಿಯಲ್ಲಿನ ಒಟ್ಟು ವ್ಯಕ್ತಿಗಳ ಸಂಖ್ಯೆ ಹೆಚ್ಚುಕಡಿಮೆ ನಿಯತಪ್ರಮಾಣದಲ್ಲಿಯೇ ನಿಂತಿರುತ್ತದೆ.

೩. ಆದ್ದರಿಂದ ಇವುಗಳಲ್ಲಿ ಅಧಿಕ ದರದ ಮರಣಶೀಲತೆ (Mortality) ಇರಲೇ ಬೇಕು.

೪. ಜಾತಿಯೊಳಗಿನ ವ್ಯಕ್ತಿಗಳೆಲ್ಲ ಅಭಿನ್ನಗಳಲ್ಲ, ಬದಲು ಎಲ್ಲ ಲಕ್ಷಣಗಳಲ್ಲೂ ವೈವಿಧ್ಯವನ್ನು ಪ್ರದರ್ಶಿಸುತ್ತವೆ.

೫. ಆದ್ದರಿಂದ ಉಳಿವಿನ ಸಂಸ್ಪರ್ಧೆ(Competition for Survival)ಯಲ್ಲಿ ಕೆಲವು ಭೇದಗಳು ಚೆನ್ನಾಗಿಯೂ, ಮಿಕ್ಕುವು ಅವು ಕಡಿಮೆಯಾಗಿಯೂ ಜಯಶೀಲ ವಾಗುತ್ತವೆ. ತದನಂತರದ ಸಂತತಿಯ ಪಿತೃಗಳು ಸ್ವಾಭಾವಿಕವಾಗಿಯೇ, ತಮ್ಮ ಪರಿಸ್ಥಿತಿಗಳಿಗೆ ಪ್ರಯೋಜನೀಯವಾಗಿ ಹೊಂದಿಕೊಳ್ಳುವ ದಿಕ್ಕಿನಲ್ಲಿ ವೈವಿಧ್ಯವನ್ನು ತೋರಿಸುವಂಥ ಜಾತಿಗಳ ವ್ಯಕ್ತಿಗಳಿಂದ ಮಾತ್ರ ಉದ್ಗ್ರಹೀತವಾಗುತ್ತವೆ.

೬. ಪಿತೃ ಮತ್ತು ಸಂತಾನಗಳ ನಡುವಣ ಆನುವಂಶೀಯ ಸಾದೃಶ್ಯವು ಒಂದು ವಾಸ್ತವಿಕ ತಥ್ಯ (Fact)

೭. ಆದ್ದರಿಂದ ಅನಂತರದ ಸಂತಾನಗಳು ತಮ್ಮ ಪಿತೃಗಳು ಪ್ರತ್ಯಕ್ಷೀಕರಿಸಿ ಕೊಂಡ ಹೊಂದಾಣಿಕೆಯೇ ದರ್ಜೆಯನ್ನು ಕ್ರಮೇಣ ಪರಿವರ್ತನೆಯ ಮೂಲಕ ಕಾಪಾಡಿಕೊಳ್ಳುವುದಲ್ಲದೆ ಅಭಿವೃದ್ಧಿಗೂ ತರುತ್ತವೆ.

ಇದು ೧೮೫೮ರ ಜುಲೈ ಒಂದರಲ್ಲಿ ಡಾರ್ವಿನ್ ಮತ್ತು ಇದೇ ನಿರ್ಧಾರಕ್ಕೆ ಸ್ವತಂತ್ರವಾಗಿ ತಲಪಿದ್ದ ವ್ಯಾಲೇಸ್–ಇಬ್ಬರೂ ಸೇರಿ ನಿವೇದಿಸಿದ ಪ್ರಕೃತಿ ಉದ್ಗ್ರಹಣದಿಂದ ವಿಕಾಸ ಎಂಬ ವಿಧ್ಯುಕ್ತ ಸಿದ್ಧಾಂತ. ನ್ಯೂಟನಿನ ಗುರುತ್ವ ನಿಯಮದ ಸಂಶೋಧನೆಗೆ ಸರಿಹೋಲುವ ಜ್ಞಾನದ ಪದಹತಿಯನ್ನು ಇದು ನಿರ್ದೇಶಿಸುತ್ತದೆ.

ಉದ್ಗ್ರಹಣದೊಡನೆ ಮೆಂಡಿಲೀಯ ಜಾನ್ಯತಿ (Mendclion genetics)ಯ ಸಮಾಯೋಜನೆ

ಡಾರ್ವಿನನು ಗ್ರಂಥ ರಚಿಸಿದಾಗ ಆನುವಂಶಿಕತೆ (Inheritance)ಯ ನಿಯಮಗಳ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಸಂತಾನಗಳು ತಂದೆತಾಯಿಗಳ ಲಕ್ಷಣಗಳ ಸರಾಸರಿಯನ್ನು ಪ್ರದರ್ಶಿಸುವ ಪ್ರವೃತ್ತಿ(Tendency)ಯನ್ನು ಹೊಂದಿರುತ್ತವೆ ಎಂಬ ಅಸ್ಫುಟ ಭಾವನೆ ಮಾತ್ರ ಅವನಿಗಿದ್ದ ಸಮಸ್ತ ಆಧಾರ. ' ಮಿಶ್ರ ಆನುವಂಶಿಕತೆ " (Blending inheritance) ಎಂದು ಕರೆಯಲ್ಪಡುತ್ತಿದ್ದ ಈ ಊಹೆಯನ್ನು, ತನ್ನ ಸಿದ್ಧಾಂತವನ್ನು ನಿರ್ಮಿಸಲು ಎದುರಿಸಬೇಕಾದಾಗ ಡಾರ್ವಿನನಿಗೆ ತುಂಬಾ ಕಷ್ಟವಾಯಿತು. ಮಿಶ್ರ ಆನುವಂಶಿಕತೆಯು ನಿಜವಾಗಿದ್ದರೆ, ಆವಿರ್ಭವಿಸಿದ ಯಾವ ಹೊಸ ವೈವಿಧ್ಯತೆಯೂ, ಅವು ಆನುವಂಶೀಯ(Heritable)ವಾಗಿದ್ದರೂ ಕೂಡ, ಕ್ಷಿಪ್ರದಲ್ಲಿಯೇ ಮುಳುಗಿಸಲ್ಪಟ್ಟು ನಿರ್ನಾಮವಾಗಿಬಿಡುತ್ತಿದ್ದವು. ಇದನ್ನು ಸರಿಪಡಿಸಲು, ಹೊಸ ವೈವಿಧ್ಯತೆಗಳು ಅತ್ಯಂತ ಅಭೀಕ್ಷ್ಣ(Frequent)ವಾಗಿ ಸಂಭವಿಸುವುವೆಂದು ಊಹಿಸಬೇಕಾಗುತ್ತದೆ. ಒಂದೇ ತಂದೆತಾಯಿಗಳ ಮಕ್ಕಳಾದ ಸಹೋದರರುಗಳೆಲ್ಲ ಅಭಿನ್ನ ವಂಶಾಗತಿ(Heritage)ಯ ಭಾಗಿಗಳಾದ್ದರಿಂದ ಅವರುಗಳ ನಡುವಣ ಯಾವ ವ್ಯತ್ಯಾಸವಾದರೂ ಅವರುಗಳ ಪೂರ್ವ ವಯಸ್ಸಿ

ನಲ್ಲಿಯೇ ಉತ್ಪನ್ನವಾದ ವೈವಿಧ್ಯತೆಯಿಂದ ಬಂದುದಾಗಿರಬೇಕು. ಅಲ್ಲದೆ ಒಂದು ಜಾತಿಯ ಸರಿಸುಮಾರು ಎಲ್ಲ ವ್ಯಕ್ತಿಗಳ ಮೇಲೂ ಈ ವೈವಿಧ್ಯವು ಪ್ರಭಾವವನ್ನು ಬೀರಿರಬೇಕು. ಈ ಅನಂತ ವೈವಿಧ್ಯತೆಯ ಪೂರೈಕೆಯ ಸಮಸ್ಯಾಕಷ್ಟವನ್ನು ಡಾರ್ವಿನನು ಎಷ್ಟು ಉತ್ಕಟವಾಗಿ ಅನುಭವಿಸಿದನೆಂದರೆ, ಇದರ ಮೂಲವನ್ನು ಆಗ್ಗೆ ಕಲ್ಪಿತವಾಗಿದ್ದ ಉಪಯೋಗ ಅನುಪಯೋಗದ ಪರಿಣಾಮದ ವಾದದಲ್ಲಿ ಹುಡುಕುವುದಕ್ಕೂ ಅವನು ಒಯ್ಯಲ್ಪಟ್ಟನು.

ಉಪಯೋಗ ಅನುಪಯೋಗದ ಪರಿಣಾಮಗಳ ಮೇಲಿನ ಭರವಸೆಯೊಂದೇ ಡಾರ್ವಿನನ ನಿರೂಪಣೆಗಳಲ್ಲಿ ಆಮೇಲೆ ತ್ಯಜಿಸಲ್ಪಡಬೇಕಾಗಿ ಬಂದ ಭಾಗ. ಈ ಎಲ್ಲ ಕಷ್ಟಗಳಿಗೆ ಪರಿಹಾರಗಳೂ, ಡಾರ್ವಿನನು ಮನಗಂಡಿದ್ದರೆ, ಅದೇ ಸಮಯದಲ್ಲಿ ಗ್ರೆಗರ್ ಮೆಂಡಲಿಂದ (Gregor Mendel) ತಯಾರಿಸಲ್ಪಡುತ್ತಿತ್ತು. ಆದರೆ ಡಾರ್ವಿನನ ಮರಣವಾದ ೧೮ ವರ್ಷಗಳವರೆಗೆ ಮೆಂಡಲಿನ ಫಲಿತಾಂಶಗಳು ಅವಿದಿತವಾಗಿ ಉಳಿದುವು.

ಟಿ. ಹೆಚ್. ಮಾರ್ಗನ್ (T. H. Morgan) ಮತ್ತು ಅವನ ಸಹೋದ್ಯೋಗಿಗಳಿಂದ ಮೆಂಡಿಲೀಯ ಜಾನ್ಯತೀ ಸಿದ್ಧಾಂತವು, ಪ್ರಯೋಗ ಸಾಕ್ಷದ ಅಪೂರ್ವ ಸಂಪತ್ತಿನೊಡನೆ, ಪ್ರಸವನದೊಡ್ಡಿಗಳು (Breeding pens) ಕೋಶರಚನೆ (Cell-Structure) ಮತ್ತು ಅದರ ವರ್ಣತನು(Chromosome)ಗಳ ಕೌಶಕೀಯ (Cytological) ಅಧ್ಯಯನಗಳ ಮೂಲಕ, ವಿರಚಿಸಲ್ಪಟ್ಟಿತು. ಆನುವಂಶೀಯ ಸಾದೃಶ್ಯಗಳು (Hereditary resemblences), ಕೋಶಗಳ ವರ್ಣತನುಗಳಲ್ಲಿ ಉಪಸ್ಥಿತವಿದ್ದು ಪ್ರಜನಕೋಶಗಳ ನಿರ್ಮಾಣ ಮತ್ತು ಫಲವತ್ಕರಣ (Fertilisation) ಎಂಬ ಸಂಯಂತ್ರಕ್ಕನುಸರಿಸಿ ಸಂತಾನಗಳಿಗೆ ಸಂಪ್ರೇಕ್ಷಿತವಾಗುವ ಮತ್ತು ಮೆಂಡಿಲೀಯ ಆನುವಂಶಿಕತೆ ಎಂದು ಕರೆಯಲ್ಪಡುವ ಪ್ರಸರಣ ನಮೂನೆ (Distributional Pattern)ಗಳಿಗೆ ಅನುರೂಪವಾಗಿರುವ, ಜನ್ಯಿಗಳೆಂಬ (Genes)[5] ವಿವಿಕ್ತ ಕಣ (Discrete Particles)ಗಳಿಂದ, ನ್ಯೂಟನ್ನನ ಚಲನ ನಿಯಮಗಳು (Laws of motion) ಅಥವಾ ಅಣು ಸಿದ್ಧಾಂತ(Atomic theory)ದಷ್ಟೇ ಸುಭದ್ರವಾಗಿ ನಿಶ್ಚಯಿಸಲ್ಪಟ್ಟಿದೆ, ಎಂಬುದನ್ನು ಇವರುಗಳು ಸ್ಥಿರಪಡಿಸಿದರು. ಸಿ. ಡಿ. ಡಾರ್ಲಿಂಗ್‌ಟನ್ (C. D. Darlington) ಮತ್ತಿತರರ ವರ್ಣತನುಗಳ ರಚನೆ, ವರ್ತನ (Behavior)ಗಳ ಮೇಲಿನ ಅನ್ವೇಷಣೆಗಳು ಮೆಂಡಿಲೀಯ ಆನುವಂಶಿಕತೆಯ ಸಂಯಂತ್ರದಲ್ಲಿನ ಪ್ರತಿಹೆಜ್ಜೆಯನ್ನೂ ವಾಸ್ತವಿಕವಾಗಿ ಸೂಕ್ಷ್ಮದರ್ಶಿ (Microscope) ಯಲ್ಲಿ ನೋಡಲಾಗುವಷ್ಟು ಮಟ್ಟಿನ ಸಂಸ್ಕಾರವನ್ನೂ ನಿಷ್ಕೃಷ್ಟತೆಯನ್ನೂ ಮುಟ್ಟಿದೆ.

ಜನ್ಯಿಗಳು ತಮ್ಮ ಪ್ರತ್ಯೇಕ ತಾದಾತ್ಮ್ಯ (Identity)ವನ್ನು ರಕ್ಷಿಸಿಕೊಳ್ಳುತ್ತವೆ.

[5] ಜನ್ಯಿ, geni. 3ರಲ್ಲಿ ನೋಡಿ.

ತಮ್ಮನ್ನು ಹೊಂದಿರುವ ವ್ಯಕ್ತಿಗಳ ಲಕ್ಷಣಗಳನ್ನು ಉತ್ಪಾದನೆ ಮಾಡುವಾಗ ಒಂದರೊಡನೊಂದು ಸಹಕರಿಸಿದರೂ ಒಂದರೊಳಗಿನ್ನೊಂದು ಎಂದೂ ಕಲಬೆರಿಕೆಯಾಗುವುದಿಲ್ಲ. ಸುದೀರ್ಘ ಅವಧಿಗಳವರೆಗೆ ಅವು ನಿಶ್ಚಲವಾಗಿ ಉಳಿದುಕೊಂಡಿರುತ್ತವೆ. ಆದರೆ ಕಾಲಕಾಲಕ್ಕೆ ವೈಕೃತಿ[6] (Mutation) ಎಂದು ಕರೆಯಲ್ಪಡುವ, ತಾವು ನಿಯಂತ್ರಿಸುವ ಲಕ್ಷಣಗಳಲ್ಲಿ ಬದಲಾವಣೆಯನ್ನುಂಟುಮಾಡುವ ಪರಿವರ್ತನೆಗಳನ್ನು ಅವು ಅನುಭವಿಸುತ್ತವೆ. ಅದಾದ ಮೇಲೆ ತಮ್ಮ ಈ ಹೊಸ ಸಂಸ್ಥಿತಿಯಲ್ಲಿ ತಿರುಗಿ ವೈಕೃತವಾಗುವ ತನಕ ಅವು ಉಳಿದುಕೊಂಡಿರುತ್ತವೆ. ಜನ್ಯಿ ಸಿದ್ಧಾಂತವು, ಅನುಸಂಧಾನಿತವಾದ ಎಲ್ಲ ಸಸ್ಯ ಪ್ರಾಣಿಗಳಿಗೂ ಅನ್ವಯಿಸುತ್ತದೆಂದೂ ಜನ್ಯಿ ವೈಕೃತಿ(Gene Mutation)ಯೊಂದೇ ಆನುವಂಶೀಯ ವೈವಿಧ್ಯಗಳು ಹುಟ್ಟುವುದಕ್ಕೆ ನಮಗೆ ತಿಳಿದಿರುವ ಮಾರ್ಗವೆಂದೂ ನಿರ್ಣಾಯಕವಾಗಿ ಸಾಧಿಸಿ ತೋರಿಸಲಾಗಿದೆ. ಒಳ್ಳೆಯ ಇಲ್ಲವೆ ಕೆಟ್ಟ ಆಹಾರದಿಂದ ಅಥವಾ ಸಸ್ಯಗಳೂ ಪ್ರಾಣಿಗಳೂ ಜೀವಿಸುವ ವಾಯುಗುಣದಲ್ಲಿನ ವ್ಯತ್ಯಾಸಗಳಿಂದ ಉಂಟಾಗುವ ಪರಿವರ್ತನೆಗಳು ಆನುವಂಶಿಕವಲ್ಲ. ಆದ್ದರಿಂದ ವಿಕಾಸದಲ್ಲಿ ಯಾವ ಮಹತ್ವವನ್ನೂ ಹೊಂದಿಲ್ಲ.

ಮೆಂಡಿಲೀಯ ಜಾನ್ಯತಿಯು ಸಂಶೋಧಿತವಾದ ಮೇಲೆ ಅದು ಸ್ವೀಕೃತವಾದ ಚರಿತ್ರೆ ವಿಲಕ್ಷಣ. ಮೊಟ್ಟಮೊದಲು ಕಂಡುಹಿಡಿದ–ಅನೇಕ ಸಲ ಕ್ರೀಡೆ (Sport) ಗಳೆಂದು ಸಂಬೋಧಿತವಾದ–ವೈಕೃತಿಗಳು ಸಾಮಾನ್ಯವಾಗಿ ಹಾನಿಕರವಾಗಿದ್ದವು. ಡಾರ್ವಿನೀಯ ಉದ್ಗ್ರಹಣಜ್ಞರು (Selectionist) ವಿಕಾಸದ ಕಚ್ಚಾ ಸಾಮಗ್ರಿಯಲ್ಲಿ ಅಪೇಕ್ಷಿಸಿದ ಕ್ರಮೇಣ ಹಾಗೂ ಸಂತತ ವೈವಿಧ್ಯತೆಗೆ ಬದಲು, ಸುಸ್ಫುಟ (Clear–cut)ವಾದ ವಿಚ್ಛಿನ್ನ (Discontinuous) ಹಂತಗಳನ್ನು ಇವು ತೋರಿಸುತ್ತಿದ್ದವು. ಆದ್ದರಿಂದ ಉದ್ಗ್ರಹಣಜ್ಞರು ಮೆಂಡಿಲೀಯ ಜಾನ್ಯತಿಯು ವೈವಿಧ್ಯತೆಯ ಮೂಲವಾಗಲಾರದೆಂದು ನಿರಾಕರಿಸಿದರು. ಇದಕ್ಕೆ ಪ್ರತಿಯಾಗಿ ಮೆಂಡಿಲೀಯ ಜಾನ್ಯತಿಜ್ಞರು ತಮ್ಮ ವೈಕೃತಿಗಳೊಂದೇ ಆನುವಂಶೀಯ ವೈವಿಧ್ಯತೆಗೆ ಮೂಲವೆಂಬುದನ್ನು ಕಂಡುಕೊಂಡು, ಇವುಗಳು ವ್ಯಾಪಕವಾದ ವಿಚ್ಛಿನ್ನ ಹಂತಗಳನ್ನು ತೋರಿಸುವುದರಿಂದಲೂ, ಹಠಾತ್ತನೆ, ಹೊರತೋರಿಕೆಯಲ್ಲಿ ಸುದೀರ್ಘ ಉದ್ಗ್ರಹಣದ ನೆರವಿಲ್ಲದೆಯೇ ಸಂಪೂರ್ಣ ತಯಾರಾದ ರೂಪದಲ್ಲಿಯೇ ಹುಟ್ಟಿಬರುವುದರಿಂದಲೂ, ಉದ್ಗ್ರಹಣವು ವಿಕಾಸದಲ್ಲಿ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದು ಯೋಚಿಸಿ, ಅದನ್ನು ನಿರಾಕರಿಸಿದರು.

ತಿಳುವಳಿಕೆ ಹೆಚ್ಚಿದಂತೆಲ್ಲ ಈ ಎರಡು ಸಂಶೋಧನಾ ಪಂಥಗಳೂ ಆಧಾರವಿಲ್ಲದ ಕಾರಣಗಳಿಗಾಗಿ ಪರಸ್ಪರ ವಿರೋಧಿಗಳಾಗಿವೆಯೆಂಬುದು ವ್ಯಕ್ತವಾಯಿತು.

---

[6] ವೈಕೃತಿ, mutation. Mutate, change, ವಿಕೃ, ಬದಲಿಸು ಧಾತುವಿನ ಭಾವನಾಮ.

ಹೆಚ್ಚು ಹೆಚ್ಚು ಜನ್ಯಿಗಳನ್ನು ಗುರುತುಹಿಡಿದಂತೆಲ್ಲ, ಅವುಗಳ ಪರಿಣಾಮಗಳನ್ನು ಅಭ್ಯಸಿಸಿದಂತೆಲ್ಲ, ಮೊದಲು ಕಂಡುಬಂದ ವ್ಯಾಪಕ ಮತ್ತು ವಿಚ್ಛಿನ್ನ ವೈಕೃತಿಗಳು ಬಹುಮತವು ಸ್ವಲ್ಪ ಪರಿಣಾಮವನ್ನು ಮಾತ್ರ ಉಂಟುಮಾಡುವ ವೈಕೃತಿ ಪರಂಪರೆ ಯಲ್ಲಿನ, ಸುಲಭತರವಾಗಿ ಪತ್ತೆಯಾಗಬಲ್ಲ ಅತಿರೇಕ(Extremes)ಗಳೆಂಬುದು ಸ್ಪಷ್ಟವಾಯಿತು. ಇದಕ್ಕಾಗಿಯೇ ಈ ವೈಕೃತಿಗಳು ಹಾನಿಕರ. ಏಕೆಂದರೆ ಜೀವಿಗಳು, ಸಣ್ಣ ಮತ್ತು ಕ್ರಮೇಣ ಹೆಜ್ಜೆಗಳಿಗಿಂತ ದೊಡ್ಡ ಮತ್ತು ವಿಚ್ಛಿನ್ನ ವ್ಯತ್ಯಾಸಗಳಿಂದ ಸಹಜವಾಗಿಯೇ ಅವ್ಯವಸ್ಥಿತಗೊಳ್ಳುವ, ಪರಿಸ್ಥಿತಿಗೆ ನಾಜೂಕಾಗಿ ಹೊಂದಿಕೊಂಡಿ ರುವ ಸಂಹತಿಗಳು (Systems).

ಮೆಂಡಲೀಯ ಜಾನ್ಯತಿಜ್ಞರೂ ಎರಡು ಪಾಠಗಳನ್ನು ಕಲಿಯಬೇಕಾಯಿತು. ಒಂದು ಕಡೆಯಲ್ಲಿ ವೈಯಕ್ತಿಕ ಜನ್ಯಿಗಳು ನಿರ್ದಿಷ್ಟ ಲಕ್ಷಣಗಳಿಗೆ ಸಂಬಂಧಿತ ವಿದ್ದಾಗ್ಯೂ, ಒಂದು ಸಂಘಟಿತ ಜನ್ಯಿಗುಂಫ (gene complex)ವನ್ನು ಸಂವಿಧಾನ ಗೊಳಿಸಿರುವ ಇತರ ಜನ್ಯಿಗಳಿಂದ ಕೂಡ ಅವುಗಳ ಆ ಲಕ್ಷಣಗಳ ನಿಯಂತ್ರಣವು ಪ್ರಭಾವಿತವಾಗುತ್ತದೆಂಬುದನ್ನು ಕಂಡುಕೊಂಡರು. ಪೂರ್ವ ವೈಕೃತಿಗಳ ಫಲ ವಾಗಿ, ಪ್ರಕೃತಿಯಲ್ಲಿ, ಸಸ್ಯ ಮತ್ತು ಪ್ರಾಣಿಗಳಲ್ಲಿನ ಜನ್ಯಿಗುಂಫಗಳು ಅನೇಕ ಜನ್ಯಿಗಳನ್ನೊಳಗೊಂಡಿವೆ. ಫಲವತ್ಕರಣಕಾಲದಲ್ಲಿ (During fertilisation) ಸಂಭವನೀಯವಾದ ಅತ್ಯಪರಿಮಿತ ವ್ಯತಿಹಾರಗಳಲ್ಲೆಲ್ಲಾ (Permutations) ಇವುಗಳು ಹಂಚಲ್ಪಡುತ್ತವೆ ಮತ್ತು ಪುನಃ ಸಂಯೋಜಿತವಾಗುತ್ತವೆ. ಈ ಪುನಃ ಸಂಯೋಗ(recombination)ಗಳು ವೈಯಕ್ತಿಕ ಜನ್ಯಿಗಳ ಪ್ರಧಾನ ನೇತೃತ್ವದಲ್ಲಿ, ಕ್ರಮವಾದ ಮತ್ತು ಸಂತತವಾದ ವ್ಯತ್ಯಾಸವನ್ನು ಲಕ್ಷಣಗಳಲ್ಲಿ ಉಂಟುಮಾಡುತ್ತ ವೆಂಬುದನ್ನು ತೋರಿಸಲಾಗಿದೆ. ಸರ್ ರೋನಾಲ್ಡ್ ಫಿಷರರು (Sir Ronald Fisher) ಇದರ ಮಹತ್ತ್ವವನ್ನು, ಅಧಿಭಾವ(dominance)ವೆಂದು ಈಗ ಕರೆಯಲಾಗುವ ಗುಣವನ್ನು ತೋರಿಸುವ ವೈಕೃತ ಜನ್ಯಿಯು (mutant gene) ಪೂರ್ವದ ಮಧ್ಯಸ್ಥ ಸ್ಥಿತಿ(intermediate state)ಯಿಂದ ಕ್ರಮೇಣವಾಗಿ ಹೀಗೆ ಅಧಿಭಾವಿಯಾಗಿ ಪರಿಣಮಿತವಾಗಿದೆಯೆಂದು ತೋರಿಸುವುದರ ಮೂಲಕ ನಿರೂಪಿ ಸಿದರು. ತಮ್ಮನ್ನು ಪಡೆದ ಜೀವಿಗಳಿಗೆ ಪ್ರಯೋಜನಕಾರಿಗಳಾದಂಥ ವೈಕೃತಿಗಳಿಗೆ ಸಂಭವಿಸಿದ್ದು ಇದೇ. ಇಂಥವುಗಳಲ್ಲಿ ಪ್ರಯೋಜನೀಯ (favourable) ವೈಕೃತ (mutant)ಗಳ ಪ್ರಭಾವವನ್ನು ಹೆಚ್ಚುಪಡಿಸುವ ಜನ್ಯಿಗುಂಫಗಳ ಉದ್ಗ್ರಹಣ ವಾಗಿದೆ, ಆದ್ದರಿಂದ ಇಂಥ ವೈಕೃತ ಜನ್ಯಿಯು ಒಂದೇ ಪಿತೃವಿನಿಂದ ಆನುವಂಶಿತ ವಾಗಿದ್ದಾಗಲೂ ಇವುಗಳ ಪರಿಣಾಮಗಳು ಅಭಿವ್ಯಕ್ತವಾಗುತ್ತವೆ. ಇದೇ ಅಧಿ ಭಾವದ ವ್ಯಾಖ್ಯೆ (definition) ವಿಲೋಮವಾಗಿ, ತಮ್ಮನ್ನು ಪಡೆದ ಜೀವಿಗಳಿಗೆ ಅನಾನುಕೂಲಿಯಾದ ಜನ್ಯಿಗಳ ವಿಷಯದಲ್ಲಿ, ಅಂಥ ಜನ್ಯಿಗಳ ಪರಿಣಾಮವನ್ನು ಅಣಗಿಸುವ ಜನ್ಯಿಗುಂಫಗಳ ಉದ್ಗ್ರಹಣವಾಗಿದೆ. ಆದ್ದರಿಂದ ಇಂಥ ವೈಕೃತ

ಜನ್ಯಿಯು ಎರಡೂ ಪಿತೃಗಳಿಂದ ಅನುವಂಶಿತವಾದಾಗ ಮಾತ್ರ ಅಭಿವ್ಯಕ್ತ (manifest)ವಾಗುತ್ತದೆ. ಇದೇ ಅಧೋಭಾವ(recessiveness)ದ ವ್ಯಾಖ್ಯೆ. ಇದಕ್ಕೂ ಮುಂದೆ ಕೂಡ ಅವು ಅಣಗಿಸಲ್ಪಡಬಹುದು. ಉದಾಹರಣೆಗೆ, ಅಂಥ ಜನ್ಯಿಗಳ ಪರಿಣಾಮುಗಳು ಕೆಲವು ಸಲ ನಿರ್ನಾಮವಾಗಿ ಬಿಡಬಹುದು; ಆಗ, ಜನ್ಯಿಯು ಲಕ್ಷಣಗಳ ಮೇಲೆ ಪ್ರಧಾನ ನಿಯಂತ್ರಣವಿಲ್ಲದ, ಬರಿಯ 'ಪರಿವರ್ತಕ' (modifier)ಗಳಾಗಿ ಮಾರ್ಪಡುತ್ತದೆ.

ಮೆಂಡಲೀಯ ಜಾನ್ಯತಿಜ್ಞರು ಕಲಿಯಬೇಕಾದ ಎರಡನೆಯ ಪಾಠ, ತಾವು ಮೊದಲು ಕಂಡ ವೈಕೃತಿ ಪರಿಣಾಮಗಳು ಅತಿ ನಿಚ್ಚಳವೆಂದು ತೋರಿದರೂ, ನಿಜಕ್ಕೂ ಅವು ಈಗಾಗಲೇ ಹಿಂದಿನ ಜನ್ಯಿಗುಂಫಗಳ ಫಲಿತಾಂಶಗಳು—ಎಂಬುದನ್ನು. ಇದು ಏಕೆ ಹೀಗೆಂದರೆ, ಇಂಥ ವೈಕೃತಿಗಳು ಪೂರ್ವದಲ್ಲಿ ಸಂಭವಿಸಿವೆ ಮತ್ತು ಈ ವೈಕೃತಿಗಳಿಗೆ ಜನ್ಯಿಗುಂಫಗಳು ಸರಿಹೊಂದಿಕೊಂಡಿವೆ. ಒಂದೇ ಒಂದು ಜನ್ಯಿಯು ಈಗ ಸದ್ಯದಲ್ಲಿ ಒಂದಲ್ಲೊಂದು ಲಕ್ಷಣ ವ್ಯತ್ಯಾಸದ ಉತ್ಪಾದನೆಯನ್ನು ನಿಯಂತ್ರಿಸುವ 'ಚಿಲಕ' ಅಥವಾ 'ಸ್ವಿಚ್' (switch)ನಂತೆ ಕೆಲಸಮಾಡುತ್ತಿದ್ದರೂ, ಈ ಲಕ್ಷಣವ್ಯತ್ಯಾಸವು ಮೂಲದಲ್ಲಿ ಅಂಥ 'ಸ್ವಿಚ್' ಜನ್ಯಿಯ ಒಂದೇ ಹೊಡೆತದ ವೈಕೃತಿಯಿಂದ ಉಂಟಾಯಿತೆಂದು ಅರ್ಥವಾಗುವುದಿಲ್ಲ. ಪ್ರಾಯಶಃ, ಜನ್ಯಿಗುಂಫಗಳಲ್ಲಿ ಪೂರ್ವದ ಉದ್ಗ್ರಹಣದ ಫಲಿತಾಂಶವಾಗಿ, ಕ್ರಮೇಣವಾದ ರೀತಿಯಲ್ಲಿ ಇವು ಸಂರಚಿಲ್ಪಟ್ಟಿವೆ.

ಹೀಗಾಗಿ ಡಾರ್ವಿನನ ಸಿದ್ಧಾಂತವು ಅಪೇಕ್ಷಿಸುವಂತೆಯೇ ಜನ್ಯಿಗಳ ವೈಕೃತಿಗಳು ಮತ್ತು ಅವುಗಳ ಪುನಃಸಂಯೋಗಗಳು, ಉದ್ಗ್ರಹಣವು ವಿಕಾಸವನ್ನುಂಟುಮಾಡಲು ಬೇಕಾದ ವೈವಿಧ್ಯದ ಪೂರೈಕೆಯನ್ನು ಒದಗಿಸುತ್ತವೆ—ಎಂಬುದು ಸ್ಪಷ್ಟ. ಈ ಉದ್ಗ್ರಹಣದ ಆವಶ್ಯಕತೆಗಳು ಬಲು ಜುಲುಮೆಯಿಂದ ಕೂಡಿದ್ದು. ಏಕೆಂದರೆ, ಟಿ. ಹೆಚ್. ಹಕ್ಸ್‌ಲಿಯು (T. H. Huxley) ತೋರಿಸಿದಂತೆ ಕೆಲವು ಜೀವಿಗಳು ನಿಧಾನವಾಗಿಯೂ, ಇನ್ನು ಬೇರೆ ಜೀವಿಗಳು ಬೇಗಬೇಗನೆಯೂ ವಿಕಾಸಿತವಾಗಿವೆ; ಆ ಎರಡು ಆವಶ್ಯಕತೆಗಳನ್ನೂ ಪೂರೈಸಬಲ್ಲ ಸಂಯಂತ್ರ ಪ್ರಕೃತಿ ಉದ್ಗ್ರಹಣವೊಂದೇ ಎಂಬುದನ್ನು ಅವನು ಕಂಡುಕೊಂಡ. ಮೆಂಡಿಲೀಯ ಆನುವಂಶಿಕತೆಯ ವೈವಿಧ್ಯತೆ ಮತ್ತು ಸ್ಥಾಯಿತ್ವ ಎರಡನ್ನೂ ಅದು ಉತ್ಪನ್ನಮಾಡಬಲ್ಲುದರಿಂದ, ಅದು ಹೀಗೆ ಮಾಡಲು ಸಾಧ್ಯ. ಫೋರ್ಡ್ (Ford) ಹೇಳಿದಂತೆ ಪ್ರಕೃತಿ ಉದ್ಗ್ರಹಣವು ಕೆಲಸಮಾಡಲು ಅಪಾರ ವ್ಯಾಪ್ತಿಯ ಪ್ರಕಾರ(types)ಗಳು ಉಪಲಬ್ಧವಿರಬೇಕು. ಇದು ಜನ್ಯಿಗಳ ವೈಕೃತಿ ಮತ್ತು ಪುನಃಸಂಯೋಗಗಳಿಂದ ಒದಗಿಬರುತ್ತದೆ. ಆದರೂ ಕೂಡ ಪ್ರಯೋಜನೀಯ ಜನ್ಯಿಗುಂಫವೊಂದು ಸಿದ್ಧಿತವಾದಾಗ ಅದು ಒಡೆದುಹೋಗಿ ಹರಿಹಂಚಲ್ಪಡಬಾರದು. ತಮ್ಮತಮ್ಮೊಳಗೆ ಜನ್ಯಿಗಳು ಕಲಬೆರಕೆಯಾಗುವುದಿಲ್ಲವಾದ್ದರಿಂದಲೂ, ವಿರಳವಾಗಿ ಮಾತ್ರ ವೈಕೃತವಾಗುವುದರಿಂದಲೂ ಇದು ಸಾಧ್ಯವಾಗುತ್ತದೆ.

'ಪ್ರಕೃತಿ ಉದ್ಗ್ರಹಣದಿಂದ ವಿಕಾಸ'ದ ಶತಾಬ್ದಿ.

ಮುಕ್ತಾಯದಲ್ಲಿ ಡಾರ್ವಿನ್ ಮತ್ತು ವ್ಯಾಲೇಸರು ತಮ್ಮ ಸಿದ್ಧಾಂತವನ್ನು ಮೊದಲು ಪ್ರಕಟಿಸಿದಾಗಿನಿಂದ ಸಂದು ಹೋಗಿರುವ ನೂರು ವರ್ಷಗಳಲ್ಲಿ ಜೀವ ವಿಕಾಸದ ವಾಸ್ತವಿಕತೆಯು ಸರ್ವತ್ರ ಮಾನ್ಯವಾಗಿದೆಯೆಂದೂ, ಅದರ ಸಂಯಂತ್ರವು ವಿಧ್ಯುಕ್ತವಾಗಿ ವಿವರಿಸಲ್ಪಟ್ಟಿದೆಯೆಂದೂ ಹೇಳಬಹುದು. ಇದು ಎಷ್ಟು ಸುಭದ್ರವಾದ ಅಸ್ತಿಭಾರದ ಮೇಲೆ ನಿಂತಿದೆಯೆಂದರೆ ಈಚಿನ ಎಲ್ಲ ಸಂಶೋಧನೆಗಳೂ ಇದರ ಸಾಕ್ಷ್ಯಶ್ರೇಣಿಗಳಲ್ಲಿನ ಬಿಡಿ ಕೊಂಡಿಗಳನ್ನೂ, ಅವುಗಳಿಂದ ನಾವು ಹೊರಡಿಸಬಹುದಾದ ಅನುಮಾನಗಳನ್ನೂ ಮಾತ್ರ ದೃಢಪಡಿಸುತ್ತವೆ. ಇದರ ಕ್ಷೇತ್ರವು ಸಸ್ಯ ಪ್ರಾಣಿಗಳ ಉತ್ಪಾದನೆಯ ವಿವರಣೆಯಿಂದ ಮನುಷ್ಯನ ಬೌದ್ಧಿಕ ಜೀವನದ ಪ್ರತಿ ದೃಷ್ಟಿಕೋನಕ್ಕೂ (aspect) ವಿಸ್ತರಿಸಿದೆ. ಆ ಜೀವನದ ಅತಿಶ್ರೇಷ್ಠ ದೃಷ್ಟಿಕೋನದಲ್ಲಿ ಇದರ ಮಹತ್ತಮ ವಿಜಯವು ಮುಂದೆ ಇನ್ನೂ ಕಾದಿದೆ ಎಂಬುದನ್ನು ಶಂಕಿಸುವುದು ಧೃಷ್ಟತನವಾದೀತು. ಮುಂದೆ ಆವಶ್ಯವೆನಿಸಬಹುದಾದ ಹೊಸ ವ್ಯವಸ್ಥಾಪನೆಗಳಿಂದೊಡಗೂಡಿ ಈ ಕಲ್ಪನೆಯು ಡಾರ್ವಿನನು ೧೮೩೭ರಲ್ಲಿ ತನ್ನ ವಹಿಯಲ್ಲಿ ಬರೆದುದನ್ನು ಒದಗಿಸುತ್ತದೆ ಮತ್ತು ಮುಂದೆಯೂ ಒದಗಿಸುತ್ತ ಹೋಗುತ್ತದೆ: "ನನ್ನ ಸಿದ್ಧಾಂತವು ಈಚಿನ ಮತ್ತು ಉತ್ಖಾತದ ತುಲನಾತ್ಮಕ ಅನುಭೇದಕ್ಕೆ ಅಭಿರುಚಿಯನ್ನು ಕೊಡುತ್ತದೆ. ಇದು ಅಂತಃಸ್ಫೂರ್ತಿ, ಆನುವಂಶಿಕತೆ ಮತ್ತು ಮನಸ್ಸು, ಸಂಕರತೆ(hybridity)ಯ ಯಾವ ಸಂದರ್ಭಗಳು ಸಂಕ್ರಮಣಕ್ಕೆ (crossing) ಅನುಕೂಲವಾಗಿವೆ, ಯಾವುವು ಅದನ್ನು ತಡೆಗಟ್ಟುತ್ತವೆ— ಮತ್ತು ಸಂತತಿಗಳ ನಿಕಟತಮ ಪರೀಕ್ಷಣ, ನಾವು ಎಲ್ಲಿಂದ ಬಂದೆವು ಮತ್ತು ಎಲ್ಲಿಗೆ ಪ್ರವೃತ್ತರಾಗಿದ್ದೇವೆ ಎಂಬುದನ್ನು ತಿಳಿಯಲನುವಾಗುವ ಪರಿವರ್ತನಕಾರಣಗಳು—ಇವೆಲ್ಲದರ ಅಧ್ಯಯನಕ್ಕೂ ನಮ್ಮನ್ನು ಕರೆದೊಯ್ಯುತ್ತದೆ. ಇದೂ ಮತ್ತು ಜಾತಿ ರಚನೆಯ ಪ್ರತ್ಯಕ್ಷಮಾರ್ಗದ ನೇರ ಪರೀಕ್ಷೆಗಳು ನಮ್ಮನ್ನು ಬದಲಾವಣೆಗಳ ನಿಯಮಗಳ ಸಂಶೋಧನೆಗೇ ಕರೆದೊಯ್ಯಬಹುದು. ಇದಾದನಂತರ ನಮ್ಮ ಪರಿಕಲ್ಪನೆಗಳ ಭವಿಷ್ಯ ನಿರ್ದೇಶನಕ್ಕೆ ಈ ನಿಯಮಗಳೇ ಅಧ್ಯಯನದ ಮುಖ್ಯ ವಿಷಯಗಳಾಗುವವು."

ಸೂರ್ಯನ ಸುತ್ತ ಭೂಮಿ ಚಲಿಸುವುದೆಂಬ ಕೂಪರ್ನಿಕಸನ(Copernicus) ನಿರೂಪಣೆಯನ್ನೂ ಈ ಚಲನೆಯ ಬಗ್ಗೆ ನ್ಯೂಟನ್ನಿನ(Newton) ನಿಯಮ ರೂಪಣವನ್ನೂ ಒಪ್ಪುವಂಥ ಭರವಸೆಯಿಂದಲೇ, ವಿಜ್ಞಾನವು ಸಮಗ್ರ ಜೀವರಾಜ್ಯಕ್ಕೆ ಅನ್ವಯಿಸುವ ಪ್ರಥಮ ಸಾಮಾನ್ಯ ತತ್ವಗಳ ಸಂಶೋಧನೆಯ ಶತಾಬ್ದಿಯನ್ನು ಈಗ ಆಚರಿಸಬಹುದು.

ಮೂಲಲೇಖಕರು: ಸರ್ ಗ್ಯಾವಿನ್ ಡಿ ಬೀರ್.— ಅನುವಾದಕರು: ಕೆ. ಎಚ್. ಕೃಷ್ಣಮೂರ್ತಿ

ಪಾರಿಭಾಷಿಕ ಶಬ್ದಗಳು

Transformism= ಪರಿವರ್ತವಾದ; Organic Evolution= ಜೀವವಿಕಾಸ; Breed= ಪ್ರಸವಿಸು; Species= ಜೀವಜಾತಿ; Immutability= ಅಪರಿವರ್ತನೀಯತೆ; Exploration= ಸಮನ್ವೇಷಣೆ; Subconcious= ಸುಪ್ತಚೇತನ; Heriditarily transmitted= ಆನುವಂಶೀಯವಾಗಿ ಸಂಪ್ರೇಷಿತ; Mammal= ಸಸ್ತನಿ; Palaeontological= ಪುರಾಣಜೀವನಶಾಸ್ತ್ರ; Comparative Anatomy= ತುಲನಾತ್ಮಕ ಅನುಛೇದ; Vertebrate= ಕಶೇರುಕ; Skeleton= ಕಂಕಾಲ; Genetic affinity= ಜಾನ್ಯತೀ ಬಂಧುತ್ವ; Embryology= ಭ್ರೂಣಶಾಸ್ತ್ರ; Blood Vessel= ರಕ್ತವಾಹಿನಿ; Dorsal aorta= ಪೃಷ್ಠರೋಹಿಣಿ; Vestige= ಅವಶಿಷ್ಟ; Pineal gland= ಪೀನಿಯಲ್ ಗ್ರಂಥಿ; Egg tooth= ಅಂಡದಂತ; Marsuphial= ಕೋಶೀಯ; Tertian strata= ಟರ್ಷಿಯನ್ ಸ್ತರ; Ferns= ಜರಿಗಿಡಗಳು; Conifers= ಶಂಕುಧರಿಗಳು; Molluscs= ಮೃದ್ವಂಗಿಗಳು; Rodents= ಕೃಂತಕಗಳು; Carnivores= ಮಾಂಸಾಹಾರಿಗಳು; Ungulates= ಖುರಯುಕ್ತಗಳು; Instinct= ಅಂತಃಸ್ಫೂರ್ತಿ; Fertile offspring= ಫಲ್ಯಸಂತಾನ; Natural Selection= ಪ್ರಕೃತಿ ಉದ್ಗ್ರಹಣ; Reproductive cells= ಪ್ರಜನ ಕೋಶಗಳು; Mortality= ಮರಣಶೀಲತೆ; Inheritance= ಆನುವಂಶಿಕತೆ; Tendency= ಪ್ರವೃತ್ತಿ; Blending Inheritance= ಮಿಶ್ರ ಆನುವಂಶಿಕತೆ; Heritage= ವಂಶಾಗತಿ; Cell structure= ಕೋಶರಚನೆ; Chromosome= ವರ್ಣತನು; Cytological= ಕೌಶಕೀಯ; Fertilisation= ಫಲವತ್ಕರಣ; Mutation= ವೈಕೃತಿ; Gener mutation= ಜನ್ಯಿ ವೈಕೃತಿ; Gene Complex= ಜನ್ಯಿಗುಂಫ; Mutant gene= ವೈಕೃತಿ ಜನ್ಯಿ; Modifier= ಪರಿವರ್ತಕ.

ಮಾವು

ಭಾರತೀಯ ಫಲಗಳಲ್ಲಿ ಮಾವು ಅತ್ಯಂತ ಪ್ರಿಯವಾದ ಹಣ್ಣು. ಮಾವಿನ ಹಣ್ಣಿನ ಮಧುರ ರುಚಿಯನ್ನು ಅನುಭವಿಸದವರೇ ಇಲ್ಲವೆಂದು ಹೇಳಬಹುದು. ಬಡವನಾಗಲಿ, ಶ್ರೀಮಂತನಾಗಲಿ ಮಾವಿನಹಣ್ಣಿನ ಕಾಲದಲ್ಲಿ ಅದರ ರುಚಿಯನ್ನು ನೋಡದೆ ಸುಮ್ಮನಿರಲಾರ. ಮಾವಿನಹಣ್ಣಿನ ಪ್ರಥಮ ಉಪಯೋಗ ಹಾಗೂ ಅದರ ಉತ್ಪನ್ನ ಭಾರತದಲ್ಲಿಯೇ ಆರಂಭವಾಯಿತೆಂದು ಭಾವಿಸಲಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಮಾವು, ಅದರ ಚಿಗುರು, ಎಲೆಗಳು ಒಂದಾಗಿ ಬೆರೆತಿದೆ. ಸಂಸ್ಕೃತ ಕಾವ್ಯಗಳಲ್ಲಿ ಅಲ್ಲಲ್ಲಿ ಕವಿಗಳು ಮಾವು, ಆಮ್ರಮಂಜರಿಯ ವರ್ಣನೆ ಮಾಡಿರುವುದು ಸಾಮಾನ್ಯ ಸಂಗತಿ. ಕಾಳಿದಾಸ 'ಕುಮಾರಸಂಭವ'ದಲ್ಲಂತೂ ಮನಃಪೂರ್ತಿ ಆಮ್ರಮಂಜರಿಯನ್ನು ವರ್ಣಿಸಿದ್ದಾನೆ. ಮೊಗಲರ ಕಾಲದಲ್ಲಿ ಈ ಹಣ್ಣಿಗೆ ರಾಜಮರ್ಯಾದೆ ಸಹ ಆಗಿತ್ತು. ಮಾವಿನ ಹಣ್ಣಿನಲ್ಲಿ ಕಂಡುಬರುವ ಮಧುರತೆ, ರಸಾರ್ದ್ರತೆಯನ್ನು ಗಮನದಲ್ಲಿಟ್ಟುಕೊಂಡೇ ಸಂಸ್ಕೃತದಲ್ಲಿ 'ಆಮ್ರ', 'ಚೂತ' 'ರಸಾಲ' ಎಂಬ ಶಬ್ದಗಳನ್ನು ಪ್ರಯೋಗಮಾಡಿರಬೇಕು. ಭಾರತೀಯ ಹಣ್ಣಾದ ಮಾವನ್ನು ಇಂದು ಬೇರೆ ಬೇರೆ ದೇಶಗಳಲ್ಲೂ ಬೆಳೆಯುತ್ತಿದ್ದಾರೆ. ಪರದೇಶಗಳಲ್ಲಿ ಮಾವಿನ ಪ್ರಸಾರಕ್ಕೆ ಪೋರ್ಚುಗೀಸರೇ ಕಾರಣವೆಂದು ತಿಳಿದು ಬಂದಿದೆ.

ಭಾರತದಲ್ಲಿ ದೊರಕುವ ವಿವಿಧ ಜಾತಿಯ ಮಾವಿನ ಹಣ್ಣುಗಳು ಮೂಲವಾಗಿ ಅಸ್ಸಾಂ, ಬರ್ಮಾ, ಥೈಲ್ಯಾಂಡ್ ಸಮೀಪದಲ್ಲಿ ಇದ್ದುವೆಂದೂ, ಅವುಗಳ ಸಸ್ಯ ಶಾಸ್ತ್ರೀಯ ಹೆಸರುಗಳು 'ಮ್ಯಾಗ್ನಿಫೆರಾ ಇಂಡಿಕಾ' ಮತ್ತು 'ಮ್ಯಾಗ್ನಿಫೆರಾ ಸಿಲ್ವೆಟಿಕಾ' ಎಂದು ಇತ್ತೀಚೆಗೆ ತಿಳಿದುಬಂದಿದೆ. ಸ್ವಾಭಾವಿಕವಾಗಿ ಈ ಎರಡು ಜಾತಿಯ ಮಾವಿನಲ್ಲಿ ತಳಿಸಮ್ಮಿಶ್ರಣವಾಗಿ, ನಾವು ಇಂದು ಕಾಣುವ ವಿವಿಧ ರೀತಿಯ—ಜಾತಿಯ—ಮಾವಿನ ಹಣ್ಣುಗಳು ಬಳಕೆಗೆ ಬಂದಿವೆಯೆಂದು ಕೋಶಶಾಸ್ತ್ರಜ್ಞರು ನಿರ್ಧರಿಸಿದ್ದಾರೆ.

ಮಾವು ಅಧಿಕವಾಗಿ ಭಾರತದಲ್ಲೆಲ್ಲಾ ಸಿಗುತ್ತದೆ. ಹಿಮಾಲಯದ ತಪ್ಪಲಲ್ಲಿ, ಪೂರ್ವ ಹಾಗೂ ಪಶ್ಚಿಮ ಘಟ್ಟಗಳಲ್ಲಿ, ಬಿಹಾರ್, ಒರಿಸ್ಸಾ, ಅಸ್ಸಾಂ ಅಂಡಮಾನ ಹಾಗೂ ದಕ್ಷಿಣ ಚೀನ, ಮಲಯ, ಇಂಡೊನೇಶಿಯಾ, ಆಸ್ಟ್ರೇಲಿಯಾ, ಫಿಲಿಫೈನ್ಸ್, ಹವಾಯ್, ವೆಸ್ಟ್ ಇಂಡೀಸ್, ಮೆಡಗಾಸ್ಕರ್ ಮತ್ತು ಆಫ್ರಿಕಾದ ಕೆಲವು ಭಾಗಗಳಲ್ಲೂ ಬೆಳೆಯುತ್ತವೆ. ಉತ್ತರ ಅಮೆರಿಕಾದಲ್ಲಿ ಫ್ಲಾರಿಡಾ ಮತ್ತು ಕ್ಯಾಲಿಫೋರ್ನಿಯಾದಲ್ಲೂ ಇತ್ತೀಚೆಗೆ ಬೆಳೆಯುತ್ತಿದ್ದಾರೆ. ಮಾವು, ಹಣ್ಣುಗಳ ಬೆಳೆಯಲ್ಲಿ ಶೇಕಡ ಅರವತ್ತಕ್ಕೂ ಹೆಚ್ಚು ಜಾಗವನ್ನು ಆಕ್ರಮಿಸಿಕೊಂಡಿದೆ. ಭಾರತದಲ್ಲಿ ಬೆಳೆಯುವ ಅತ್ಯಧಿಕ ಬೆಳೆಯನ್ನು ಉತ್ತರ ಪ್ರದೇಶ, ಬಿಹಾರ ಮತ್ತಿತರ ಪ್ರದೇಶ

ಗಳಲ್ಲಿ ಬೆಳೆಯುತ್ತಾರೆ. ಯಾವ ಯಾವ ಪ್ರದೇಶಗಳಲ್ಲಿ ಮಾವಿನ ಬೆಳೆ ಎಷ್ಟಿದೆ ಎಂಬುದನ್ನು ಕೆಳಗೆ ಕೊಟ್ಟಿರುವ ಪಟ್ಟಿಯಿಂದ ತಿಳಿಯಬಹುದು.

ಸಂಸ್ಥಾನಗಳು		ವಿಸ್ತೀರ್ಣ	ಶೇಕಡ	ಫಸಲು ಮಣ
ಉತ್ತರ ಪ್ರದೇಶ	....	೭೬೭,೬೯೧	೪೦.೨	೭೦.೦
ಬಿಹಾರ	....	೨೧೭,೫೧೭	೧೧.೪	೩೨.೭
ಆಂಧ್ರಪ್ರದೇಶ	....	೧೮೫,೮೫೮	೯.೮	೫೦.೨
ಒರಿಸ್ಸಾ	....	೧೬೭,೧೭೭	೮.೮	೩೩.೭
ಕೇರಳ	....	೧೧೩,೩೪೧	೫.೯	೧೦೦.೦
ಮದ್ರಾಸ್	....	೬೨,೮೧೯	೩.೩	೭೪.೫
ಬೊಂಬಾಯಿ	....	೫೪,೮೫೪	೨.೯	೪೬.೬
ಮಧ್ಯ ಪ್ರದೇಶ	....	೫೦,೯೦೩	೨.೭	೭೧.೨
ಮೈಸೂರು	....	೪೫,೨೭೬	೨.೪	೧೮೫.೪
ತ್ರಿಪುರ	....	೨೪,೦೦೦	೧.೩	೯೮.೭
ಪಂಜಾಬ್	....	೧೭,೪೫೬	೦.೯	೮೧.೭
ಆಸ್ಸಾಂ	....	೧೫,೦೦೦	೦.೭	೧೯.೦
ಜಮ್ಮು ಕಾಶ್ಮೀರ	....	೪೭೨	—	೯೮.೭
ಹಿಮಾಚಲ ಪ್ರದೇಶ	....	೨೦೮	—	೯೮.೭
ರಾಜಾಸ್ಥಾನ	....	೬೦	—	೯೮.೭
ಬಂಗಾಳ (ಪಶ್ಚಿಮ)	....	೧೮೦,೭೭೬	೯.೫	೧೩೭.೨
ಒಟ್ಟು	....	೧,೯೦೮,೦೭೨	೧೦೦.೦	—

ಮಾವಿನ ಮರಗಳು ಸಾಮಾನ್ಯವಾಗಿ ಬಹಳ ವರ್ಷಗಳವರೆಗೆ ಬಾಳುತ್ತವೆ, ಪಶ್ಚಿಮ ಬಂಗಾಳ, ಬಿಹಾರ, ಬೊಂಬಾಯಿ ಮುಂತಾದ ಪ್ರದೇಶಗಳಲ್ಲಿ ನೂರು ವರ್ಷಕ್ಕೂ ಹೆಚ್ಚು ವಯಸ್ಸಾಗಿರುವ ಮರಗಳಿವೆ ಎಂದು ತಿಳಿದುಬಂದಿದೆ. ಉದಾಹರಣೆಗೆ ಚಂಡೀಘಡದಲ್ಲಿರುವ ಒಂದು ಮರದ ಕಾಂಡ ೯.೬ ಮೀಟರು ವ್ಯಾಸವಿದ್ದು, ಮರದ ಮೇಲ್ಭಾಗ ೨,೫೫೦ ಚದರ ಮೀಟರುಗಳಿವೆ. ಇದು ಪ್ರತಿವರ್ಷ ೪೫೦ ಮಣ ಹಣ್ಣುಗಳನ್ನು ಕೊಡುತ್ತದೆ. ಫಿಲಿಫೈನ್ಸ್‌ನಲ್ಲಿರುವ ಮತ್ತೊಂದು ಮರ ವರ್ಷಕ್ಕೆ ೩೫,೦೦೦ ಹಣ್ಣುಗಳು ಕೊಡುತ್ತಿದೆ ಎಂದು ಕ್ರೂಸಿಲ್ಲೊ ಎಂಬ ವಿಜ್ಞಾನಿ ತಿಳಿಸಿದ್ದಾನೆ.

ಮಾವಿನಹಣ್ಣುಗಳನ್ನು ವೈಜ್ಞಾನಿಕವಾಗಿ ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು. (೧) ಬೀಜಾಂಕುರ ವಿಧ (Seedling type), (೨) ಉದ್ಯಾನ ರೀತಿಯ ವಿಧ (Horticultural classes).

ಭಾರತದಲ್ಲಿ ಮುಕ್ಕಾಲುಭಾಗ ಮಾವಿನ ಬೆಳೆಯನ್ನು ಬೀಜಾಂಕುರ ವಿಧದಿಂದಲೇ ಬೆಳೆಸುತ್ತಾರೆ. ಆದರೆ ವ್ಯಾಪಾರೀ ದೃಷ್ಟಿಯಿಂದ ಅಷ್ಟು ಮುಖ್ಯವಾಗಿಲ್ಲ. ಮೂಲ ಮಾವಿನಮರಗಳು (Wild forms) ಅಂಡಮಾನ, ಕಾಸಿಹಿಲ್ಸ್, ಅಸ್ಸಾಂ ಕಣಿವೆ, ಸಿಕ್ಕಿಂ,, ಉತ್ತರ ಪ್ರದೇಶ ಹಾಗೂ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಲ್ಲಿ ದೊರೆಯುತ್ತವೆ. ಒಂದೊಂದು ಪ್ರದೇಶದಲ್ಲೂ ಮಾವಿನ ಹಣ್ಣಿನ ಆಕಾರ ಬೇರೆ ಬೇರೆ ರೀತಿಯದ್ದಾಗಿರುತ್ತದೆ.

ಮಾವಿನ ಬೀಜಾಂಕುರಗಳಲ್ಲಿ ಎರಡು ವಿಧಗಳನ್ನು ಗುರುತಿಸಬಹುದು.

(೧) ಏಕಭ್ರೂಣತ್ವ (Mono embryonic)

(೨) ಬಹುಭ್ರೂಣತ್ವ (Poly embryonic)

ಏಕಭ್ರೂಣತ್ವದ ಬೀಜಾಂಕುರದಿಂದ ಬೆಳೆದ ಮಾವಿನಮರಗಳಲ್ಲಿ, ತಮ್ಮ ಪೈತೃಕ(Parental)ವಾದ ಗುಣಗಳನ್ನು ತೋರ್ಪಡಿಸುವುದಿಲ್ಲ. ಸಾಮಾನ್ಯವಾಗಿ ಇಂತಹ ಮಾವಿನಲ್ಲಿ ಕಂಡುಬರುವ ಭ್ರೂಣತಳಿ ಸಮ್ಮಿಶ್ರವಾದದ್ದು (Hybrid). ಬಹುಭ್ರೂಣತ್ವ ಮಾವಿನಲ್ಲಿ, ಒಂದು ಭ್ರೂಣದ ಹೊರತು, ಮಿಕ್ಕೆಲ್ಲವೂ ತಿರುಳಭಾಗ (Nucellar). ಅವು ನಿರ್ಲಿಂಗವಾಗಿ ಬೆಳವಣಿಗೆ ಹೊಂದಿ ತನ್ನ ಪೈತೃಕ ಗುಣಗಳನ್ನು ತೋರ್ಪಡಿಸುವುದು. ಬಹುಭ್ರೂಣತ್ವವು ಆಗಾಗ್ಗೆ ಏಕಭ್ರೂಣತ್ವದಲ್ಲೂ, ಏಕ ಭ್ರೂಣತ್ವವು ಆಗಾಗ್ಗೆ ಬಹುಭ್ರೂಣತ್ವವಾಗಿ ಕಂಡುಬರುವುದರಿಂದ ಏಕಭ್ರೂಣತ್ವ ಹಾಗೂ ಬಹುಭ್ರೂಣತ್ವವನ್ನು ಬೇರೆ ಬೇರೆಯಾಗಿ ವಿಂಗಡಿಸಲಾಗುವುದಿಲ್ಲ.

ಬಹುಭ್ರೂಣತ್ವದ ಗಿಡಗಳು ಮಲಬಾರ್‌ನಲ್ಲಿ ಮಾತ್ರ ಕಂಡುಬರುತ್ತದೆ. ಅವುಗಳಲ್ಲಿ ಕೇವಲ ಹತ್ತು ಜಾತಿಯ ಗಿಡಗಳು ಮಾತ್ರ ವಿಜ್ಞಾನಿಗಳ ಗಮನಕ್ಕೆ ಬಂದಿದೆ. ಅವುಗಳಲ್ಲಿ ಓಲೂರ್ ಮತ್ತು ಚಂದ್ರಾಕರನ್ ಎಂಬುವು ಮುಖ್ಯವಾದವು. ಆಗ್ನೇಯ ಏಷ್ಯಾದಲ್ಲಿ ಕಂಡುಬರುವ ಮಾವಿನ ಮರಗಳಲ್ಲೂ ಬಹುಭ್ರೂಣತ್ವವನ್ನೆ ಹೆಚ್ಚಾಗಿ ಕಾಣಬಹುದು. ಅವುಗಳಲ್ಲಿ ಬಹು ಮುಖ್ಯವಾದವು ಇಂಡೋಚೀನಾದ ಕಾಂಬೋಡಿಯಾನಾ ಕರಾಬೊ, ಮತ್ತು ಫಿಲಿಫೈನ್ಸ್‌ನ ಪಿಕೋ.

ಸುಮಾರು ಒಂದುಸಾವಿರಕ್ಕೂ ಹೆಚ್ಚು ಜಾತಿಯ ಮಾವಿನಹಣ್ಣುಗಳು ಭಾರತದ ವಿವಿಧ ಪ್ರದೇಶಗಳಲ್ಲಿ ಬೆಳೆಯುವುದೆಂದು ತಿಳಿದುಬಂದಿದೆ. ಪ್ರತಿಯೊಂದು ಜಾತಿಯ ಮಾವಿನಹಣ್ಣು ತನ್ನದೇ ಆದ ರುಚಿಯನ್ನು ಪಡೆದಿರುತ್ತದೆ. ಭಾರತದಲ್ಲಿ ಸಿಗುವ ವಿವಿಧ ಜಾತಿಯ ಹಣ್ಣುಗಳನ್ನು ಅವುಗಳ ರುಚಿ ಹಾಗೂ ಬೆಳವಣಿಗೆಯ ಆಧಾರದಿಂದ ವರ್ಗೀಕರಿಸಿದ್ದಾರೆ. ಸುಮಾರು ೨೧೦ ಮುಖ್ಯವಾದ ವಿಧದ ಹಣ್ಣುಗಳಿವೆ ಎಂದೂ ಅವುಗಳಲ್ಲಿ ೭೭ ಭಾರತದಲ್ಲೂ ೨೪ ಪರದೇಶಗಳಲ್ಲೂ ಬೆಳೆಯುತ್ತಾರೆಂದು ತಿಳಿದುಬಂದಿದೆ. ಭಾರತದಲ್ಲಿ ದೊರಕುವ ಕೆಲವೇ ಜಾತಿಯ ಹಣ್ಣುಗಳು ಮಾತ್ರ ವ್ಯಾಪಾರೀ ದೃಷ್ಟಿಯಿಂದ ಮುಖ್ಯವಾಗಿವೆ. ಮುಖ್ಯವಾದ ಕೆಲವು ಮಾವಿನ ಹಣ್ಣುಗಳ ಹೆಸರನ್ನು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ. ಭಾರತದ ವಿವಿಧ ಪ್ರದೇಶದಲ್ಲಿ ಬೆಳೆಯುವ ಹಣ್ಣುಗಳನ್ನು ಮತ್ತೊಂದು ಪಟ್ಟಿಯಲ್ಲಿ ಕೊಟ್ಟಿದೆ.

ಭಾರತದಲ್ಲಿ ಬೆಳೆಯುವ ಕೆಲವು ಮುಖ್ಯವಾದ ಮಾವಿನ ಹಣ್ಣುಗಳು ಹಾಗೂ ಅದರ ಗುಣಗಳು :

	ಜಾತಿ	ಬೆಳೆಯುವ ಮುಖ್ಯ ಪ್ರದೇಶಗಳು	ಹಣ್ಣಿನ ಗುಣ	
೧.	ಆಲಂಪುರ ಬನೇಶನ್	ಆಂಧ್ರ, ಮದ್ರಾಸ್	ಒಳ್ಳೆಯದು	ತಿನ್ನಲು ಉಪಯೋಗಿಸಬಹುದು
೨.	ಅಲ್‌ಫನಸೂ ಬಾದಾಮಿ, ಗುಂಡು ಖಾದೆರ್	ಮದ್ರಾಸ್, ಆಂಧ್ರ, ಮೈಸೂರು	ಒಳ್ಳೆಯದು	ತಿನ್ನಲು ಬಹಳ ಒಳ್ಳೆಯದು
೩.	ಬೆಂಗಳೂರ ತೋತಾಪುರಿ	ಮದ್ರಾಸ್, ಆಂಧ್ರ, ಮೈಸೂರು	ಒಳ್ಳೆಯದು	ಕಾಯಿಗಳನ್ನು ಉಪಯೋಗಿಸಬಹುದು
೪.	ಬಂಗನಪಳ್ಳಿ ಬನೇಶನ್, ಸಫೇದ	ಮದ್ರಾಸ್, ಆಂದ್ರ	ಒಳ್ಳೆಯದು	ತಿನ್ನಬಹುದು
೫.	ಮುಂಬಯಿ (Bombay yellow)	ಉತ್ತರ ಪ್ರದೇಶ (U. P.), ಬಿಹಾರ	ಸಾಧಾರಣ	ತಿನ್ನಬಹುದು
೬.	ದುಶೇರಿ, ದುಶಹರಿ ಅಮಾನ್, ನಿರಾಲಿ ಅಮಾನ್	ಉತ್ತರ ಪ್ರದೇಶ ಪಂಜಾಬು, ಡೆಲ್ಲಿ	ಒಳ್ಳೆಯದು	—
೭.	ಫಜಲಿ, ಫಜಲಿಮಾಲ್ಡ	ಪ. ಬಂಗಾಳ ಉತ್ತರ ಪ್ರದೇಶ ಬಿಹಾರ	ಒಳ್ಳೆಯದು	—
೮.	ಗುಲಾಬ್ ಖಾಸ್	ಬಿಹಾರ	ಬಹಳ ಒಳ್ಳೆಯದು	ತಿನ್ನಲು ಬಹಳ ಒಳ್ಳೆಯದು
೯.	ಲಾಂಗ್ರ, ಬನಾರಸಿ ಲಾಂಗ್ರ	ಬಿಹಾರ ಉತ್ತರ ಪ್ರದೇಶ	ಸಾಧಾರಣ	ತಿನ್ನಲು ಬಹಳ ಒಳ್ಳೆಯದು
೧೦.	ಮಾಲ್ಡ. (Bombay green)	ಉತ್ತರ ಪ್ರದೇಶ ಗಂಗಾ ನದಿಯ ತೀರ.	ಸಾಧಾರಣ	—

೧೧.	ಮಲಗೋವ	ಆಂಧ್ರ, ಮಹಾರಾಷ್ಟ್ರ, ಮೈಸೂರು, ಸೇಲಂ	ಒಳ್ಳೆಯದು	ತಿನ್ನಲು ಬಹಳ ರುಚಿಕರವಾಗಿರುತ್ತದೆ
೧೨.	ನೀಲಂ	ಮದ್ರಾಸ್, ಆಂಧ್ರ	ಸಾಧಾರಣ ಬಹಳ ದಿನ ಗಳವರೆಗೆ ಹಣ್ಣು ಕೆಡುವುದಿಲ್ಲ.	ಸಾಧಾರಣ ರುಚಿ
೧೩.	ಓಲೂರ್	ಕೇರಳ	ಸಾಧಾರಣ	ಬಹುಭ್ರೂಣತ್ವವನ್ನು ಕಾಣ ಬಹುದು
೧೪.	ಪೈರಿ, ರಸಪುರಿ, ಪೀಟರ್	ಮದ್ರಾಸ್, ಮೈಸೂರು, ಆಂಧ್ರ, ಮಹಾರಾಷ್ಟ್ರ, ಕೇರಳ	ಸಾಧಾರಣ	ಹೆಚ್ಚು ಫಸಲನ್ನು ಪಡೆಯಬಹುದು. ಜನಪ್ರಿಯ ವಾದ ಜಾತಿ.
೧೫.	ರುಮಾನಿ	ಮದ್ರಾಸ್ ಕಡಲುತೀರ	ಒಳ್ಳೆಯದು ಬೇಗ ಕೆಡುವುದಿಲ್ಲ.	—
೧೬.	ಸಫೇದ ಲಕ್ನೊ	ಉತ್ತರ ಪ್ರದೇಶ	ಸಾಧಾರಣ	—
೧೭.	ಸಫದಾರ್ ಪಸಂದ್	ಪಶ್ಚಿಮ ಬಂಗಾಳ, ಬಿಹಾರ	ಸಾಧಾರಣ	—
೧೮.	ಸುವರ್ಣರೇಖಾ	ಆಂಧ್ರ	ಒಳ್ಳೆಯದು	—
೧೯.	ವನರಾಜ	ಬರೋಡ	ಒಳ್ಳೆಯದು	—
೨೦.	ಜಾರ್‌ದಾಲು	ಬಿಹಾರ, ಉತ್ತರ ಪ್ರದೇಶ	ಸಾಧಾರಣ	—
೨೧.	K. O. /57 [ಹಿಮಾಯುದ್ದೀನ್ ಮತ್ತು ನೀಲಂನ ತಳಿ]	ರಾಯಲ ಸೀಮೆ, ಆಂಧ್ರ	ಒಳ್ಳೆಯದು	ತಿನ್ನಲು ಬಹಳ ಯೋಗ್ಯವಾದದ್ದು

ವಿವಿಧ ರಾಜ್ಯಗಳಲ್ಲಿ ಬೆಳೆಯುವ ಮಾವಿನ ಜಾತಿಗಳು

ರಾಜ್ಯಗಳು	ಮಾವಿನ ಜಾತಿಗಳು	ಬೆಳೆಯುವ ಪ್ರದೇಶಗಳು
ಪಂಜಾಬ್	ಬಾದಾಮಿ, ದುಶೇರಿ, ಲಾಂಗ್ರ, ಮಾಲ್ಡ, ಕಚುಮುಹಾ, ಖಾಂಗರಿ ಬಚಾ, ಸೆರೋಲಿ, ಸಿಂಧೂರಿಯಾ, ಇತ್ಯಾದಿ.	ಹೊಸೈರ್‌ಪುರ, ಅಂಬಾಲ, ಡೆಲ್ಲಿ ಇತ್ಯಾದಿ.
ಉತ್ತರ ಪ್ರದೇಶ	ಅಮಿನ್‌ಹೀರಾ, ಅಮಿನ್‌ಕುರದ್, ಅಮಿನ್‌ತಹಸಿಲ್, ಅಜೀಜ್ ಪಸಂದ್, ಮಾಲ್ಡದುಶೇರಿ, ಲಾಂಗ್ರ, ಸಫೇದ ಕಲ್ಕತ್ತಾ, ಸಫೇದ ಲಕ್ನೋ, ಜಾರ್‌ದಾಲು ಮತ್ತು ಸುಮಾರು ಮೂವತ್ತು ಜಾತಿಗಳು.	ಗೊರಖ್‌ಪುರ, ಅಲಹಾಬಾದ್, ಸೀತಾಪುರ, ಗೊಂಡಕಾನ್‌ಪುರ, ಲಕ್ನೊ, ಇತ್ಯಾದಿ.
ಬಿಹಾರ	ಬಾದಾಮಿ, ಮಾಲ್ಡ-ಬುದ್ಧೊ ಕಾ ಕೆಲ್ವ, ಗುಲಾಬ್‌ಖಾಸ್, ಹುಸನರಾ, ಲಾಂಗ್ರ, ಸಕುಲ, ಸುರ್ಖ್‌ಬರ್ಮಾ ಇತ್ಯಾದಿ.	ಶಹಬಾದ, ಪಾಟ್ನಾ, ಭಾಗಲಪುರ ಇತ್ಯಾದಿ.
ಪಶ್ಚಿಮ ಬಂಗಾಳ	ಭವಾನಿ ಚೌರಾಸ್, ಮಾಲ್ಡ, ಪಂಜಪಸಂದ್, ರಾಣೀಪಸಂದ್, ಜಾರ್‌ದಾಲೂ.	ಮಾಲ್ಡ, ಹೂಗ್ಲಿ, ಮುರಶೀದಾಬಾದ್.
ಆಂಧ್ರ	ಆಲಂಪುರ ಬನೇಶನು, ಬಾದಾಮಿ, ಅತಿಮಧುರಂ, ಬೆಂಗಳೂರ, ಬಂಗನಪಳ್ಳಿ, ಇಮಾಂಪಸಂದ್, ಜಹಾಂಗೀರ್, ರಾಜುಮಾನು, ಸುವರ್ಣರೇಖಾ ಇತ್ಯಾದಿ.	ಚಿತ್ತೂರು, ವಿಶಾಖಪಟ್ಣ, ನಲಗೊಂಡ, ಹೈದರಾಬಾದ್.
ಮದ್ರಾಸ್	ಆಲಂಪುರಬನೇಶನ್, ಗುಂಡು, ಆಮ್ಲೆಟ್ (ಮನೋರಂಜಿನಿ) ಕಿಲಿ ಮುಕ್ಕು, ಮಲಗೋವ, ನೀಲಂ, ಪಧಿರಿ.	ಉತ್ತರ ಆರ್ಕಾಟ್, ಸೇಲಂ, ಮಧುರೆ.
ಮೈಸೂರು	ಬಾದಾಮಿ, ತೋತಾಪುರಿ, ಕಾಲೆಪಾದ, ಮಲಗೋವ, ಮುಂಡಪ್ಪ, ನೀಲಂ, ರಸಪುರಿ, ಇತ್ಯಾದಿ.	ಕೋಲಾರ, ಬೆಂಗಳೂರು, ತುಮಕೂರು, ಮೈಸೂರು, ಗುಲ್ಬರ್ಗ, ಧಾರವಾಡ, ಹಾಸನ, ಮಂಡ್ಯ.
ಮಹಾರಾಷ್ಟ್ರ	ಅಮಿನಿ, ಮಲಗೋವ, ರಸಪುರಿ, ಸೇಂದ್ರಿಯಾ.	ರತ್ನಗಿರಿ, ನಾಸಿಕ್, ಸತಾರ, ಔರಂಗಾಬಾದ್.
ಕೇರಳ	ಅಮಿನಿ, ಚಂದ್ರಕಾರನ್, ಆಮ್ಲೆಟ್, ಮುಂಡಪ್ಪ, ರಸಪುರಿ, ಓಲೂರ್	ಎಲ್ಲ ಜಿಲ್ಲೆಗಳು.

ಭಾರತದಲ್ಲಿ ದೊರಕುವ ಮುಖ್ಯವಾದ ಜಾತಿಯ ಮಾವಿನ ಮರಗಳಲ್ಲಿ ತಳಿ ಸಮ್ಮಿಶ್ರಣ ಮಾಡಿ ಒಳ್ಳೆಯ ಬೆಳೆಯನ್ನು ತರಲು ವಿಜ್ಞಾನಿಗಳು ಸಂಶೋಧನೆಗಳನ್ನು ಮಾಡುತ್ತಿರುವರು. ಕೆಲವು ತಳಿಗಳು (Hybrids) ಒಳ್ಳೆಯ ಫಲಿತಾಂಶವನ್ನು ಸಹ ಕೊಟ್ಟಿರುವುವು, ಆದರೆ ಪೂರ್ಣ ಯಶಸ್ಸು ಈವರೆಗೆ ದೊರಕಿಲ್ಲ.

ಮಾವು ಶೈತ್ಯಾಂಶ ಹೆಚ್ಚಿರುವ ಕಡೆ ಬಹಳ ಚೆನ್ನಾಗಿ ಬೆಳೆಯುತ್ತದೆ. ಇಬ್ಬನಿ ಹಾಗೂ ಮೋಡ ಕವಿದಿದ್ದ ವಾತಾವರಣ ಹೂವು ಬಿಡುವ ಸಮಯದಲ್ಲಿದ್ದರೆ, ಹಲವಾರು ರೋಗಗಳು ಮರಕ್ಕೆ ತಗಲುವುದಕ್ಕೆ ಕಾರಣವಾಗುತ್ತದೆ. ಕಾಯಿ ಬಿಟ್ಟಿರುವ ಸಮಯದಲ್ಲಿ ಅತಿವೃಷ್ಟಿಯಿಂದ ಬೆಳೆಯು ಹಾಳಾಗುತ್ತದೆ. ಬಂಗಾಳ, ಅಸ್ಸಾಂ, ಕೇರಳ, ಮದ್ರಾಸ್ ಮುಂತಾದ ಪ್ರದೇಶಗಳಲ್ಲಿ ಅಷ್ಟು ಶೈತ್ಯಾಂಶವಿರುವ ಗಾಳಿ ಇಲ್ಲದಿರುವುದರಿಂದ ಅಲ್ಲಿನ ಮರಗಳಲ್ಲಿ ಹಣ್ಣುಗಳು ಹೆಚ್ಚಾಗಿರುವುದಿಲ್ಲ. ಇಬ್ಬನಿಗೆ ಮಾವು ಹಿಮ್ಮೆಟ್ಟಿಸಿ ನಿಲ್ಲಲಾಗುವುದಿಲ್ಲವಾದುದರಿಂದ ಪಂಜಾಬಿನ ಬೆಟ್ಟಗಳ ಮೇಲೆ, ಉತ್ತರ ಪ್ರದೇಶ ಹಾಗೂ ಹಿಮಾಚಲ ಪ್ರದೇಶ ಮತ್ತು ಕಾಶ್ಮೀರದಲ್ಲಿ ಹೆಚ್ಚು ತನ್ನ ಅಸ್ತಿತ್ವವನ್ನು ಸ್ಥಾಪಿಸಲಾರದು. ಇಬ್ಬನಿ ಬೀಳದ ಕೆಲವು ಪ್ರದೇಶಗಳಲ್ಲಿ ಮಾವನ್ನು ೧,೨೦೦ ಮೀಟರುಗಳವರೆಗೆ ಚೆನ್ನಾಗಿ ಬೆಳೆಯಬಹುದು. ಉತ್ತರ ಭಾರತದಲ್ಲಿ ೧೧೫-೧೨೦°F ಶೈತ್ಯಾಂಶವಿರುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಹುದು. ಆಗಾಗ್ಗೆ ವಿಪರೀತ ಗಾಳಿಯಿಂದ ಮಾವಿನ ಮರಗಳಿಗೆ ಧಕ್ಕೆ ಉಂಟಾಗುವುದರಿಂಧ ಅಲ್ಲಲ್ಲಿ ಡಾಲ್ಬರ್ಜಿಯಾ ಸಿಸೋ ಎಂಬ ಮರಗಳನ್ನು ಹಾಕಿರುತ್ತಾರೆ.

ಸಾಧಾರಣವಾಗಿ ಮಾವಿನ ಹೂವುಗಳು ಚಿಗುರಿನ (Shoot) ಕೊನೆಯಲ್ಲಿ ಬಿಟ್ಟಿರುತ್ತವೆ. ಒಂದೊಂದು ಬಾರಿ ಬೇರೆ ಜಾಗಗಳಲ್ಲೂ ಮೊಗ್ಗುಗಳು ಬಿಟ್ಟಿರುವುದನ್ನು ಕೆಲವು ಮರಗಳಲ್ಲಿ ಕಾಣಬಹುದು. ಶೈತ್ಯಾಂಶವಿಲ್ಲದ ಗಾಳಿ, ಮೊಗ್ಗನ್ನು ಅರಳಿಸಲು ಬಹಳ ಸಹಕಾರಿಯಾಗಿರುತ್ತದೆ. ವಸಂತದಲ್ಲೇ ಮಾವಿನ ಹೂವಿನ ಮೊಗ್ಗು ಅರಳುತ್ತವೆಯಾದರೂ, ಒಮ್ಮೊಮ್ಮೆ ಬೇರೆ ಕಾಲದಲ್ಲೂ ಕೆಲವು ಮರಗಳಲ್ಲಿ ಹೂವು ಬಿಟ್ಟಿರುವುದು ವಿಜ್ಞಾನಿಗಳ ಗಮನಕ್ಕೆ ಬಂದಿದೆ. ಇದು ಮರದಲ್ಲಿ ಶೇಖರಿಸಿಕೊಂಡಿರುವ ಆಹಾರ ತೀಕ್ಷ್ಣತೆಯಿಂದ (Concentration of Reserve Food) ಎಂದು ಭಾವಿಸಿದ್ದಾರೆ. ಬರಾಮಾಸಿಸ್ ಎಂಬ ಒಂದು ಜಾತಿಯ ಮಾವಿನ ಮರ ತನಗೆ ಇಷ್ಟಬಂದ ಕಾಲದಲ್ಲಿ ಹೂಬಿಟ್ಟು, ಫಲಗಳನ್ನು ಕೊಡುತ್ತದೆ. ದಕ್ಷಿಣ ಭಾರತದಲ್ಲೂ ಕೆಲವು ಜಾತಿಯ–ನೀಲಂ, ಸುವರ್ಣರೇಖಾ–ಮಾವಿನಹಣ್ಣಿನ ಮರಗಳಲ್ಲಿ ಕೇವಲ ಮೂರು ತಿಂಗಳಲ್ಲಿಯೇ ಅಂದರೆ ಡಿಸೆಂಬರ್ ಮತ್ತು ಜನವರಿಯಲ್ಲಿ ಹೂ ಬಿಡುವುದೆಂದು ತಿಳಿದುಬಂದಿದೆ. ಸಾಮಾನ್ಯವಾಗಿ ಭಾರತದಲ್ಲಿ ಡಿಸೆಂಬರ್ ಮತ್ತು ಜನವರಿಯಲ್ಲಿ ಮಾವಿನ ಮರಗಳಲ್ಲಿ ಹೂ ಬಿಡುತ್ತವೆ. ಆದರೆ ಉತ್ತರ ಭಾರತದಲ್ಲಿ ಜನವರಿ ಕೊನೆಯವಾರ ಅಥವಾ ಫೆಬ್ರುವರಿಯ ಕೊನೆಯವಾರದಲ್ಲಿ ಹೂ ಬಿಡುತ್ತವೆ. ಒಮ್ಮೊಮ್ಮೆ ಮಾರ್ಚಿಯ ಕೊನೆಯಲ್ಲೂ ಹೂ ಬಿಡುತ್ತವೆ.

ಜಾವ ಮತ್ತು ಫಿಲಿಫೈನ್ಸ್‌ನಲ್ಲಿ ಎಥಿಲೀನ್ ಎಂಬ ಅನಿಲದ ಪ್ರಯೋಗದಿಂದ ಹೂಗಳನ್ನು ಅರಳಿಸುವುದರಲ್ಲಿ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಆದರೆ ಭಾರತದಲ್ಲಿ ಅದನ್ನು ಪ್ರಯೋಗಿಸಿದಾಗ ಯಾವ ಉಪಯೋಗವೂ ಆಗಲಿಲ್ಲ. ಹೂವು ಅರಳುವುದರ ಬದಲು ಚಿಗುರು ಬೆಳೆಯಲಾರಂಭಿಸಿತು.

ತಮಿಳುನಾಡಿನ ಕೆಲವು ಪ್ರದೇಶಗಳಲ್ಲಿ ಅದರಲ್ಲೂ ತಿರುನೆಲ್‌ವೇಲಿ ಜಿಲ್ಲೆ, ತೇನ್ ಕಾಶಿ ಹಾಗೂ ಕನ್ಯಾಕುಮಾರಿಯಲ್ಲಿ ಮಾವಿನ ಬೆಳೆ ಜೂನ್ ತಿಂಗಳ ಮಧ್ಯದಲ್ಲಿ ಕಾಣಬಹುದು.

ಹೂವುಗಳು ಕಾಯಿಗಳಾಗಬೇಕಾದರೆ, ಪರಾಗಸ್ಪರ್ಶವಾಗಲೇಬೇಕು. ಕೆಲವು ನೊಣಗಳು ಆ ಕೆಲಸವನ್ನು ಯಶಸ್ವಿಯಾಗಿ ಮಾಡಬಲ್ಲವು. ಉತ್ತರ ಭಾರತ ದಲ್ಲಿ ಪರಾಗಸ್ಪರ್ಶ ಮಾಡಿಸಲು ಅತ್ಯಂತ ಮುಖ್ಯವಾದ ನೊಣವೆಂದರೆ ಪೈರಿಲ್ಲಾ. ಉತ್ತರ ಪ್ರದೇಶದಲ್ಲಿ ಮೂರು ರೀತಿಯ ನೊಣಗಳನ್ನು ಗುರುತಿಸಬಹುದು: ಮೆಲ್ಲಿಪೋನಾ, ಸಿರಪಿಡೇ ಮತ್ತು ಮೂಸಾಡೊಮೆಸ್ಟಿಕಾ. ಬಹಳ ಹೂವುಗಳು ಪರಾಗ ಸ್ಪರ್ಶವಾಗದೆ ಕಾಯಿಗಳಾಗುವ ಸೌಭಾಗ್ಯವನ್ನು ಕಳೆದುಕೊಳ್ಳುತ್ತವೆ. ಶೇಕಡಾ ೯೯ಕ್ಕೂ ಹೆಚ್ಚು ಪರಾಗಸ್ಪರ್ಶವಾಗದ ಹೂವುಗಳು ಉದುರಿಹೋಗುತ್ತವೆ. ಕೆಲವು ಪರಾಗಸ್ಪರ್ಶವಾದನಂತರ ೪-೫ ವಾರ ಕಾಯಿಗಳಾಗಿ ಬೆಳೆದು ಉದುರಿ ಹೋಗುತ್ತವೆ. ಇನ್ನುಳಿದವು ಬೆಳೆದು ಹಣ್ಣಾಗುತ್ತವೆ. ದಕ್ಷಿಣ ಭಾರತದಲ್ಲಿ ಸಿಗುವ ನೀಲಂನಲ್ಲಿ ಕೇವಲ ಶೇಕಡ ೧೬ರಷ್ಟು ಹೂವುಗಳು ಉದುರಿ, ಉಳಿದೆಲ್ಲವೂ ಕಾಯಿ ಗಳಾಗುತ್ತವೆ. ಆದರೆ ಈ ಕಾಯಿಗಳಲ್ಲಿ ಎಲ್ಲವೂ ಆರೋಗ್ಯಕರವಾಗಿ ಹಣ್ಣಾಗುವ ವರೆಗೆ ಇರುವುದಿಲ್ಲವಾದುದರಿಂದ ಸುಮಾರು ಶೇಕಡಾ ೩೦ ಅಥವಾ ೪೦ರಷ್ಟು ಹಣ್ಣುಗಳು ಮಾತ್ರ ಚೆನ್ನಾಗಿರುತ್ತದೆ. ಹತ್ತು ವರ್ಷಕ್ಕಿಂತ ಕಮ್ಮಿ ವಯಸ್ಸಿನ ಮರಗಳಲ್ಲಿ ಒಳ್ಳೆಯ ಫಸಲನ್ನು ಪಡೆಯಬಹುದು. ಬಹಳ ಹಳೆಯ ಮರಗಳಲ್ಲಿ ಒಂದು ವರ್ಷ ಹೆಚ್ಚು ಫಸಲು, ಮತ್ತೊಂದು ವರ್ಷ ಬಹಳ ಕಮ್ಮಿ ಫಸಲು ಪಡೆಯುತ್ತೇವೆ. ಮಾವಿನ ಮರಗಳಲ್ಲಿ ೩-೩೧/೨ ತಿಂಗಳು ಕಾಯಿಗಳನ್ನು ಬಿಟ್ಟ ನಂತರ ಸ್ವಲ್ಪ ಬಣ್ಣ ತಿರುಗಿದ ಕಾಯಿಗಳನ್ನು ಕಿತ್ತು ಒಣ ಹುಲ್ಲಿನ ಮಧ್ಯೆ ಸಾಲಾಗಿ ಜೋಡಿಸುತ್ತಾರೆ. ಸಾಮಾನ್ಯವಾಗಿ ೬೩-೭೦°Fನಲ್ಲಿ ಇವು ಹಣ್ಣಾಗುತ್ತವೆ. ಮಾವಿನ ಕಾಯಿ ಮತ್ತು ಹಣ್ಣು ರಸಾಯನಿಕ ವಿಭಜನೆಗೆ ಒಳಗಾದಾಗ ಅವುಗಳಲ್ಲಿ ಹಲವಾರು ಪೌಷ್ಟಿಕ ಪದಾರ್ಥಗಳು ಇರುವುದನ್ನು ಕಾಣಬಹುದು.

		ಮಾ. ಕಾಯಿಯಲ್ಲಿ	ಮಾ. ಹಣ್ಣುಗಳಲ್ಲಿ
ಶೈತ್ಯಾಂಶ	....	೯೦.೦	೮೬.೧
ಪ್ರೋಟೀನ್	....	೦.೭	೦.೬
ಕೊಬ್ಬು	....	೦.೧	೦.೧
ಕಾರ್ಬೋ ಹೈಡ್ರೇಟ್	....	೮.೮	೧೧.೮
ಧಾತು ಪದಾರ್ಥ	....	೦.೪	೦.೩

ಕ್ಯಾಲ್ಸಿಯಂ	೦.೦೧	೦.೦೧
ರಂಜಕ	೦.೦೨	೦.೦೨
ಕಬ್ಬಿಣ ...	೪.೫mg	೦.೩

ಇವುಗಳಲ್ಲದೆ ವಿಟಮಿನ್ 'ಎ' ರಿಬೋಫ್ಲೇವಿನ್, ಆಸ್ಕಾರ್ ಬಿಕ್ ಆಮ್ಲ ನಿಕೋಟಿನಿಕ್ ಆಮ್ಲ ಸಹ ಸ್ವಲ್ಪಮಟ್ಟಿಗೆ ಇರುತ್ತದೆ.

ಆಗತಾನೆ ಚಿಗುರಿದ ಎಲೆಯನ್ನು ಜಾವ ಮತ್ತು ಫಿಲಿಫೈನ್ಸ್‌ನಲ್ಲಿ ತಿನ್ನಲು ಉಪಯೋಗಿಸುತ್ತಾರೆ. ಮಾವಿನ ಎಲೆಗಳನ್ನು ಹಸುಗಳು ಅತಿ ಹೆಚ್ಚಾಗಿ ತಿನ್ನುವುದ ರಿಂದ ಕಣ್ಣಿನಲ್ಲಿ ನೋಡುವ ಶಕ್ತಿ ಕಮ್ಮಿಯಾಗುವುದೆಂದು ತಿಳಿದುಬಂದಿದೆ. ಕೆಲವು ಹಸುಗಳ ದೃಷ್ಟಿಯಲ್ಲಿ ಬಣ್ಣದೋಷವಿರುವುದು ಕಂಡುಬಂದಿದೆ. ಒಣಗಿದ ಮಾವಿನ ಹೂವುಗಳನ್ನ ಔಷಧಿಗಳಿಗೆ ಉಪಯೋಗಿಸಬಹುದೆಂದು ದಸ್ತೂರ್ ತಮ್ಮ 'ಔಷಧಿಗೆ ಉಪಯುಕ್ತ ಗಿಡಗಳು' ಎಂಬುದರಲ್ಲಿ ತಿಳಿಸಿದ್ದಾರೆ. ಅವು ಡಯೇರಿಯಾ, ಆಮಶಂಕೆ ಮುಂತಾದ ರೋಗಗಳನ್ನು ಗುಣಪಡಿಸಲು ಬಹಳ ಸಹಕಾರಿಯಾಗುವುದೆಂದು ತಿಳಿಸಿದ್ದಾರೆ. ಮಾವಿನ ಮರದ ತೊಗಟೆಯಿಂದ ಮ್ಯಾಗ್ನಿಫೆರಿನ್ ಎಂಬ ರಸಾಯನಿಕ ವಸ್ತುವನ್ನು ಕೆಲವು ವಿಶಿಷ್ಟ ರೀತಿಯಿಂದ ಬೇರ್ಪಡಿಸಿ, ಅವುಗಳನ್ನು ಡಿಫ್ತೀರಿಯಾ, ರುಮ್ಯಾಟಿಸಂಗೆ ಉಪಯೋಗಿಸುತ್ತಾರೆ.

ಮಾವಿನ ಓಟೆಯನ್ನು ಇಲ್ಲಿಯವರೆಗೆ ಕೆಲಸಕ್ಕೆ ಬಾರದ ವಸ್ತುವೆಂದು ಎಸೆದು ಬಿಡುತ್ತಿದ್ದರು. ಆದರೆ ಮಾವಿನ ಓಟೆಯನ್ನು ವಿಜ್ಞಾನಿಗಳು ರಸಾಯನಿಕವಾಗಿ ವಿಭಜಿಸಿದಾಗ ಅದರಲ್ಲಿ ಕೆಳಕಂಡ ಅಂಶಗಳಿರುವುದು ಕಂಡುಬಂದವು:

ಪ್ರೋಟಿನ್=೯.೫, ಕೊಬ್ಬು=೧೦.೭, ಸ್ಟಾರ್ಚ್=೭೨.೮೦, ಸಕ್ಕರೆ=೧.೦೭, ಟ್ಯಾನಿನ್=೦.೧೧, ಬೂದಿ=೩.೬೬%, ಸಿಲಿಕಾ=೦.೪೧, ಕಬ್ಬಿಣ=೦.೦೩, ಕ್ಯಾಲ್ಸಿಯಂ=೦.೨೩, ಮೆಗ್ನಿಸಿಯಂ=೦.೩೪, ಫಾಸ್ಫರಸ್=೦.೬೬, ಸೋಡಿಯಂ=೦.೨೮, ಪೊಟಾಸಿಯಂ=೧.೩೧, ಗಂಧಕ=೦.೨೩, ಕಾರ್ಬೋನೇಟ್=೦.೦೯. ಮಾವಿನ ಓಟೆಯನ್ನು ಚನ್ನಾಗಿ ತೊಳೆದು, ಒಣಗಿಸಿ ಪುಡಿಮಾಡಬೇಕು. ಆ ಪುಡಿಯು ಪೈಲ್ಸ್ ರೋಗಕ್ಕೆ ಹಿತಕರವೆಂದು ರಂಜನ್ ಹಾಗೂ ಅವನ ಸಂಗಡಿಗರು ೧೯೫೧ರಲ್ಲಿ ತಿಳಿಸಿದ್ದಾರೆ. ಮಾವಿನ ಕಾಯಿಯ ಉಪಯೋಗಗಳನ್ನು ಕುರಿತು ಹೇಳುವ ಆವಶ್ಯಕತೆಯಿಲ್ಲ. ಏಕೆಂದರೆ ಭಾರತದಲ್ಲಿ ಪ್ರತಿಯೊಬ್ಬರು ಇದನ್ನು ವಿವಿಧ ರೀತಿಯಲ್ಲಿ ಉಪಯೋಗಿಸುತ್ತಾರೆ. ಕೆಲವರು ಮಾವಿನ ಮರವನ್ನು ಕಲ್ಪವೃಕ್ಷವೆಂದೂ ಕರೆದಿದ್ದಾರೆ. ಮಾವಿನ ಉಪಯೋಗವನ್ನು ಗಮನದಲ್ಲಿಟ್ಟುಕೊಂಡೇ ಬಹುಶಃ ಇದನ್ನು ಕಲ್ಪವೃಕ್ಷ ಎಂದಿರಬೇಕು ಎನಿಸುತ್ತದೆ.

—ಎ. ನಾಗಭೂಷಣರಾವ್ ಸಿಂಧೆ

ಆಧಾರ ಗ್ರಂಥಗಳು

(1) The Mango-by S. R. Gangolly and Others
(2) The Mango in India-by Sohrab R. Gandhi
(3) The Wealth of India V Volume.

ಸಾದರ ಸ್ವೀಕಾರ

೧. **ಶ್ರೀ ನಿಜಗುಣ ಶಿವಯೋಗಿ ವಿರಚಿತ ಅನುಭವಸಾರ** (ಪದ್ಯ): ಟೀಕಾಕಾರರು: ಶ್ರೋ. ಬ್ರ. ನಿ. ಶ್ರೀ ಗಿರಿಯಪ್ಪಗೌಡ ಬ, ಓದುಗಾಡರು; ಪ್ರಕಾಶಕರು: ಶ್ರೀ ಸದ್ಗುರು ಸಿದ್ಧವೀರಪ್ಪನವರು ಚೋಳಿನ ನಿಜಗುಣನಿಳಯ, ಗೋಪನಕೊಪ್ಪ; ಹುಬ್ಬಳ್ಳಿ ತಾ||. ಕಿರೀಟ ಅಷ್ಟದಳ; ಪು. xxiii+೪೨೬; ಬೆಲೆ: ರೂ. ೫.

೨. **ನಾರಾಯಣಕವಿರಚಿತ ಉತ್ತರರಾಮ ಕಥೆ** (ಉತ್ತರ ವಿಭಾಗ) (ಪದ್ಯ): ಸಂಪಾದಕರು: ವಿದ್ವಾನ್ ಕೆ. ವೆಂಕಟರಾಯಾಚಾರ್ಯರು; ಪ್ರಕಾಶಕರು: ವಿಜಯ ಸಾಹಿತ್ಯ ಮಾಲೆ, ಸುರತ್ಕಲ್ಲು (ದ.ಕ.); ಕಿರೀಟ ಅಷ್ಟದಳ; ಪು. xvi+೧೬+೧೬೪; ಬೆಲೆ: ರೂ. ೩.

೩. **ಬಾನುಲಿ** (ಕವನ ಸಂಕಲನ): ಲೇಖಕರು: ಶ್ರೀ ಚಂದ್ರಶೇಖರ ಪಾಟೀಲ್; ಪ್ರಕಾಶಕರು: ಶ್ರೀ ಚಂದ್ರಶೇಖರ ಪಾಟೀಲ್, ಇಂಗ್ಲಿಷ್ ಪ್ರಾಧ್ಯಾಪಕ, ಕರ್ನಾಟಕ ಕಾಲೇಜು, ಧಾರವಾಡ; ಕಿರೀಟ ಅಷ್ಟದಳ; ಬೆಲೆ: ರೂ. ೧–೫೦.

೪. **ಶ್ರೀ. ಶ್ರೀನಿವಾಸಲೀಲಾವಿಲಾಸಂ** (ಪದ್ಯ): ಲೇಖಕರು: ಶ್ರೀ ಆಸೂರಿ ಕೆ. ರಾಮಸ್ವಾಮಯ್ಯಂಗಾರ್; ಪ್ರಕಾಶಕರು: ಶ್ರೀ ಬಿ. ಎಸ್. ಎಸ್. ಕೌಶಿಕ್, ಶ್ರೀ ವಾಲ್ಮೀಕಿ ಗಮಕ ಪಾಠಶಾಲಾ, ಮೈಸೂರು: ೪; ಡೆಮ್ಮಿ ೧/೮; ಬೆಲೆ: ರೂ. ೨.

೫. **ಪಿಗ್ ಮೇಲಿಯನ್** (ಅನುವಾದ): ಮೂಲ ಲೇಖಕರು: ಜಾರ್ಜ್ ಬರ್ನಾರ್ಡ್ ಷಾ; ಕನ್ನಡಿಸಿದವರು: ಶ್ರೀ. ವಿ. ಸೀ.; ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ; ಮೈಸೂರು; ಕಿರೀಟ ಅಷ್ಟದಳ; ಪು. xxi+೧೪೪; ಬೆಲೆ: ಸಾದಾ ಪ್ರತಿ: ರೂ. ೪; ಕ್ಯಾಲಿಕೊ ಪ್ರತಿ: ರೂ. ೬.

೬. **ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ** (ಪ್ರಚಾರ ಪುಸ್ತಕಮಾಲೆ–೧೨೩): ಲೇಖಕರು: ಶ್ರೀ ದೇವಂಗಿ ಟಿ. ಚಂದ್ರಶೇಖರ; ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೨; ಫೂಲ್ಸ್‌ಕ್ಯಾಪ್ ೧/೮; ಬೆಲೆ: ಸಾದಾಪ್ರತಿ ನ.ಪೈ. ೨೫; ಉತ್ತಮ ಪ್ರತಿ: ನ.ಪೈ. ೩೭.

೭. **ಬೆಲೆಗಳ ನಿರ್ಧಾರ ಮತ್ತು ಯೋಜನೆಗಳ ಯಶಸ್ಸು** (ಪ್ರಚಾರ ಪುಸ್ತಕಮಾಲೆ–೧೨೧): ಲೇಖಕರು: ಶ್ರೀ ಟಿ. ಬಿ. ಚಂದ್ರಶೇಖರಯ್ಯ, ಎಂ.ಎ.; ಪ್ರಕಾಶಕರು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೨; ಫೂಲ್ಸ್‌ಕ್ಯಾಪ್ ೧/೮, ಬೆಲೆ: ಸಾದಾಪ್ರತಿ: ನ.ಪೈ. ೨೫; ಉತ್ತಮ ಪ್ರತಿ: ನ.ಪೈ. ೩೭.

೮. **ಜೀವಸತ್ವಗಳು** (ಪ್ರಚಾರ ಪುಸ್ತಕಮಾಲೆ–೧೨೨): ಲೇಖಕರು: ಶ್ರೀ ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.; ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೨; ಫೂಲ್ಸ್‌ಕ್ಯಾಪ್ ೧/೮; ಬೆಲೆ: ಸಾದಾಪ್ರತಿ: ನ.ಪೈ. ೨೫; ಉತ್ತಮ ಪ್ರತಿ: ನ.ಪೈ. ೩೭.

೯. **ಭಾರತವಾಣಿ** (ಹಿಂದಿ ಮಾಸಪತ್ರಿಕೆ): ಸಂಪಾದಕರು: ಶ್ರೀ ಕಾಶಿನಾಥಸ್ವಾಮಿ ಸಾರಂಗಮಠ; ಸಹ ಸಂಪಾದಕರು: ಶ್ರೀ ಪಿ. ಎನ್. ಭಟ್ಟತಿರಿ; ಪ್ರಕಾಶಕರು: ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭಾ, ಧಾರವಾಡ; ಬಿಡಿ ಪತ್ರಿಕೆ: ನ.ಪೈ. ೪೫; ವಾರ್ಷಿಕ ಚಂದಾ: ರೂ. ೫.

೧೦. **ಗೋಕುಲ** (ಸಚಿತ್ರ ಸಾಪ್ತಾಹಿಕ): ಸಂಪಾದಕರು: ಶ್ರೀ ಖಾದ್ರಿ ಶಾಮಣ್ಣ; ಪ್ರಕಾಶಕರು: 'ಗೋಕುಲ' ಕಚೇರಿ, ೨೨, ಕಬ್ಬನ್ ರಸ್ತೆ, ಬೆಂಗಳೂರು ೧; ಬಿಡಿ ಪತ್ರಿಕೆ: ನ.ಪೈ. ೩೦; ವಾರ್ಷಿಕ ಚಂದಾ ರೂ. ೧೬.

೧೧. **ಆಹಾರ ವಿಜ್ಞಾನ** (ತ್ರೈಮಾಸಿಕ): ಸಂಪಾದಕರು: ಶ್ರೀ ಪಿ. ಎಸ್. ಬಾಲಕೃಷ್ಣನ್; ಉಪಸಂಪಾದಕರು: ಶ್ರೀ ಕೆ. ಆರ್. ಶ್ರೀಮತಿ; ಪ್ರಕಾಶಕರು: ಕೇಂದ್ರ ಆಹಾರ. ಸಂಶೋಧನಾಲಯ; ಮೈಸೂರು; ಬಿಡಿ ಪತ್ರಿಕೆ: ನ.ಪೈ. ೩೦; ವಾರ್ಷಿಕ ಚಂದಾ: ರೂ: ರೂ. ೧.

೧೨. **ಹೊಸಗನ್ನಡದ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ** (ವಿಮರ್ಶಾ ಗ್ರಂಥ): ಲೇಖಕರು: ಶ್ರೀ ಎಸ್. ಅನಂತನಾರಾಯಣ; ಪ್ರಕಾಶಕರು: ಗಂಗಾತರಂಗ, ಸರಸ್ವತೀಪುರಂ, ಮೈಸೂರು ೫; ಡೆಮ್ಮಿ ೧/೮; ಪು. xvi+೪೮೮, ಬೆಲೆ: ರೂ. ೧೫.

೧೩. **ಹುಲ್ಲು ಹಸಿರಾಯಿತು** (ಕಾದಂಬರಿ): ಲೇಖಕರು: ಶ್ರೀ. ನೀಳಾದೇವಿ; ಪ್ರಕಾಶಕರು: ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ೪; ಕಿರೀಟ ಅಷ್ಟದಳ; ಪು. ೨೫೬; ಬೆಲೆ: ರೂ. ೩.

೧೪. **ಅನಾವರಣ** (ಕವನ ಸಂಕಲನ): ಲೇಖಕರು: ಶ್ರೀ. ಜಿ. ಎಸ್. ಶಿವರುದ್ರಪ್ಪ; ಪ್ರಕಾಶಕರು: ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ೪; ಕಿರೀಟ ಅಷ್ಟದಳ; ಪು. iv+೭೨; ಸಾದಾ ಪ್ರತಿ: ರೂ. ೧-೫೦; ಕ್ಯಾಲಿಕೊ ಪ್ರತಿ: ರೂ. ೨-೫೦.

೧೫. **Ratnavali** (ಸಂಸ್ಕೃತ ನಾಟಕ): ಸಂಪಾದಕರು: ಶ್ರೀ. ಎಸ್. ರಂಗಾಚಾರ್, ಎಂ.ಎ.; ಪ್ರಕಾಶಕರು: ಸಂಸ್ಕೃತ ಸಾಹಿತ್ಯ ಸದನ, ೩೮೬, ಚೆಲುವಾಂಬಾ ಅಗ್ರಹಾರ, ಮೈಸೂರು; ಕಿರೀಟ ಅಷ್ಟದಳ; ಪು. xxxvi+೧೮೦; ಬೆಲೆ: ಸಾದಾ ಪ್ರತಿ: ರೂ. ೨ ಆ. ೧೨; ಉತ್ತಮ ಪ್ರತಿ: ರೂ. ೩ ಆ. ೪; "ಲೈಬ್ರರಿ" ಪ್ರತಿ: ರೂ. ೪.

೧೬. **Bhasa's Pratima Nataka** (ಸಂಸ್ಕೃತ ನಾಟಕ): ಸಂಪಾದಕರು: ಶ್ರೀ ಎಸ್. ರಂಗಾಚಾರ್, ಎಂ.ಎ.; ಪ್ರಕಾಶಕರು: ಸಂಸ್ಕೃತ ಸಾಹಿತ್ಯ ಸದನ, ೩೮೬, ಚೆಲುವಾಂಬಾ ಅಗ್ರಹಾರ, ಮೈಸೂರು; ಕಿರೀಟ ಅಷ್ಟದಳ; ಪು. xlvi+೧೮೦; ಬೆಲೆ: ರೂ. ೩ ಆ. ೬.

೧೭. **ಹಿಮಗಿರಿಯ ಮುಡಿಯಲ್ಲಿ** (ಸಮರವಾಣಿ): ಲೇಖಕರು: ಶ್ರೀ ಬಿ. ಎ. ಸನದಿ; ಪ್ರಕಾಶಕರು: ಚೇತನ ಪ್ರಕಾಶನ,.ಬೆಳಗಾಂವಿ; ಕಿರೀಟ ಅಷ್ಟದಳ; ಪು. ೪೬ ಬೆಲೆ: ನ.ಪೈ ೮೦.

೧೮. **ಮಾದರ ಚೆನ್ನ** (ಕಿರು ನಾಟಕ): ಲೇಖಕರು: ಶ್ರೀ ಸ್ವಾಮಿ ಮಹಾಮನೆ; ಪ್ರಕಾಶಕರು: ಮಹಾಮನೆ ಪ್ರಕಟನಾಲಯ, ೨೫೨೬, ಚಾಮುಂಡಿಪುರಂ, ಮೈಸೂರು ೪; ಕಿರೀಟ ಅಷ್ಟದಳ; ಪು. ೩೮; ಬೆಲೆ: ರೂ. ೧-೫೦.

೧೯. **ಶಾಂತಿಯ ಸಾಧನೆ** (ವಿಚಾರಾತ್ಮಕ ಕೃತಿ): ಮೂಲ ಲೇಖಕರು: ಶ್ರೀ ಪಾಲ್. ಜಿ. ಹಾಫ್‌ಮನ್; ಪ್ರಕಾಶಕರು: ಹಿಗ್ಗಿನ್ ಬಾತಮ್ಸ್ ಲಿಮಿಟೆಡ್, ಬೆಂಗಳೂರು; ಕಿರೀಟ ಅಷ್ಟದಳ; ಪು. x+೧೧೬; ಬೆಲೆ: ?

೨೦. **ಅಮೆರಿಕ** (ವಿಚಾರಾತ್ಮಕ ಕೃತಿ): ಪ್ರಕಾಶಕರು: ಹಿಗ್ಗಿನ್ ಬಾತಮ್ಸ್, ಬೆಂಗಳೂರು; ಕಿರೀಟ ಅಷ್ಟದಳ; ಪು. ೭೦; ಬೆಲೆ: ?

WO 1916—MUPM—1,000+25—14-8-63

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ ; ಬೆಲೆ : ರೂ. ೧.

೨. **ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ**—ಆಸ್ಥಾನಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ ; ರೂ. ೧-೭೫ ನ.ಪೈ.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕೆಲವು ಪ್ರಕಟಣೆಗಳು

೧. **ಲಿಯೊನಾರ್ಡ**—ಎಸ್. ಜಿ. ಶಾಸ್ತ್ರೀ .... ರೂ. ೧-೫೦
(ಬ್ಯೋರನ್‌ಸನ್ ಬರೆದ ನಾಲ್ಕಂಕದ ನಾಟಕ)

೨. **ಸಂಸಕವಿ**—ಹಲವು ಲೇಖಕರು .... ರೂ. ೩-೭೫
(' ವಿಗಡವಿಕ್ರಮರಾಯ ' ಬರೆದ ಕವಿಯ ಕಾವ್ಯಜೀವನ)

೩. **ಧರ್ಮಪದ ಪ್ರವೇಶಿಕಾ**—ಜಿ. ಪಿ. ರಾಜರತ್ನಂ .... ರೂ. ೧-೦೦
(ಬುದ್ಧವಚನ, ಬಸವವಚನಗಳ ಹೋಲಿಕೆಗಳು)

೪. **ನಮ್ಮ ಬೇಂದ್ರೆಯವರು**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬೇಂದ್ರೆಯವರ ಕವನಗಳ ವಿಮರ್ಶೆ)

೫. **ಹೂವಿನ ಪೂಜೆ**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬುದ್ಧನಿಗೆ ಅರ್ಪಿಸಿದ ಬರಹಗಳು)

೬. **ಶ್ರೀ ರಾಮಚಂದ್ರಪ್ರಭು**—(ಜ್ಞಾಪಕರೂಪ) .... ರೂ. ೧-೫೦
(ಡಿ.ವಿ.ಜಿ. ಅವರ ' ಶ್ರೀರಾಮಪರೀಕ್ಷಣ 'ದ ಸುಲಭರೂಪ)

೭. **ಬಿದನೂರಿನ ರಾಣಿ ವೀರಮ್ಮಾಜಿ**—(ಜ್ಞಾಪಕರೂಪ) .... ರೂ. ೧-೨೫

೮. **ಹೆಜ್ಜೆಪಾಡು** (ಕವನಗಳು)—ವಿ. ಸೀ. .... ರೂ. ೧-೭೫

೯. **ದೀಪಗಳು** (ಕವನಗಳು)—ವಿ. ಸೀ. .... ರೂ. ೧-೨೫

೧೦. **ಅಭಿಜ್ಞಾನ ಶಾಕುಂತಲ ನಾಟಕ**—ವಿ. ಸೀ. .... ರೂ. ೨-೫೦
(ವಿಮರ್ಶಾತ್ಮಕ ಪರಿಚಯ)

೧೧. **ಗಿಳಿವಿಂಡು** (ಕವನಗಳು)—ಎಂ. ಗೋವಿಂದ ಪೈ .... ರೂ. ೨-೫೦

ಅಚ್ಚಿನಲ್ಲಿ

೧೨. **ಸೊಹ್ರಾಬ್-ರುಸ್ತುಂ** (ನಾಟಕ)—ವಿ. ಸೀ.

೧೩. **ಪಂಚಕಲಶ ಗೋಪುರ** (ಚಿತ್ರಗಳು)—ಬಿ. ಜಿ. ಎಲ್. ಸ್ವಾಮಿ

ಸಂಪಾದಕರು : ಎಸ್. ನಾರಾಯಣಶೆಟ್ಟಿ, ಎಂ.ಎ. ; ಡಾ|| ಜಿ. ವರದರಾಜರಾವ್, ಎಂ.ಎ., ಪಿಎಚ್.ಡಿ.

ಪ್ರಕಾಶಕರು : ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.
ಡೈರೆಕ್ಟರ್, ' ಪ್ರಸಾರಾಂಗ ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.